ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಭಾನುವಾರ, 28 ಜೂನ್ 2026
ಸಂಪುಟ 16, ಸಂಚಿಕೆ 95, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital



ದೇಶದ ಮೊದಲ ಸ್ವದೇಶಿ ಹೈಡ್ರೋಜನ್ ರೈಲು ಸಂಚಾರಕ್ಕೆ ಅನುಮತಿ

|೦೭

ರಾಜ್ಯದಲ್ಲಿ ಇಂದು ಪಲ್ಸ್ ಪೋಲಿಯೊ ಹನಿ ನೀಡಿಕೆ



|೦೪

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ : ಚತುರ್ದಶಿ, ನಕ್ಷತ್ರ: ಜ್ಯೇಷ್ಠೆ

ದಿನದ ಮಾತು

ಅನೇಕರು ತಮ್ಮ ಜೀವನದಲ್ಲಿ ಮುಂದೆ ಸಾಗದಿರುವುದಕ್ಕೆ ಕಾರಣ ಅವರು ಮಾತನಾಡುತ್ತಲೇ ಕಾಲವನ್ನು ವ್ಯಯ ಮಾಡಿದ್ದು.

▲ ರಾಮಕೃಷ್ಣ ಪರಮಹಂಸ

ಸೀನುವಿನ ಗಾನಾರ್ಥಮಂಜರಿ (ಗಾನಾರ್ಥಮಂ ಜರಿ!)

ವಕ್ರದೃಷ್ಟಿ

• ಎನ್. ರಾಮನಾಥ್

• ಪುಟ ೬

ಕಿರುಸುದ್ದಿ

ಕಾರಲ್ಲೇ ಬಾಂಬ್ ಸ್ಫೋಟಿಸಿದ ಪ್ರಿಯಕರ ಸಜೀವ ದಹನ

ಅಂಕೋಲಾ ಮೂಲದ ಪ್ರೇಮಿಗಳು

• **ತುಮಕೂರು:** ಚಲಿಸುತ್ತಿದ್ದ ಕಾರಿನಲ್ಲೇ ಯುವತಿಯೊಂದಿಗೆ ಜಗಳವಾಡಿದ ಯುವಕನೊಬ್ಬ, ಆಕೆಗೆ ಚಾಕುವಿನಿಂದ ಇರಿದು, ಬಳಿಕ ತಾನು ಪೆಟ್ರೋಲ್ ಬಾಂಬ್ ಸ್ಫೋಟಿಸಿಕೊಂಡು ಸಜೀವ ದಹನವಾಗಿರುವ ಘಟನೆ ಶಿರಾ ತಾಲೂಕಿನ ಜೋಗಿಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ.

• ಪುಟ ೪

ಕೊಪ್ಪಳದಲ್ಲಿ ರಸ್ತೆ ಅಪಘಾತ ಆರು ಬಲಿ, ಇಬ್ಬರು ಗಂಭೀರ

• ಪುಟ ೫

ಸ್ಮರಣಾ ಫಲಕದಲ್ಲಿ ಜಾಗ ಕೊಡುವವರ ಹೆಸರು: ಸಿಎಂ

ಭೂದಾನಿಗಳ ಸ್ಮರಣೆ

• **ಬೆಂಗಳೂರು:** ಕೈಗಾರಿಕಾ ಪ್ರದೇಶ, ಶಾಲೆಗಳು, ಕೆರೆ, ರಸ್ತೆ ನಿರ್ಮಾಣ ಸೇರಿದಂತೆ ಜನಪರ ಯೋಜನೆಗಳಿಗೆ ಯಾವುದೇ ತಕರಾರು ಮಾಡದೆ ಜಾಗ ನೀಡುವ ಭೂ ಮಾಲೀಕರ ಹೆಸರನ್ನು ವಾಲ್ ಆಫ್ ಗ್ರಾಟಿಟ್ಯೂಡ್ (ಕೃತಜ್ಞತಾ ಫಲಕ)ನಲ್ಲಿ ಸೇರಿಸಲು ಸರ್ಕಾರ ತೀರ್ಮಾನಿಸಿದೆ. ಆ ಮೂಲಕ ಭೂ ಮಾಲೀಕರ ತ್ಯಾಗ ಸ್ಮರಿಸಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಘೋಷಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೂತನವಾಗಿ ನಿರ್ಮಿಸುತ್ತಿರುವ ಕೆಂಪೇಗೌಡ ಬಡಾವಣೆಯಲ್ಲಿ ಶನಿವಾರ ನಡೆದ 517ನೇ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವು ದಿ.ಎಸ್.ಎಂ. ಕೃಷ್ಣ ಅವರ ಹೆಸರಿನಲ್ಲಿ 10 ಪಥಗಳ ರಸ್ತೆಗೆ ಚಾಲನೆ ನೀಡಿದ್ದೇವೆ. ಈ ರಸ್ತೆ 11 ಕಿ.ಮೀ.ಗೆ ನಿಲ್ಲುವುದಿಲ್ಲ. ಮುಂದೆ ಇದು 123 ಕಿ.ಮೀ. ರಸ್ತೆಯಾಗಿ ವಿಸ್ತರಣೆಯಾಗಲಿದೆ. ಈ ರಸ್ತೆಯಲ್ಲಿ ವಾಲ್ ಆಫ್ ಗ್ರಾಟಿಟ್ಯೂಡ್ (ಉಪಕಾರ ಸ್ಮರಣೆ) ನಿರ್ಮಿಸಲು ಮುಂದಾಗಿದ್ದೇವೆ. ಆ ಮೂಲಕ ಈ ರಸ್ತೆಗಾಗಿ ಜಮೀನು ನೀಡಿದವರ ಹೆಸರನ್ನು ಶಾಶ್ವತವಾಗಿ ಉಳಿಸುವ ಕೆಲಸವನ್ನು ನಮ್ಮ ಸರ್ಕಾರ ಮುಂದಿನ ದಿನಗಳಲ್ಲಿ ಮಾಡಲಿದೆ. ಇದನ್ನು ಎಲ್ಲಾ ಕಡೆಗಳಲ್ಲೂ ಮಾಡಲಾಗುವುದು ಎಂದು ತಿಳಿಸಿದರು. ಎಲ್ಲಿ ಶ್ರಮ ಇದೆಯೋ ಅಲ್ಲಿ ಫಲವಿದೆ. ಯಾವುದೇ ಜಮೀನು ಉಳುಮೆ ಮಾಡದೆ ಮಟ್ಟ ಮಾಡಲು ಸಾಧ್ಯವಿಲ್ಲ.

➡ ಪುಟ ೪



ಹೆಬ್ಬಾಳದ ಬಳಿ ಕಡಿಮೆ ಅಂತರದ ಟನಲ್ ರಸ್ತೆ ನಿರ್ಮಾಣ ಕೆಲಸವನ್ನು ಕೆಲವೇ ದಿನಗಳಲ್ಲಿ ಆರಂಭ ಮಾಡಲಾಗುವುದು. ಸಂಚಾರ ದಟ್ಟಣೆ ನಿವಾರಣೆಗೆ ಅನೇಕ ಯೋಜನೆ ರೂಪಿಸಲಾಗಿದೆ. ನೀವು ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಂಡು ಹೋಗುತ್ತೇನೆ.

■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

3 ಕೆ ನೆನಪಿಟ್ಟುಕೊಳ್ಳಬೇಕು

ಬೆಂಗಳೂರಿಗರು ಮೂರು ಕೆ ಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಬೆಂಗಳೂರು ಕಟ್ಟಿದ ಕೆಂಪೇಗೌಡರು, ವಿಧಾನಸೌಧ ಕಟ್ಟಿದ ಕೆಂಗಲ್ ಹನುಮಂತಯ್ಯ ಹಾಗೂ ಬೆಂಗಳೂರನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಎಸ್.ಎಂ. ಕೃಷ್ಣ ಅವರು. ಶ್ರೀ ನಿರ್ಮಲಾನಂದ ಸ್ವಾಮೀಜಿ ಹಾಗೂ ಶ್ರೀ ನಂಜಾವಧೂತ ಸ್ವಾಮೀಜಿಗಳು ಸೇರಿ ಜೂ. 27ರಂದು ಕೆಂಪೇಗೌಡ ಜಯಂತಿ ಆಚರಣೆ ಮಾಡಬೇಕು ಎಂದು ತೀರ್ಮಾನ ಮಾಡಿದ ಬಳಿಕ ನಾವು ಕೆಂಪೇಗೌಡ ಜಯಂತಿ ಆಚರಿಸಿಕೊಂಡು ಬರುತ್ತಿದ್ದೇವೆ. ಆ ಸಮಯದಲ್ಲಿ ನನಗೆ ಬೆಂಬಲವಾಗಿ ನಿಂತ ರೇವಣ್ಣ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

123 ಕಿ.ಮೀ. ಬೆಂಗಳೂರು ಬಿಸಿನೆಸ್ ಕಾರಿಡಾರ್

123 ಕಿ.ಮೀ ಉದ್ದದ ಬೆಂಗಳೂರು ಬಿಸಿನೆಸ್ ಕಾರಿಡಾರ್ ರಸ್ತೆ ನಿರ್ಮಾಣ ಪ್ರಕ್ರಿಯೆ ಚಾಲನೆಯಲ್ಲಿದ್ದು, ಟೆಂಡರ್ ಕರೆಯಲಾಗಿದೆ. ಎಲೆಕ್ಟ್ರಾನಿಕ್ ಸಿಟಿಯಿಂದ ಮೈಸೂರು ರಸ್ತೆ ಸೇರುವ ಹಂತಕ್ಕೂ ಅಂತಿಮ ಅಧಿಸೂಚನೆ ಸದ್ಯದಲ್ಲೇ ಹೊರಡಿಸುತ್ತೇವೆ. ಈ ರಸ್ತೆ ಇಲ್ಲವಾದರೆ ಬೆಂಗಳೂರು ಉಳಿಯಲು ಸಾಧ್ಯವಿಲ್ಲ. ಹೀಗಾಗಿ ನಾನು ದಿಟ್ಟ ತೀರ್ಮಾನ ಮಾಡಲಿದ್ದೇನೆ. ಭೂಮಿ ಕಳೆದುಕೊಳ್ಳುವ ಜಮೀನು ಮಾಲೀಕರಿಗೆ 35% ವಾಣಿಜ್ಯ ಭೂಮಿ, 40% ವಸತಿ ಪ್ರದೇಶ ಭೂಮಿ, ಟಿಡಿಆರ್ ನೀಡಲು ಸರ್ಕಾರ ಮುಂದಾಗಿದೆ. ಭೂ ಮಾಲೀಕರು ತಮಗೆ ಯಾವ ಆಯ್ಕೆ ಬೇಕೋ ಅದನ್ನು ತೆಗೆದುಕೊಳ್ಳಬಹುದು ಎಂದು ವಿವರಿಸಿದರು.

ಜಿಕೆವಿಕೆ, ಎಂಜಿನಿಯರ್ ಎಸ್.ವಿಶ್ವನಾಥ್, ರಾಹುಲ್ ದ್ರಾವಿಡ್‌ಗೆ ಕೆಂಪೇಗೌಡ ಪ್ರಶಸ್ತಿ

ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಆಧುನಿಕ ಕೃಷಿ ಹಾಗೂ ನವೀನ ತಂತ್ರಜ್ಞಾನವನ್ನು ರೈತರಿಗೆ ಪರಿಚಯಿಸುವ ಮೂಲಕ ಹೆಸರು ಮಾಡಿರುವ ಜಿಕೆವಿಕೆ, ನಗರ ಯೋಜನಾ ತಜ್ಞರಾಗಿ ಪ್ರಸಿದ್ಧಿ ಹೊಂದಿರುವ ಎಂಜಿನಿಯರ್ ಎಸ್. ವಿಶ್ವನಾಥ್ ಹಾಗೂ ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ರಾಹುಲ್ ದ್ರಾವಿಡ್ ಅವರು ವಿದೇಶದಲ್ಲಿದ್ದ ಕಾರಣಕ್ಕೆ ಅವರು ಪ್ರಶಸ್ತಿ ಸ್ವೀಕರಿಸಲು ಸಾಧ್ಯವಾಗಲಿಲ್ಲ. ಜಿಕೆವಿಕೆ ಸಂಸ್ಥೆಯ ಪರವಾಗಿ ಉಪಕುಲಪತಿಗಳಾದ ಎಸ್.ವಿ.ಸುರೇಶ್ ಅವರು ಪಡೆದುಕೊಂಡರು.

ರೈತರ ಹಿತ ಪರಿಗಣಿಸಿ ಸಮಸ್ಯೆ ಬಗೆಹರಿಸಿ: ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್

ಕಾವೇರಿ ವಿವಾದ ಇತ್ಯರ್ಥಕ್ಕೆ ಸಲಹೆ



• **ಬೆಂಗಳೂರು:** ಕಾವೇರಿ ಜಲವಿವಾದದಲ್ಲಿ ರೈತರ ಹಿತ ಪರಿಗಣಿಸಿ ಸಮಸ್ಯೆ ಬಗೆಹರಿಸುವುದು ಏಕೈಕ ಪರಿಹಾರ, ರೈತರ ವಿಚಾರದಲ್ಲಿ ಕಾಳಜಿ ತೋರುವುದು ಮುಖ್ಯ ಎಂದು ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅಭಿಪ್ರಾಯಪಟ್ಟರು.

ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನವು ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಜನ್ಮದಿನೋತ್ಸವದಲ್ಲಿ ಭಾಗವಹಿಸಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಗಣ್ಯರಿಗೆ ಪ್ರಶಸ್ತಿ ಪ್ರದಾನಿಸಿದರು.

ತಮಿಳುನಾಡು ಮತ್ತು ಕರ್ನಾಟಕದ ಮಧ್ಯೆ ಕಾವೇರಿ ಜಲವಿವಾದಕ್ಕೆ ನಾವು ಒಂದು ಪರಿಹಾರ ಕಂಡುಕೊಳ್ಳಬೇಕು. ಈ ಸಮಸ್ಯೆ ಬಹಳ ವರ್ಷ ಮುಂದುವರಿಯಲು ಬಿಡಬಾರದು. ರೈತರು ಯಾರೇ ಆದರೂ ರೈತರೇ. ಇಲ್ಲಿ ಭಾಷೆ, ಪ್ರಾಂತದ ವಿಚಾರ ಬರುವುದಿಲ್ಲ, ರೈತರು ನಮಗೆ ಅನ್ನದಾತರು. ಎರಡೂ ರಾಜ್ಯಗಳ ರೈತರ ಹಿತ ನೋಡಿಕೊಳ್ಳಬೇಕು. ರಾಜಕೀಯವಾಗಿ ನೋಡುವ ಬದಲು ರೈತರ ಹಿತಾಸಕ್ತಿ ಗಮನಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಸಲಹೆ ನೀಡಿದರು. ಇದೇ ವೇಳೆ ತಮ್ಮ ಮನೆಯಲ್ಲಿ ಕರ್ನಾಟಕ ಪೊನ್ನಿ ಎಂಬ ತಳಿಯ ಅಕ್ಕಿಯನ್ನು ಪ್ರತಿದಿನ ಬಳಸುವುದಾಗಿ ತಿಳಿಸಿದರು.

➡ ಪುಟ ೪

ರಾಜ್ಯದ ಪರವಾಗಿ ಧ್ವನಿಗೂಡಿಸಿ: ಎಚ್‌ಡಿಕೆ

ಕೆಂಪೇಗೌಡ ಅಂದಾಕ್ಷಣ ಬೆಂಗಳೂರು ನಗರದ ಏಳಿಗೆ ಮತ್ತು ಅವರ ದೂರದೃಷ್ಟಿ ನೆನಪಾಗುತ್ತದೆ. ಅವರು ಸಾವಿರಾರು ಕೆರೆಗಳನ್ನು ಕಟ್ಟಿದ್ದರು. ನಾವೀಗ ಬೆಂಗಳೂರು ನಗರ ಅಭಿವೃದ್ಧಿ ಹೆಸರಲ್ಲಿ ಹಲವಾರು ಕೆರೆಗಳನ್ನು ಮುಚ್ಚಿದ್ದೇವೆ. ಬೆಂಗಳೂರು ನಗರ ಬೆಳೆಯುತ್ತಿರುವುದನ್ನು ನೋಡಿದರೆ ನೀರಿನ ಸಮಸ್ಯೆ ಎದುರಿಸುವ ಆತಂಕ ಇದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು. ಉಪರಾಷ್ಟ್ರಪತಿಗಳಿಗೆ ನೀರಿನ ಹಂಚಿಕೆ ವಿಚಾರದಲ್ಲಿರುವ ಸಮಸ್ಯೆ ಸಂಪೂರ್ಣ ಅರಿವಿದೆ. ಬೆಂಗಳೂರು ನಗರಕ್ಕೆ ಭವಿಷ್ಯದಲ್ಲಿ ನೀರಿನ ಅಭಾವ ಉಂಟಾಗಲಿದೆ. ಆದ್ದರಿಂದ ಜಲ ವಿವಾದದ ವಿಷಯದಲ್ಲಿ ಉಪರಾಷ್ಟ್ರಪತಿಗಳು ನಮ್ಮ ರಾಜ್ಯದ ಪರವಾಗಿ ಧ್ವನಿಗೂಡಿಸಬೇಕು. ಇದರಿಂದ ದೊಡ್ಡ ಶಕ್ತಿ ಬರುತ್ತದೆ ಎಂದು ಮನವಿ ಮಾಡಿದರು.

ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನ್‌ರಿಂದ ಗೌರವ ರಕ್ಷೆ ಸ್ವೀಕರಿಸಿದ ಪ್ರಧಾನಿ

ಸೀಶೆಲ್ಸ್: ಮೋದಿಗೆ ಅದ್ದೂರಿ ಸ್ವಾಗತ

• **ವಿಕ್ಟೋರಿಯಾ (ಸೀಶೆಲ್ಸ್):** ಮೂರು ದಿನಗಳ ಪ್ರವಾಸದಂಗವಾಗಿ ಶನಿವಾರ ಸೀಶೆಲ್ಸ್‌ಗೆ ಬಂದಿಳಿದ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಇಲ್ಲಿನ ಭಾರತೀಯ ಸಮುದಾಯ ಅತ್ಯಂತ ಆತ್ಮೀಯವಾಗಿ ಸ್ವಾಗತಿಸಿತು.

ಗುಜರಾತ್‌ನ ಕಥ್‌ನ ಸಾಂಪ್ರದಾಯಿಕ ನೃತ್ಯ, ಭರತನಾಟ್ಯಸಹಿತ ಭಾರತದ ಹಲವು ನೃತ್ಯ ಪ್ರಕಾರಗಳ ಪ್ರದರ್ಶನದೊಂದಿಗೆ ಪ್ರಧಾನಿ ಮೋದಿ ಅವರನ್ನು ಪ್ರೀತಿಯಿಂದ ಬರಮಾಡಿಕೊಂಡರು. ಭಾರತೀಯ ನೃತ್ಯ ಪ್ರದರ್ಶನ ಕಂಡು ಸಂತುಷ್ಟ ಪ್ರಧಾನಿ ಮೋದಿ, ಅದ್ಭುತ ಸಾಂಸ್ಕೃತಿಕ ಬಾಂಧವ್ಯವಿದು ಎಂದು ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಖುಷಿ ವ್ಯಕ್ತಪಡಿಸಿದ್ದಾರೆ. ಇಲ್ಲಿನ ಭಾರತೀಯ ಸಮುದಾಯ ಭಾರತದ ವಿವಿಧ ಪ್ರದೇಶಗಳ ಸಂಸ್ಕೃತಿಯನ್ನು ಸಂರಕ್ಷಿಸಿ, ಸಂಭ್ರಮಿಸುತ್ತಿರುವ ರೀತಿ ನಿಜಕ್ಕೂ ಪ್ರಶಂಸಾರ್ಹ ಎಂದು ಪೋಸ್ಟ್‌ನಲ್ಲಿ ಪ್ರಧಾನಿ ಬಣ್ಣಿಸಿದ್ದಾರೆ.

ಶ್ರೀರಾಮ ಭಜನೆ, ಶಿವತಾಂಡವ ಸ್ತೋತ್ರದೊಂದಿಗೆ ಭರತನಾಟ್ಯ: ಪ್ರಧಾನಿ ಮೋದಿ ಸೀಶೆಲ್ಸ್‌ನ ಅಂತಾ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯುತ್ತಿದ್ದಂತೆ ನಿಲ್ದಾಣದ ಹೊರಗಡೆ ಜಮಾಯಿಸಿದ್ದ ಅಸಂಖ್ಯ ಜನರು ಹರ್ಷೋಲ್ಲಾಸದಿಂದ ಭಾರತದ ತ್ರಿವರ್ಣ ಧ್ವಜ ಬೀಸಿ ಪ್ರಧಾನಿ ಮೋದಿ ಅವರನ್ನು ಇದಿರುಗೊಂಡರು. ಭಾರತೀಯರ ಜತೆ ಪ್ರಧಾನಿ ಮೋದಿ ಕೆಲ ಕ್ಷಣ ಸಂವಾದ ನಡೆಸಿದರು.

➡ ಪುಟ ೪



ಜಗತ್ತಿನ ಅತ್ಯಂತ ಹಿರಿಯ ಆಮೆಯೆಂದೇ ಪರಿಗಣಿತ 194 ವರ್ಷದ ಜೋನಾಥನ್ ಸಹಿತ ಹಲವು ಬೃಹತ್ ಆಮೆಗಳಿಗೆ ಪ್ರಧಾನಿ ಮೋದಿ ಆಹಾರ ನೀಡಿದರು.

ಕಿರುಸುದ್ದಿ

ಜಾಗೃತಿ ಜಾಥಾ ನಾಳೆ

• **ಕಲಘಟಗಿ:** ಜೂ.29ರಂದು ಬೆಳಗ್ಗೆ 10 ಗಂಟೆಗೆ ಕಲಘಟಗಿ ಪಟ್ಟಣ ಪಂಚಾಯತ್ ಕಚೇರಿಯಲ್ಲಿ ಎಸ್. ಐ. ಆರ್. ಕುರಿತು ಜಾಗೃತಿ ಕಾರ್ಯಕ್ರಮ ಹಾಗೂ ಜಾಥಾ ಉದ್ಘಾಟನೆ ಹಮ್ಮಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಕಲಘಟಗಿ ತಾಲೂಕು SVEEP ಸಮಿತಿ ಅಧ್ಯಕ್ಷ ಹಾಗೂ ಕಾರ್ಯ ನಿರ್ವಾಹಕ ಅಧಿಕಾರಿ ಪಿ.ವೈ. ಸಾವಂತ, ದಂಡಾಧಿಕಾರಿ ಬಸವರಾಜ ಹೊಂಕಣ್ಣವರ, ಕ್ಷೇತ್ರ ಶಿಕ್ಷಣಾಧಿಕಾರಿ ಗಾಯತ್ರಿ ಸಜ್ಜನ, ಮುಖ್ಯಾಧಿಕಾರಿ ಚಂದ್ರೇಖರ ಬಿ. ಭಾಗವಹಿಸುವರು. ಜಿ ಇ ಪ.ಪೂ ಕಾಲೇಜು ಕಲಘಟಗಿಯ ಪ್ರಾಚಾರ್ಯರು, ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ನಮ್ಮ ಕಚೇರಿಯ ಸರ್ವ ಸಿಬ್ಬಂದಿ ಹಾಗೂ ಬಿಎಲ್‌ಒಗಳು ಹಾಜರಾಗುವರು.

ಮೊಹರಂ ಆಚರಣೆ



• **ನವಲಗುಂದ:** ತಾಲೂಕಿನ ಮೊರಬ ಗ್ರಾಮದಲ್ಲಿ ಹಿಂದೂ-ಮುಸ್ಲಿಂ ಭಾವೈಕ್ಯತೆಯ ಮೊಹರಂ ಹಬ್ಬವನ್ನು ಆಚರಿಸಲಾಯಿತು. ಮುಸ್ಲಿಂ ಗುರುಗಳಾದ ಮಕ್ತುಮಹುಸೇನ ಮುಲ್ಲಾ, ನವಲಗುಂದ ಮಂಡಲ ಬಿಜೆಪಿ ಅಧ್ಯಕ್ಷ ಗಂಗಪ್ಪ ಮನಮಿ, ಗ್ರಾಮದ ಹಿರಿಯರಾದ ಗಿರೀಶ ಮಾಸ್ತಿ, ಮಂಜು ಕಾಲವಾಡ, ಮಾಂತೇಶ ಹಂಚಿನಾಳ, ಎಮ್. ಎಮ್. ಮುಲ್ಲಾ ಬಸುರಾಜ ಚಾಲ್ಯಾಳ, ಮಡಿವಾಳಪ್ಪ ಪಡಸುಣಗಿ, ಮಲ್ಲನಗೌಡ್ರ ಮನಮಿ ಮಕ್ತುಮಸಾಬ ಮುನವಳ್ಳಿ, ಕಾಸಿಮಸಾಬ ಅತ್ತಾರ, ಗೌಸುಸಾಬ ಧಾರವಾಡ, ಸೋಮರಡ್ಡಿ ಸಿದ್ನಾಳ, ಪರಮೇಶ್ವರ ಪಡಸುಣಗಿ ಇತರರಿದ್ದರು.


ಕೆಂಪೇಗೌಡ ಜಯಂತಿ



• **ಅಳ್ನಾವರ:** ಕನ್ನಡ ನಾಡನ್ನು ನಿರ್ಮಾಣ ಮಾಡುವಲ್ಲಿ ಕೆಂಪೇಗೌಡರ ಕೊಡುಗೆ ಪ್ರಮುಖವಾಗಿದೆ ಎಂದು ಕಸಾಪ ಕಾರ್ಯದರ್ಶಿ ಪ್ರವೀಣ ಪವಾರ ಹೇಳಿದರು.

ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ಆಯೋಜಿಸಿದ್ದ ಕೆಂಪೇಗೌಡರ ಜಯಂತಿ ಸಮಾರಂಭದಲ್ಲಿ ಅವರು ಮಾತನಾಡಿ, ಅನೇಕ ಶತಮಾನಗಳ ಹಿಂದೆಯೇ ಕೆಂಪೇಗೌಡರು ಕಂಡಿದ್ದ ಬೆಂಗಳೂರು ಇಂದು ಜಗತ್ತಿನಲ್ಲಿಯೇ ತನ್ನದೆ ಆದ ಎತ್ತರದ ಸ್ಥಾನಕ್ಕೇರಿದೆ. ತಂತ್ರಜ್ಞಾನದಲ್ಲಿ ಬೆಂಗಳೂರು ದೇಶಕ್ಕೆ ಮಾದರಿಯಾಗಿದೆ ಎಂದರು. ಶಿರಸ್ತೆದಾರ ಅಜ್ಜಪ್ಪ ಮಂಗಳಗಟ್ಟಿ, ಉಪ ತಹಶೀಲ್ದಾರ್ ಮಲ್ಲಿಕಾರ್ಜುನ ಬಿರಾದಾರ, ಕಸಾಪ ತಾಲೂಕಾಧ್ಯಕ್ಷ ಗುರುರಾಜ ಸಬನೀಸ, ಶಾಹು ಶಿಂಧೆ, ಅಜಯ ಗೋಕಾಕ, ಸುನೀಲ ಗುಂಡೋಳಕರ, ವಿನಾಯಕ ಇತರರಿದ್ದರು.

ಅನಾಟಮಿ ಜ್ಞಾನ ಅಗತ್ಯ




• **ಧಾರವಾಡ:** ವೈದ್ಯಕೀಯ ಕ್ಷೇತ್ರದಲ್ಲಿ ಯಶಸ್ವಿ ವೈದ್ಯರಾಗಲು ಪ್ರತಿ ವಿದ್ಯಾರ್ಥಿಗೂ ಮಾನವನ ಅಂಗರಚನಾಶಾಸ್ತ್ರ ಮತ್ತು ಶರೀರಕ್ರಿಯಾಶಾಸ್ತ್ರದ ಆಳ ಜ್ಞಾನ ಅಗತ್ಯ ಎಂದು ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ಡಾ.ವಿಜಯ ಕುಲಕರ್ಣಿ ಹೇಳಿದರು.

ಸತ್ತೂರಿನ ಎಸ್‌ಡಿಎಂ ವಿಶ್ವವಿದ್ಯಾಲಯದಲ್ಲಿ ಶನಿವಾರ ಆಯೋಜಿಸಲಾಗಿದ್ದ ಅನ್ವೇಷಣೆ ಮತ್ತು ವೈಜ್ಞಾನಿಕ ಪರಿಶೋಧನೆ ಮಾದರಿ ತಯಾರಿಕೆ ಸ್ಪರ್ಧೆ ಹಾಗೂ ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸ್ಪರ್ಧೆಯಲ್ಲಿ ನೂರಾರು ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳು ಪಾಲ್ಗೊಳ್ಳುವ ಮೂಲಕ ತಾವೇ ಸಿದ್ಧಪಡಿಸಿದ ವೈವಿಧ್ಯಮಯ ವೈಜ್ಞಾನಿಕ ಮತ್ತು ಶರೀರ ಕ್ರಿಯಾಶಾಸ್ತ್ರದ ಮಾದರಿಗಳನ್ನು ಪ್ರದರ್ಶಿಸಿದರು. ಉಪಕುಲಪತಿ ಡಾ.ನಿರಂಜನಕುಮಾರ್ ಚಾಲನೆ ನೀಡಿದರು. ಉಪ ವೈದ್ಯಕೀಯ ಅಧೀಕ್ಷಕ ಸಾಕೇತ ಶೆಟ್ಟಿ, ಶರೀರಕ್ರಿಯಾಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ. ವಿ.ನಾಗಲಕ್ಷ್ಮಿ, ಡಾ.ಸಾವಿತ್ರಿ ಸಿದ್ದನಗೌಡರ, ಡಾ.ಮಂಜುನಾಥ ಮೇಟಿ, ಡಾ.ಶಿವಕುಮಾರ್, ಡಾ.ಆದಿತ್ಯ ಅಗ್ನಿಹೋರಿ, ಡಾ.ವಿದ್ಯಾ ನಾಡಗೇರ್ ಇದ್ದರು.

ನಿಧನಸುದ್ದಿ

ನಾರಾಯಣಭಟ್ ಶೂರಪಾಲಿ

• **ಧಾರವಾಡ:** ಕುಂದಗೋಳ ಮೂಲದ ಇಲ್ಲಿನ ಮಾಳಮಡ್ಡಿ ನಿವಾಸಿ, ಶತಾಯುಷಿ ನಾರಾಯಣಭಟ್ ಗುರುಭಟ್ ಶೂರಪಾಲಿ(100) ಗುರುವಾರ ನಿಧನರಾದರು. ಇವರಿಗೆ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಳಗವಿದೆ.



ಬಸವರಾಜ ಮಳಗಿ

• **ಧಾರವಾಡ:** ಸ್ಥಳೀಯ ಮಹಾಂತನಗರ ನಿವಾಸಿ ಬಸವರಾಜ ವೀರಭದ್ರಪ್ಪ ಮಳಗಿ (66) ಶನಿವಾರ ನಿಧನ ಹೊಂದಿದರು. ಇವರಿಗೆ ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಳಗವಿದೆ.





ಕಲಘಟಗಿ: ತಾಲೂಕಿನ ಬೀರವಳ್ಳಿ ಗ್ರಾಮದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಾಡಪ್ರಭು ಕೆಂಪೇಗೌಡರ 517 ನೇ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರು , ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡರು.

ಅಧ್ಯಕ್ಷರಾಗಿ ಮಂಜುನಾಥ ಹೇಗೇದಾರ ಆಯ್ಕೆ

• **ಧಾರವಾಡ:** ಈಚೆಗೆ ನಡೆದ ಉತ್ತರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಆಡಳಿತ ಸಭೆಯಲ್ಲಿ ಮಂಡಳಿಯ ನೂತನ ಅಧ್ಯಕ್ಷರಾಗಿ ಮಂಜುನಾಥ ಹೇಗೇದಾರ, ಕಾರ್ಯಾಧ್ಯಕ್ಷರಾಗಿ ಕಲ್ಮೇಶ ಹಾವೇರಿಪೇಟ್ ಹಾಗೂ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಕಲಾ ಸಂಗಮ ಸಂಸ್ಥೆ ಅಧ್ಯಕ್ಷ ಪ್ರಭು ಹಂಚಿನಾಳ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ಉಪಾಧ್ಯಕ್ಷರಾಗಿ ಪ್ರಭು ಹಂಚಿನಾಳ, ಪ್ರಧಾನ ಕಾರ್ಯದರ್ಶಿಯಾಗಿ ರಾಹುಲ್ ದತ್ತಪ್ರಸಾದ, ಸಹ ಕಾರ್ಯದರ್ಶಿಯಾಗಿ ಅಷ್ಫಕ್ ಸೈಯದ್, ಸಂಘಟನಾ ಕಾರ್ಯದರ್ಶಿಯಾಗಿ ಪ್ರವೀಣಾ ಕುಲಕರ್ಣಿ, ಖಜಾಂಚಿಯಾಗಿ ಕಲ್ಲನಗೌಡ ಸಿದ್ದಾಪುರ ಇದೇ ವೇಳೆ ಆಡಳಿತ ಮಂಡಳಿಯ ಸದಸ್ಯರಾಗಿ ನಜೀರಸಾಬ ದೇಸಾಯಿ, ರುದ್ರೇಶ ಹಳವದ ಆಯ್ಕೆಯಾಗಿದ್ದಾರೆ ಎಂದರು. ಅಧ್ಯಕ್ಷ ಮಂಜುನಾಥ ಹಗೇದಾರ ಮಾತನಾಡಿ, ಪ್ರಸ್ತುತ ಮಂಡಳಿಯು ರಾಜ್ಯದಾದ್ಯಂತ 450ಕ್ಕೂ ಹೆಚ್ಚು ನಿರ್ಮಾಪಕ ಸದಸ್ಯರನ್ನು ಹೊಂದಿದ್ದು, ವಾಣಿಜ್ಯ ಮಂಡಳಿಯಲ್ಲಿ ನೋಂದಾಯಿತ ಬ್ಯಾನರ್‌ಗಳ ಅಡಿಯಲ್ಲಿ ಉತ್ತರ ಕರ್ನಾಟಕ ಭಾಗದ ಸುಮಾರು 47ಕ್ಕೂ ಹೆಚ್ಚು ಚಲನಚಿತ್ರಗಳು ಸೆನ್ಸಾರ್ ಆಗಿ ಬಿಡುಗಡೆಯಾಗಿವೆ ಎಂದರು. ಕಲ್ಮೇಶ ಹಾವೇರಿಪೇಟ್ ಮಾತನಾಡಿ, ಉತ್ತರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಪ್ರಸಕ್ತ ವರ್ಷದ ಉತ್ತರ ಕರ್ನಾಟಕ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಆಗಸ್ಟ್ 22 ಮತ್ತು 23ರಂದು ಆಲೂರು ವೆಂಕಟರಾವ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು. ರಾಹುಲ್ ದತ್ತ ಪ್ರಸಾದ, ಕಲ್ಲನಗೌಡ ಸಿದ್ದಾಪುರ, ಎಂ.ಎ. ಮುಮ್ಮಿಗಟ್ಟಿ, ನಜೀರಸಾಬ ದೇಸಾಯಿ ಇದ್ದರು.



ಹುಬ್ಬಳ್ಳಿ: ಬೆಂಗೇರಿ ಸರ್ಕಲ್‌ನಲ್ಲಿ ಮೊಹರಂ ಹಬ್ಬದ ಪ್ರಯುಕ್ತ ಯಂಗ್ ಕಮಿಟಿ ವತಿಯಿಂದ ಆಯೋಜಿಸಿದ್ದ ಶರಬತ್ ವಿತರಣಾ ಕಾರ್ಯಕ್ರಮಕ್ಕೆ ಸರ್ವಧರ್ಮ ಸಮಾಜ ಸೇವಕ ಡಾ.ರಮೇಶ್ ಮಹಾದೇವಪ್ಪನವರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಯಂಗ್ ಕಮಿಟಿಯ ಯುವಕ ಮಿತ್ರರು ಹಾಗೂ ಅನೇಕರು ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಸಾವಯುವ ಗೊಬ್ಬರ ಬಳಕೆ ಅವಶ್ಯ



ಈ ಸಸ್ಯ ಸಂತೆಯಲ್ಲಿ ಮೊದಲನೇ ದಿವಸ ಸುಮಾರು 10 ಲಕ್ಷ ತೋಟಗಾರಿಕಾ ಬೆಳೆಗಳ ಸಸಿಗಳು ಮಾರಾಟವಾಗಿವೆ ಹಾಗೂ 5000ಕ್ಕೂ ಹೆಚ್ಚು ರೈತರು ಭೇಟಿ ನೀಡಿದ್ದಾರೆ. ರೈತರು, ನಾಗರಿಕರು ಹಾಗೂ ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ಲಭಿಸಿದೆ.

■ **ಡಾ. ಜೆ.ಬಿ.ಗೋಪಾಲಿ,** ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ

- ಸುಮಾರು 10 ವರ್ಷದಿಂದ ಸಸ್ಯ ಸಂತೆ ಆಚರಣೆ
- ತೋಟಗಾರಿಕೆ ಬೆಳೆಗಳು ಕಸಿ ಕಟ್ಟುವುದು, ವಿವಿಧ ಹಣ್ಣಿನ ಬೆಳೆಗಳು, ತರಕಾರಿ ಬೆಳೆಗಳು, ತೋಟಪಟ್ಟಿ ಬೆಳೆ, ಹೂವಿನ ಸಸಿಗಳು, ಅಲಂಕಾರಿಕ ಸಸಿಗಳು, ಸಾಂಬಾರು ಸಸಿಗಳು, ಔಷಧೀಯ ಹಾಗೂ ಸುಗಂಧ ದ್ರವ್ಯ ಬೆಳೆಗಳ ಸಸಿಗಳು, ವಿವಿಧ ಬಗೆ ಜೈವಿಕ ಕೀಟನಾಶಕ, ಜೈವಿಕ ಗೊಬ್ಬರ, ಎರೆಹುಳು ಗೊಬ್ಬರ ಹಾಗೂ ಯಂತ್ರೋಪಕರಣಗಳ ಪ್ರದರ್ಶನ
- ಮಾಹಿತಿ ಹಾಗೂ ತೋಟಗಾರಿಕೆ ಉತ್ಪನ್ನ ಮಾರಾಟ ಮುಖ್ಯ ಉದ್ದೇಶ

• **ಧಾರವಾಡ:** ತೋಟಗಾರಿಕಾ ಉತ್ಪನ್ನಗಳಲ್ಲಿ ವಿಷದ ಅಂಶ ಕಂಡುಬರುತ್ತಿದೆ. ಈ ಉತ್ಪನ್ನ ರಫ್ತು ಅಸಾಧ್ಯ. ಹೀಗಾಗಿ ವಿಷಕಾರಿ ಕೀಟನಾಶಕ, ರಸಗೊಬ್ಬರ ಕಡಿಮೆ ಮಾಡಿ, ಸಾವಯವ ಗೊಬ್ಬರದ ಬಳಸಲು ಸಾವಯವ ಕೃಷಿಕ ಡಾ.ಗೋವಿಂದಪ್ಪ ಗೌಡಪ್ಪಗೋಳ ಹೇಳಿದರು.

ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಕುಂಭಾಪುರ ಫಾರ್ಮ್‌ನಲ್ಲಿ ಹಮ್ಮಿಕೊಂಡ ಮೂರು ದಿನಗಳ ಸಸ್ಯ ಸಂತೆ ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ. ಜೆ.ಬಿ.ಗೋಪಾಲಿ ಮಾತನಾಡಿ, ತೋಟಗಾರಿಕೆ ಬೆಳೆಗಳ ಸಸಿಗಳನ್ನು ಒಂದೇ ಸೂರಿನಡಿ ರೈತರಿಗೆ ಲಭ್ಯವಾಗಲೆಂದು ಸಸ್ಯಸಂತೆ ಆಯೋಜಿಸಲಾಗಿದೆ ಎಂದರು.

ಡಾ.ಲಕ್ಷ್ಮಣ ಕುಕೂನೂರ ಡೀನ್, ಡಿಎಸ್‌ಎಲ್ ಡಿ, ದೇವಿಹೊಸರ, ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ. ಶಾಂತಪ್ಪ ಟಿ., ವ್ಯವಸ್ಥಾಪಕ ನಿರ್ದೇಶಕ ಜಗದೀಶ ಹಿರೇಮಠ, ಕೃಷಿಕ ಸಮಾಜದ ಅಧ್ಯಕ್ಷ ಮಲ್ಲನಗೌಡ ಪಾಟೀಲ ಸೇರಿ ರೈತರು ಇದ್ದರು.

ಸರ್ಕಾರ ಬಡ್ಡಿರಹಿತ ಸಾಲ ನೀಡಲು ರೈತರ ಆಗ್ರಹ

• **ನವಲಗುಂದ:** ಮಲಪ್ರಭೆಗೆ ಮಹದಾಯಿ ಕಳಸಾ ಬಂಡೂರಿ ಜೋಡಣೆ ಬಗ್ಗೆ ನ್ಯಾಯಾಧೀಕರಣದ ತೀರ್ಪಿನಂತೆ ಬಾಕಿ ಉಳಿದ ನಮ್ಮ ಪಾಲಿನ ನೀರಿನ ಹಕ್ಕನ್ನು ಕೊಡಿಸಬೇಕು ಹಾಗೂ ಸರ್ಕಾರಿ ವಕೀಲ ಮೋಹನ ಕಾತರಕಿ ಅವರು ಕಳಸಾ ಬಂಡೂರಿಗೆ ಕಾನೂನಿನ ಅಡ್ಡಿಯಿಲ್ಲ ವೆಂದು ಘೋಷಣೆ ಮಾಡಿದ್ದಾರೆ. ಕಾಮಗಾರಿ ಕಾರ್ಯಾರಂಭ ಮಾಡಬೇಕೆಂದು ಹಾಗೂ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ನವಲಗುಂದಕ್ಕೆ ಆಗಮಿಸಿದ್ದ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಪಿ.ಎಸ್. ದೇಸಾಯಿ ಅವರಿಗೆ ರೈತ ಹೋರಾಟಗಾರರು ಮನವಿ ಸಲ್ಲಿಸಿದರು.

ಈ ಹಿಂದೆ ಬ್ಯಾಂಕುಗಳು ಬಡ್ಡಿಯನ್ನು ಮಾತ್ರ ತುಂಬಿಸಿಕೊಂಡು ಮರಳಿ ಸಾಲವನ್ನು ಕೊಡುತ್ತಿದ್ದರು. ಆದರೆ ಇಂದು ಒಂದು ದಿನದ ಮಟ್ಟಿಗೆ ಅಸಲು ಮತ್ತು ಬಡ್ಡಿ ಸೇರಿ ತುಂಬಿದರೆ ಮಾತ್ರ ಸಾಲ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದು ರೈತನಿಗೆ ಅಸಾಧ್ಯ. ಈ ಹಿಂದಿನಂತೆ ಬಡ್ಡಿಯನ್ನು ತುಂಬಿಸಿಕೊಂಡು ಪುನಃ ಚಾಲ್ತಿ ಸಾಲ ಕೊಡುವಂತಾಗಬೇಕು. ಹಾಗೂ ತಾಲೂಕಿನಾದ್ಯಂತ ಮತ್ತು ಗ್ರಾಮಗಳಲ್ಲಿ ಮೈಕ್ರೋ ಫೈನಾನ್ಸ್ ಸಾಲ ತುಂಬಿಸಿಕೊಳ್ಳಲು ಸರ್ಕಾರ ಕಾಲಾವಕಾಶ ಕೊಟ್ಟಿದ್ದರೂ ಕೂಡಾ ಒತ್ತಾಯದ ವಸೂಲಿ ಮಾಡುತಿದ್ದಾರೆ. ಇದನ್ನು ಸರ್ಕಾರ ತಕ್ಷಣ ನಿಲ್ಲಿಸಬೇಕು ಹಾಗೂ ಒತ್ತಾಯದ ವಸೂಲಿ ಮಾಡಬಾರದು ಎಂದರು. ಸಹಕಾರಿ ಬ್ಯಾಂಕುಗಳಾದ ಭೂ ಅಭಿವೃದ್ಧಿ ಹಾಗೂ ಸೊಸೈಟಿ ಮೂಲಕ ಭೂ ಅಭಿವೃದ್ಧಿ ಸಾಲ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ ಮುಂತಾದ ಯೋಜನೆಗೆ '0' ಬಡ್ಡಿಯ ಮೇಲೆ ಸರ್ಕಾರ ಸಾಲ ಕೊಡುವಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು. ಕಟಬಾಕಿದಾರರು ಇದ್ದರೂ ಕೂಡಾ ಕರ್ನಾಟಕ ಬ್ಯಾಂಕ ಹೊರತು ಪಡಿಸಿ ಬಡ್ಡಿ ಮನ್ನಾಮಾಡಿ ಪುನಃ ಸಿಬಿಲ್ ತೆಗೆದು ಹಾಕಿ ಸಾಲ ಕೊಟ್ಟದ್ದನ್ನ ಮುಂದುವರೆಸಬೇಕು. ಅದೇ ರೀತಿಯಾಗಿ ಎಲ್ಲ ಬ್ಯಾಂಕುಗಳು ಸಿವಿಲ್ ತೆಗೆದು ಹಾಕಿ ಹೊಸದಾಗಿ ಸಾಲ ಕೊಡುವಂತೆ ಮಾಡಬೇಕು. ಕರ್ನಾಟಕ ಬ್ಯಾಂಕ್ ಉಳಿದ ಬ್ಯಾಂಕುಗಳಂತೆ ಬಡ್ಡಿ ಮನ್ನಾಮಾಡಿ ಸಿಬಿಲ್ ತೆಗೆದು ಹಾಕಿ ಹೊಸ ಸಾಲ ಕೊಡುವಂತೆ ಸರ್ಕಾರ ಆದೇಶ ಮಾಡಬೇಕು. ರೈತ ಬೆಳೆದ ಬೆಳೆಗೆ ಬೆಂಬಲ ಘೋಷಿಸಿ ಸದಾವಕಾಲ ಖರೀದಿ ಕೇಂದ್ರಗಳನ್ನು ರಾಜ್ಯವ್ಯಾಪಿ ಪ್ರಾರಂಭಿಸಬೇಕು ಎಂದು ಆಗ್ರಹಿಸಿದರು.

ಯಲ್ಲಪ್ಪ ದಾಡಿಭಾವಿ, ಸುಭಾಸಗೌಡ ಪಾಟೀಲ, ಉಳಿವೆಪ್ಪ ಇಬ್ರಾಹಿಂಪುರ, ಸಾಯಿಬಾಬಾ ಆನೆಗುಂದಿ, ತಿಪ್ಪಣ್ಣ ಬಳೋಳ್ಳಿ, ಗಂಗಪ್ಪ ಸಂಗಟಿ, ರವಿ ತೋಟದ, ಫಕೀರಗೌಡ್ರ ಬಸನಗೌಡ್ರ, ಗೋವಿಂದರಡ್ಡಿ ಮೊರಬದ, ಅಶೋಕ ಮಜ್ಜಿಗುಡ್ಡ, ಬಾ-ಹುಸೇನ್, ಮುರಗೆಪ್ಪ ಪಲ್ಲೇದ ಸೇರಿದಂತೆ ಅನೇಕರಿದ್ದರು.



ಜು.1ರಿಂದ ವಿಬಿಜಿ ರಾಮ್ ಜಿ ಅನುಷ್ಠಾನ

• **ಕಲಘಟಗಿ:** ಪಟ್ಟಣದ ತಾಲೂಕು ಪಂಚಾಯತ್ ಸಭಾಭವನದಲ್ಲಿ ವಿಬಿಜಿ ರಾಮ್ ಜಿ ಯೋಜನೆ ಅನುಷ್ಠಾನ ಕುರಿತು ತರಬೇತಿ ಕಾರ್ಯಾಗಾರ ಆಯೋಜಿಸಲಾಗಿತ್ತು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆದೇಶದಂತೆ ಮಾಸ್ಟರ್ ಟ್ರೈನರ್ ಆಗಿ ತರಬೇತಿ ಪಡೆದ ಅಳ್ನಾವರ ತಾ. ಪಂ. ಕಾರ್ಯ ನಿರ್ವಾಹಕ ಅಧಿಕಾರಿ ಪ್ರಶಾಂತ ತುಕಾರಾಣಿ ಈ ಯೋಜನೆ ಕುರಿತು ತರಬೇತಿ ನೀಡಿದರು.

ಗ್ರಾಮೀಣ ಅಭಿವೃದ್ಧಿಗೆ ಇನ್ನಷ್ಟು ಒತ್ತು ನೀಡಿ ನರೇಗಾದಲ್ಲಿ ಇದ್ದ ಕೂಲಿ ವಾರ್ಷಿಕ 100 ದಿನಗಳನ್ನ 125 ದಿನಗಳಿಗೆ ಹೆಚ್ಚಿಸಲಾಗಿದೆ. 60 ದಿನಗಳ ವಿರಾಮ ಇರುತ್ತದೆ. ಇ ಕೈವೈಸಿ ಕಡ್ಡಾಯಗೊಳಿಸಲಾಗಿದೆ ಎಂದರು. ಕಲಘಟಗಿ ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ ಪರಶುರಾಮ ಸಾವಂತ ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಕೂಲಿಕಾರರಿಗೆ ಮಾನವ ದಿನಗಳನ್ನು ಸೃಜನೆ ಮಾಡಿ ಕೆಲಸ ಒದಗಿಸಿ ವಲಸೆ ತಪ್ಪಿಸುವ ದೊಡ್ಡ ಜವಾಬ್ದಾರಿ ನಿಮ್ಮದು ಎಂದರು. ಗ್ರಾ.ಉ.ಸಹಾಯಕ ನಿರ್ದೇಶಕ ಗಿರೀಶ ಕೋರಿ, ತಾಂತ್ರಿಕ ಸಂಯೋಜಕ ವರುಣ ಕುಲಕರ್ಣಿ, ಎಂ ಐ ಎಸ್ ಕೊ ಆರ್ಡಿನೇಟರ್ ನಾರಾಯಣ ಕಂಪ್ಲಿ, ಟಿ.ಸಿ. ಅಭಿಷೇಕ ಡೊಂಬರದ, ಎಲ್ಲ ತಾಂತ್ರಿಕ ಸಂಯೋಜಕರು, ಐಇಸಿ ಸಂಯೋಜಕ ಎಸ್. ದಿವಾಕರ, ಎಲ್ಲ ಪಿಡಿಒ, ಡಿ.ಇ.ಓ, ಬಿ ಎಫ್ ಟಿ, ಜಿಕೆಎಂ, ಟಿ.ಆರ್.ಎಂಗಳು ತರಬೇತಿ ಪಡೆದರು.



ರೋಟರಿಯಿಂದ ಡೆಸ್ಕ್, ಬ್ಯಾಗ್ ವಿತರಣೆ

• **ಧಾರವಾಡ:** ರೋಟರಿ ಕ್ಲಬ್ ಸೆಂಟ್ರಲ್‌ನಿಂದ ನಗರದ ವನಿತಾ ಸೇವಾ ಸಮಾಜದ ಶಾಲಾ ಮತ್ತು ಕಾಲೇಜಿಗೆ 117 ಡೆಸ್ಕ್ ಮತ್ತು 100 ವಿದ್ಯಾರ್ಥಿಗಳಿಗೆ ಬ್ಯಾಗ್ ವಿತರಣಾ ಸಮಾರಂಭ ಶನಿವಾರ ಜರುಗಿತು. ರೋಟರಿ ಅಧ್ಯಕ್ಷ ನಾಗರಾಜ ತಾಯಣ್ಣವರ, ಗಣೇಶ ಭಟ್, ರಮೇಶ ಬಣಕಾರ, ವಾಸುದೇವ ಪರ್ವತಿ, ಟಿ.ಎಲ್.ಪಾಟೀಲ, ಕೆ.ಎಸ್.ಜಯಂತ, ಅಶೋಕ ನಾಯಕ, ಸುಮಾ ರಜಪತ, ಶುಭ ಭಟ್ ಅನೇಕರು ಇದ್ದರು.



ಸರ್ವರೂ ಸಮಾಜ ಸೇವೆ ಗುಣ ಬೆಳೆಸಿಕೊಳ್ಳಲಿ

• **ಧಾರವಾಡ:** ಮಕ್ಕಳು ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ತೊಡಗಿಸುವ ಮೂಲಕ ಜೀವನದಲ್ಲಿ ಸಮಾಜ ಸೇವೆ ಗುಣ ಅಳವಡಿಸಿಕೊಳ್ಳುವಂತೆ ಟಾಟಾ ಮೋಟರ್ಸ್ ಧಾರವಾಡ ಘಟಕದ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಶ್ರೀ ಶೆಟ್ಟಿ ಹೇಳಿದರು.

ನಗರದ ಕಮಲಾಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕ ಉದ್ಘಾಟಿಸಿದ ಅವರು, ಮಕ್ಕಳಿಗೆ ಅಗ್ನಿ ಅವಘಡಗಳು ಸಂಭವಿಸಿದಾಗ ಬೆಂಕಿ ನಂದಿಸುವ ಹಾಗೂ ಮುಂಜಾಗ್ರತ ಕ್ರಮಗಳ ಕುರಿತು ಪ್ರಾತ್ಯಕ್ಷಿಕೆಯನ್ನು ನೀಡಿದರು. ಮುಖ್ಯೋಧ್ಯಾಪಕ ರಮೇಶ್ ಯರಳಿ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ರಾಷ್ಟ್ರೀಯ ಸೇವಾ ಯೋಜನೆಯ ಘಟಕದ ಕಾರ್ಯಕ್ರಮ ಅಧಿಕಾರಿ ಎ.ಎಫ್.ಅಂಕಲಗಿ ಮಾತನಾಡಿದರು. ರಾಜು ನಾಯಕ, ಶಿವಾನಂದ ಬಾಗೋಡಿ, ಕೆ.ಎಸ್.ಪಾಟೀಲ, ವಾರೀಜಾಕ್ಷಿ ಭಟ್, ವರ್ಷಾ ಪವಾರ, ಮಂಜುಳಾ ಬಡಿಗೇರ ಇದ್ದರು.



ನೂತನ ಶಾಲಾ ಸಂಸತ್ತು ಉದ್ಘಾಟನೆ



• **ಧಾರವಾಡ:** ಮಕ್ಕಳಲ್ಲಿ ಪ್ರಜ್ಞಾಪ್ರಭುತ್ವ ಅರಿವು ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸುವ ಹಿನ್ನಲೆ ನಗರದ ಹೊರವಲಯದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಶನಿವಾರ ಶಾಲಾ ಸಂಸತ್ತ ರಚನೆಯಾಗಿದೆ.

ಚುನಾವಣೆಯ ನಿಯಮಗಳ ಅನುಸಾರ ನಾಮಪತ್ರ ಸಲ್ಲಿಕೆ, ನಾಮಪತ್ರ ಪರಿಶೀಲನೆ, ನಾಮಪತ್ರ ಹಿಂಪಡೆ, ಚುನಾವಣಾ ಪ್ರಕ್ರಿಯೆ, ಮತ ಏಣಿಕೆ ಸೇರಿದಂತೆ ಹಲವು ಹಂತಗಳ ಬಗ್ಗೆ ಅರಿವು ಮೂಡಲಾಯಿತು. ನೂತನ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದ ಶಾಲಾ ಪ್ರಾಚಾರ್ಯೆ ಡಾ.ಅನಿತಾ ರೈ ಮಾತನಾಡಿ, ಮಕ್ಕಳಲ್ಲಿ ನಾಯತ್ವದ ಗುಣಗಳು ಬೆಳೆಸುವ ಪ್ರತಿ ವರ್ಷ ಚುನಾವಣೆ ನಡೆಸುವುದಾಗಿ ತಿಳಿಸಿದರು. ಪ್ರಜಾಪ್ರಭುತ್ವ ಉಳಿಸಲು ಹಾಗೂ ವಿದ್ಯಾರ್ಥಿಗಳಲ್ಲಿ ಮೌಲ್ಯಗಳನ್ನು ಬಿತ್ತುವಲ್ಲಿ ಈ ಶಾಲಾ ಸಂಸತ್ತು ಪ್ರಕ್ರಿಯೆ ಉತ್ತಮ ವೇದಿಕೆಯಾಗಿದೆ ಎಂದರು. ಶಾಲಾ ಶಿಕ್ಷರು ಹಾಗೂ ಸಿಬ್ಬಂದಿ ಇದ್ದರು.



ಧಾರವಾಡ: ಜೆಎಸ್ಸೆಸ್ ಮಂಜುನಾಥೇಶ್ವರ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ ಶೇ.99.2ರಷ್ಟು ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ಶ್ರಾವಣಿ ಪಾಟೀಲಗೆ ಸಂಸ್ಥೆಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಮಹಾವೀರ ಉಪಾಧ್ಯೆ, ಪ್ರಾಚಾರ್ಯ ರವಿವರ್ಮ ಜೋಶಿ ಅಭಿನಂದಿಸಿದರು.

ಶಿಕ್ಷಕಿ ಮುಕ್ತಾ ಕಾತರಕಿ ಸೇವಾ ನಿವೃತ್ತಿ

• **ಅಳ್ನಾವರ:** ಇಲ್ಲಿನ ಸೇಂಟ್ ತೆರೇಜಾ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ಸೇವಾ ನಿವೃತ್ತರಾದ ಮುಕ್ತಾ ಕಾತರಕಿ ಅವರನ್ನು ಶಿಕ್ಷಕರು, ಹಳೆಯ ವಿದ್ಯಾರ್ಥಿಗಳು ಸತ್ಕರಿಸಿದರು. ಶಾಲಾ ಸಂಚಾಲಕ ಧರ್ಮಗುರು ಫಾ.ಜೋಸೆಫ್ ಲೋಪಿಸ್, ಫಾ. ಥಾಮಸ್ ಫರ್ನಾಂಡಿಸ್, ಮುಖ್ಯ ಶಿಕ್ಷಕಿ ಸಿಸ್ಟರ್ ಝೀನಾ ಪಾಯಸ್, ಅಶೋಕ ಜೋಡಟ್ಟಿ, ಶಾಲೆಟ್ ಬರೆಟ್ಟೊ, ಅಂತೋನ ಫರ್ನಾಂಡಿಸ್, ಭಾರತಿ ಭೂಮಣ್ಣವರ, ರಾಜು ಅಪ್ಪೇಕರ, ಮುಂಡಲಿಕ ಪಾರ್ದಿ, ರಘು ಕುಲಕರ್ಣಿ ಇದ್ದರು.



ಹಿಂದೂ-ಮುಸ್ಲಿಂರಿಂದ ಮೊಹರಂ ಆಚರಣೆ

• **ಕುಂದಗೋಳ:** ತಾಲೂಕಿನ ಗುಡೇನಕಟ್ಟಿ ಗ್ರಾಮದಲ್ಲಿ ಮೊಹರಂ ಹಬ್ಬವನ್ನು ಹಿಂದೂ-ಮುಸ್ಲಿಂ ಸಮುದಾಯದವರು ಸೌಹಾರ್ದಯುತವಾಗಿ ಆಚರಿಸಿದರು. ಹಬ್ಬದ ಅಂಗವಾಗಿ ಎರಡು ಡೋಲಿಗಳನ್ನು ನಿರ್ಮಿಸಲಾಗಿದ್ದು, ಒಂದರಲ್ಲಿ ಈಶ್ವರ ಅಲ್ಲಾ ನೀನೆ ಎಲ್ಲಾ ಎಂಬ ಸಂದೇಶದೊಂದಿಗೆ ಈಶ್ವರನ ಭಾವಚಿತ್ರ, ಮತ್ತೊಂದರಲ್ಲಿ ಮಕ್ಕಾ ಮದಿನ ಮಸೀದಿಯ ಚಿತ್ರ ಅಳವಡಿಸಿ ಸರ್ವಧರ್ಮ ಸಮಭಾವದ ಸಂದೇಶ ಸಾರಲಾಯಿತು. ಡೋಲಿಗಳನ್ನು ದಾವಲಸಾಬ್ ಯಲಿಗಾರ ಹಾಗೂ ಖಾದರಸಾಬ್ ಜಾತಿಗೇರ್ ನಿರ್ಮಿಸಿದ್ದರು. ಮೊಹರಂನ ಕೊನೆಯ ದಿನ ಎರಡು ಮಸೀದಿಗಳಿಂದ ಡೋಲಿಗಳ ಮೆರವಣಿಗೆ ನಡೆಸಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಪೂಜೆ ನೆರವೇರಿಸಲಾಯಿತು. ಬಳಿಕ ಡೋಲಿಗಳು ಗ್ರಾಮದ ಮನೆ ಮನೆಗೆ ತೆರಳಿ, ಭಕ್ತರು ಬೆಲ್ಲ, ಸಕ್ಕರೆ, ಹಣ್ಣುಗಳನ್ನು ಸಮರ್ಪಿಸಿ ಹರಕೆ ಸಲ್ಲಿಸಿದರು.



ವೈಜ್ಞಾನಿಕ ಲೈಂಗಿಕ ಶಿಕ್ಷಣ ಅವಶ್ಯ



• **ಧಾರವಾಡ:** ಪ್ರತಿವರ್ಷ ದೇಶದಲ್ಲಿ 50 ಲಕ್ಷ ಬಲವಂತದ ಗರ್ಭಪಾತ ನಡೆಯುತ್ತಿವೆ. ಹೀಗಾಗಿ ಜನರಿಗೆ ಲೈಂಗಿಕ ಶಿಕ್ಷಣ ನೀಡುವುದು ಅವಶ್ಯ ಮಹಿಳಾ ಆರೋಗ್ಯ ತಜ್ಞ ಡಾ.ಸಂಜೀವ ಕುಲಕರ್ಣಿ ಹೇಳಿದರು.

ಭಾರತೀಯ ವೈದ್ಯಕೀಯ ಸಂಘ ಕರ್ನಾಟಕದ ವಿದ್ಯಾವರ್ಧಕ ಸಂಘದ ದೇಶಪಾಂಡೆ ಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಜೀವ ಜಗತ್ತಿನಲ್ಲಿ ಸಂತಾನೋತ್ಪತ್ತಿಯ ವಿಚಿತ್ರಗಳ ಕುರಿತು ಉಪನ್ಯಾಸ ನೀಡಿದರು.

ಲೈಂಗಿಕ ಜ್ಞಾನದ ಕೊರತೆಯಿಂದಾಗಿ ವಿಜ್ಞಾನ ಹಾಗೂ ತಂತ್ರಜ್ಞಾನದ ಯುಗದಲ್ಲೂ ಗರ್ಭಪಾತ ಹೆಚ್ಚಾಗುತ್ತಿವೆ. ಈಗಲೂ ಲೈಂಗಿಕ ಶಿಕ್ಷಣ ನೀಡಬೇಕೋ ಬೇಡವೋ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ ಎಂದರು. ಜನರಲ್ಲಿ ಸಂತಾನೋತ್ಪತ್ತಿ ಪ್ರಕ್ರಿಯೆ ಬಗ್ಗೆ ವೈಜ್ಞಾನಿಕ ತಳಹದಿಯ ಶಿಕ್ಷಣ ನೀಡುವುದು ಅಗತ್ಯ. 350 ಕೋಟಿ ವರ್ಷಗಳ ಹಿಂದೆ ಜೀವಿಗಳ ಸೃಷ್ಟಿಯಾಗಿ, ಜೀವ ಜಗತ್ತಿನಲ್ಲಿ ಸಂತಾನೋತ್ಪತ್ತಿ ನಡೆಸುವುದಾಗಿ ತಿಳಿಸಿದರು. ಪ್ರಕೃತಿಯಲ್ಲಿ ಮನುಷ್ಯರನ್ನು ಬಿಟ್ಟರೆ ಹೆಣ್ಣು ಬಹುಸಂಗಾತಿ ಜೀವಿ. ಪ್ರಕೃತಿಯಲ್ಲಿ ವೈವಿಧ್ಯವಿದೆ. ಉಳಿಯಬೇಕು, ಬೆಳೆಯಬೇಕು. ಬಾಳಬೇಕು ಹಾಗೂ ಬೆಳೆಸಬೇಕು ಎಂಬುದು ಜೀವಿಗಳ ಕರ್ತವ್ಯ ಎಂದರು. ಡಾ. ಜಗದೀಶ ನಿರಡಿ ಅಧ್ಯಕ್ಷತೆ ವಹಿಸಿದ್ದರು. ಡಾ. ವಿಶ್ವನಾಥ ಶಿಂಧೋಳಿಮಠ ಸ್ವಾಗತಿಸಿದರು. ಡಾ. ಜ್ಯೋತಿ ಘೋಂಗಡೆಮಠ ಪ್ರಾಸ್ತಾವಿಸಿದರು. ಡಾ. ಉಮಾ ಚಿಕ್ಕರಡ್ಡಿ ನಿರೂಪಿಸಿದರು. ಡಾ. ಸಿ.ಆರ್.ಯರವಿನತೆಲಿಮಠ ಇದ್ದರು.

ಕಳುವು ಮಾಡಿದ್ದ ದ್ವಿಚಕ್ರವಾಹನ ವಶಕ್ಕೆ

• **ಹುಬ್ಬಳ್ಳಿ;** ನಗರದಲ್ಲಿ ದ್ವಿಚಕ್ರವಾಹನ ಕಳುವು ಮಾಡುತ್ತಿದ್ದ ಓರ್ವ ಆರೋಪಿಯನ್ನು ಬಂಧಿಸಿ ಶಹರ ಪೊಲೀಸ್ ಠಾಣೆಯ ಸಿಬ್ಬಂದಿ ಆತನಿಂದ 3.65 ಲಕ್ಷ ರೂ. ಮೌಲ್ಯದ 5 ದ್ವಿಚಕ್ರವಾಹನ ವಶಕ್ಕೆ ಪಡೆಯಲಾಗಿದೆ. ಇಲ್ಲಿಯ ಅಮರಗೋಳ ಆಶ್ರಯ ಪ್ಲಾಟ್ ನಿವಾಸಿ ಸಮೀರ್ ಧಾರವಾಡ(36) ಬಂಧಿತ ಆರೋಪಿ. ದ್ವಿಚಕ್ರ ವಾಹನ ಕಳುವು ಆದ ಬಗ್ಗೆ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಕುರಿತು ತನಿಖೆ ನಡೆಸಿದ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ.

ಅಗ್ನಿ ಅವಘಡ: ಶಾರ್ಟ್ ಸರ್ಕ್ಯೂಟ್ ನಿಂದ ಇಲ್ಲಿನ ಅಮರಗೋಳದ ಎಪಿಎಂಸಿ ಮಾರುಕಟ್ಟೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಡಿಯಲ್ಲಿ ನಿರ್ಮಿಸಿದ ನೀರಿನ ಘಟಕದಲ್ಲಿ ಶುಕ್ರವಾರ ಅಗ್ನಿ ಅವಘಡ ಸಂಭವಿಸಿ ಅಪಾರ ಹಾನಿ ಉಂಟಾಗಿದೆ. ಸ್ಥಳೀಯರ ಮಾಹಿತಿ ಮೇರೆಗೆ ಕೂಡಲೇ ಸ್ಥಳಕ್ಕೆ ಅಗ್ನಿಶಾಮಕ ದಳ ಸಿಬ್ಬಂದಿ ತೆರಳಿ ಬೆಂಕಿ ನಂದಿಸಿದ್ದಾರೆ. ತಡವಾಗಿದ್ದರೆ ಕಟ್ಟಡ ಸ್ಫೋಟಗೊಳ್ಳುವ ಸಾಧ್ಯತೆ ಇತ್ತು. ಅವಘಡದಲ್ಲಿ ನೀರಿನ ಟ್ಯಾಂಕ್, ವಿದ್ಯುತ್ ಬೋರ್ಡ್, ಫ್ಯಾನ್ ಸೇರಿದಂತೆ ಹಲವು ವಸ್ತುಗಳಿಗೆ ಹಾನಿಯಾಗಿದೆ ಎಂದು ಅಮರಗೋಳದ ಎಪಿಎಂಸಿ ಅಗ್ನಿಶಾಮಕ ಠಾಣೆಯ ಠಾಣಾಧಿಕಾರಿ ಡಿ.ಬಿ. ಕಲ್ಲಮ್ಮನವರ ತಿಳಿಸಿದರು.



ಕಾರಹುಣ್ಣಿಮೆ ವೈಭವ: ಕಣ್ಮನ ಸೆಳೆಯುವ ಕರಿಬಂಡಿ ಉತ್ಸವ

▸ **ರವಿ ಸಿ. ಕಮಡೊಳ್ಳಿ**

• **ಕುಂದಗೋಳ:** ಉತ್ತರ ಕರ್ನಾಟಕದ ರೈತರ ಬದುಕು, ಸಂಸ್ಕೃತಿ ಮತ್ತು ಭಕ್ತಿಯ ಪ್ರತೀಕವಾಗಿ ಆಚರಿಸಲ್ಪಡುವ ಕಾರಹುಣ್ಣಿಮೆ ಹಬ್ಬಕ್ಕೆ ಕುಂದಗೋಳದ ಕರಿಬಂಡಿ ಉತ್ಸವ ವಿಶಿಷ್ಟ ಮೆರುಗು ನೀಡುತ್ತದೆ. ರಾಜರ ಆಳ್ವಿಕೆಯ ಕಾಲದಿಂದ ಹಿಡಿದು ಬ್ರಿಟಿಷರ ಆಡಳಿತವನ್ನೂ ದಾಟಿ ಇಂದಿನವರೆಗೂ ನಿರಂತರವಾಗಿ ನಡೆದುಕೊಂಡು ಬಂದಿರುವ ಈ ಸಂಪ್ರದಾಯವು ಪಟ್ಟಣದ ಸಾಂಸ್ಕೃತಿಕ ಪರಂಪರೆಯ ಜೀವಂತ ಸಂಕೇತವಾಗಿದೆ.

ಕಾರಹುಣ್ಣಿಮೆಯ ದಿನ ಬೆಳಗ್ಗೆಯೇ ರೈತರು ತಮ್ಮ ಎತ್ತುಗಳನ್ನು ಬಣ್ಣಬಣ್ಣದ ಅಲಂಕಾರಗಳಿಂದ ಸಿಂಗರಿಸಿ, ಸಕಲ ವಾದ್ಯ ಮೇಳಗಳೊಂದಿಗೆ ಬ್ರಹ್ಮದೇವರ ಗುಡಿಗೆ ಕರೆತಂದು ಪ್ರದಕ್ಷಿಣೆ ಹಾಕಿಸುತ್ತಾರೆ. ಬಳಿಕ ಮನೆಗೆ ತೆರಳಿ ಸಂಪ್ರದಾಯದಂತೆ ಕರಿ ಹರಿಯುವ ಆಚರಣೆ ನೆರವೇರಿಸುತ್ತಾರೆ. ಸಂಜೆ ಮೂಲ ನಕ್ಷತ್ರದ ಗೋಧೂಳಿ ವೇಳೆಗೆ ಸಾವಿರಾರು ಜನರ ಕಾತರದ ನಿರೀಕ್ಷೆಯ ನಡುವೆ ಕರಿಬಂಡಿ ಉತ್ಸವ ಆರಂಭಗೊಳ್ಳುತ್ತದೆ.

ಉತ್ಸವದ ಪೂಜಾ ಕೈಂಕರ್ಯವನ್ನು ಬ್ರಹ್ಮಲಿಂಗೇಶ್ವರ ದೇವಸ್ಥಾನದ ಅರ್ಚಕರಾದ ಕರೋಗಲ್ಲ ಮನೆತನ ಸಂಪ್ರದಾಯಬದ್ಧವಾಗಿ ನೆರವೇರಿಸುತ್ತದೆ. ಉತ್ಸವದಲ್ಲಿ ಎರಡು ಬಂಡಿಗಳು ವಿಶೇಷ ಆಕರ್ಷಣೆಯಾಗಿವೆ. ಒಂದನ್ನು ಶಾನಭೋಗರ ಬಂಡಿ ಎಂದು ಕರೆಯಲಾಗುತ್ತಿದ್ದು, ಇದಕ್ಕೆ ಬಿಳಿಬಾಳ ಮನೆತನದವರು ಎತ್ತುಗಳನ್ನು ಹೂಡುತ್ತಾರೆ. ಮತ್ತೊಂದು ಗೌಡರ ಬಂಡಿ, ಇದಕ್ಕೆ ಅಲ್ಲಾಪುರ ಮನೆತನದವರು ಎತ್ತುಗಳನ್ನು ಒದಗಿಸುತ್ತಾರೆ. ಸಂಪ್ರದಾಯದಂತೆ ಆಯ್ಕೆಯಾದ ಶಸ್ತ್ರಧಾರಿ ವೀರಗಾರರು ತಲಾ ಏಳು ಮಂದಿ ಎರಡು ಬಂಡಿಗಳಲ್ಲಿ ಆಸೀನರಾಗಿ, ಜಯ ಬ್ರಹ್ಮಲಿಂಗೋಂ... ಲಕ್ಷ್ಮೀನರಸಿಂಹ ಲಿಂಗೋಂ... ಎಂಬ ನಾಮಸ್ಮರಣೆ ಮೊಳಗಿಸುತ್ತಾ ಊರಿನ ಕರಿಯನ್ನು ಹರಿದು ಬ್ರಹ್ಮದೇವರ ಗುಡಿಗೆ ತೆರಳಿ ಪ್ರದಕ್ಷಿಣೆ ಹಾಕಿ ನಮಸ್ಕರಿಸಿ ಮರಳುತ್ತಾರೆ. ಈ ಅಪರೂಪದ ದೃಶ್ಯವನ್ನು ಕಣ್ತುಂಬಿಕೊಳ್ಳಲು ರಾಜ್ಯದ ವಿವಿಧ ಭಾಗಗಳಿಂದ ಭಕ್ತರು ಹಾಗೂ ಪ್ರವಾಸಿಗರು ಆಗಮಿಸುವುದು ಉತ್ಸವದ ವೈಶಿಷ್ಟ್ಯವಾಗಿದೆ.



ಹೊನ್ನುಗ್ಗಿ ಇಂದು

ಜೂನ್ 28ರಂದು ಹೊನ್ನುಗ್ಗಿ, ಜೂನ್ 29 ರಂದು ಕರಿಬಂಡಿ ಉತ್ಸವ, ಕಾರಹುಣ್ಣಿಮೆ ಅಂಗವಾಗಿ ಜೂನ್ 28 (ಭಾನುವಾರ) ಹೊನ್ನುಗ್ಗಿ ಹಾಗೂ ಜೂನ್ 29 (ಸೋಮವಾರ) ಐತಿಹಾಸಿಕ ಕರಿಬಂಡಿ ಉತ್ಸವ ಜರುಗಲಿದೆ ಎಂದು ಬ್ರಹ್ಮಲಿಂಗೇಶ್ವರ ದೇವಸ್ಥಾನದ ಅರ್ಚಕ ಸುನೀಲದತ್ತ ಕರೋಗಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಇಷ್ಟಾರ್ಥ ಸಿದ್ಧಿಗೆ ಭಕ್ತರಿಂದ ದೀರ್ಘ ದಂಡ ನಮಸ್ಕಾರ

ಕರಿಬಂಡಿ ಉತ್ಸವದ ಬಳಿಕ ವೀರಗಾರರು ದೇವಸ್ಥಾನದತ್ತ ಕಾಲ್ನಡಿಗೆಯಲ್ಲಿ ಸಾಗುವ ವೇಳೆ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ದೀರ್ಘ ದಂಡ ನಮಸ್ಕಾರ ಸಲ್ಲಿಸುತ್ತಾರೆ. ಪೂಜೆ ಮುಗಿಸಿ ಹಿಂದಿರುಗುವ ವೀರಗಾರರಿಗೆ ವಿಜಯದ ಸಂಕೇತವಾಗಿ ಸಕ್ಕರೆ ಅರ್ಪಿಸಿ ಭಕ್ತಿ ಸಮರ್ಪಿಸುತ್ತಾರೆ. ಭಕ್ತಿ, ಶೌರ್ಯ, ಸಂಪ್ರದಾಯ ಹಾಗೂ ಗ್ರಾಮೀಣ ಸಂಸ್ಕೃತಿಯ ಅಪೂರ್ವ ಸಂಗಮವಾಗಿ ಈ ಆಚರಣೆ ಜನಮನ ಸೆಳೆಯುತ್ತದೆ.

ಕಣ್ಮರೆಯಾಗುತ್ತಿರುವ ಕಲ್ಯಾಣ ಕರ್ನಾಟಕದ ಹೆಮ್ಮೆಯ ಕಲೆ

'ಗುಂಡುಕಲ್ಲು' ಸಾಹಸಕ್ಕೆ ಕಾಯಕಲ್ಪ ಯಾವಾಗ?

ಸಿದ್ದಯ್ಯ ಹೆಸರೂರು



ದಿಗಂತ ವಿಶೇಷ

ಮಸ್ಕಿ: ಬಿಸಿಲು ನಾಡು ರಾಯಚೂರು ಜಿಲ್ಲೆಯ ಗ್ರಾಮೀಣ ಭಾಗದ ಯುವಕರ ದೈಹಿಕ ಶಕ್ತಿ, ಧೀರತನ ಹಾಗೂ ಸೌಂದರ್ಯದ ಸಂಕೇತವಾಗಿದ್ದ 'ಗುಂಡು ಕಲ್ಲು ಎತ್ತುವ' ಸಾಹಸ ಕಲೆ ಇಂದು ಕಣ್ಮರೆಯಾಗುವ ಹಂತಕ್ಕೆ ಬಂದು ನಿಂತಿದೆ.

ಒಂದು ಕಾಲದಲ್ಲಿ ಮಸ್ಕಿ ತಾಲೂಕು ಸೇರಿದಂತೆ ಜಿಲ್ಲೆಯ ಕವಿತಾಳ, ಲಿಂಗಸುಗೂರು, ಸಿಂಧನೂರು ಭಾಗದ ಹಳ್ಳಿಗಳ ಹಬ್ಬ, ಜಾತ್ರೆ, ಎಂದರೆ ಅಲ್ಲಿ ಗುಂಡುಕಲ್ಲು ಎತ್ತುವ ಸ್ಪರ್ಧೆ ಕಡ್ಡಾಯವಾಗಿ ಇರುತ್ತಿತ್ತು. ಆದರೆ, ಇಂದಿನ ಆಧುನಿಕತೆ, ಮೊಬೈಲ್ ವ್ಯಾಮೋಹ ಹಾಗೂ ಜಿಮ್ ಸಂಸ್ಕೃತಿಯ ಅಬ್ಬರದಲ್ಲಿ ಈ ವಿಶಿಷ್ಟ ಗ್ರಾಮೀಣ ಕ್ರೀಡೆ ಇತಿಹಾಸದ ಪುಟಗಳನ್ನು ಸೇರುತ್ತಿದೆ.

ಮಸ್ಕಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಗುಂಡುಕಲ್ಲು ಎತ್ತುವುದೆಂದರೆ ಕೇವಲ ಶಾರೀರಿಕ ಬಲವಲ್ಲ, ಅದು ಗಂಡುಗಲಿಗಳ ಪ್ರತಿಷ್ಠೆಯಾಗಿತ್ತು. ಊರ ಹಬ್ಬ ಹಾಗೂ ಮಲ್ಲಿಕಾರ್ಜುನ ದೇವರ ಮುಂತಾದ ಪ್ರಸಿದ್ಧ ಜಾತ್ರೆಗಳಲ್ಲಿ ನೂರಾರು ಕೆಜಿ ತೂಕದ ಕಲ್ಲುಗಳನ್ನು ಎತ್ತಿ ಹೆಗಲ ಮೇಲೆ ಹಾಕಿಕೊಳ್ಳುವ ಯುವಕರಿಗೆ ಕರತಾಡನದ ಗೌರವ ಸಿಗುತ್ತಿತ್ತು.

ಹಿಂದೆ ಈ ಭಾಗದ ಹಳ್ಳಿಗಳಲ್ಲಿ ಹೆಣ್ಣು ಕೊಡಬೇಕಾದರೆ ಯುವಕನ ತಾಕತ್ತು ಅಳೆಯಲು ಗುಂಡುಕಲ್ಲು ಎತ್ತಿಸುವ ಸಾಂಪ್ರದಾಯಿಕ ಪದ್ಧತಿಯೂ ಇತ್ತು. ಅಂದು ಯುವಕರ ಶಕ್ತಿ ಪ್ರದರ್ಶನಕ್ಕೆ ಸಾಕ್ಷಿಯಾಗಿದ್ದ ಕಲ್ಲುಗಳು ಇಂದು ಹಳ್ಳಿಗಳ ದೇವಸ್ಥಾನದ ಆವರಣದಲ್ಲಿ ಯಾರೂ ಮುಟ್ಟದಂತೆ ಧೂಳು ಹಿಡಿದು ಕುಳಿತಿವೆ.

ಇಂದಿನ ಯುವ ಪೀಳಿಗೆ ಹಳ್ಳಿಯ ದೇಸಿ ಕ್ರೀಡೆಗಳಿಗಿಂತ ಪಟ್ಟಣದ ಕೃತಕ ಜಿಮ್ ಹಾಗೂ ಡಂಬಲ್‌ಗಳತ್ತ ಆಕರ್ಷಿತರಾಗುತ್ತಿದ್ದಾರೆ. ಮೊಬೈಲ್ ಗೇಮ್ ಹಾಗೂ ಸಾಮಾಜಿಕ ಜಾಲತಾಣಗಳ ಬಳಕೆಯಿಂದಾಗಿ ಮೈದಾನಕ್ಕಿಳಿದು ಕಲ್ಲು ಎತ್ತುವ ಉತ್ಸಾಹ ಯುವಕರಲ್ಲಿ ತೀರಾ ಕಡಿಮೆಯಾಗಿದೆ.

ಅಂದು ಕಲ್ಲೆತ್ತಿ ಚಪ್ಪಾಳೆ ಹಾಕುತ್ತಿದ್ದರು, ಇಂದು ನೋಡುವವರಿಲ್ಲ ಎನ್ನುವುದು ಹಿರಿಯರ ಅಳಲು. ಹಿಂದೆ ಹಳ್ಳಿಯ ಚಾವಡಿ ಮುಂದೆ ಅಥವಾ ದೇವಸ್ಥಾನದ ಆವರಣದಲ್ಲಿ ಗುಂಡುಕಲ್ಲುಗಳು ಇದ್ದೇ ಇರುತ್ತಿತ್ತು. ಸಂಜೆ ಹೊತ್ತಿಗೆ ಯುವಕರು ಅಲ್ಲಿ ಸೇರಿ ಶಕ್ತಿ ಪ್ರದರ್ಶನ ಮಾಡುತ್ತಿದ್ದರು. ಆದರೆ, ಇಂದು ಆ ಕಲ್ಲುಗಳು ಮೂಲೆ ಸೇರಿವೆ. ಯುವಕರು ಮೊಬೈಲ್ ಹಿಡಿದು ಕುಳಿತಿದ್ದಾರೆ ಎಂದು ಮಸ್ಕಿ ಭಾಗದ ಹಿರಿಯರೊಬ್ಬರು ಬೇಸರ ವ್ಯಕ್ತಪಡಿಸುತ್ತಾರೆ.

ಮುಂಬರುವ ಪೀಳಿಗೆಗೆ ಈ ಸಾಹಸ ಕಲೆಯ ಪರಿಚಯ ಮಾಡಿಕೊಡಲು ಕಲ್ಯಾಣ ಕರ್ನಾಟಕ ಭಾಗದ ದೇಸಿ ಕ್ರೀಡಾಕೂಟಗಳಲ್ಲಿ ಇದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಹಳ್ಳಿಯ ಗಂಡುಗಲಿಗಳ ಈ ಸಾಹಸ ಇತಿಹಾಸದ ಪುಟ ಸೇರದೆ ಜೀವಂತವಾಗಿರಲಿ ಎಂಬುದೇ ಇಂದಿನ ಆಶಯ.

ಆತ್ಮನಿರ್ಭರದ ಮೂಲಕ ಉದ್ಯಮಿಗಳಾಗಿ: ಜೋಶಿ



ಹುಬ್ಬಳ್ಳಿ: ದೇಶದಲ್ಲಿ ಎಣ್ಣೆಕಾಳುಗಳ ಉತ್ಪಾದನೆ ಹೆಚ್ಚಿಸುವ ಅಗತ್ಯವಿದ್ದು, ಎಣ್ಣೆ ಉತ್ಪಾದನೆಯಲ್ಲಿಯೇ ತೊಡಗಿದ್ದ ಗಾಣಿಗ ಸಮಾಜ ಈ ನಿಟ್ಟಿನಲ್ಲಿ ಆತ್ಮನಿರ್ಭರದ ಮೂಲಕ ಉದ್ಯಮಿಗಳಾಗಲಿ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ಶನಿವಾರ ಇಲ್ಲಿನ ದೇಶಪಾಂಡೆನಗರದ ಸವಾಯಿ ಗಂಧರ್ವ ಸಭಾಂಗಣದಲ್ಲಿ ಆಯೋಜಿಸಿದ್ದ ಅಖಿಲ ಭಾರತ ಗಾಣಿಗರ ಸಂಘದ ಕೇಂದ್ರ ಘಟಕದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಗಾಣಿಗ ಸಮಾಜವು ದೇಶದ ಆರ್ಥಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಗೆ ನೀಡಿರುವ ಕೊಡುಗೆ ಅತ್ಯಂತ ಮಹತ್ವದ್ದಾಗಿದ್ದು, ಸಮಾಜದ ಸೇವೆಯನ್ನು ದೇಶ ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದರು.

ಒಂದು ಕಾಲದಲ್ಲಿ ಭಾರತದಿಂದ ಎಲ್ಲಾ ಎಣ್ಣೆ ಸೇರಿದಂತೆ ವಿವಿಧ ತೈಲ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಆದರೆ, ಇಂದು ದೇಶದ ಶೇ.60ರಷ್ಟು ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

ಒಬಿಸಿ ಸಮುದಾಯದ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಕೇಂದ್ರ ಶಿಕ್ಷಣ ಸಂಸ್ಥೆಗಳಲ್ಲಿ ಒಬಿಸಿಗಳಿಗೆ ಶೇ.27 ಮೀಸಲಾತಿ ನೀಡಲಾಗಿದ್ದು, ವಿದ್ಯಾರ್ಥಿವೇತನ ಸೇರಿದಂತೆ ಹಲವು ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಆದರೆ, ಕೆಲವು ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ರಾಜ್ಯ ಸರ್ಕಾರಗಳ ಜವಾಬ್ದಾರಿಯಾಗಿದ್ದು, ಎಲ್ಲರೂ ಒಟ್ಟಾಗಿ ಒತ್ತಡ ಹೇರಿದರೆ ಇನ್ನಷ್ಟು ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದರು.

ಸಂಸದ ಬಸವರಾಜ ಬೊಮ್ಮಾಯಿ, ಸಂಸದ ಪಿ.ಸಿ.ಗದ್ದಿಗೌಡ್ರ ಮಾತನಾಡಿ, ಶಾಸಕ ಮಹೇಶ ಟೆಂಗಿನಕಾಯಿ, ಅಧ್ಯಕ್ಷತೆ ವಹಿಸಿದ್ದ ಸಂಘದ ಗೌರವಾಧ್ಯಕ್ಷ ಡಾ.ಶೇಖರ ಸಜ್ಜನ ಮಾತನಾಡಿದರು.

ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ಮಾಜಿ ಪರಿಷತ್ ಸದಸ್ಯ ನಾಗರಾಜ ಛಬ್ಬಿ, ಬಿಜೆಪಿ ಜಿಲ್ಲಾಧ್ಯಕ್ಷ ಹಾಗೂ ಗಾಣಿಗ ನೌಕರರ ಸಂಘದ ಮಹಾಪೋಷಕ ತಿಪ್ಪಣ್ಣ ಮಜ್ಜಗಿ, ಸಂಘದ ಅಧ್ಯಕ್ಷ ಗುರಣ್ಣ ಗೋಡಿ, ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಲೋಣಿ, ಪ್ರಧಾನ ಕಾರ್ಯದರ್ಶಿ ವಿ.ಎಂ.ಚಟ್ಟಿಮನಿ, ಹುಬ್ಬಳ್ಳಿ ಗಾಣಿಗ ನೌಕರರ ಸಂಘದ ಅಧ್ಯಕ್ಷ ಆರ್.ಜಿ.ಪಾಟೀಲ, ಸಮಾಜದ ಹಿರಿಯರಾದ ಜಿ.ಎಸ್. ಛಬ್ಬಿ, ಬಿ.ಜಿ.ಪಾಟೀಲ, ಜಿ.ಎಸ್. ಜಂಬಗಿ ಸೇರಿದಂತೆ ಜಿಲ್ಲೆಗಳ ಅಧ್ಯಕ್ಷರು, ಗಣ್ಯರು, ಪದಾಧಿಕಾರಿಗಳು, ಸಮಾಜದ ಮುಖಂಡರು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

35 ಲಕ್ಷ ರೂ. ದೇಣಿಗೆ

ಗಾಣಿಗ ಸಮಾಜದ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್ ನಿರ್ಮಾಣಕ್ಕೆ ನಾನು 25 ಲಕ್ಷ ಹಾಗೂ ಶಾಸಕ ಮಹೇಶ ಟೆಂಗಿನಕಾಯಿ 10 ಲಕ್ಷ ನೀಡಲಿದ್ದಾರೆ. ಸಮಾಜದಿಂದ ನಿಧಿ ಸಂಗ್ರಹಿಸಿ ಪ್ರಸ್ತಾವನೆ ಸಲ್ಲಿಸಿದರೆ ತಕ್ಷಣ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಘೋಷಿಸಿದರು.

ಕಿರುಸುದ್ದಿ

ಶುಭಂ ಶಳಕೆ ಗಡಿಪಾರಿಗೆ ಕನ್ನಡಪರ ಸಂಘಟನೆಗಳ ಆಗ್ರಹ

ಬೆಳಗಾವಿಯಲ್ಲಿ ಮರಾಠಿ ಫಲಕ ವಿವಾದ

ಬೆಳಗಾವಿ: ನಗರದಲ್ಲಿರುವ ಅಂಗಡಿಗಳಲ್ಲಿ ಮರಾಠಿ ಫಲಕ ಹೊಂದಿರುವ ಅಂಗಡಿಗಳಲ್ಲಿಯೇ ವ್ಯಾಪಾರ ಮಾಡಬೇಕೆಂದು ಸಾರ್ವಜನಿಕರಿಗೆ ಕರೆ ನೀಡಿದ ಆರೋಪದ ಹಿನ್ನೆಲೆಯಲ್ಲಿ ಎಂಇಎಸ್ ಪುಂಡ ನಾಡ ದ್ರೋಹಿ ಶುಭಂ ಶಳಕೆ ವಿರುದ್ಧ ಎಫ್‌ಐಆರ್ ದಾಖಲಾಗಿರುವ ಘಟನೆ ಚರ್ಚೆಗೆ ಗ್ರಾಸವಾಗಿದೆ. ಈ ಹೇಳಿಕೆ ಗಡಿ ಭಾಗದಲ್ಲಿ ಭಾಷಾ ಸೌಹಾರ್ದತೆಗೆ ಧಕ್ಕೆ ಉಂಟು ಮಾಡುವ ಪ್ರಯತ್ನವಾಗಿದ್ದು, ಕನ್ನಡಿಗರ ಭಾವನೆಗಳಿಗೆ ನೋವುಂಟು ಮಾಡಿದೆ ಎಂದು ವಿವಿಧ ಕನ್ನಡಪರ ಸಂಘಟನೆಗಳು ಹಾಗೂ ಸಾರ್ವಜನಿಕರು ಆಕ್ರೋಶ ಹೊರ ಹಾಕಿದ್ದಾರೆ. ರಾಜ್ಯದ ಅಧಿಕೃತ ಭಾಷೆಯಾಗಿರುವ ಕನ್ನಡಕ್ಕೆ ಮೊದಲ ಆದ್ಯತೆ ನೀಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಎಲ್ಲ ಭಾಷೆಗಳನ್ನು ಗೌರವಿಸುವುದು ಅಗತ್ಯವಾದರೂ, ಯಾವುದೇ ಭಾಷೆಯ ಹೆಸರಿನಲ್ಲಿ ವ್ಯಾಪಾರ ಅಥವಾ ಸಾಮಾಜಿಕ ಬಹಿಷ್ಕಾರಕ್ಕೆ ಕರೆ ನೀಡುವುದು ಸಮಾಜದಲ್ಲಿ ಭಿನ್ನಾಭಿಪ್ರಾಯ ಮತ್ತು ಉದ್ವಿಗ್ನತೆ ಸೃಷ್ಟಿಸುವ ಸಾಧ್ಯತೆಯಿದೆ ಎಂದು ಅಭಿಪ್ರಾಯಗಳು ವ್ಯಕ್ತವಾಗಿವೆ. ಗಡಿ ಭಾಗದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಹಬಾಳ್ವೆ ಕಾಪಾಡುವ ದೃಷ್ಟಿಯಿಂದ ಇಂತಹ ಪ್ರಚೋದನಾತ್ಮಕ ಹೇಳಿಕೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಶುಭಂ ಶಳಕೆ ನಾಡ ದ್ರೋಹಿಯನ್ನು ಗಡಿಪಾರು ಮಾಡಬೇಕು ಎಂದು ಕನ್ನಡಪರ ಸಂಘಟನೆಗಳು ಸರ್ಕಾರವನ್ನು ಒತ್ತಾಯಿಸಿವೆ. ಇಂತಹ ನಾಡದ್ರೋಹಿಗಳ ವಿರುದ್ಧ ಕಾನೂನು ಕ್ರಮ ಕೈಗೊಂಡು ಕೂಡಲೇ ಗಡಿಪಾರು ಮಾಡಬೇಕು ಇಲ್ಲವಾದಲ್ಲಿ ಕನ್ನಡಿಗರು ನಾಡದ್ರೋಹಿಗೆ ತಕ್ಕ ಪಾಠ ಕಲಿಸುವುದಾಗಿ ಎಚ್ಚರಿಕೆ ನೀಡಿದ ಕನ್ನಡಿಗರು.

ಮೋದಗಾದಲ್ಲಿ ಇಂದು ಹಿಂದೂ ಸಾಮ್ರಾಜ್ಯೋತ್ಸವ

ಬೆಳಗಾವಿ: ರಾಷ್ಟ್ರೀಯ ಸ್ವಯಂಸೇವಕ ಸಂಘದ ನೇತೃತ್ವದಲ್ಲಿ ಹಿಂದೂ ಸಾಮ್ರಾಜ್ಯೋತ್ಸವ ಕಾರ್ಯಕ್ರಮ ಭಾನುವಾರ ಸಂಜೆ ಬೆಳಗಾವಿ ತಾಲೂಕಿನ ಮೋದಗಾ ಗ್ರಾಮದಲ್ಲಿ ನಡೆಯಲಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಬೆಳಗಾವಿ ಗ್ರಾಮಾಂತರ ಸುಳೇಬಾವಿ ಹೋಬಳಿ ಸಂಘ ಪರಿವಾರದ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದ್ದು, ಸಂಜೆ 6.30ಕ್ಕೆ ಮೋದಗಾ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಸುಳೇಬಾವಿ ಹೋಬಳಿ ಮಟ್ಟದ ಸಂಘಟನೆಯ ಸದಸ್ಯರು ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಮೋದಗಾ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು, ಸಂಘ ಪರಿವಾರದ ಪದಾಧಿಕಾರಿಗಳು, ಮಂಡಲದ ಸದಸ್ಯರು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಹಾಗೂ ಕಾರ್ಯಕರ್ತರು ಸೇರಿದಂತೆ ಸರ್ವ ಹಿಂದೂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸಂಘ ಪರಿವಾರ ತಿಳಿಸಿದೆ.

ಸಂಗೀತದಿಂದ ಮನಸ್ಸಿಗೆ ನೆಮ್ಮದಿ: ಶ್ರೀಗಳು



ಹೊನ್ನಾವರ: ವಾದ್ಯ ಮತ್ತು ವಾದನದ ನಡುವೆ ಮಾತುಕತೆ ನಡೆಯುತ್ತಿರುವ ಹಾಗೆ ತಬಲಾ ವಾದನ ಮಾಡುವ ಕಲೆ ಗೋಪು ಹೆಗಡೆ ಅವರಿಗೆ ಸಿದ್ಧಿಸಿದೆ ಎಂದು ಶ್ರೀರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಶ್ರೀಗಳು ಹೇಳಿದರು.

ಪ್ರಭಾತ ನಗರದ ಮೂಡಗಣಪತಿ ಸಭಾಭವನದಲ್ಲಿ ಶನಿವಾರ ಖ್ಯಾತ ತಬಲಾ ಕಲಾವಿದ ಗೋಪಾಲಕೃಷ್ಣ ಹೆಗಡೆ ಕಲ್ಭಾಗ ಅವರ ಷಷ್ಟ್ಯಬ್ದಿಯ ಅಭಿನಂದನಾ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸಂಗೀತವು ಕಾಲಮಿತಿಯನ್ನು ಬಯಸುವುದಿಲ್ಲ. ಎಲ್ಲ ವಿಭಾಗದಲ್ಲೂ ಕಾಲವು ಕಹಿ ಅನುಭವವನ್ನು ನೀಡಿದರೆ, ಸಂಗೀತ ಕ್ಷೇತ್ರದಲ್ಲಿ ಅದು ಸುಖವನ್ನು ನೀಡುತ್ತದೆ. ತಾಳದಲ್ಲಿ ಮನಸ್ಸು ಲೀನವಾಗಿ ಕಾಲಾತೀತ ಸಾಲಿಗೆ ಹೋಗುವುದೇ ಸಾಧನೆ ಎಂದರು.

ಗೋಪಾಲಕೃಷ್ಣ ಹೆಗಡೆ ಕಲ್ಭಾಗ ಅವರ ಸಾಧನೆಯ ಕುರಿತ 'ತಾಲ ಗೋಪಾಲ' ಅಭಿನಂದನಾ ಪುಸ್ತಕವನ್ನು ಶ್ರೀಗಳು ಬಿಡುಗಡೆಗೊಳಿಸಿದರು.

ಸನ್ಮಾನ ಸ್ವೀಕರಿಸಿದ ಗೋಪಾಲಕೃಷ್ಣ ಹೆಗಡೆ ಮಾತನಾಡಿ, ನನ್ನ ವಿದ್ಯಾಗುರುಗಳಾದ ಎಸ್.ಎಂ.ಭಟ್ಟ ಕಟ್ಟಿಗೆ ಮತ್ತು ಶೇಷಗಿರಿ ಹಾನಗಲ್ ಅವರ ಪ್ರೀತಿಯಿಂದ ಬೆಳೆದು ಬಂದೆ. ರಾಮಚಂದ್ರಾಪುರ ಮಠದ ಗುರುಗಳ ಸಾನ್ನಿಧ್ಯದಲ್ಲಿ ರಾಮಕಥೆ ಕಾರ್ಯಕ್ರಮದಲ್ಲಿ ಅಧ್ಯಾತ್ಮದ ಹಾದಿಯನ್ನು ಕಲಿತೆ. ವೃತ್ತಿ ಜೀವನದಲ್ಲಿ ನೆಮ್ಮದಿಯನ್ನು ಕಂಡುಕೊಂಡೆ. ಶಿಷ್ಯರ ಸಾಧನೆಯಿಂದ ಸಂತಸವನ್ನು ಪಡೆದೆ. ಸಂಗೀತ ಕ್ಷೇತ್ರದಲ್ಲಿ ಸಹಕಾರಿಯಾದವರಿಗೆ ಆಭಾರಿಯಾಗಿದ್ದೇನೆ ಎಂದರು.

ಅಭಿನಂದನಾ ಸಮಿತಿಯ ವೆಂಕಟ್ರಮಣ ಹೆಗಡೆ ಕವಲಕ್ಕಿ ಪ್ರಾಸ್ತಾವಿಕ ಮಾತನಾಡಿದರು. ಮೋಹನ ಹೆಗಡೆ ಹೆರವಟ್ಟಾ ಅಭಿನಂದನಾ ನುಡಿಗಳನ್ನಾಡಿದರು. ಹಿಂದುಸ್ಥಾನಿ ಗಾಯಕ ಪಂ. ಗಣಪತಿ ಭಟ್ ಹಾಸಣಗಿ, ಪಂ.ಪರಮೇಶ್ವರ ಹೆಗಡೆ, ಪತ್ರಕರ್ತರಾದ ಬಿ.ಗಣಪತಿ, ಜಿ.ಯು.ಭಟ್, ಉದ್ಯಮಿ ಕೃಷ್ಣಮೂರ್ತಿ ಭಟ್ ಮಾತನಾಡಿದರು.

ಗೋಪಾಲಕೃಷ್ಣ ಹೆಗಡೆ ಅವರ ಶಿಷ್ಯರಿಂದ ವಾದನ ಮತ್ತು ಸಂಗೀತ, ಲಯ-ಲಾಸ್ಯ, ಸಾಮವೇದ ಮತ್ತು ಸಂಗೀತದ ಪ್ರಾತ್ಯಕ್ಷಿಕೆ, ಜಿಲ್ಲೆಯ ಪ್ರಸಿದ್ಧ ಗಾಯಕರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಸಮಿತಿ ಗೌರವಾಧ್ಯಕ್ಷ ಡಾ. ಎಂ.ಜಿ.ಹೆಗಡೆ, ಗೌರವ ಕಾರ್ಯದರ್ಶಿ ಜಿ.ಕೆ.ಭಟ್ ವಂದೂರು, ಸುಬ್ರಹ್ಮಣ್ಯ ಹೆಗಡೆ, ವಿನಾಯಕ ಹರಡಸೆ ಇತರರಿದ್ದರು.

ಅಪಘಾತ: ಸವಾರ ಸಾವು

ಕೆರೂರ: ಸಮೀಪದ ಹಳಗೇರಿ ಟೋಲ್ ನಾಕಾ ಹತ್ತಿರ ರಸ್ತೆ ಅಪಘಾತ ಸಂಭವಿಸಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಶುಕ್ರವಾರ ನಡೆದಿದೆ. ಮೃತ ವ್ಯಕ್ತಿ ಪಟ್ಟಣದ ನಿವಾಸಿ ಬೆನ್ನಪ್ಪ ಲಕ್ಷ್ಮಣ ಮಲ್ಲಾಡದ(45) ಎಂದು ಗುರುತಿಸಲಾಗಿದೆ. ಮೃತ ವ್ಯಕ್ತಿ ತನ್ನ ಮೋಟಾರ ಬೈಕ್‌ನೊಂದಿಗೆ ಕುಳಗೇರಿ ಕ್ರಾಸ್ ಕಡೆಯಿಂದ ಕೆರೂರ ಕಡೆಗೆ ಹೋಗುವಾಗ ಹಳಗೇರಿ ಟೋಲ್ ನಾಕಾ ಹತ್ತಿರ ಬೈಕ್ ಸ್ಕಿಡ್ ಆಗಿ ಬಿದ್ದ ಪರಿಣಾಮ ಸವಾರ ಮೃತಪಟ್ಟಿದ್ದಾರೆ. ಹಿಂಬದಿಯ ಸವಾರ ಹಾಯತಸಾಬ್ ಕೊತ್ವಾಲ ಇತನಿಗೆ ಗಾಯಗಳಾಗಿವೆ. ಘಟನಾ ಸ್ಥಳಕ್ಕೆ ಕೆರೂರ ಪೊಲೀಸರು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೆಂಕಿ ತಗುಲಿ ಯುವಕ ಸಾವು

ಕುರುಗೋಡು: ತಾಲೂಕಿನ ಸಮೀಪದ ಕ್ಯಾದಿಗೆಹಾಳು ಗ್ರಾಮದಲ್ಲಿ ಮೊಹರಂ ಹಬ್ಬದ ಹಿನ್ನೆಲೆಯಲ್ಲಿ ಅಲಾಯಿ ಕುಣಿಗೆ ಬೆಂಕಿ ಹಚ್ಚುವ ವೇಳೆ ಕೈಯಲ್ಲಿ ಡಿಸೇಲ್ ಕ್ಯಾನ್ ಹಿಡಿದ ದೇವರಾಜ್ ಮಾಡಿವಾಳ (28)ಗೆ ಬೆಂಕಿ ತಗುಲಿ ದೇಹಕ್ಕೆ ಹೊತ್ತಿಕೊಂಡಿದ್ದು ಗಂಭೀರವಾಗಿ ಗಾಯಗೊಂಡಿದ್ದರು. ನಂತರ ಆಸ್ಪತ್ರೆಗೆ ದಾಖಲಿಸಿದರೂ ಪ್ರಯೋಜನವಾಗಿಲ್ಲ. ತೀವ್ರ ಗಾಯಗಳಾಗಿದ್ದ ದೇವರಾಜ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಗ್ರಾಮಸ್ಥರಿಂದ ತಿಳಿದು ಬಂದಿದೆ. ಈ ಕುರಿತು ಕುರುಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪಿಎಸ್ಐ ಸುಪ್ರೀತ್ ವಿರೂಪಾಕ್ಷಪ್ಪ ತಿಳಿಸಿದ್ದಾರೆ.

ಸಚಿವ ಸ್ಥಾನಕ್ಕಾಗಿ ಪ್ರತಿಭಟನೆ, ಲಾಬಿಗೆ ಅವಕಾಶವಿಲ್ಲ: ಉಗ್ರಪ್ಪ



ಬಳ್ಳಾರಿ: ಸಿಎಂ ಡಿ.ಕೆ.ಶಿವಕುಮಾರ ಅವರ ನೇತೃತ್ವದ ನೂತನ ಸರ್ಕಾರದಲ್ಲಿ ಸಚಿವ ಸ್ಥಾನಕ್ಕಾಗಿ, ಪ್ರತಿಭಟನೆ ನಡೆಸುವುದು, ಲಾಬಿ ಮಾಡಲು ಅವಕಾಶವಿಲ್ಲ. ಈ ಕುರಿತು ಹೈಕಮಾಂಡ್ ವರಿಷ್ಠರು ಕಠಿಣ ಸಂದೇಶ ರವಾನಿಸಿದ್ದಾರೆ. ಇದನ್ನು ಎಲ್ಲರೂ ಪಾಲಿಸಬೇಕು ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿಎಂ ಡಿ.ಕೆ.ಶಿವಕುಮಾರ ಹಾಗೂ ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರಿಬ್ಬರೂ ಜೋಡೆತ್ತುಗಳ ರೀತಿಯಲ್ಲಿ ಕೆಲಸ ಮಾಡುವ ವಿಶ್ವಾಸವಿದೆ. ಪಕ್ಷವು ಮತ್ತಷ್ಟು ಗಟ್ಟಿಯಾಗಿದೆ. ರಾಜ್ಯದ ಅಭಿವೃದ್ಧಿ ಚಿತ್ರಣವೂ ಬದಲಾಗಲಿದೆ.

ನಾನು ಒಬ್ಬ ಪಕ್ಷದ ಶಿಸ್ತಿನ ಸಿಪಾಯಿ, ಯಾವುದೇ ಜವಾಬ್ದಾರಿ ನೀಡಿದರೂ ಸಮರ್ಥವಾಗಿ ನಿಭಾಯಿಸುವೆ. ಎರಡನೇ ಪಟ್ಟಿಯಲ್ಲಿ ಸಚಿವ ಸ್ಥಾನ ಪಡೆಯಲು ಆಕಾಂಕ್ಷಿಗಳು ಏನೇ ಕಸರತ್ತು ನಡೆಸಿದರೂ ಕೇಂದ್ರದ ವರಿಷ್ಠರ, ಸಿಎಂ, ಡಿಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷರ ತೀರ್ಮಾನವೇ ಅಂತಿಮ, ಇದನ್ನು ಎಲ್ಲರೂ ಪಾಲಿಸಬೇಕು ಎಂದರು.

ಯಾರು ಕ್ರಿಯಾಶೀಲರಾಗಿ ಕೆಲಸ ಮಾಡ್ತಾರೋ, ಅವರಿಗೆ ಸಚಿವ ಸ್ಥಾನ ನೀಡಬೇಕು ಎಂಬುದು ನನ್ನ ಅಭಿಪ್ರಾಯ. ಬಹಳ ವರ್ಷ ಅಧಿಕಾರ ಅನುಭವಿಸಿ ಮಜಾ ಉಡಾಯಿಸಿದವರನ್ನು ಕೈಬಿಟ್ಟು ಹೊಸ ಮುಖಗಳಿಗೆ, ಯುವಕರಿಗೆ, ಅನುಭವ ಇರುವರಿಗೆ ಸಚಿವ ಸ್ಥಾನ ನೀಡಬೇಕು, ನಾಯಕತ್ವದ ಮೇಲೆ ನಂಬಿಕೆ, ಪಕ್ಷದ ನಿಷ್ಠೆ ಹೊಂದಿರುವವರಿಗೆ, ಬದ್ಧತೆ ಇರೋರಿಗೆ, ಸಚಿವ ಸ್ಥಾನ ನೀಡಿ ಎಂಬುದು ನನ್ನ ಅಭಿಪ್ರಾಯ.

ಪ್ರಸಿದ್ಧ ಅಯೋಧ್ಯೆ ಶ್ರೀರಾಮ ಮಂದಿರ ದೇಣಿಗೆ ಹಣ ದುರ್ಬಳಕೆ ಪ್ರಕರಣವನ್ನು ಕೂಡಲೇ ತನಿಖೆ ನಡೆಸಬೇಕು. ತಪ್ಪಿತಸ್ಥರು ಯಾರೇ ಇರಲಿ ಅವರೆಲ್ಲರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪವಿತ್ರ ಕ್ಷೇತ್ರದ ಬಗ್ಗೆ ಎಲ್ಲರಲ್ಲೂ ನಂಬಿಕೆ ವಿಶ್ವಾಸವಿದೆ. ಆದರೆ, ಶ್ರೀರಾಮನ ಹೆಸರಿನಲ್ಲಿ ಈ ರೀತಿ ಹಣ ದುರ್ಬಳಕೆ ಸರಿಯಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಕೆಪಿಸಿಸಿ ಮಾಧ್ಯಮ ವಕ್ತಾರ ವೆಂಕಟೇಶ್ ಹೆಗಡೆ, ಮೇಯರ್ ಗಾದೆಪ್ಪ, ಮುಖಂಡರಾದ ಅವಂಬಾವಿ ಲೋಕೇಶ್, ಜೋಳದರಾಶಿ ತಿಮ್ಮಪ್ಪ, ಎಲ್.ಮಾರೆಣ್ಣ, ವಿಷ್ಣುವರ್ಧನ್ ಬೋಯಪಾಟಿ ಇತರರಿದ್ದರು.

ಮಾನದ ಕುದುರೆಗಳಿಗೆ ಪೂಜೆ ಸಲ್ಲಿಸಿ ಬೀಳ್ಕೊಡುಗೆ



ಮಾಂಜರಿ: ಸಮೀಪದ ಅಂಕಲಿ ಗ್ರಾಮದ ಅಂಕಲಿಕರ ಕಿತೋಳೆ ಸರಕಾರ ಕುಟುಂಬದವರ ಮಾನದ ಕುದುರೆಯು ಜು.25ರಂದು ನಡೆಯಲಿರುವ ಪಂಢರಪೂರದ ಆಷಾಢ ಏಕಾದಶಿ ಅಂಗವಾಗಿ ಅಂಕಲಿಯಿಂದ ಮಹಾರಾಷ್ಟ್ರದ ಸುಕೇತ್ರ ದೇವು ಆಳಂದಿಗೆ ಜೂ. 28ರಂದು ಮುಂಜಾನೆ ರವಾನೆಯಾಯಿತು.

ಪ್ರತಿ ವರ್ಷ ಆಷಾಢ ಮಾಸದ ಏಕಾದಶಿ ದಿನದಂದು ನಡೆಯುವ ಪಂಢರಪೂರದ ವಿಠ್ಠಲನ ಜಾತ್ರೆಯಲ್ಲಿ ಅಂಕಲಿ ಸರಕಾರರ ಮಾನದ ಕುದುರೆಗೆ ಮಹತ್ವದ ಸ್ಥಾನ ನೀಡುತ್ತಾರೆ. ಈ ವರ್ಷ ಜು.25ರಂದು ಪಂಢರಪೂರದಲ್ಲಿ ನಡೆಯಲಿರುವ ಆಷಾಢ ಏಕಾದಶಿ ನಿಮಿತ್ಯ ಸುಕ್ಷೇತ್ರ. ದೇವು ಆಳಂದಿಯಿಂದ ನಡೆಯಲಿರುವಭವ್ಯ ಪಾದಯಾತ್ರೆಯಲ್ಲಿ ಅಂಕಲಿ ಸರಕಾರರ ಈ ಮಾನದ ಕುದುರೆ ಪಾಲ್ಗೊಳ್ಳಲಿದೆ.

ಪ್ರಾರಂಭದಲ್ಲಿ ಶನಿವಾರ ಮುಂಜಾನೆ ಅಂಕಲಿ ಸರಕಾರ ಉರ್ಜಿತಶಿಂಹ ರಾಜೆ ಶೀತೋಳೆ ಸರಕಾರ ಮತ್ತು ಮಹದಜಿರಾಜೆ ಶೀತೋಳೆ ಸರಕಾರ ಚೀಕೋಡಿ ಸದಲಗಾ ಶಾಸಕ ಗಣೇಶ ಹುಕ್ಕೇರಿ ಮಾನದ ಕುದುರೆಯ ಪೂಜೆ ಸಲ್ಲಿಸಿದ ನಂತರ ಗ್ರಾಮದಲ್ಲಿ ಮೆರವಣಿಗೆ ಮಾಡಿ ಬೀಳ್ಕೊಟ್ಟರು.

ಆಳಂದಿಯ ಬಾಬಾಸಾಹೇಬ ಆರಫಾಳಕರ ಬಂಡೋಪಂತ ಕುಲಕರ್ಣಿ ಮತ್ತು ರಾಹುಲಜೋಷಿ, ಸುಭಾಷ ಮಹಾರಾಜ, ಜ್ಞಾನೇಶ್ವರ ಗುಳುಂಜಕರ, ಸಿದ್ಧರಾಮ ಸ್ವಾಮಿ, ಪುಣೆಯ ಸುಭಾಷ ಪರಾಟಿ ತುಕಾರಾಮು ಪಾಟೀಲ್ ಭಾರಮಗೌಡ ಪಾಟೀಲ್ ಕೆಎಲ್ಇ ಸಂಸ್ಥೆಯ ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ಸಂಶೋಧನ ಘಟಕದ ರಕ್ ಭಂಡಾರದ ಮುಖ್ಯಸ್ಥರಾದ ಡಾ.ವಿರ್ಗಿ ಮತ್ತು ಶಂಕರ ಲೋಖಂಡೆ ಸೇರಿದಂತೆ ಅಂಕಲಿ, ಯಡೂರ, ಮಾಂಜರಿ, ಚಂದೂರ ಗ್ರಾಮದ ವಿಠ್ಠಲನ ಭಕ್ತರು ಮತ್ತು ಗಾಮಸ್ತರು ಪಾಲ್ಗೊಂಡಿದ್ದರು.

ಮಾಂಜರಿ ಶಿರಗುಪ್ಪಿ ಕಾಗವಾಡ ಮೈಶಾಳ, ಮಿರಜವಾಡಿ, ಸಾಂಗಲವಾಡಿ ಪೇಠನಾಕಾ, ಮಹಾಗಾಂವ, ಲಿಂಬ, ಭರತಗಾಂವ, ಬೋಯಿಜ, ಸೀಖಳ, ಶೀಂದೆವಾಡಿ ಮಾರ್ಗವಾಗಿ ಹೋಗಿ ಪೂಣೆಯಲ್ಲಿ ಮುಕ್ಕಾಂ ಸುಕ್ಷೇತ್ರ ಆಳಂದಿಗೆ ಕುದುರೆ 11 ದಿನಗಳ ನಂತರ ತಲಪುವುದು ಅಲ್ಲಿಂದ ಪಂಢಪೂರಕ್ಕೆ ತೆರಳುವದು ಒಟ್ಟು 30 ದಿನ ಕುದುರೆ ಪ್ರವಾಸ ಕೈಗೊಳ್ಳುವುದು ಎಂದು ಸರಕಾರ ತಿಳಿಸಿದರು.

ಚಿರತೆ ಸೆರೆಗೆ ಬೋನು ಅಳವಡಿಕೆ



ಹುಣಸಗಿ: ತಾಲೂಕಿನ ಗೆದ್ದಲಮರಿ ಗ್ರಾಮದ ರೈತರ ಹೊಲಗಳಲ್ಲಿ ಕಳೆದ ಮೂರು-ನಾಲ್ಕು ದಿನಗಳಿಂದ ಚಿರತೆ ಚಲನವಲನ ಕಂಡು ಬರುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರ ಒತ್ತಾಯದ ಮೇರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಶನಿವಾರ ಚಿರತೆ ಸೆರೆಗೆ ಬೋನು ಅಳವಡಿಸಿದ್ದಾರೆ.

ಸುತ್ತಮುತ್ತಲಿನ ಕೃಷಿ ಜಮೀನುಗಳಲ್ಲಿ ಚಿರತೆ ಕಾಣಿಸಿಕೊಂಡಿರುವ ಬಗ್ಗೆ ರೈತರು ಆತಂಕ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ತುರ್ತು ಕ್ರಮ ಕೈಗೊಂಡು ಬೋನು ಹಾಗೂ ಕ್ಯಾಮೆರಾ ಅಳವಡಿಕೆ ಕಾರ್ಯಾಚರಣೆ ನಡೆಸಲಾಗಿದೆ.

ಈ ವೇಳೆ ವಲಯ ಅರಣ್ಯ ಅಧಿಕಾರಿ ಭಾಗಪ್ಪಗೌಡ ಮಾತನಾಡಿ, ಶಿವಪುತ್ರಪ್ಪ ಅವರ ಹೊಲದಲ್ಲಿ ಬೋನು ಅಳವಡಿಸಲಾಗಿದ್ದು, ಚಿರತೆಯ ನಿಖರ ಚಲನವಲನ ಪತ್ತೆ ಹಚ್ಚುವ ಉದ್ದೇಶದಿಂದ ಸ್ವಯಂ ಚಾಲಿತ ವನ್ಯಜೀವಿ ಕ್ಯಾಮೆರಾವನ್ನೂ ಅಳವಡಿಸಿದೆ. ಇದರಿಂದ ಚಿರತೆಯ ಓಡಾಟದ ಬಗ್ಗೆ ಮಾಹಿತಿ ಸಂಗ್ರಹಿಸಿ ಅದನ್ನು ಸುರಕ್ಷಿತವಾಗಿ ಸೆರೆಹಿಡಿಯಲು ಅನುಕೂಲವಾಗಲಿದೆ ಎಂದರು.

ಗ್ರಾಮಸ್ಥರು ಎಚ್ಚರಿಕೆಯಿಂದ ಇರಬೇಕು. ರಾತ್ರಿ ವೇಳೆಯಲ್ಲಿ ಒಂಟಿಯಾಗಿ ಹೊಲಗಳಿಗೆ ತೆರಳುವುದನ್ನು ತಪ್ಪಿಸಬೇಕು. ಚಿರತೆ ಕಂಡು ಬಂದಲ್ಲಿ ತಕ್ಷಣ ಇಲಾಖೆಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ಉಪವಲಯ ಅರಣ್ಯ ಅಧಿಕಾರಿ ಹಣಮಂತ್ರಾಯ ಬಿರಾದಾರ, ಅರಣ್ಯ ಗಸ್ತುಪಾಲಕ ಸೈಯದ್ ಪಟೇಲ್, ಸಿಬ್ಬಂದಿ ಗೌಡಪ್ಪ, ಶರಣಗೌಡ, ಹುಲಗಪ್ಪ, ಶಿವು, ಪ್ರಜ್ವಲ್ ಹಾಗೂ ವಾಹನ ಚಾಲಕ ಭೀಮಣ್ಣ ಸೇರಿದಂತೆ ಇತರರಿದ್ದರು.

ಫ್ಯೂಡಲ್ ರಾಜಕಾರಣವೇ ಕಾರಣ: ಡಾ.ಸಿದ್ಧನಗೌಡ ಪಾಟೀಲ



ಧಾರವಾಡ: ಏಕೀಕರಣದ ನಂತರ ಪ್ರಾದೇಶಿಕ ಅಸಮತೋಲನ ಮತ್ತು ಹಿನ್ನಡೆಗೆ ಇಲ್ಲಿನ ಫ್ಯೂಡಲ್ ರಾಜಕಾರಣ ಹಾಗೂ ಜನರ ಮಾನಸಿಕ ಗುಲಾಮಗಿರಿಯೇ ಮುಖ್ಯ ಕಾರಣ ಎಂದು ಖ್ಯಾತ ಚಿಂತಕ ಡಾ.ಸಿದ್ಧನಗೌಡ ಪಾಟೀಲ ತೀವ್ರ ಆತಂಕ ವ್ಯಕ್ತಪಡಿಸಿದರು.

ವಿದ್ಯಾವರ್ಧಕ ಸಂಘದಲ್ಲಿ ಪ್ರೊ. ಎಂ.ಗೋವಿಂದರಾವ್ 'ಕರ್ನಾಟಕ ಪ್ರಾದೇಶಿಕ ಅಸಮತೋನ ನಿವಾರಣಾ ಸಮಿತಿ' ಆಧಾರಿತ ಶನಿವಾರ ಏರ್ಪಡಿಸಿದ ಪ್ರಾದೇಶಿಕ ಅಸಮತೋಲನ ಚಿಂತನಾ ಸಮಾವೇಶದಲ್ಲಿ ಮೂಲಭೂತ ಸೌಕರ್ಯ ಕುರಿತು ಮಾತನಾಡಿದರು.

ಫ್ಯೂಡಲ್ ಮತ್ತು ಜಾತಿ ರಾಜಕಾರಣಕ್ಕೆ ಸಂಪೂರ್ಣ ಕಡಿವಾಣ ಹಾಕದ ಹೊರತು ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಅಸಾಧ್ಯ. ಇಂದಿನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನತೆ ಮರೆತು ಕಾರ್ಪೊರೇಟ್ ಕಂಪನಿಗಳ ಪರವಾಗಿ ನಿಂತಿದ್ದಾಗಿ ದೂರಿದರು.

ಶಿಕ್ಷಣ, ಆರೋಗ್ಯ, ಉದ್ಯೋಗ, ವಿದ್ಯುತ್ ಹಾಗೂ ನೀರಿನಂತಹ ಅತ್ಯಗತ್ಯ ಕ್ಷೇತ್ರಗಳ ಖಾಸಗೀಕರಣವೇ ಇದಕ್ಕೆ ತಾಜಾ ಉದಾಹರಣೆ. ಈ ಕಾರ್ಪೊರೇಟ್ ಧೋರಣೆ ಮತ್ತು ಪ್ರಾದೇಶಿಕ ಅಸಮತೋಲನ ವಿರುದ್ಧ ಧ್ವನಿ ಎತ್ತುವಂತೆ ಕರೆ ನೀಡಿದರು.

ಕೃಷಿ ಮತ್ತು ನೀರಾವರಿ ಬಗ್ಗೆ ವಿಷಯ ಮಂಡಿಸಿದ ಡಾ.ರಾಜೇಂದ್ರ ಪೋದ್ದಾರ್ ಮಾತನಾಡಿ, ಮಹದಾಯಿ ಯೋಜನೆ ಏನಾಯಿತು?. 4 ದಶಕಗಳು ಕಳೆದರೂ, ಮಹದಾಯಿ ಯೋಜನೆ ಇಂದಿಗೂ ಕೂಡ ತಾರ್ಕಿಕ ಅಂತ್ಯ ಕಾಣದಿರುವುದನ್ನು ಪ್ರಶ್ನಿಸಿದರು.

ಕಳೆದ 62 ವರ್ಷದಿಂದ ನನೆಗುದಿಗೆ ಬಿದ್ದಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಕಥೆಯೇನು? 25 ಲಕ್ಷ ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಗುರಿ ಕಳೆದ 10 ವರ್ಷಗಳ ನಂತರ 10 ಲಕ್ಷ ಹೆಕ್ಟರ್‌ಗೆ ನೀರಾವರಿ ಒದಗಿಸಲು ಸಾಧ್ಯವಾಗಿದ್ದಾಗಿ ಬೇಸರಿಸಿದರು.

ಗೋಷ್ಠಿಯಲ್ಲಿ ಮಾನವಾಭಿವೃದ್ಧಿ ಕುರಿತು ಚಿಂತಕ ಡಾ.ಟಿ.ಆರ್.ಚಂದ್ರಶೇಖರ, ಪ್ರಾದೇಶಿಕ ಹಿಂದುಳಿಯುವಿಕೆ ಮತ್ತು ಅಭಿವೃದ್ಧಿ ಮಾದರಿ; ಪ್ರಾದೇಶಿಕ ತಾರತಮ್ಯ ಅಧ್ಯಯನ ವರದಿಗಳ ಸಮಸ್ಯೆಗಳ ಕುರಿತಂತೆ ಚಿಂತಕ ಡಾ.ಶಿವಸುಂದರ ಬೆಳಕು ಚೆಲ್ಲಿಸಿದರು.

ಚಿಂತಕ ಲೋಹಿತ್ ನಾಯ್ಕರ್ ದಿಕ್ಸೂಚಿ ಭಾಷಣ ಮಾಡಿದರು. ಕವಿಸಂ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ನಿರ್ವಹಿಸಿದರು. ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಪ್ರತ್ಯೇಕ ರಾಜ್ಯ ಹೋರಾಟದ ಕೂಗು

ಧಾರವಾಡ: ರಾಜ್ಯದಲ್ಲಿ ಆಳ್ವಿಕೆ ಮಾಡುವ ಸರ್ಕಾರಗಳು ಉತ್ತರ ಕರ್ನಾಟಕದ ಬಗ್ಗೆ ನಿರ್ಲಕ್ಷ್ಯ ಧೋರಣೆ ಹೀಗೆಯೇ ಮುಂದುವರೆಸಿದರೆ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಹೋರಾಟ ಅನಿವಾರ್ಯ ಎಂಬ ಸಂದೇಶ ಹೊಸ ಚರ್ಚೆಯನ್ನು ಹುಟ್ಟು ಹಾಕಿದೆ.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಶನಿವಾರ ಏರ್ಪಡಿಸಿದ ಅಖಂಡ ಕರ್ನಾಟಕ: ಪ್ರಾದೇಶಿಕ ಅಸಮತೋಲನ ಚಿಂತನಾ ಸಮಾವೇಶದಲ್ಲಿ ಹೈಕೋರ್ಟ್ ವಕೀಲ ಬಿ.ಡಿ.ಹಿರೇಮಠ ಮಾತನಾಡಿ, ರಾಜ್ಯದಲ್ಲಿ ಅಧಿಕಾರ ವಿಕೇಂದ್ರಿಕರಣದ ಅಗತ್ಯವಿದೆ. ಈ ಬಗ್ಗೆ ಜನಪ್ರತಿನಿಧಿಗಳು ನಿರ್ಧಾರಗಳು ಕೈಗೊಳ್ಳದಿದ್ದರೆ ಪ್ರತ್ಯೇಕ ರಾಜ್ಯ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದರು. ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಜತೆ ಪ್ರೊ. ಗೋವಿಂದರಾವ್ ವರದಿ ಚರ್ಚೆಗೆ ಬೆಳಗಾವಿಯಲ್ಲಿ ವಿಶೇಷ ಅಧಿವೇಶನ ಕರೆಯಬೇಕು. ಇಲ್ಲದಿದ್ದರೆ ಪ್ರತ್ಯೇಕ ರಾಜ್ಯ ಹೋರಾಟ ಅನಿವಾರ್ಯ. ಇದಕ್ಕೆ ಸರ್ಕಾರವೇ ಹೊಣೆ ಎಂದರು. ಪ್ರತ್ಯೇಕ ರಾಜ್ಯದಿಂದ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ಆಂಧ್ರಪ್ರದೇಶ-ತೆಲಂಗಾಣ ರಾಜ್ಯಗಳ ಇದಕ್ಕೆ ಸಾಕ್ಷಿ. ಕರ್ನಾಟಕ ಮತ್ತು ಕನ್ನಡದ ಹಿತಾಸಕ್ತಿ ಅರ್ಥೈಯಿಸುವ ನಾಯಕದ ಬಗ್ಗೆ ಚಿಂತಿಸಲು ಶಿಕ್ಷಣತಜ್ಞ ನಿರಂಜನರಾಧ್ಯ ಹೇಳಿದರು.

ರಾಜ್ಯದಲ್ಲಿ ಶೇ.50ಕ್ಕಿಂತ ಕಡಿಮೆ ಮಕ್ಕಳಿರುವ ಶಾಲೆಗಳು ಮುಚ್ಚುವಂತೆ ಪ್ರೊ. ಗೋವಿಂದರಾವ್ ವರದಿಯಲ್ಲಿ ಉಲ್ಲೇಖಿಸಿರುವುದು ಖಂಡನೆ. ಇಂತಹ ಸಲಹೆ ನೀಡಲು ಸಮಿತಿ ರಚಿಸಬೇಕಿತ್ತಾ? ಎಂದು ಡಾ.ನಿರಂಜನರಾಧ್ಯ ಪ್ರಶ್ನಿಸಿದರು.

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಮಾತನಾಡಿ, ಕರ್ನಾಟಕ ಕಟ್ಟಲು ಶ್ರಮಿಸಿದ ಆಲೂರು ವೆಂಕಟರಾಯರು ಮತ್ತು ಸಿದ್ದಪ್ಪ ಕಂಬಳಿ ಅಂವರನ್ನು ನಾವು ನಾಡಿಗಲ್ಲ, ನಗರಕ್ಕೂ ಪರಿಚಯಿಸಿಲ್ಲ. ಕನ್ನಡನಾಡು ಕಟ್ಟಿದ ಸಂಘವು ಪ್ರತ್ಯೇಕ ರಾಜ್ಯದ ಬಗ್ಗೆ ಘೋಷಣೆ ಮಾಡದು. ಈ ಸಾತ್ವಿಕ ಹೋರಾಟ ಈಗ ಆರಂಭ. ಮನವಿ, ಒತ್ತಾಯ, ಪ್ರತಿಭಟನೆ ನಡೆಸಿ ಬದಲಾವಣೆಗೆ ಯತ್ನಿಸಲಿದೆ. ಅನಿವಾರ್ಯ ಆದಲ್ಲಿ ಚರ್ಚಿಸಿ ನಿರ್ಧಾರಿಸಲಿದೆ ಎಂದರು.

ಸಹೋದರಿ ಪ್ರಾಣಾಪಾಯದಿಂದ ಪಾರು





ಮಕ್ಕಳಿಬ್ಬರಿಗೆ ಹಾವು ಕಚ್ಚಿದ ಪ್ರಕರಣ

ಶಿರಸಿ: ತಾಲೂಕಿನ ಸಹಸ್ರಳ್ಳಿಯಲ್ಲಿ ಮೂರು ದಿನಗಳ ಹಿಂದೆ ನಡೆದ ಹೃದಯ ವಿದ್ರಾವಕ ಘಟನೆಯಲ್ಲಿ ಹಾವಿನ ಕಡಿತಕ್ಕೆ ಒಳಗಾಗಿದ್ದ ಇಬ್ಬರು ಮಕ್ಕಳಲ್ಲಿ ಸಹೋದರ ಮೃತಪಟ್ಟಿದ್ದು, ತೀವ್ರ ನಿಗಾ ವಹಿಸಿ ಚಿಕಿತ್ಸೆ ನೀಡಿದ ಕಾರಣ ಸಹೋದರಿ ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಸಹಸ್ರಳ್ಳಿಯ ಪುಟ್ಟಪ್ಪ ನಾಯ್ಕ ಅವರ ಮಕ್ಕಳಾದ ಮಿಥುನ್ (ದೀಕ್ಷಿತ್) ಹಾಗೂ ದೀಕ್ಷಾ ರಾತ್ರಿ ಮಲಗಿದ್ದಾಗ ವಿಷಪೂರಿತ ಹಾವು ಕಚ್ಚಿದೆ. ಮಕ್ಕಳು ವಾಂತಿ ಮಾಡಲಾರಂಭಿಸಿದಾಗ ಕರೆಂಟ್ ಇಲ್ಲದ ಕಾರಣ ದೀಪದ ಬೆಳಕಿನಲ್ಲಿ ಹಾವು ಹೋಗುವುದನ್ನು ಪಾಲಕರು ಗಮನಿಸಿದ್ದಾರೆ. ತಕ್ಷಣ ಮಕ್ಕಳನ್ನು ಶಿರಸಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು, ನಂತರ ವೈದ್ಯರ ಸಲಹೆಯಂತೆ ಮಕ್ಕಳ ತಜ್ಞ ಡಾ.ದಿನೇಶ ಹೆಗಡೆ ಅವರ 'ಮಹಾಲಕ್ಷ್ಮಿ ಆಸ್ಪತ್ರೆ'ಗೆ ಬೆಳಗಿನ ಜಾವ ಸಾಗಿಸಿದ್ದಾರೆ. ವಾಯು ವಿಹಾರದಲ್ಲಿದ್ದ ಡಾ.ದಿನೇಶ ಹೆಗಡೆ ತಕ್ಷಣ ಧಾವಿಸಿ ತಪಾಸಣೆ ನಡೆಸಿದಾಗ ಮಿಥುನ್ ಆಗಲೇ ಮೃತಪಟ್ಟಿದ್ದ. ತೀವ್ರ ಗಂಭೀರ ಸ್ಥಿತಿಯಲ್ಲಿದ್ದ ದೀಕ್ಷಾಳಿಗೆ ವೈದ್ಯರು ಸೂಕ್ತ ಕಾಲಕ್ಕೆ ಯಶಸ್ವಿ ಚಿಕಿತ್ಸೆ ನೀಡಿ ಬದುಕಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮಕ್ಕಳನ್ನು ನೇರವಾಗಿ ಮಹಾಲಕ್ಷ್ಮಿ ಆಸ್ಪತ್ರೆಗೆ ತಂದಿದ್ದರೆ ಮಗನೂ ಉಳಿಯುತ್ತಿದ್ದ ಎಂದು ತಂದೆ ಪುಟ್ಟಪ್ಪ ನಾಯ್ಕ ಕೃತಜ್ಞತೆ ವ್ಯಕ್ತಪಡಿಸಿದ್ದು, ಡಾ. ದಿನೇಶ ಹೆಗಡೆ ಅವರು ಚಿಕಿತ್ಸೆಗೆ ಸಹಕರಿಸಿದ ಆಸ್ಪತ್ರೆ ಸಿಬ್ಬಂದಿಗೆ ಧನ್ಯವಾದ ತಿಳಿಸಿದ್ದಾರೆ.

ರಾಜ್ಯದಲ್ಲಿಂದು ಪಲ್ಸ್ ಪೋಲಿಯೊ

• **ಬೆಂಗಳೂರು:** ಆರೋಗ್ಯ ಇಲಾಖೆ ವತಿಯಿಂದ ರಾಜ್ಯವ್ಯಾಪ್ತ ಜೂ.28 (ಭಾನುವಾರ) ರಂದು ಪಲ್ಸ್ ಪೋಲಿಯೊ ಲಸಿಕೆ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಬೆಳಗ್ಗೆ 8 ಗಂಟೆಗೆ ಸದಾಶಿವನಗರದ ತಮ್ಮ ನಿವಾಸದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

ರಾಜ್ಯದಲ್ಲಿ ಐದು ವರ್ಷದೊಳಗಿನ 64.84 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ ನೀಡುವ ಗುರಿಯನ್ನು ಆರೋಗ್ಯ ಇಲಾಖೆ ಹೊಂದಿದೆ. ಇದಕ್ಕಾಗಿ 36,076 ಲಸಿಕಾ ಬೂತ್‌ಗಳನ್ನು ಸ್ಥಾಪಿಸಲಾಗಿದ್ದು, ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳು, ಅಂಗನವಾಡಿ ಕೇಂದ್ರಗಳು ಹಾಗೂ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಲಸಿಕೆ ವಿತರಣೆ ನಡೆಯಲಿದೆ.



ಗುಡ್ಡಗಾಡು ಪ್ರದೇಶಗಳ ಮಕ್ಕಳನ್ನು ತಲುಪಲು 988 ಮೊಬೈಲ್ ತಂಡಗಳನ್ನು ರಚಿಸಲಾಗಿದೆ. ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರಯಾಣಿಸುವ ಮಕ್ಕಳಿಗೆ ಲಸಿಕೆ ನೀಡಲು 2,125 ಟ್ರಾನ್ಸಿಟ್ ತಂಡಗಳನ್ನು ನಿಯೋಜಿಸಲಾಗಿದೆ. ಅಭಿಯಾನದ ಯಶಸ್ವಿ ಅನುಷ್ಠಾನಕ್ಕಾಗಿ ಒಟ್ಟು 1.14 ಲಕ್ಷಕ್ಕೂ ಹೆಚ್ಚು ಆರೋಗ್ಯ ಸಿಬ್ಬಂದಿ ಹಾಗೂ ಕಾರ್ಯಕರ್ತರನ್ನು ನಿಯೋಜಿಸಲಾಗಿದೆ.

ಐದು ವರ್ಷದೊಳಗಿನ ಪ್ರತಿ ಮಗುವಿಗೂ ತಪ್ಪದೆ ಪೋಲಿಯೊ ಹನಿ ಹಾಕಿಸಬೇಕು ಎಂದು ಆರೋಗ್ಯ ಇಲಾಖೆ ಮನವಿ ಮಾಡಿದೆ. ಇದೇ ವೇಳೆ, ಸಾರ್ವಜನಿಕರಿಗೆ ಸಮೀಪದ ಲಸಿಕಾ ಕೇಂದ್ರವನ್ನು ಸುಲಭವಾಗಿ ಪತ್ತೆಹಚ್ಚಲು ಮೊಬೈಲ್‌ನಲ್ಲಿ ಪ್ಲೇ ಆ್ಯಪ್‌ನಲ್ಲಿ ಲಭ್ಯವಿರುವ ನಿಯರ್ ಬೈ ವ್ಯಾಕ್ಸಿನ್ ಸೆಂಟರ್ ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಅದರ ಮೂಲಕ ಸಮೀಪದ ಲಸಿಕಾ ಕೇಂದ್ರದ ಮಾಹಿತಿ ಪಡೆಯಬಹುದಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಅಂಕೋಲಾ ಮೂಲದ ಪ್ರೇಮಿಗಳ ನಡುವೆ ಜಗಳ | ಚೂರಿ ಇರಿತ
ಕಾರಲ್ಲೇ ಬಾಂಬ್ ಸ್ಫೋಟಿಸಿಕೊಂಡು ಆತ್ಮಹತ್ಯೆ

• **ತುಮಕೂರು:** ಚಲಿಸುತ್ತಿದ್ದ ಕಾರಿನಲ್ಲೇ ಯುವತಿಯೊಂದಿಗೆ ಜಗಳವಾಡಿದ ಯುವಕನೊಬ್ಬ, ಆಕೆಗೆ ಚಾಕುವಿನಿಂದ ಇರಿದು, ಬಳಿಕ ತಾನು ಪೆಟ್ರೋಲ್ ಬಾಂಬ್ ಸ್ಫೋಟಿಸಿಕೊಂಡು ಸಜೀವ ದಹನವಾಗಿರುವ ಘಟನೆ ಶಿರಾ ತಾಲೂಕಿನ ಜೋಗಿಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ನಾಗೇಂದ್ರ (30) ಮೃತಪಟ್ಟಿದ್ದು, ರಮ್ಯಾ (23) ಗಂಭೀರವಾಗಿ ಗಾಯಗೊಂಡಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಬ್ಬರೂ ಉತ್ತರ ಕನ್ನಡ ಜಿಲ್ಲೆ ಅಂಕೋಲಾ ಮೂಲದವರಾಗಿದ್ದು, ಬೆಂಗಳೂರಿನಿಂದ ಅಂಕೋಲಾಗೆ ತೆರಳುವ ವೇಳೆ ಈ ಘಟನೆ ನಡೆದಿದೆ.

ಘಟನೆ ಹಿನ್ನೆಲೆ: ಬೆಂಗಳೂರಿನ ಜಯನಗರದ 1ನೇ ಬ್ಲಾಕ್‌ನಲ್ಲಿ ವಾಸವಾಗಿದ್ದ ರಮ್ಯಾ ಖಾಸಗಿ ಆಸ್ಪತ್ರೆಯೊಂದರಲ್ಲಿ ಲ್ಯಾಬ್ ಟೆಕ್ನೀಷಿಯನ್ ಆಗಿ ಕೆಲಸ ಮಾಡುತ್ತಿದ್ದು, 6 ವರ್ಷಗಳಿಂದ ನಾಗೇಂದ್ರ ಹಾಗೂ ರಮ್ಯಾ ಪ್ರೀತಿಸುತ್ತಿದ್ದರು. ಕಳೆದ ಹಲವು ದಿನಗಳಿಂದ ಇಬ್ಬರ ನಡುವೆ ಮನಸ್ತಾಪ ಉಂಟಾಗಿತ್ತು. ಇದರಿಂದಾಗಿ ರಮ್ಯಾ ನಾಗೇಂದ್ರನ ಫೋನ್ ನಂಬರ್ ಬ್ಲಾಕ್ ಮಾಡಿದ್ದಳು. ಶನಿವಾರ ಬೆಳಗ್ಗೆ ರಮ್ಯಾಳ ರೂಂ ಬಳಿ ಬಂದಿದ್ದ ನಾಗೇಂದ್ರ ಆಕೆಯನ್ನು ಬಲವಂತವಾಗಿ ಕರೆದುಕೊಂಡು ಬೆಂಗಳೂರಿನಿಂದ ಅಂಕೋಲಾಕ್ಕೆ ಖಾಸಗಿ ಟ್ಯಾಕ್ಸಿಯೊಂದರಲ್ಲಿ ತೆರಳುತ್ತಿದ್ದ.

ಜೋಗಿಹಳ್ಳಿ ಬಳಿ ಬರುತ್ತಿದ್ದಂತೆ ಇಬ್ಬರ ನಡುವೆ ವೈಯಕ್ತಿಕ ವಿಚಾರವಾಗಿ ವಾಗ್ವಾದ ಶುರುವಾಗಿದ್ದು, ಮಾತಿನ ಚಕಮಕಿ ತಾರಕಕ್ಕೇರಿದಾಗ, ನಾಗೇಂದ್ರ ರಮ್ಯಾಳಿಗೆ ಚಾಕುವಿನಿಂದ ಇರಿದಿದ್ದಾನೆ. ಚಾಕು ಇರಿತದಿಂದ ಗಾಬರಿಗೊಂಡ ರಮ್ಯಾ ತಕ್ಷಣವೇ ಚಲಿಸುವ ಕಾರಿನಿಂದ ಜಿಗಿದಿದ್ದಾಳೆ. ತಕ್ಷಣ ಕ್ಯಾಬ್ ಚಾಲಕ ಪ್ರವೀಣ್ ಕುಮಾರ್ ನಾಯಕ ಕಾರನ್ನು ನಿಲ್ಲಿಸಿ ಆಕೆಯನ್ನು ರಕ್ಷಿಸಲು ಹೋಗಿದ್ದಾನೆ. ಕಾರಿನೊಳಗೆ ಏಕಾಂಗಿಯಾದ ನಾಗೇಂದ್ರ ತಕ್ಷಣವೇ ಡೋರ್ ಲಾಕ್ ಮಾಡಿಕೊಂಡಿದ್ದಾನೆ.



ಬಳಿಕ ತಾನು ಮೊದಲೇ ತಂದಿದ್ದ ಪೆಟ್ರೋಲ್ ಬಾಂಬ್ ಅನ್ನು ಕಾರಿನೊಳಗೆ ಸ್ಫೋಟಿಸಿಕೊಂಡಿದ್ದಾನೆ. ಸ್ಫೋಟದ ತೀವ್ರತೆಗೆ ಕಾರು ಸಂಪೂರ್ಣವಾಗಿ ಹೊತ್ತಿ ಉರಿದಿದ್ದು, ನಾಗೇಂದ್ರ ಕಾರಿನೊಳಗೇ ಸಜೀವ ದಹನವಾಗಿದ್ದಾನೆ. ಸ್ಥಳಕ್ಕೆ ಕಳ್ಳಂಬೆಳ್ಳ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಭೂದಾನಿಗಳ ಸ್ಮರಣೆ

ಪುಟ 1 ➡ ಭೂಮಿ ಕಳೆದುಕೊಂಡವರ ಬಗ್ಗೆ ನಮಗೆ ಕಾಳಜಿ ಇದೆ. ಕೆಂಗೇರಿ ಹಾಗೂ ಯಲಹಂಕ ಪಟ್ಟಣ ನಿರ್ಮಾಣ ಮಾಡಿದ್ದು ಹೇಗೆ? ಪರಮೇಶ್ವರ್ ಅವರು ತುಮಕೂರಿನಲ್ಲಿ ಟೌನ್‌ಶಿಪ್ ಮಾಡಲು ಮುಂದಾಗಿದ್ದಾರೆ. ಅವು ಭೂಮಿಯಲ್ಲವೇ? ಮನುಷ್ಯನ ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ. ಜನನ ಉಚಿತ, ಮರಣ ಖಚಿತ. ಈ ಹುಟ್ಟು ಸಾವಿನ ಮಧ್ಯೆ ನಾವು ಏನು ಸಾಧನೆ, ತ್ಯಾಗ ಮಾಡುತ್ತೇವೆ ಎಂಬುದು ಮುಖ್ಯ. ಈ 10 ಪಥದ ರಸ್ತೆಗೆ ಭೂಮಿ ತ್ಯಾಗ ಮಾಡಿದ ಎಲ್ಲರಿಗೂ ಸಾಷ್ಟಾಂಗ ನಮನ ಸಲ್ಲಿಸುತ್ತೇನೆ ಎಂದರು.

ಶಾಲಾ ಮಕ್ಕಳಿಗೆ ಗಿಡ ನೆಟ್ಟು ಬೆಳೆಸುವ ಸ್ಪರ್ಧೆ: ಹಸಿರು ಬೆಂಗಳೂರು ಕಟ್ಟಬೇಕು, ಆ ಮೂಲಕ ಕೆಂಪೇಗೌಡರ ದೂರದೃಷ್ಟಿ ಉಳಿಯಬೇಕು ಎಂದು ಬಿಡಿಎ ವತಿಯಿಂದ ಇಂದು 15 ಲಕ್ಷ ಸಸಿಗಳನ್ನು ನೆಡಲಾಗಿದೆ. ಇದು ದಾಖಲೆಯ ತೀರ್ಮಾನ. ಇದೇ ರೀತಿ ಬೆಂಗಳೂರಿನಲ್ಲಿ ಪ್ರತಿ ಶಾಲೆಗಳು ಒಂದೊಂದು ಪ್ರದೇಶದ ಉಸ್ತುವಾರಿ ವಹಿಸಿಕೊಂಡು ಅಲ್ಲಿ ಮಕ್ಕಳಿಂದ ಗಿಡ ನೆಡೆಸಿ ಬೆಳೆಸುವ ಕಾರ್ಯಕ್ರಮ ಮಾಡಬೇಕು. ಈ ವಿಚಾರದಲ್ಲಿ ಜಿಬಿಎ ವತಿಯಿಂದ ಸ್ಪರ್ಧೆ ಏರ್ಪಡಿಸಲಾಗುವುದು ಎಂದು ತಿಳಿಸಿದರು. ಬೆಂಗಳೂರು ವಿವಿಯಲ್ಲಿ ಕೆಂಪೇಗೌಡ ಅಧ್ಯಯನ ಕೇಂದ್ರ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಕೆ.ಎಚ್. ಮುನಿಯಪ್ಪನವರು ತಮ್ಮ ಕ್ಷೇತ್ರದಲ್ಲಿ 9.5 ಎಕರೆ ಜಾಗ ನೀಡಿದ್ದು, ಅಲ್ಲಿ ಕೆಂಪೇಗೌಡ ಅಧ್ಯಯನ ಕೇಂದ್ರ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಹುತ್ರಿದುರ್ಗದಲ್ಲಿ 10 ಕೋಟಿ ಮೊತ್ತದ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಕಳೆದ ಎರಡು ವರ್ಷ ಐದು ತಿಂಗಳಲ್ಲಿ ಬಿಡಿಎ ಪ್ರಾಧಿಕಾರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವುದರ ಜತೆಗೆ ಕೆಂಪೇಗೌಡ ಬಡಾವಣೆ ಅಭಿವೃದ್ಧಿಗೆ ಶ್ರಮಿಸಲಾಗಿದೆ. ಡಿ.ಕೆ.ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ಇಲ್ಲಿಯವರೆಗೂ ಹಲವಾರು ಬದಲಾವಣೆಗಳನ್ನು ತಂದು ಜಮೀನನ್ನು ಕಳೆದುಕೊಂಡ ರೈತರಿಗೆ ಅವರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯ ಒದಗಿಸಲಾಗಿದೆ.

■ **ಎನ್.ಎ. ಹ್ಯಾರಿಸ್, ಬಿಡಿಎ ಅಧ್ಯಕ್ಷ**

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◆ ನಾನಿರದಿದ್ದರೆ ಇಸ್ರೇಲ್ ಇರುತ್ತಿರಲಿಲ್ಲ
- ಟ್ರಂಪ್ ಹೇಳಿಕೆ
- ಹೌದು, ಕೋಳಿ ಕೂಗದಿರುತ್ತಿದ್ದರೆ ಬೆಳಗಾಗುತ್ತಿರಲಿಲ್ಲ!

ದಿನ ಭವಿಷ್ಯ

ಮೇಷ
ಅಡಚಣೆಕರ ಪ್ರಸಂಗ. ಆತ್ಮವಿಶ್ವಾಸಕ್ಕೆ ಕುಂದು. ನಿರ್ಭೀತಿಯಿಂದ ಕಾರ್ಯ ನಿರ್ವಹಿಸಿ. ಈ ಬಗ್ಗೆ ಇತರರಿಗೆ ವಿವರಣೆ ಕೊಡುವ ಅಗತ್ಯ ಇಲ್ಲ.

ವೃಷಭ
ಶುಭ ಸುದ್ದಿ ಕೇಳುವಿರಿ. ಕೌಟುಂಬಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಅವಕಾಶ. ನಿಮ್ಮ ನಿರ್ವಹಣೆ ಉತ್ತಮ ಪಡಿಸಿಕೊಳ್ಳಲು ಯತ್ನಿಸಿ.

ಮಿಥುನ
ಮನದ ಶಾಂತಿ ಕಾಯಲು ಸಂಘರ್ಷಗಳಿಂದ ದೂರವಿರಿ. ಸವಾಲು ಎದುರಿಸುವ ತಾಕತ್ತು ನಿಮಗಿದೆ, ಧೈರ್ಯ ಬೇಕು ಅಷ್ಟೆ.

ಕಟಕ
ಆರ್ಥಿಕವಾಗಿ ಫಲಪ್ರದ ದಿನ. ಇತರರು ಹರಡುವ ವದಂತಿಗೆ ಕಿವಿಗೊಡಬೇಡಿ. ಆತ್ಮೀಯ ಬಂಧುಮಿತ್ರರ ಕಾಣುವ ಅವಕಾಶ ಸಿಗಲಿದೆ.

ಸಿಂಹ
ಅಸಹನೀಯ ಸನ್ನಿವೇಶ ಎದುರಿಸುವ ಪ್ರಸಂಗ ಬಂದೀತು. ತಕ್ಷಣ ಭಾವಾವೇಶದಿಂದ ಪ್ರತಿಕ್ರಿಯಿಸದಿರಿ. ತಾಳ್ಮೆಯಿಂದ ನಿಭಾಯಿಸಿ.

ಕನ್ಯಾ
ಸಿಹಿ–ಕಹಿ ಎರಡೂ ಪ್ರಸಂಗ ಎದುರಿಸುವಿರಿ. ವಾಗ್ವಾದದಿಂದ ದೂರ ಇರುವುದೇ ಒಳಿತು. ಆಪ್ತರ ಜತೆ ಪ್ರವಾಸ ಹೊರಡುವ ಅವಕಾಶ.

ತುಲಾ
ನಿಮ್ಮ ಭಾವನೆ ಸ್ಪಷ್ಟವಾಗಿ ವ್ಯಕ್ತಪಡಿಸಿ. ಆದಷ್ಟು ಮುಜುಗರ ಬೇಡಿಲ್ಲ. ಗೊಂದಲಕ್ಕೆ ಅವಕಾಶ ನೀಡಬೇಡಿ. ಹಣಕಾಸು ಒತ್ತಡ ಎದುರಿಸುವಿರಿ.

ವೃಶ್ಚಿಕ
ನೆಗೆಟಿವ್ ಮನಸ್ಥಿತಿಯ ಜನರನ್ನು ದೂರವಿಡಿ. ಹಳೆಯ ಸ್ನೇಹಿತರ ಭೇಟಿ ಸಾಧ್ಯತೆ. ಕೌಟುಂಬಿಕ ಬಿಕ್ಕಟ್ಟು ಶೀಘ್ರ ಪರಿಹಾರ ಕಾಣಲಿದೆ.

ಧನು
ನಿಮ್ಮ ದೀರ್ಘ ಅನುಭವ ಇಂದು ನೆರವಿಗೆ ಬರಲಿದೆ. ಬಿಕ್ಕಟ್ಟನ್ನು ಸಮರ್ಥವಾಗಿ ನಿಭಾಯಿಸುವಿರಿ. ಹಣದ ಸಮಸ್ಯೆ ನಿವಾರಣೆ.

ಮಕರ
ನಾಯಕತ್ವದ ಗುಣ ಪ್ರದರ್ಶಿಸುವ ಪ್ರಸಂಗ ಬರಲಿದೆ. ದಿಟ್ಟ ನಿರ್ಧಾರ ತಾಳಲು ಹಿಂಜರಿಕೆ ತೋರದಿರಿ. ಕೌಟುಂಬಿಕ ಅಸಹಕಾರ ಕಾಣುವಿರಿ.

ಕುಂಭ
ಆತ್ಮವಿಶ್ವಾಸ ಹೆಚ್ಚಿಸುವ ಪ್ರಸಂಗ. ಭಾವುಕತೆ ಬಿಟ್ಟು ಪ್ರಾಯೋಗಿಕ ನೆಲೆಯಲ್ಲಿ ಚಿಂತಿಸಿ. ಆಗ ನಿಮ್ಮನ್ನು ಕಾಡುವ ಸಮಸ್ಯೆ ಇತ್ಯರ್ಥವಾದೀತು.

ಮೀನ
ಹಣದ ಕೊರತೆ ನೀಗುವುದು. ಸಂಬಂಧದಲ್ಲಿ ಯಾವುದೇ ಅನುಮಾನ ಉಳಿಯದಿರಲಿ. ಎಲ್ಲವನ್ನು ಸ್ಪಷ್ಟಪಡಿಸಿಕೊಳ್ಳಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 3,8,2,5

ಕೆಂಪೇಗೌಡ ಜಯಂತಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ
ಆಧುನಿಕ ಬೆಂಗಳೂರು ನಿರ್ಮಾತೃ

• **ಬೆಂಗಳೂರು:** ಬೆಂಗಳೂರು ನಗರವನ್ನು ರಾಷ್ಟ್ರಮಟ್ಟ ಮಾತ್ರವಲ್ಲದೇ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಬೆಳೆಯಲು ನಾಡಪ್ರಭು ಕೆಂಪೇಗೌಡರೇ ಕಾರಣ ಎನ್ನಲು ಹೆಮ್ಮೆ ಎನಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ತಿಳಿಸಿದ್ದಾರೆ.

ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ವತಿಯಿಂದ ಶನಿವಾರ ಸದಾಶಿವನಗರದ ಕೆಂಪೇಗೌಡ ಗಡಿಗೋಪುರ ಉದ್ಯಾನವನದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಮಾಜಸೇವಕ ಆರ್.ಪಿ.ರವಿಶಂಕರ್ ಅವರ ಸನ್ಮಾನ ನೆರವೇರಿಸಿ ಮಾತನಾಡಿದ ಅವರು, 517 ವರ್ಷಗಳ ನಂತರದಲ್ಲೂ ನಾಡ ಪ್ರಭು ಕೆಂಪೇಗೌಡರನ್ನು ನಾವು ನೆನಪಿಸುತ್ತಿದ್ದೇವೆ ಎಂದರೆ, ಅವರು ಬೆಂಗಳೂರು ನಗರ, ನಾಡಿಗೆ ಕೊಟ್ಟ ಕೊಡುಗೆ ಎಂದರು.

ಅಷ್ಟೇ ಅಲ್ಲ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರ ಹೆಸರೇ ಶ್ರೇಷ್ಠ ಎಂದು ತೀರ್ಮಾನ ತೆಗೆದು ಕೊಂಡರು ಎಂದು ಸ್ಮರಿಸಿದರು. ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಅವರು ಮಾತನಾಡಿ, ನಾಡಪ್ರಭು ಕೆಂಪೇಗೌಡರ ಪ್ರೇರೇಪಣೆ ನಮ್ಮೆಲ್ಲರ ಮೇಲಿರಲಿ ಎಂದು ಆಶಿಸಿದರು. ಯಡಿಯೂರಪ್ಪ ಸಿಎಂ ಆಗಿದ್ದಾಗ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರು ನಾಮಕರಣ ಮಾಡಿದ್ದ ವಿಚಾರವನ್ನು ಪ್ರಸ್ತಾಪಿಸಿ ಮೆಚ್ಚುಗೆ ಸೂಚಿಸಿದರು.

ಯಡಿಯೂರಪ್ಪನವರು ಎರಡನೇ ಬಾರಿ ಅವರು ಸಿಎಂ ಆಗಿದ್ದಾಗ ವಿಮಾನ ನಿಲ್ದಾಣದ ಬಳಿ ಕೆಂಪೇಗೌಡರ ಪ್ರತಿಮೆ ನಿರ್ಮಾಣಕ್ಕೆ ಒಪ್ಪಿಗೆ ಸೂಚಿಸಿದರು. 108 ಅಡಿಯ ಪ್ರತಿಮೆಗೆ 65 ಕೋಟಿ ರೂ., ಥೀಮ್‌ಪಾರ್ಕಿಗೆ 20 ಕೋಟಿ ರೂ. ಹಾಗೂ ನಾಡಪ್ರಭು ಕೆಂಪೇಗೌಡರ ವೀರಸಮಾಧಿಗೆ ಜಮೀನು ಸ್ವಾಧೀನಕ್ಕೆ 10 ಕೋಟಿ ರೂ. ನೀಡಿದ್ದಲ್ಲದೇ, ಬೆಂವಿವಿ ಅಧ್ಯಯನ ಕೇಂದ್ರಕ್ಕೆ ಅವಶ್ಯಕ ಹಣ ಬಿಡುಗಡೆ ಮಾಡಿದ್ದರು ಎಂದರು. ಪ್ರತಿ ಗ್ರಾಮದಿಂದ ಮೃತ್ತಿಕೆಯನ್ನೂ ತರಲಾಗಿತ್ತು.

ಇದು ಯಡಿಯೂರಪ್ಪನವರ ನೇತೃತ್ವ ಮಾತ್ರವಲ್ಲದೇ ಹೃದಯವಂತಿಕೆಯ ಕೆಲಸ ಎಂದರು. ರಕ್ಷಣಾ ವೇದಿಕೆಯ ಅಧ್ಯಕ್ಷ ಶಿವ ರಾಮೇಗೌಡ, ಮಂಜುನಾಥ್, ಡಾ.ರಾಜೇಶ್, ಜಯಪಾಲ್, ಸುಮಂಗಲಾ ಕೇಶವ್ ಮೊದಲಾದ ಪ್ರಮುಖರು ವೇದಿಕೆಯಲ್ಲಿದ್ದರು.



ನಾಡಪ್ರಭು ಕೆಂಪೇಗೌಡರ ಹೆಸರು ಕೇವಲ ಕರ್ನಾಟಕ, ದೇಶ ಮಾತ್ರವಲ್ಲದೇ, ಇಡೀ ವಿಶ್ವದಲ್ಲಿ ಚರ್ಚೆ ಆಗುವಂತೆ ಆಗಬೇಕೆಂಬ ಸದುದ್ದೇಶದಿಂದ ಹಿಂದಿನ ಸಿಎಂ ಬಿ.ಎಸ್.ಯಡಿಯೂರಪ್ಪನವರು ಅಧ್ಯಯನ ಕೇಂದ್ರಕ್ಕೆ 50 ಕೋಟಿ ರೂ. ಕೊಟ್ಟಿದ್ದರು. ಪ್ರತಿಮೆ ನಿರ್ಮಾಣಕ್ಕೆ ಹಣ ಕೊಟ್ಟದ್ದಲ್ಲದೇ, ಪಾರ್ಕ್ ನಿರ್ಮಿಸಲು ತಿಳಿಸಿದ್ದರು.

■ **ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

ಸೈಬರ್ ಅಪರಾಧ: ತಾಂತ್ರಿಕ ಸಾಮರ್ಥ್ಯ ಇನ್ನಷ್ಟು ಬಲ

• **ಬೆಂಗಳೂರು:** ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತಾಂತ್ರಿಕ ಸಾಮರ್ಥ್ಯವನ್ನು ಇನ್ನಷ್ಟು ಬಲಪಡಿಸುವುದು, ಆಧುನಿಕ ತಂತ್ರಜ್ಞಾನಗಳ ಅಳವಡಿಕೆ, ಸಾರ್ವಜನಿಕರಿಗೆ ತ್ವರಿತ ಸೇವೆ ಒದಗಿಸುವತ್ತ ಹೆಚ್ಚಿನ ಆದ್ಯತೆ ನೀಡುವಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅಧಿಕಾರಿಗಳಿಗೆ ಸೂಚಿಸಿದರು.

ಶನಿವಾರ ಬೆಂಗಳೂರಿನ ಬಹುಮಹಡಿ ಕಟ್ಟಡದಲ್ಲಿರುವ ಪೊಲೀಸ್ ಕಂಪ್ಯೂಟರ್ ವಿಭಾಗಕ್ಕೆ ಭೇಟಿ ನೀಡಿ, ಇಲಾಖೆಯ ಕಾರ್ಯಚಟುವಟಿಕೆಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದರು. ಮಾಹಿತಿ ತಂತ್ರಜ್ಞಾನದ ಸಮರ್ಪಕ ಬಳಕೆಯ ಮೂಲಕ ಪೊಲೀಸ್ ಸೇವೆಗಳನ್ನು ಇನ್ನಷ್ಟು ಪಾರದರ್ಶಕ, ಪರಿಣಾಮಕಾರಿ ಹಾಗೂ ಜನಸ್ನೇಹಿಯಾಗಿ ರೂಪಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಪೊಲೀಸ್ ಇಲಾಖೆಯ ಡಿಜಿಟಲ್ ಸೇವೆಗಳು ಮತ್ತು ಮಾಹಿತಿ ವ್ಯವಸ್ಥೆಗಳನ್ನು ಮತ್ತಷ್ಟು ಕಾರ್ಯಕ್ಷಮಗೊಳಿಸುವ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವವನ್ನು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಪೊಲೀಸ್ ಕಂಪ್ಯೂಟರ್ ವಿಭಾಗವು ರಾಜ್ಯ ಪೊಲೀಸ್ ಇಲಾಖೆಯ ತಾಂತ್ರಿಕ ಬೆನ್ನೆಲುಬಾಗಿದ್ದು, ಇಲಾಖೆಯ ವಿವಿಧ ಡಿಜಿಟಲ್ ಜಾಲತಾಣಗಳು, ಮಾಹಿತಿ ನಿರ್ವಹಣಾ ವ್ಯವಸ್ಥೆಗಳು, ಸಾಫ್ಟ್‌ವೇರ್ ವೇದಿಕೆಗಳು ಹಾಗೂ ಮಾಹಿತಿ ತಂತ್ರಜ್ಞಾನ ಸಂಬಂಧಿತ ಸೇವೆಗಳ ಸಮನ್ವಯ ಮತ್ತು ನಿರ್ವಹಣೆಯನ್ನು ಕೈಗೊಳ್ಳುತ್ತಿದೆ ಎಂದು ಸಚಿವ ಖರ್ಗೆ ತಿಳಿಸಿದರು.

ಇದರೊಂದಿಗೆ, ಸೈಬರ್ ಅಪರಾಧ ವಿಭಾಗವು ಆನ್‌ಲೈನ್ ವಂಚನೆ, ಕ್ರಿಪ್ಟೋಕರೆನ್ಸಿ ವಂಚನೆ, ಹ್ಯಾಕಿಂಗ್ ಸೇರಿದಂತೆ ವಿವಿಧ ರೀತಿಯ ಸೈಬರ್ ಅಪರಾಧಗಳ ತನಿಖೆಯನ್ನು ಪರಿಣಾಮಕಾರಿಯಾಗಿ ನಡೆಸುತ್ತಿದೆ. ಸೈಬರ್ ಫೋರೆನ್ಸಿಕ್ ಘಟಕವು ಡಿಜಿಟಲ್ ಸಾಕ್ಷ್ಯಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ ವಿಶ್ಲೇಷಿಸುವುದರ ಜೊತೆಗೆ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಿಗೆ ಅಗತ್ಯ ತಾಂತ್ರಿಕ ನೆರವನ್ನು ಒದಗಿಸುತ್ತಿದೆ ಎಂದರು.

ಕಾವೇರಿ ವಿವಾದ ಇತ್ಯರ್ಥಕ್ಕೆ ಸಲಹೆ

ಪುಟ 1 ➡ **ನದಿ ಜೋಡಣೆಯೇ ಪರಿಹಾರ!:** ಕರ್ನಾಟಕ–ತ.ನಾಡು ನಡುವೆ ಕಾವೇರಿ ಸಮಸ್ಯೆ ಬಗೆಹರಿಸಲು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ವಿನಂತಿಸಿದರು. ನದಿಜೋಡಣೆ ಬಗ್ಗೆ ಬಹಳ ಗಂಭೀರವಾದ ಚರ್ಚೆ ನಡೆಯುತ್ತಿದೆ. ನದಿ ಜೋಡಣೆಯೂ ಒಂದು ಪರಿಹಾರವೇ. ಭಾರತದ ಎಲ್ಲಾ ನದಿಗಳನ್ನು ಜೋಡಿಸಿ, ಒಂದು ಹನಿ ನೀರೂ ವ್ಯರ್ಥವಾಗದಂತೆ ನಿರ್ವಹಿಸಬೇಕು. ಗೋದಾವರಿ ಮತ್ತು ಕಾವೇರಿ ನದಿ ಜೋಡಣೆ ಮಾಡಬಹುದಲ್ಲವೆ ಎಂದು ನಾನು ಚಂದ್ರಬಾಬು ನಾಯ್ಡು ಅವರೊಂದಿಗೆ ಆಗಾಗ ಚರ್ಚೆ ಮಾಡುತ್ತಿರುತ್ತೇನೆ. ಆದರೆ, ಇದು ತಕ್ಷಣಕ್ಕೆ ಆಗುವ ಕೆಲಸವಲ್ಲ ಎಂದರು.

ಬೆಂಗಳೂರಿನಂಥ ನಾಡು ಕಟ್ಟಿದ ಕೆಂಪೇಗೌಡರಿಗೆ ದೂರದೃಷ್ಟಿ ಇತ್ತು. ಅದರ ಲಾಭವನ್ನು ನಾವೀಗ ಅನುಭವಿಸುತ್ತಿದ್ದೇವೆ. ಕೆಂಪೇಗೌಡ ನಗರ ನಿರ್ಮಾತೃ, ಅವರು ಪರಂಪರೆಯನ್ನೇ ಹುಟ್ಟು ಹಾಕಿದವರು, ದೂರದೃಷ್ಟಿ ನಾಯಕ. ಅವರ ದೂರದೃಷ್ಟಿಗೆ ಬೆಂಗಳೂರು ನಗರ ಸಾಕ್ಷಿಯಾಗಿದೆ. ಅವರು ಕಟ್ಟಿದ ಬೆಂಗಳೂರು ಇಂದು ಮಿನಿ ಭಾರತವೇ ಆಗಿದೆ. ಅವರು ಆಡಳಿತ ಎಂದರೆ, ಜನರಿಗೆ ಕೇವಲ ಸೇವೆಗಳನ್ನು ನೀಡುವುದು ಎಂದು ತಿಳಿಯದೆ ಸುಸ್ಥಿರವಾಗಿ ನಗರ ನಿರ್ಮಾಣ ಮಾಡಿದ್ದಾರೆ. ಕೆರೆಗಳ ಜಾಲದ ಮೂಲಕ ಜಲ ನಿರ್ವಹಣೆ, ಪರಿಸರದ ಸಂರಕ್ಷಣೆಯ ಮಾದರಿಯನ್ನು 500 ವರ್ಷಗಳ ಹಿಂದೆಯೇ ಕೆಂಪೇಗೌಡರು ತೋರಿಸಿಕೊಟ್ಟಿದ್ದಾರೆ ಎಂದು ವಿವರಿಸಿದರು.

ಆದಿಚುಂಚನಗಿರಿ ಮಹಾಸಂಸ್ಥಾನದ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮತ್ತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾದಾರ ಚೆನ್ನಯ್ಯ ಮಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಕೇಂದ್ರ ಸಚಿವ ವಿ. ಸೋಮಣ್ಣ, ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಎಂ. ಕೃಷ್ಣೇಗೌಡ ಅವರು ವೇದಿಕೆಯಲ್ಲಿದ್ದರು.

ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಟಿ.ವಿ. ಮೋಹನ್ ದಾಸ್ ಪೈ, ಎ.ಸಿ. ಲಕ್ಷ್ಮಣ್ ಅವರಿಗೆ ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಗಣ್ಯರಿಗೆ ಕರುನಾಡ ಪ್ರಭು ಕೆಂಪೇಗೌಡ ಪ್ರಶಸ್ತಿ ನೀಡಲಾಯಿತು.



ನಗರ ನಿರ್ಮಾಣವೆಂದರೆ ಕೇವಲ ಕಟ್ಟಡ, ರಸ್ತೆಗಳ ನಿರ್ಮಾಣವಲ್ಲ ಎಂದು ಕೆಂಪೇಗೌಡರು ತಿಳಿದಿದ್ದರು. ಅವರು ಐದು ಶತಮಾನಗಳ ಹಿಂದೆಯೇ ಜಲ ನಿರ್ವಹಣೆ, ಪರಿಸರ ಸಂರಕ್ಷಣೆ, ಸಾಮಾಜಿಕ ಸಾಮರಸ್ಯ ಇದ್ಯಾದಿ ಕುರಿತು ಸುಸ್ಥಿರ ಯೋಜನೆಯೊಂದಿಗೆ ನಗರ ನಿರ್ಮಿಸಿದ್ದರು.

■ **ಥಾವರ್‌ಚಂದ್ ಗೆಹಲೋತ್, ರಾಜ್ಯಪಾಲ**



ಕೆಂಪೇಗೌಡರು ಬೆಂಗಳೂರು ನಗರವನ್ನು ಕಟ್ಟಿ 64 ಸಮುದಾಯಗಳಿಗೆ 64 ಪೇಟೆಗಳನ್ನು ನಿರ್ಮಾಣ ಮಾಡಿ ಕೊಟ್ಟಿದ್ದರು. ಇದಕ್ಕೆ ಕಾರಣ ಈ ನಗರವನ್ನು ನಿರ್ಮಾಣ ಮಾಡಿರುವ ಕೆಂಪೇಗೌಡರ ದೂರದೃಷ್ಟಿ. ಅವರು ಕೇವಲ ಭೌತಿಕ ವಾಗಿ ನಗರ ನಿರ್ಮಿಸಿಲ್ಲ, ನಿಷ್ಕಾಮ ಸೇವೆ ಮಾಡಿ ಎಲ್ಲ ಮತದವರಿಗೆ ದೇವಾಲಯಗಳನ್ನು ಮಾಡಿಕೊಟ್ಟಿದ್ದರು.

■ **ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಮಠ**

ಸೀಶೆಲ್ಸ್: ಮೋದಿಗೆ ಅದ್ದೂರಿ ಸ್ವಾಗತ

ಪುಟ 1 ➡ ಶ್ರೀರಾಮ ಸಂಕೀರ್ತನೆ ಮತ್ತು ಶಿವತಾಂಡವ ಸ್ತೋತ್ರದ ಹಿನ್ನೆಲೆಯೊಂದಿಗೆ ಆಕರ್ಷಕ ಭರತನಾಟ್ಯವನ್ನು ಲಯಬದ್ಧವಾಗಿ ಭಾರತೀಯ ಸಮುದಾಯ ಪ್ರದರ್ಶಿಸಿತು.

ಆತ್ಮೀಯ ಸ್ವಾಗತ ನೀಡಿದ ಸೀಶೆಲ್ಸ್ ಅಧ್ಯಕ್ಷ ಡಾ.ಹರ್ಮಿನ್: ಶನಿವಾರ ಮಧ್ಯಾಹ್ನ ಸೀಶೆಲ್ಸ್ ವಿಮಾನ ನಿಲ್ದಾಣ ತಲುಪಿದ ಪ್ರಧಾನಿ ಮೋದಿ ಅವರನ್ನು ಸಂಪುಟ ಸಹೋದ್ಯೋಗಿಗಳು ಮತ್ತು ಸರಕಾರಿ ಅಧಿಕಾರಿಗಳೊಡಗೂಡಿ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನ್ ವೈಯಕ್ತಿಕವಾಗಿ ಆತ್ಮೀಯವಾಗಿ ಸ್ವಾಗತಿಸಿದರು. ಸಾಂಪ್ರದಾಯಿಕ ಗೌರವ ರಕ್ಷೆಯನ್ನೂ ಪ್ರಧಾನಿ ಮೋದಿ ಸ್ವೀಕರಿಸಿದರು. ಹರ್ಮಿನ್ ಆಮಂತ್ರಣ ಮೇರೆಗೆ ಸೀಶೆಲ್ಸ್‌ಗೆ ಭೇಟಿ ನೀಡಿರುವ ಪ್ರಧಾನಿ ಮೋದಿ ಅಲ್ಲಿನ ರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮದಲ್ಲಿ ಗೌರವ ಅತಿಥಿಯಾಗಿ ಪಾಲ್ಗೊಳ್ಳುವರು.

194 ವರ್ಷದ ಜೋನಾಥನ್‌ಗೆ ಆಹಾರ ನೀಡಿದ ಮೋದಿ: ಸೀಶೆಲ್ಸ್ ಅಧ್ಯಕ್ಷ ಡಾ. ಪ್ಯಾಟ್ರಿಕ್ ಹರ್ಮಿನ್ ಜತೆ ಸೀಶೆಲ್ಸ್‌ನ ರಾಷ್ಟ್ರೀಯ ಬೊಟಾನಿಕಲ್ ಗಾರ್ಡನ್‌ಗೆ ಭೇಟಿ ನೀಡಿದ ಪ್ರಧಾನಿ ಮೋದಿ, ಅಲ್ಲಿ ಬೃಹತ್ ಆಮೆಗಳು ವಾಸವಿರುವ ಪ್ರದೇಶಕ್ಕೆ ಭೇಟಿ ನೀಡಿದರು. ಅಲ್ಲಿರುವ ಜಗತ್ತಿನ ಅತ್ಯಂತ ಹಿರಿಯ ಆಮೆಯೆಂದೇ ಪರಿಗಣಿತ 194 ವರ್ಷದ ಜೋನಾಥನ್ ಸಹಿತ ಹಲವು ಬೃಹತ್ ಆಮೆಗಳಿಗೆ ಪ್ರಧಾನಿ ಮೋದಿ ಆಹಾರ ನೀಡಿದರು. ಉಭಯ ನಾಯಕರು ಬೊಟಾನಿಕಲ್ ಗಾರ್ಡನ್‌ನಲ್ಲಿ ಸ್ಮಾರಕ ಸಸಿಗಳನ್ನು ನೆಟ್ಟರು. ನಂತರ ಗಾರ್ಡನ್‌ನ ಸಂರಕ್ಷಣಾ ಸಿಬ್ಬಂದಿಯಿಂದ ಪ್ರಧಾನಿ ಮೋದಿ ಗಾರ್ಡನ್‌ನ ವಿಶೇಷತೆಗಳ ಬಗ್ಗೆ ಮಾಹಿತಿ ಪಡೆದರು. ವಿಮಾನ ನಿಲ್ದಾಣದಿಂದ ಬೊಟಾನಿಕಲ್ ಗಾರ್ಡನ್‌ಗೆ ಪಯಣಿಸುವಾಗ ಅಧ್ಯಕ್ಷ ಹರ್ಮಿನ್ ಜತೆಗೆ ತೆಗೆದ ಫೋಟೋವನ್ನು ಎಕ್ಸ್‌ನಲ್ಲಿ ಶೇರ್ ಮಾಡಿರುವ ಪ್ರಧಾನಿ ಮೋದಿ, ಸೀಶೆಲ್ಸ್ ಅಧ್ಯಕ್ಷ ಡಾ.ಪ್ಯಾಟ್ರಿಕ್ ಹರ್ಮಿನ್ ಜತೆ ಸೀಶೆಲ್ಸ್‌ನ ರಾಷ್ಟ್ರೀಯ ಬೊಟಾನಿಕಲ್ ಗಾರ್ಡನ್‌ಗೆ ಹೊರಟಿರುವೆ ಎಂದು ಎಕ್ಸ್‌ಗೆ ಪೋಸ್ಟ್ ಹಾಕಿದ್ದಾರೆ.

ಗಸ್ತು ನೌಕೆ, ಆಂಬುಲೆನ್ಸ್ ಹಸ್ತಾಂತರ: 100 ಕೋಟಿ ರೂ. ವೆಚ್ಚದಲ್ಲಿ ಸ್ವದೇಶಿ ನಿರ್ಮಿತ ವೇಗದ ಗಸ್ತು ನೌಕೆ ಲೆಸ್ವಾರ್, ಆಂಬುಲೆನ್ಸ್, ಲೇಸರ್ ರೇಡಿಯಲ್ ದೋಣಿಗಳು ಹಾಗೂ ಸೀಶೆಲ್ಸ್ ರಕ್ಷಣಾ ಪಡೆಗೆ ಉಪಯುಕ್ತ ವಾಹನಗಳನ್ನು ಸೀಶೆಲ್ಸ್ ಅಧ್ಯಕ್ಷ ಡಾ.ಪ್ಯಾಟ್ರಿಕ್ ಅವರಿಗೆ ಪ್ರಧಾನಿ ಮೋದಿ ಹಸ್ತಾಂತರಿಸಿದರು.

ಇವುಗಳಲ್ಲಿ ಒಂದು ಗಸ್ತು ನೌಕೆ, 10 ಆಂಬುಲೆನ್ಸ್, 10 ಟಾಟಾ ವಾಹನಗಳು ಹಾಗೂ 5 ಸೆಟ್ ದೋಣಿಗಳು ಸೇರಿವೆ. ಇದು ಭಾರತ ಮತ್ತು ಸೀಶೆಲ್ಸ್ ನಡುವಿನ ರಕ್ಷಣಾ ಮತ್ತು ಸಾಗರ ಸುರಕ್ಷತೆ ಪಾಲುದಾರಿಕೆಯಲ್ಲಿನ ಪ್ರಗತಿಯ ಮೈಲಿಗಲ್ಲು ಎಂದು ಮೋದಿ ಬಣ್ಣಿಸಿದ್ದಾರೆ. ಸೀಶೆಲ್ಸ್‌ನ ಹೆಮ್ಮೆಯ ನಂಬಿಕಸ್ಥ ಪಾಲುದಾರ ರಾಷ್ಟ್ರವಾಗಿ ಭಾರತ ನಿಂತಿದೆ ಎಂದಿದ್ದಾರೆ.

ಏನಿದು ಕೊಕೊ ಡೆ ಮೆರ್? ಕೊಕೊ ಡೆ ಮೆರ್(ಸಮುದ್ರ ತೆಂಗು), ಇದು ಸೀಶೆಲ್ಸ್ ದ್ವೀಪರಾಷ್ಟ್ರದ ಪ್ರಸ್ಲಿನ್ ಮತ್ತು ಕ್ಯೂರಿಯೂಸ್ ದ್ವೀಪಗಳಲ್ಲಿ ಮಾತ್ರ ಸ್ವಾಭಾವಿಕವಾಗಿ ಬೆಳೆಯುವ ವಿಶ್ವದ ಅತಿ ದೊಡ್ಡ ಕಾಯಿ ಹೊಂದಿರುವ ಅಪರೂಪದ ತಾಳೆ ಜಾತಿಯ ಮರವಾಗಿದೆ.

ಗಿಡ ನೆಟ್ಟು ಜಾಗತಿಕ ಸಂದೇಶ

ಸೀಶೆಲ್ಸ್ ಅಧ್ಯಕ್ಷ ಡಾ.ಪ್ಯಾಟ್ರಿಕ್ ಹರ್ಮಿನ್‌ರೊಂದಿಗೆ ರಾಷ್ಟ್ರೀಯ ಸಸ್ಯೋದ್ಯಾನದಲ್ಲಿ ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರಧಾನಿ ಮೋದಿ, ಕೊಕೊ ಡೆ ಮೆರ್ ಗಿಡವನ್ನು ನೆಡುವ ಮೂಲಕ ಜಾಗತಿಕ ಸಂದೇಶ ನೀಡಿದರು. ಸೀಶೆಲ್ಸ್‌ನ ವಿಶೇಷ ಗಿಡ ಕೊಕೊ ಡೆ ಮೆರ್ ಅನ್ನು ನೆಡಲಾಯಿತು. ವಿಶ್ವದ ಅತಿ ದೊಡ್ಡ ಬೀಜ ಮತ್ತು ಅತ್ಯಧಿಕ ಭಾರದ ಹಣ್ಣಿಗೆ ಹೆಸರಾದ ಈ ಮರವು ಸೀಶೆಲ್ಸ್ ರಾಷ್ಟ್ರ ಲಾಂಛನದಲ್ಲೂ ಸ್ಥಾನವನ್ನು ಪಡೆದಿದೆ. ಫ್ರಾನ್ಸ್, ಸೀಶೆಲ್ಸ್, ಎರಡೂ ತಮ್ಮ ಮುಂದಿನ ಪೀಳಿಗೆಗೆ ಪರಿಸರ ಸಂರಕ್ಷಣೆಯ ಸಂಕಲ್ಪ ಹೊಂದಿವೆ. ಪರಿಸರ ಸ್ನೇಹಿ ಹಸಿರು ವಿಶ್ವದ ನಿರ್ಮಾಣವನ್ನು ಸಾರುವ ಕಾರ್ಯಕ್ರಮ ಇದಾಗಿತ್ತು ಎಂದು ಮೋದಿ ಎಕ್ಸ್‌ನಲ್ಲಿ ಹೇಳಿದ್ದಾರೆ.

ಮಾಜಿ ಸಿಎಂ ಸಿದ್ದುಗೆ ಮೈಸೂರಿನಲ್ಲಿ ಅದ್ದೂರಿ ಸ್ವಾಗತ

• **ಮೈಸೂರು:** ತವರು ಜಿಲ್ಲಾ ಕೇಂದ್ರವಾದ ಮೈಸೂರಿಗೆ ಶನಿವಾರ ಸಂಜೆ ಆಗಮಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅವರ ಅಭಿಮಾನಿಗಳು, ಕಾಂಗ್ರೆಸ್‌ನ ಮುಖಂಡರು, ಕಾರ್ಯಕರ್ತರು ಅದ್ದೂರಿ ಸ್ವಾಗತ ನೀಡಿದರು. ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಾಗೂ ಎಐಸಿಸಿ ಕಾರ್ಯಕಾರಿ ಸಮಿತಿ ಸದಸ್ಯರಾಗಿ ನೇಮಕಗೊಂಡ ಬಳಿಕ ಇದೇ ಮೊದಲ ಬಾರಿಗೆ ತವರು ಜಿಲ್ಲಾ ಕೇಂದ್ರವಾದ ಮೈಸೂರಿಗೆ ಶನಿವಾರ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ಅದ್ದೂರಿ ಸ್ವಾಗತ ದೊರೆಯಿತು. ನಗರದ ಹೈವೇ ಸರ್ಕಲ್‌ನಲ್ಲಿ ಪಕ್ಷದಿಂದ ಅವರನ್ನು ಬರಮಾಡಿಕೊಳ್ಳಲಾಯಿತು.

ಪ್ರದೀಪ್ ವಿರುದ್ಧ ಆಕ್ರೋಶ

• **ಚಿಕ್ಕಬಳ್ಳಾಪುರ:** ನಗರದ ಕನ್ನಡ ಭವನದಲ್ಲಿ ನಡೆದ ಕೆಂಪೇಗೌಡ ಜಯಂತಿ ಆಚರಣೆ ವೇಳೆ ಶಾಸಕ ಪ್ರದೀಪ್ ಈಶ್ವರ್ ಅವರನ್ನು ವೇದಿಕೆಯಿಂದ ಆಚೆ ಕಳುಹಿಸುವಂತೆ ಕುಮಾರಸ್ವಾಮಿ, ಸಂಸದ ಡಾ.ಕೆ. ಸುಧಾಕರ್ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದ್ದರಿಂದ ಗದ್ದಲ ಗಲಾಟೆ ಕಾರಣವಾಯಿತು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಚಿಕ್ಕಬಳ್ಳಾಪುರ ಆದಿಚುಂಚನಗಿರಿ ಶಾಖಾ ಮಠದ ಸ್ವಾಮೀಜಿ ಮತ್ತು ಜಿಲ್ಲಾಧಿಕಾರಿ ಆಕ್ರೋಶಿತರನ್ನು ಸಮಾಧಾನಪಡಿಸುವ ಪ್ರಯತ್ನಿಸಿದರೂ ಪರಿಸ್ಥಿತಿ ಹತೋಟಿಗೆ ತರಲು ಸಾಧ್ಯವಾಗಲಿಲ್ಲ. ಕಾರ್ಯಕ್ರಮದಿಂದ ತಮ್ಮ ಬೆಂಬಲಿಗರೊಂದಿಗೆ ಹೊರನಡೆದ ಪ್ರದೀಪ್ ಈಶ್ವರ್ ವಿರೋಧಿಗಳಿಗೆ ತೊಡೆ ತಟ್ಟಿ ಪಂಥಾಹ್ವಾನ ನೀಡಿದ ಘಟನೆ ನಡೆಯಿತು. ಇದರಿಂದ ಕನ್ನಡ ಭವನದ ಮುಂದೆ ದೊಡ್ಡ ಹೈಡ್ರಾಮಾ ಸೃಷ್ಟಿಯಾಯಾಯಿತು. ಪ್ರದೀಪ್ ಈಶ್ವರ್ ತೋಳು ತಟ್ಟಿದ್ದರಿಂದ ಒಕ್ಕಲಿಗ ಯುವಕರು ಮತ್ತು ಪ್ರದೀಪ್ ಈಶ್ವರ್ ಬೆಂಬಲಿಗರ ನಡುವೆ ಗಲಾಟೆ ತಾರಕಕ್ಕೇರಿತು.

ಭೂ, ಲವ್ ಜಿಹಾದ್ ತಡೆಗೆ ಕಠಿಣ ಕ್ರಮ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಸಮಾನ ನಾಗರಿಕ ಸಂಹಿತೆ(ಏನಾಸಂ) ಜಾರಿಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ತ್ವರಿತ ಹೆಜ್ಜೆಯಿಡಲಿದೆ. ಇದರ ಬೆನ್ನಲ್ಲೇ ಭೂ ಜಿಹಾದ್, ಲವ್ ಜಿಹಾದ್ ಮತ್ತು ಬಲವಂತದ ಮತೀಯ ಮತಾಂತರ ಪಿಡುಗಿಗೆ ಕಡಿವಾಣ ಹಾಕಲು ಕಠಿಣ ಕಾಯಿದೆಗಳ ಅನುಷ್ಠಾನಿಸಲಿದೆ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಘೋಷಿಸಿದ್ದಾರೆ.



ತಾಳ್ಮೆ ಕಾಯ್ದುಕೊಳ್ಳಿ, ಸರಕಾರದಲ್ಲಿ ನಂಬಿಕೆ ಇಡಿ ಮತ್ತು ಇವುಗಳ ಅನುಷ್ಠಾನಕ್ಕೆ ನಮಗೆ ಸ್ವಲ್ಪ ಸಮಯ ಕೊಡಿ ಎಂದು ಸಿಎಂ ಅಧಿಕಾರಿ ಜನರನ್ನು ಕೋರಿದ್ದಾರೆ.

ಶೈಕ್ಷಣಿಕ ಸಂಸ್ಥೆಗಳಲ್ಲಿ ವಂದೇಮಾತರಂ ಗಾಯನ ಕಡ್ಡಾಯ ಗೊಳಿಸುವ ನಿರ್ಧಾರವನ್ನು ಉಲ್ಲೇಖಿಸಿ, ಪ್ರಸಕ್ತ ಹೆಚ್ಚಿನವರು ವಂದೇಮಾತರಂ ಹಾಡುವಾಗ ಎದ್ದು ನಿಲ್ಲುತ್ತಾರೆ. ಪ್ರತಿಯೊಬ್ಬರೂ ವಂದೇಮಾತರಂ ಹಾಡುತ್ತಿಲ್ಲ ಎಂದ ಅವರು, ಋಷಿ ಅರವಿಂದೊ, ನೇತಾಜಿ, ಶ್ಯಾಮ್ ಪ್ರಸಾದ್ ಮುಖರ್ಜಿಯವರು ಜನಿಸಿದ ಈ ಪುಣ್ಯಭೂಮಿಯಲ್ಲಿ ಯಾವುದೇ ರಾಷ್ಟ್ರ ವಿರೋಧಿ ಚಟುವಟಿಕೆಗಳಿಗೆ ಅವಕಾಶ ಕೊಡುವುದಿಲ್ಲ ಎಂದು ಘೋಷಿಸಿದರು.

ವಿಪಕ್ಷಗಳ ವಿರೋಧ: ಪ .ಬಂಗಾಳ ಸಮಾನ ನಾಗರಿಕ ಸಂಹಿತೆ ಮಸೂದೆ 2026 ಜಾರಿ ಪ್ರಕ್ರಿಯೆ ಸದ್ಯ ಪ್ರಗತಿಯಲ್ಲಿದೆ. ವಿಪಕ್ಷಗಳು ಯುಸಿಸಿ ಜಾರಿ ವಿರುದ್ಧ ಆಕ್ಷೇಪಿಸಿವೆ. ಯುಸಿಸಿ ಸಾಮಾಜಿಕ ವೈರುಧ್ಯಗಳನ್ನು ಗಾಢಗೊಳಿಸುವುದು ಎಂಬುದು ವಿಪಕ್ಷಗಳ ಆರೋಪವಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಶಂಕರ್ ಘೋಷ್ ತಿಳಿಸಿದ್ದಾರೆ.

ಮೋಸದ ಮತಾಂತರ ಪಿಡುಗಿಗೆ ಕಡಿವಾಣ: ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಬಂಗಾಳದಲ್ಲಿ ಯುಸಿಸಿ ಜಾರಿಗೊಳಿಸಲಾಗುವುದು ಎಂದು ಬಿಜೆಪಿ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿತ್ತು. ಮೋಸದಿಂದ, ಆಮಿಷಬಲ ಹಾಗೂ ಬಲವಂತವಾಗಿ ಮತಾಂತರಿಸುವ ಪಿಡುಗಿನ ಕಡಿವಾಣಕ್ಕೆ ಮತಾಂತರ ವಿರೋಧಿ ಕಾಯಿದೆ ಜಾರಿಗೊಳಿಸಲಾಗುವುದು ಮತ್ತು ಜೌಗು ಪ್ರದೇಶ, ಮೀಸಲು ಅರಣ್ಯ ಹಾಗೂ ಸರಕಾರಿ ಭೂಮಿಗಳ ಅಕ್ರಮ ಅತಿಕ್ರಮಣವನ್ನು 200 ದಿನಗಳೊಳಗೆ ತೆರವುಗೊಳಿಸಲಾಗುವುದು ಎಂದು ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿತ್ತು.

ಧಾರ್ಮಿಕ ಕಾರ್ಯಕ್ರಮಗಳ ಆಗರ ವಿದ್ಯಾಪೀಠ ಕಾರ್ನರ್ ಫೆಸ್ಟ್

• **ಬೆಂಗಳೂರು:** ನಗರದ ಕತ್ರಿಗುಪ್ಪೆ ರಸ್ತೆಯ ವಿದ್ಯಾಪೀಠ ವೃತ್ತದ ಬಳಿಯ ಗಜೇಂದ್ರ ವಿಲಾಸ್ ಹೋಟೆಲ್‌ನಲ್ಲಿ ಶನಿವಾರ ಆರಂಭವಾದ ವಿದ್ಯಾಪೀಠ ಕಾರ್ನರ್ ಫೆಸ್ಟ್–2026 ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳ ಸಂಯೋಜನೆಯಾಗಿ ಸಾರ್ವಜನಿಕರ ಗಮನ ಸೆಳೆಯಿತು. ಎರಡು ದಿನಗಳ ಉತ್ಸವದ ಮೊದಲ ದಿನ ವಿವಿಧ ಕಾರ್ಯಕ್ರಮಗಳಿಗೆ ನೂರಾರು ಜನ ಭಾಗವಹಿಸಿ ಯಶಸ್ವಿಗೊಳಿಸಿದರು.

ಉತ್ಸವವನ್ನು ಬಸವನಗುಡಿ ಶಾಸಕ ಎಲ್.ಎ. ರವಿ ಸುಬ್ರಹ್ಮಣ್ಯ ಉದ್ಘಾಟಿಸಿದರು. ಬಳಿಕ ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ಭಗವದ್ಗೀತೆ ಪಾರಾಯಣ, ಶ್ರೀನಿವಾಸ ಕಲ್ಯಾಣ, ಭಜನಾ ಕಾರ್ಯಕ್ರಮ ಸೇರಿದಂತೆ ಹಲವು ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ವಧು–ವರರ ಪರಿಚಯ ಸಮ್ಮೇಳನವೂ ಆಯೋಜನೆಯಾಗಿದ್ದು, ಹಿರಿಯ ಚಲನಚಿತ್ರ ನಟ ಶಂಕರ್ ಭಟ್ ಉದ್ಘಾಟಿಸಿದರು.

ಉತ್ಸವದಲ್ಲಿ ಮಹಿಳಾ ಉದ್ಯಮಿಗಳು ತಮ್ಮ ಕೈಯಿಂದ ತಯಾರಿಸಿದ ಹಾಗೂ ಗೃಹ ನಿರ್ಮಿತ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಸ್ಥಾಪಿಸಿದ್ದು, ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆಯಿತು. ನಗರದ ಮಿಷನ್ ರಸ್ತೆಯ ಎನ್‌ಯು ಆಸ್ಪತ್ರೆಯ ಸಹಯೋಗದಲ್ಲಿ ಉಚಿತ ಮೂಲ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಹಿರಿಯ ಉಪಾಧ್ಯಕ್ಷ ಕೆ.ಎನ್. ಛಾಯಾಪತಿ ಉದ್ಘಾಟಿಸಿದರು. ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯ ನಾಗರಿಕರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.



ಸಂಗೀತ ಕಾರ್ಯಕ್ರಮ ಇಂದು: ಈ ಉತ್ಸವವನ್ನು ಕರ್ನಾಟಕ ರಾಜ್ಯ ಡಿಜಿಟಲ್ ನ್ಯೂಸ್ ಮೀಡಿಯಾ ಅಸೋಸಿಯೇಷನ್ ಅಧ್ಯಕ್ಷ ಹನುಮೇಶ್ ಕೆ. ಯಾವಗಲ್ ಅವರ ನೇತೃತ್ವದಲ್ಲಿ ಆಯೋಜಿಸಲಾಗಿದೆ. ಉತ್ಸವದ ಮೊದಲ ದಿನ ಧಾರ್ಮಿಕ, ಆರೋಗ್ಯ ಹಾಗೂ ಸಾಮಾಜಿಕ ಚಟುವಟಿಕೆಗಳು ಜನರನ್ನು ಆಕರ್ಷಿಸಿದ್ದು, ಜೂ.28 ರಂದು ಸಂಗೀತ ಕಾರ್ಯಕ್ರಮ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 6 ಗಂಟೆಗೆ ಶ್ರುತಿ ಎಸ್. ಮತ್ತು ಶ್ವೇತ ಎಸ್. ಅವರಿಂದ ದೇವರನಾಮ ಗಾಯನದ ಮೂಲಕ ಸಮಾರೋಪ ಸಮಾರಂಭ ನಡೆಯಲಿದೆ.

ಅನೈತಿಕ ಮಾರ್ಗದಿಂದ ಕೈ ಅಡ್ಡಮತದಾನ: ಸಿ.ಟಿ.ರವಿ


• **ಬೆಂಗಳೂರು:** ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಅನೈತಿಕ ಮಾರ್ಗದಿಂದ ಅಡ್ಡಮತದಾನ ಮಾಡಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಆರೋಪಿಸಿದ್ದಾರೆ.



ವಿಧಾನಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನದ ಕುರಿತು ಆಂತರಿಕ ತನಿಖಾ ವರದಿಯನ್ನು ಶನಿವಾರ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಅವರಿಗೆ ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿ, ಅಡ್ಡಮತದಾನ ಆಗಿರುವುದು ಕಾಂಗ್ರೆಸ್ ಮೇಲಿನ ಅಭಿಮಾನಕ್ಕೆ ಅಂತ ಕಾಂಗ್ರೆಸ್ ನಾಯಕರು ಭಾವಿಸಬಾರದು. ಬೇರೆ ರಾಜ್ಯಗಳಲ್ಲಿ ಅಡ್ಡಮತದಾನ ಆದಾಗ ಕಾಂಗ್ರೆಸ್‌ನವರು ಪ್ರಜಾಪ್ರಭುತ್ವದ ಮೌಲ್ಯಗಳ ವಿರುದ್ಧ ಅಂತ ಉಪದೇಶ ಮಾಡ್ತಾರೆ. ಆದರೆ ಈಗ ಅಡ್ಡಮತದಾನದ ಮೂಲಕ ಪ್ರಜಾಪ್ರಭುತ್ವವನ್ನು ಅಪಮೌಲ್ಯಗೊಳಿಸಿದ್ದಾರೆ. ಅದ್ದರಿಂದ ಇನ್ನು ಮುಂದೆ ಅವರಿಗೆ ಅಡ್ಡ ಮತದಾನ ಆದರೆ ಪ್ರಶ್ನಿಸುವ ಯಾವುದೇ ನೈತಿಕತೆ ಇಲ್ಲ ಎಂದರು.

ಚುನಾವಣೆಯಲ್ಲಿ ಯಾವ ಎಚ್ಚರಿಕೆ ವಹಿಸಬೇಕಿತ್ತು ಯಾವ ಎಚ್ಚರಿಕೆ ವಹಿಸಿಲ್ಲ ಎಂಬುದು ವರದಿಯಲ್ಲಿ ಇದೆ. ಇದು ಆಂತರಿಕ ತನಿಖೆ ಆಗಿರುವುದರಿಂದ ಹೆಚ್ಚಿನ ಮಾಹಿತಿ ನೀಡಲಾಗುದು ಎಂದು ಹೇಳಿದರು. ಅಡ್ಡಮತದಾನದ ಕುರಿತು ಆಂತರಿಕ ತನಿಖೆ ಮಾಡಲು ನನ್ನೊಂದಿಗೆ ಮಾಜಿ ಸಚಿವ ಎನ್. ಮಹೇಶ್, ಶಾಸಕ ಮಹೇಶ್ ಟೆಂಗಿನಕಾಯಿ ಅವರು ಸೇರಿದ ಮೂರು ಜನರ ಸಮಿತಿ ಮಾಡಿದ್ದರು. ಅದಷ್ಟು ಬೇಗ ಆಂತರಿಕವಾಗಿ ತನಿಖೆ ನಡೆ ವರದಿ ನೀಡಿ ಎಂದು ರಾಜ್ಯಾಧ್ಯಕ್ಷರು ನಿರ್ದೇಶನ ನೀಡಿದ್ದರು. ಅಡ್ಡಮತದಾನ ಮಾಡಿದವರ ಬಗ್ಗೆ ಮಾಧ್ಯಮ ಮತ್ತು ಸಾರ್ವಜನಿಕ ವಲಯದಲ್ಲಿ ಅನುಮಾನ ಕಂಡು ಬಂದವರ ಪಟ್ಟಿ ಮಾಡಿ ಅವರೊಂದಿಗೆ ಚರ್ಚೆ ಮಾಡಿದ್ದೇವೆ. ಅಭ್ಯರ್ಥಿಗಳ ಜತೆಗೆ ಮಾತುಕತೆ ನಡೆಸಿ ಅಭಿಪ್ರಾಯ ಸಂಗ್ರಹಿಸಿದ್ದೇವೆ ಎಂದರು.

ಹಿಂದೂ ಸಾಮ್ರಾಜ್ಯ ದಿನೋತ್ಸವ



ರಾಷ್ಟ್ರೀಯ ಸ್ವಯಂಸೇವಕ ಸಂಘ (ಪುಟ್ಟೇನಹಳ್ಳಿ ನಗರ, ಜಯನಗರ ಭಾಗ) ವತಿಯಿಂದ ಆರ್‌ಬಿಐ ಬಡಾವಣೆ ಆಟದ ಮೈದಾನದಲ್ಲಿ ಆಯೋಜಿಸಿದ್ದ ಹಿಂದು ಸಾಮ್ರಾಜ್ಯ ದಿನೋತ್ಸವ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ನ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಬೌದ್ಧಿಕ್ ನೀಡಿದರು. ಈ ವೇಳೆ ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್. ಉಮಾಪತಿ, ಜಯನಗರ ಭಾಗ ಸಂಘಚಾಲಕ ನರಹರಿ ರಾವ್ ಇದ್ದರು.

ಬಸ್ ಪ್ರಯಾಣ ದರ ಏರಿಕೆಗೆ ಚಿಂತನೆ: ಬೈರತಿ ಸುರೇಶ್

• **ಬೆಂಗಳೂರು:** ದಿನದಿಂದ ದಿನಕ್ಕೆ ಪೆಟ್ರೋಲ್, ಡೀಸೆಲ್ ದರಗಳು ಹೆಚ್ಚಾಗುತ್ತಿವೆ. ಎಲ್ಲಾ ಸಾರಿಗೆ ನಿಗಮಗಳಿಗೆ ಸುಮಾರು 5 ಸಾವಿರ ಕೋಟಿ ರೂ. ನಷ್ಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬಸ್ ಪ್ರಯಾಣ ದರ ಏರಿಕೆ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದರು.



ಹೆಬ್ಬಾಳದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಸ್ ಪ್ರಯಾಣ ದರ ಏರಿಕೆ ಮಾಡುವ ಬಗ್ಗೆ ಸರ್ಕಾರಕ್ಕೆ ಇಲಾಖೆಯಿಂದ ಇದುವರೆಗೆ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ, ಮುಂದಿನ ಸಂಪುಟ ಸಭೆಗಳಲ್ಲಿ ಈ ಬಗ್ಗೆ ಪ್ರಸ್ತಾವನೆ ಮಂಡಿಸಲಾಗುತ್ತದೆ ಎಂದರು. ಸಾರಿಗೆ ದರ ಏರಿಕೆ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ. ಆದಾಗ್ಯೂ, ಜನ ಸಾಮಾನ್ಯರಿಗೆ ಹೊರೆ ಆಗದ ರೀತಿಯಲ್ಲಿ ಪ್ರಯಾಣ ದರ ಹೆಚ್ಚಳ ಮಾಡುವ ಚರ್ಚೆಗಳು ನಡೆದಿವೆ ಎಂದರು.

ಸುರಂಗ ರಸ್ತೆ ನಿರ್ಮಾಣಕ್ಕೆ ಭೂಮಿಪೂಜೆ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಹೆಬ್ಬಾಳ ಜಂಕ್ಷನ್‌ನಿಂದ ಯುಎಎಸ್ ಕ್ವಾಟರ್ಸ್ ವರೆಗಿನ ಸುರಂಗ ರಸ್ತೆ ನಿರ್ಮಾಣಕ್ಕೆ ಸಿಎಂ ಡಿ.ಕೆ. ಶಿವಕುಮಾರ್ ಭಾನುವಾರ ಬೆಳಗ್ಗೆ 9.30 ಕ್ಕೆ ಹೆಬ್ಬಾಳ ಜಂಕ್ಷನ್‌ನಲ್ಲಿ ಭೂಮಿಪೂಜೆ ನೆರವೇರಿಸಲಿದ್ದಾರೆ. ಮೆಕ್ರಿ ವೃತ್ತದಿಂದ ಹೆಬ್ಬಾಳ ಜಂಕ್ಷನ್ ವರೆಗೆ ಸಾಕಷ್ಟು ಸಂಚಾರ ದಟ್ಟಣೆ ಉಂಟಾಗುತ್ತಿತ್ತು. ಇದರಿಂದ ವಿಮಾನ ನಿಲ್ದಾಣ ಸೇರಿದಂತೆ ಅತ್ತಕಡೆಗೆ ಹೋಗುವುದು ಕಷ್ಟವಾಗುತ್ತಿತ್ತು. ಈ ಸಮಸ್ಯೆ ನಿವಾರಣೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಸುರಂಗ ರಸ್ತೆ ನಿರ್ಮಾಣಕ್ಕೆ ನಿರ್ಧರಿಸಿದೆ ಎಂದರು.

ಕಿರುಸುದ್ದಿ

ಜಿಲ್ಲಾ ನ್ಯಾ, ತಹಸೀಲ್ದಾರ್ ಕಚೇರಿಗೆ ಬಾಂಬ್ ಬೆದರಿಕೆ

• **ಬೀದರ್:** ನಗರದ ಜಿಲ್ಲಾ ನ್ಯಾಯಾಲಯ ಹಾಗೂ ತಹಸೀಲ್ದಾರ್ ಕಚೇರಿಗೆ ಶನಿವಾರ ಬಾಂಬ್ ಬೆದರಿಕೆಯ ಇಮೇಲ್ ಬಂದಿದೆ. ಜಿಲ್ಲಾ ಸತ್ರ ನ್ಯಾಯಾಲಯದ ಅಧಿಕೃತ ಇ-ಮೇಲ್ ವಿಳಾಸಕ್ಕೆ ಬಾಂಬ್ ಬೆದರಿಕೆ ಮೇಲ್ ಬಂದಿರುವ ವಿಷಯ ಗೊತ್ತಾಗುತ್ತಿದ್ದಂತೆ ನ್ಯಾಯಾಧೀಶರು, ವಕೀಲರು ಹಾಗೂ ಕಕ್ಷಿದಾರರು ಕಟ್ಟಡದಿಂದ ಹೊರಭಾಗಕ್ಕೆ ಬಂದರು. ತಕ್ಷಣವೇ ಮಾರ್ಕೆಟ್ ಠಾಣೆ ಪೊಲೀಸರಿಗೆ ತಿಳಿಸಲಾಯಿತು. ಶ್ವಾನ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದೊಂದಿಗೆ ಸ್ಥಳಕ್ಕೆ ಬಂದು ಪೊಲೀಸರು ಪರಿಶೀಲನೆ ನಡೆಸಿದರು. ನ್ಯಾಯಾಲಯಕ್ಕೆ ಹೊಂದಿಕೊಂಡಿರುವ ತಹಸೀಲ್ದಾರ್ ಕಚೇರಿಗೂ ಇಂಥಹುದ್ದೇ ಮೇಲ್ ಬಂದಿತು. ಅಲ್ಲೂ ಕೂಡ ಪರಿಶೀಲಿಸಿದಾಗ, ಇದೊಂದು ಸುಳ್ಳು ಬೆದರಿಕೆಯ ಇಮೇಲ್ ಎಂಬುದು ದೃಢಪಟ್ಟಿತು. ಕೆಲ ತಿಂಗಳ ಹಿಂದೆ ನಗರದ ಗುರುದ್ವಾರಕ್ಕೂ ಇದೇ ರೀತಿಯ ಮೇಲ್ ಬಂದಿತ್ತು.

ಭಾ.ಮಾ.ಹರೀಶ್‌ರವರ ಪುತ್ರ ಚಾರಣದ ವೇಳೆ ಸಾವು

• **ನಗರ(ಹೊಸನಗರ):** ರಾಜ್ಯದ ಪ್ರಸಿದ್ಧ ಪ್ರವಾಸಿ ತಾಣವಾದ ಹೊಸನಗರ ತಾಲೂಕಿನ ಕೊಡಚಾದ್ರಿ ಬೆಟ್ಟದಲ್ಲಿ ಬೆಂಗಳೂರಿನಿಂದ ಚಾರಣಕ್ಕಾಗಿ ಬಂದಿದ್ದ ತಂಡದಲ್ಲಿದ್ದ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷರು ಮತ್ತು ಸಿನಿಮಾ ನಿರ್ಮಾಪಕರಾದ ಭಾ.ಮಾ.ಹರೀಶ್‌ರವರ ಪುತ್ರ ಉಲ್ಲಾಸ್(28) ತೀವ್ರ ಹೃದಯಾಘಾತದಿಂದ ಸಾವನ್ನಪ್ಪಿರುವ ಹೃದಯ ವಿದ್ರಾವಕ ಘಟನೆ ಶನಿವಾರ ನಡೆದಿದೆ. ಬೆಳಗ್ಗೆ ಚಾರಣ ಹೊರಟಿದ್ದ 13 ಯುವಕರ ತಂಡ ಕೊಡಚಾದ್ರಿಯ ತುತ್ತ ತುದಿ ಸರ್ವಜ್ಞ ಪೀಠಕ್ಕೂ ತೆರಳಿ ವಾಪಾಸಾಗುವ ಮಾರ್ಗದ ಮಧ್ಯೆ ಉಲ್ಲಾಸ ಹೃದಯಾಘಾತದಿಂದ ಕುಸಿದಿದ್ದಾರೆ. ತಕ್ಷಣ ಉಲ್ಲಾಸ ಅವರನ್ನು ಬೆಟ್ಟದ ನಡುವಿನ ಕಿರಿದಾದ ಕಾಲು ಮಾರ್ಗದಲ್ಲಿ ಕೊಡಚಾದ್ರಿಯ ಪರ್ವತೇಶ್ವರ ದೇಗುಲದವರೆಗೂ ಹೊತ್ತು ತರಲಾಯಿತು. ನಂತರ ದುರ್ಗಮ ಮಾರ್ಗದಲ್ಲಿ ಜೀಪ್ ಮೂಲಕ ಕಟ್ಟಿಹೊಳೆಯವರೆಗೆ ತಂದು ಅಂಬುಲೆನ್ಸ್ ಮೂಲಕ ನಗರ ಸಂಯುಕ್ತ ಆಸ್ಪತ್ರೆಗೆ ಚಿಕಿತ್ಸೆಗೆ ತರಲಾಗಿತ್ತು. ಈ ಮಧ್ಯೆ ಪ್ರಥಮ ಚಿಕಿತ್ಸೆಗೆ ತೆರಳಲು ಸುಮಾರು 2 ತಾಸುಗಳಾಗಿದ್ದು, ಹೊಸನಗರ ತಾಲೂಕು ಆಸ್ಪತ್ರೆಗೆ ತೆರಳುವ ವೇಳೆಗೆ ಉಲ್ಲಾಸ್ ಸಾವನ್ನಪ್ಪಿದ್ದರು. ಮೃತ ಯುವಕನ ಮರಣೋತ್ತರ ಪರೀಕ್ಷೆಯು ಹೊಸನಗರ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ನಡೆದಿದೆ. ಈ ಕುರಿತು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಪೊಲೀಸರು ವಿಚಾರಣೆ ಕೈಗೊಂಡಿದ್ದಾರೆ.

ಅಪಘಾತದಲ್ಲಿ ಕುಟುಂಬದ ಐವರು ಸೇರಿ 6 ಮಂದಿ ಸಾವು

• **ಕೊಪ್ಪಳ:** ಜಿಲ್ಲೆಯ ಕುಕನೂರು ತಾಲೂಕಿನ ಭಾನಾಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಶನಿವಾರ ಬೆಳಗಿನ ಜಾವ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಐವರು ಮೃತಪಟ್ಟಿದ್ದಾರೆ. ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲೂಕಿನ ಕಬ್ಬಾರ್ ಗ್ರಾಮದ ನಿವಾಸಿಗಳು ಓಮಿನಿ ವಾಹನದಲ್ಲಿ ಮಂತ್ರಾಲಯಕ್ಕೆ ತೆರಳುತ್ತಿದ್ದ ವೇಳೆ, ಪಕ್ಕದ ರಸ್ತೆಯಲ್ಲಿ ಸಂಚರಿಸುತ್ತಿದ್ದ ಅಶೋಕ್ ಲೇಲ್ಯಾಂಡ್ ಲಾರಿ ನಿಯಂತ್ರಣ ತಪ್ಪಿ ಡಿವೈಡರ್ ದಾಟಿ ಎದುರು ಬರುತ್ತಿದ್ದ ಓಮಿನಿ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಈ ದುರಂತ ಸಂಭವಿಸಿದೆ. ಅಪಘಾತದಲ್ಲಿ ಹೇಮಾ (ಕೆಂಚಮ್ಮ) ಬಾಳೆಕಾಯಿ (35), ಅಮೃತಾ ಕೊಟ್ಯಾಳ್ (25), ಅವರ ಪುತ್ರ ಪ್ರಣವ್ (10), ರಮೇಶ್ ಬಳ್ಳಾರಿ (45) ಹಾಗೂ ಪ್ರವೀಣ್ ಬಾಳೆಕಾಯಿ (23) ಚಿನ್ಮಯ (30) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದಲ್ಲಿ ಉಳಿದ ಗಾಯಗೊಂಡ 5 ಮಂದಿ ಕೊಪ್ಪಳ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ನಾಡಪ್ರಭುವಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಮನ | 28 ವಿಧಾನಸಭಾ ಕ್ಷೇತ್ರಗಳಲ್ಲಿ 28 ವರ್ಷ ಕಾರ್ಯಕ್ರಮ

ದೂರದೃಷ್ಟಿಯ ನಾಡಪ್ರಭು ಕೆಂಪೇಗೌಡ

• **ದೇವನಹಳ್ಳಿ:** ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಕೇವಲ ವಿಧಾನಸೌಧ ಹೊರತಾಗಿ, ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳಲ್ಲಿ ಮುಂದಿನ 28 ವರ್ಷಗಳ ಕಾಲ ಒಂದೊಂದು ಕ್ಷೇತ್ರದಲ್ಲಿ ರಾಜ್ಯಮಟ್ಟದ ಕೆಂಪೇಗೌಡ ಜಯಂತಿ ಆಚರಣೆ ಮಾಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ಬೆಂಗಳೂರು ನಿರ್ಮಾತೃ, ಸರ್ವ ಜನಾಂಗದ ನಾಯಕ, ಬೆಂದಕಾಳೂರು ಕಟ್ಟಿದ ದೂರದೃಷ್ಟಿಯ ನಾಯಕ ಕೆಂಪೇಗೌಡರ 517ನೇ ಜಯಂತಿ ಅಂಗವಾಗಿ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ನಾಡಪ್ರಭು ಕೆಂಪೇ ಗೌಡರ 108 ಅಡಿ ಎತ್ತರದ ಕಂಚಿನ ಬೃಹತ್ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ 517ನೇ ಕೆಂಪೇಗೌಡ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ನಂತರ ಪ್ರತಿಮೆಯ ಪಕ್ಕದಲ್ಲಿ ನಿರ್ಮಾಣ ಮಾಡಿರುವ ಥೀಮ್ ಪಾರ್ಕ್ ಅನ್ನು ವೀಕ್ಷಿಸಿ ಮುಖ್ಯಮಂತ್ರಿಗಳು ಮಾತನಾಡಿ, ಇಂದು ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮ ಮಾಡುತ್ತಿದ್ದು, ಮುಂದಿನ ವರ್ಷ ಶಾಸಕರೊಂದಿಗೆ ಚರ್ಚಿಸಿ ಬ್ಯಾಟರಾಯನಪುರ, ಯಲಹಂಕ, ಕೆ.ಆರ್.ಪುರ ಅಥವಾ ಬೇರೆ ಕ್ಷೇತ್ರಗಳಲ್ಲಿ ಕೆಂಪೇಗೌಡರ ಜಯಂತಿಯ ರಾಜ್ಯಮಟ್ಟದ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಗುವುದು.

ಮುಂದಿನ ಸಾವಿರಾರು ವರ್ಷಗಳ ದೂರದೃಷ್ಟಿ ಇಟ್ಟುಕೊಂಡು ಕೋಟ್ಯಂತರ ಉದ್ಯೋಗ ಸೃಷ್ಟಿ ಹಾಗೂ ಜನರಿಗೆ ಜೀವನ ಕಟ್ಟಿಕೊಳ್ಳುವಂತೆ ಅಂದಿನ ಬೆಂದಕಾಳೂರು(ಬೆಂಗಳೂರು) ಅನ್ನು ವ್ಯವಸ್ಥಿತವಾಗಿ ನಿರ್ಮಿಸಿದ ದೂರದೃಷ್ಟಿಯ ಮಹಾಚೇತನ ಕೆಂಪೇಗೌಡರು ಎಂದು ಸಿಎಂ ನಾಡಪ್ರಭು ಕೆಂಪೇಗೌಡರನ್ನು ಬಣ್ಣಿಸಿದರು. ಕೆಂಪೇಗೌಡರ ಚಿಂತನೆ, ಆಚಾರ, ವಿಚಾರ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮ್ಯಾರಥಾನ್ ಓಟ, ಬೆಂಗಳೂರಿನಲ್ಲಿ 15 ಲಕ್ಷ ಸಸಿ ನೆಡುವ ಕಾರ್ಯಕ್ರಮ, ಮಾಗಡಿಯಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಕೆಂಪೇಗೌಡರ ಕೋಟೆ ಸಮಗ್ರ ಅಭಿವೃದ್ಧಿ ಕಾರ್ಯ ಹಮ್ಮಿಕೊಂಡಿದ್ದೇವೆ, ಮಾಗಡಿಯಲ್ಲಿರುವ ಕೆಂಪೇಗೌಡರ ಸಮಾಧಿ ಬಳಿ 10 ಎಕರೆ ಜಮೀನು ಸ್ವಾಧೀನ ಪ್ರಕ್ರಿಯೆ ಆರಂಭವಾಗಿದ್ದು, ಈಗಾಗಲೇ ಐದೂವರೆ ಎಕರೆ ಖರೀದಿ ಮಾಡಲಾಗಿದೆ? ಎಂದು ಮಾಹಿತಿ ನೀಡಿದರು.



> ರಾಜ್ಯಾದ್ಯಂತ ಎಲ್ಲಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹಾಗೂ ವಾರ್ಡ್ ಮಟ್ಟದಲ್ಲಿ ಈ ಕಾರ್ಯಕ್ರಮ ಆಚರಣೆಗೆ ಜಿಬಿಎ ವತಿಯಿಂದ ಆದೇಶ ಮಾಡಲಾಗಿದೆ. ಕೆಂಪೇಗೌಡರ ಆಚಾರ ವಿಚಾರ ಅಳವಡಿಸಿಕೊಂಡು ಬೆಂಗಳೂರಿನ ಅಭಿವೃದ್ಧಿಗೆ ಯೋಜನೆ ರೂಪಿಸಲಾಗುವುದು. ಬೆಂಗಳೂರಿಗೆ ಹೊಸ ರೂಪ ನೀಡಲು ಕ್ರಮ ಕೈಗೊಳ್ಳಲಾಗುವುದು.
> ■ **ಡಿ.ಕೆ.ಶಿವಕುಮಾರ್**, ಸಿಎಂ

ಕೆಂಪೇಗೌಡರು ಎಲ್ಲಾ ವರ್ಗದ ಆಸ್ತಿ

ಬೆಂಗಳೂರಿನಲ್ಲಿ 1.40 ಕೋಟಿ ಜನಸಂಖ್ಯೆ ಇದ್ದು, 1.30 ಕೋಟಿ ವಾಹನಗಳ ಸಂಖ್ಯೆ ಇವೆ, ನಾವು ಎಷ್ಟೇ ಮೆಟ್ರೋ, ಸಾರ್ವಜನಿಕ ಸಾರಿಗೆ ತಂದರೂ ಒಬ್ಬರು ಒಂದೊಂದು ವಾಹನ ಇಟ್ಟುಕೊಂಡಿದ್ದಾರೆ, ಮುಂದಿನ ಒಂದು ವರ್ಷದಲ್ಲಿ ವಿಮಾನ ನಿಲ್ದಾಣಕ್ಕೆ ಮೆಟ್ರೋ ಸಂಪರ್ಕ ಸಾಧಿಸಲು ಮುಂದಾಗಿದ್ದೇವೆ, ನಮ್ಮ ಮುಂದಿನ 2 ವರ್ಷಗಳ ಅವಧಿಯಲ್ಲಿ 500 ಕಿ.ಮೀ ಉದ್ದದ ಮೆಟ್ರೋ ವಿಸ್ತರಣೆಗೆ ಆಲೋಚನೆ ಮಾಡಿದ್ದು, ಕೃಷ್ಣ ಬೈರೇಗೌಡರು ಈ ಬಗ್ಗೆ ಚಿಂತನೆ ಮಾಡಲಿದ್ದಾರೆ. ಈ ಕಾರ್ಯಕ್ರಮ ಒಂದು ಜಾತಿಗೆ ಸೀಮಿತವಲ್ಲ. ಇದು ಕೆಂಪೇಗೌಡರ ದೂರದೃಷ್ಟಿ, ಆಚಾರ, ವಿಚಾರಗಳ, ನೀತಿಯನ್ನು ಬಿಂಬಿಸುವ ಮಹತ್ವದ ಕಾರ್ಯಕ್ರಮವಾಗಿದೆ. ಕೆಂಪೇಗೌಡರು ರಾಜ್ಯದ ಎಲ್ಲಾ ವರ್ಗದ ಆಸ್ತಿಯಾಗಿದ್ದಾರೆ ಎಂದು ಸಿಎಂ ತಿಳಿಸಿದರು.

ಪ್ರಾಧಿಕಾರದಿಂದ ಒಪ್ಪಿಗೆ: 108 ಅಡಿಯ ಈ ಕಂಚಿನ ಪ್ರತಿಮೆ ಬಳಿ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಹಸಿರು ರೂಪಿಸಲಾಗಿದೆ. ಇಲ್ಲಿನ ಕಾಮಗಾರಿ ಸಂಪೂರ್ಣ ಮುಗಿದ ಬಳಿಕ ಇದನ್ನು ಉದ್ಘಾಟನೆ ಮಾಡುತ್ತೇವೆ, ಈ 'ಕೆಂಪೇಗೌಡರ ಥೀಮ್ ಪಾರ್ಕ್' ಅನ್ನು ವಿಮಾನ ನಿಲ್ದಾಣ ಪ್ರಾಧಿಕಾರ ನಿರ್ವಹಣೆ ಮಾಡಲು ಸೂಚಿಸಿದ್ದೇನೆ. ಇದಕ್ಕೆ ಪ್ರಾಧಿಕಾರವೂ ಒಪ್ಪಿದ್ದು, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ, ಸಿರಾ ತಾಲೂಕಿನ ಸ್ಪಟಿಕಪುರಿಯ ನಂಜಾವಧೂತ ಸ್ವಾಮೀಜಿ ಹಾಗೂ ವಿಶ್ವ ಒಕ್ಕಲಿಗರ ಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದರು. ಕಾರ್ಯಕ್ರಮದ ವೇದಿಕೆಯಲ್ಲಿ ಸಚಿವರಾದ ಕೆ.ಎಚ್.ಮುನಿಯಪ್ಪ, ಕೃಷ್ಣ ಬೈರೇಗೌಡ, 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ.ನಾರಾಯಣಸ್ವಾಮಿ, ಶಾಸಕರಾದ ಪ್ರದೀಪ್ ಈಶ್ವರ, ರಿಜ್ವಾನ್ ಅರ್ಷದ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್, ನಗರ ಪೊಲೀಸ್ ಆಯುಕ್ತ ಸಿಮಂತ್‌ಕುಮಾರ್ ಸಿಂಗ್ ಇದ್ದರು.

15 ಲಕ್ಷ ಸಸಿ ನೆಟ್ಟು ದಾಖಲೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆ, ವಿವಿಧ ಸರ್ಕಾರಿ ಇಲಾಖೆ ಹಾಗೂ ಸಾರ್ವಜನಿಕ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ಬೆಂಗಳೂರು ನಗರ ಪುನಶ್ಚೇತನ ಮಿಷನ್ 2026-30ರ ಅಂಗವಾಗಿ, ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ 2026 ಶನಿವಾರ ನಗರದ ವಿವಿಧ ಭಾಗಗಳಲ್ಲಿ 12 ಗಂಟೆಗಳಲ್ಲಿ 15 ಲಕ್ಷ ಸ್ಥಳೀಯ ತಳಿ ಸಸಿಗಳನ್ನು ಸುಮಾರು 65 ಸಾವಿರಕ್ಕೂ ಹೆಚ್ಚು ಸ್ವಯಂ ಸೇವಕರು, ಎನ್‌ಜಿಓಗಳು ಸಸಿ ನೆಡುವ ಮೂಲಕ ಗಿನ್ನಿಸ್ ದಾಖಲೆ ಬರೆದಿದ್ದಾರೆ.



10 ಕಿಮಿ ಮ್ಯಾರಾಥಾನ್

ಈ ಕಾರ್ಯಕ್ರಮದ ಅಂಗವಾಗಿ ಬಿಡಿಎ ವತಿಯಿಂದ ಹಮ್ಮಿಕೊಳ್ಳಲಾದ ಕೆಂಪೇಗೌಡ ರನ್-2026 ಸಹ ಯಶಸ್ವಿಯಾಗಿ ನಡೆಯಿತು. 5 ಕಿ.ಮೀ. ಮತ್ತು 10 ಕಿ.ಮೀ. ಓಟಗಳಲ್ಲಿ ಸಾವಿರಾರು ಓಟಗಾರರು ಉತ್ಸಾಹದಿಂದ ಭಾಗವಹಿಸಿದರು. ಓಟವು ನಗರದ ಎಸ್.ಎಂ.ಕೃಷ್ಣ ರಸ್ತೆ, ಚಲ್ಲಘಟ್ಟ ಮೆಟ್ರೊ ನಿಲ್ದಾಣದಿಂದ ಆರಂಭಗೊಂಡು, ಅದೇ ಸ್ಥಳದಲ್ಲಿ ಸಮಾಪ್ತಿಗೊಂಡಿತು. ಈ ಬೃಹತ್ ಸಸಿ ನೆಡುವ ಅಭಿಯಾನದಲ್ಲಿ ಸಾವಿರಾರು ನಾಗರಿಕರು, ವಿದ್ಯಾರ್ಥಿಗಳು, ಸರ್ಕಾರಿ ಅಧಿಕಾರಿಗಳು, ನಿವಾಸಿಗಳ ಕಲ್ಯಾಣ ಸಂಘಗಳು, ಸ್ವಯಂಸೇವಾ ಸಂಸ್ಥೆಗಳು, ಕಾರ್ಪೊರೇಟ್ ಸ್ವಯಂಸೇವಕರು ಹಾಗೂ ಪರಿಸರ ಸಂಘಟನೆಗಳು ಉತ್ಸಾಹದಿಂದ ಪಾಲ್ಗೊಂಡು ಹಸಿರು ಹಾಗೂ ಸುಸ್ಥಿರ ಬೆಂಗಳೂರಿನ ನಿರ್ಮಾಣಕ್ಕೆ ಕೈಜೋಡಿಸಿದರು.

ಪ್ರಮುಖ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ

ಬತ್ತುತ್ತಿರುವ ಜೀವನದಿ ಕಾವೇರಿ

• **ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಮಳೆಯ ಕೊರತೆಯಿಂದಾಗಿ ಜೀವನದಿ ಕಾವೇರಿ ನದಿಯಲ್ಲಿ ನೀರಿನ ಹರಿವು ಸಂಪೂರ್ಣ ಕಡಿಮೆಯಾಗಿದ್ದು, ಭವಿಷ್ಯದಲ್ಲಿ ಬೆಂಗಳೂರು, ಮೈಸೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಆತಂಕ ತಲೆದೋರಿದೆ.

ಜಿಲ್ಲೆಗೆ ಮುಂಗಾರು ಕಾಲಿರಿಸಿದ್ದರೂ, ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಪರಿಣಾಮ ಕಾವೇರಿಯಲ್ಲಿ ಹರಿವು ಗಣನೀಯವಾಗಿ ಕುಸಿದಿದೆ ಸಾಮಾನ್ಯವಾಗಿ ಮಳೆಗಾಲದ ಆರಂಭದಲ್ಲೇ ತುಂಬಿ ಹರಿಯಬೇಕಿದ್ದ ನದಿ ಈಗ ಕಲ್ಲುಗಳ ನಡುವೆ ಸಣ್ಣ ಹರಿವಿಗೆ ಸೀಮಿತವಾಗಿದೆ. ಕೊಡಗು-ಮೈಸೂರು ಗಡಿಯ ಕೊಪ್ಪ ಸೇತುವೆ ಬಳಿ ನದಿಯ ನೀರಿನ ಮಟ್ಟ ತೀವ್ರವಾಗಿ ಕುಸಿ ದಿದೆ. ಈ ಸಮಯದಲ್ಲಿ ಸುಮಾರು 10 ರಿಂದ 15 ಅಡಿ ನೀರು ಹರಿಯುವ ಪ್ರದೇಶದಲ್ಲಿ ಈಗ ಕೇವಲ ಅರ್ಧದಿಂದ ಒಂದು ಅಡಿ ಮಟ್ಟದಲ್ಲಿ ಮಾತ್ರ ನೀರು ಕಾಣಿಸುತ್ತಿದೆ. ಜಲಮಾಪಕದಲ್ಲೂ ನೀರಿನ ಮಟ್ಟ ಶೂನ್ಯಕ್ಕೆ ತಲುಪಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸಿದೆ.

ಜಿಲ್ಲೆಯಲ್ಲಿ ಈಗಾಗಲೇ ಶೇ. 70ರಷ್ಟು ಮಳೆ ಕೊರತೆ ದಾಖಲಾಗಿರುವುದು ಜಲಮೂಲಗಳ ಮೇಲೆ ನೇರ ಪರಿಣಾಮ ಬೀರಿದೆ. ವಿಶೇಷವಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯ ಅಭಾವದಿಂದ ನದಿ ಹರಿವು ಕುಂಠಿತವಾಗಿದೆ.



ಇದರಿಂದಾಗಿ ಕಾವೇರಿ ನೀರನ್ನೇ ಅವಲಂಬಿ ಸಿರುವ ಬೆಂಗಳೂರು, ಮೈಸೂರು, ಮಂಡ್ಯ, ಕೊಡಗು ಸೇರಿದಂತೆ ಹಲವು ಪ್ರದೇಶಗಳಲ್ಲಿ ಭವಿಷ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಭೀತಿ ಎದುರಾಗಿದೆ. ಜೊತೆಗೆ ಕೃಷಿ ಚಟುವಟಿಕೆಗಳಿಗೂ ಹೊಡೆತ ಬೀಳುವ ಸಾಧ್ಯತೆ ಹೆಚ್ಚಿದೆ. ಕಾವೇರಿ ನದಿಯ ಪ್ರಮುಖ ಜಲಾಶಯಗಳಾದ ಕೆಆರ್ ಎಸ್ ಹಾಗೂ ಹಾರಂಗಿ ಜಲಾಶಯಗಳಲ್ಲೂ ನೀರಿನ ಸಂಗ್ರಹ ನಿರೀಕ್ಷಿತ ಮಟ್ಟ ತಲುಪದಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

ಜಿಲ್ಲಾ ನ್ಯಾಯಾಲಯ, ಕೇಂದ್ರೀಯ ವಿದ್ಯಾಲಯಕ್ಕೆ ಬಾಂಬ್ ಬೆದರಿಕೆ

• **ಮಡಿಕೇರಿ:** ನಗರದ ಹೊರವಲಯದಲ್ಲಿರುವ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯ ಮತ್ತು ಜಿಲ್ಲಾ ನ್ಯಾಯಾಲಯಕ್ಕೆ ಶನಿವಾರ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿದೆ. ಬೆದರಿಕೆ ಸಂದೇಶದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಮನೆಗೆ ಕಳುಹಿಸಲಾಗಿದೆ.

ನ್ಯಾಯಾಲಯದ ಒಳಗೆ ವಕೀಲರು ಮತ್ತು ಸಿಬ್ಬಂದಿ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದ್ದು, ಕಲಾಪಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಮಡಿಕೇರಿ ನ್ಯಾಯಾಲಯಕ್ಕೆ ಕಳೆದ ಫೆಬ್ರವರಿ 16ರಂದು ಮೊದಲ ಸಲ ಮತ್ತು ಜೂ.23 ರಂದು ಎರಡನೇ ಸಲ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಪರಿಶೀಲನೆ ಸಂದರ್ಭ ಹುಸಿ ಬಾಂಬ್ ಬೆದರಿಕೆ ಎಂದು ತಿಳಿದು ಬಂದಿತ್ತು. ಮಡಿಕೇರಿ ಕೋರ್ಟ್ ಸಮೀಪದಲ್ಲೇ ಪಿಎಂಶ್ರೀ ವಿದ್ಯಾಲಯವಿದ್ದು, ಈ ಬಾರಿ ಇಲ್ಲಿಗೂ ಕೂಡಾ ಬಾಂಬ್ ಬೆದರಿಕೆ ಸಂದೇಶ ಬಂದಿರುವುದು ವಿಶೇಷವಾಗಿದೆ. ಹಾಗೇಯೇ ಚಾಮರಾಜನಗರ ಜಿಲ್ಲಾ ನ್ಯಾಯಾಲಯಕ್ಕೂ ಬಾಂಬ್ ಬೆದರಿಕೆ ಬಂದಿದ್ದು, ತೀವ್ರ ತಪಾಸಣೆ ನಡೆಸಿದ್ದಾರೆ.

ಘಜ್ನಿ ಬಿಟ್ಟರೆ ದೇಶ ಲೂಟಿ ಮಾಡಿದ್ದು ಬಿಜೆಪಿ: ಹರಿಪ್ರಸಾದ್

• **ಬೆಂಗಳೂರು:** ಬಿಜೆಪಿಗರು ಇತಿಹಾಸ ಅಂದ್ರೆ, ಮಹಮ್ಮದ್ ಘಜ್ನಿ ಅಂತಾರೆ, ಲೂಟಿ ಹೊಡೆದವನು ಅಂತ ಪದೇ ಪದೇ ಹೇಳುತ್ತಾರೆ, ಆದರೆ ಘಜ್ನಿ ಬಿಟ್ಟರೆ ಬಿಜೆಪಿಯವರೇ ದೇಶವನ್ನು ಲೂಟಿ ಮಾಡಿದ್ದು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ್ ವಾಗ್ದಾಳಿ ನಡೆಸಿದರು.



ಕೆಪಿಸಿಸಿ ಕಚೇರಿಯಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಈ ಹಿಂದೆ ರಾಮಮಂದಿರ ಕಟ್ತೇವೆ ಅಂತ ಲೂಟಿ ಹೊಡೆದಿದ್ರು. ಅಂಬಾನಿ ಕೊಟ್ಟ 900 ಕೋಟಿ ದೇಣಿಗೆಗೂ ಲೆಕ್ಕ ಇಲ್ಲ. ಈಗ ಪೇಜಾವರ ಶ್ರೀಗಳು ಲೆಕ್ಕ ಕೇಳಿದ್ದಾರೆ ಎಂದು ತಿಳಿಸಿದರು.

ಪ್ರಹ್ಲಾದ್ ಜೋಶಿ ಅವರು ಕೇಂದ್ರದ ಮಂತ್ರಿ, ಅಪಾರ ಜ್ಞಾನ ಭಂಡಾರದ ಮೂರ್ತಿ, ನಾನ್ಯಾಕೆ ಅವರ ಮಾತು ಕೇಳಬೇಕು, ರಾಜ್ಯಕ್ಕೆ ಬೇಕಾದ ವಿಷಯಗಳ ಬಗ್ಗೆ ಸಂಸತ್ತಿನಲ್ಲಿ ಎಷ್ಟು ಮಾತನಾಡಿದ್ದಾರೆ, ಕಳಸಾ ಬಂಡೂರಿ, ಭದ್ರ ಯೋಜನೆ ಸೇರಿದಂತೆ ರಾಜ್ಯಕ್ಕೆ ಬರಬೇಕಾದ ಹಣದ ಬಗ್ಗೆ ಮಾತನಾಡಿದ್ದಾರಾ, ಬರೀ ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ನೀಡುವ ಹೇಳಿಕೆಗಳಿಂದ ನಾನೇನು ಕಲಿಬೇಕಾಗಿಲ್ಲ, ಆ ದುರ್ಗತಿ ಬಂದಿಲ್ಲ ಎಂದರು.

ಬಿಡದಿ ಟೌನ್‌ಶಿಪ್ ಕುರಿತು ಎಲ್ಲೋ ರಸ್ತೆಯಲ್ಲಿ ಕುಳಿತು ಮಾತನಾಡೋಕೆ ಆಗುತ್ತಾ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಪ್ರಶ್ನಿಸಿರುವ ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ್ ಅವರು, ಸಿಎಂ ವಿಧಾನಸೌಧಕ್ಕೆ ಚರ್ಚೆಗೆ ಬನ್ನಿ ಅಂದಿದ್ದಾರೆ, ನಾವು ರೈತರು, ಕಾರ್ಮಿಕರ ಜೊತೆ ಮಾತನಾಡುತ್ತೇವೆ. ಬನ್ನಿ ಪವಿತ್ರವಾದ ವಿಧಾನಸೌಧದಲ್ಲಿ ಮಾತನಾಡೋಣ ಎಂದು ಸವಾಲು ಹಾಕಿದರು.

ಬಿಡದಿ ಟೌನ್‌ಶಿಪ್ ವಿರೋಧಿಸಿ ಬೈರಮಂಗಲ ಗ್ರಾಮದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಚಿವ ಕಿಡಿ

ರೈತರ ಪರವಾದ ಹೋರಾಟಕ್ಕೆ ನಾನು ಬದ್ಧ: ಎಚ್‌ಡಿಕೆ

• **ರಾಮನಗರ:** ಬಿಡದಿ ಟೌನ್ ಶಿಪ್ ವಿಚಾರದಲ್ಲಿ ನನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಹುನ್ನಾರ ನಡೆಯುತ್ತಿದ್ದು, ಇದರಿಂದ ನಾನು ವಿಚಲಿತವಾಗುವುದಿಲ್ಲ, ರೈತರ ಪರವಾದ ಹೋರಾಟಕ್ಕೆ ನಾನು ಬದ್ಧವಾಗಿದ್ದು, ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಬಿಡದಿ ಟೌನ್‌ಶಿಪ್ ವಿರೋಧಿಸಿ ಬೈರಮಂಗಲ ಗ್ರಾಮದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಟೌನ್ ಶಿಪ್ ವಿಚಾರದಲ್ಲಿ ಸರ್ಕಾರ ಬಂಡತನದಿಂದ ನಡೆದುಕೊಂಡರೆ ಏನು ಮಾಡಬೇಕು ಎಂಬುದು ಗೊತ್ತಿದೆ. ಯಾವುದೇ ಆಮಿಷಗಳಿಗೆ ಒಳಗಾಗದೆ ರೈತರು ನಡೆಸುವ ಹೋರಾಟಕ್ಕೆ ನಾನು ಬೆನ್ನೆಲುಬಾಗಿ ನಿಲ್ಲುತ್ತೇನೆ ಎಂದು ತಿಳಿಸಿದರು.

ನನ್ನ ಏಳಿಗೆ ಸಹಿಸದೆ ನನ್ನ ವಿರುದ್ಧ ನಾಲ್ಕು ದೂರುಗಳನ್ನು ದಾಖಲಿಸಿದರು. ಎರಡು ಬಾರಿ ಸಿಎಂ ಆಗಿ ಕೆಲಸ ಮಾಡಿದ ನನ್ನ ವಿರುದ್ಧ ಯಾವುದೇ ಹಗರಣಗಳಿದ್ದರೂ ಅದನ್ನು ಹೊರಗೆ ತರಲಿ. ನನ್ನನ್ನು ಜೈಲಿಗೆ ಕಳುಹಿಸುತ್ತೇನೆ ಎನ್ನುತ್ತಿರುವವರು, ಮೊದಲು ಅವರೇಕೆ ಜೈಲಿಗೆ ಹೋದರು ಎಂಬುದನ್ನು ಜನರಿಗೆ ತಿಳಿಸಲಿ ಎಂದು ಸವಾಲು ಹಾಕಿದರು. ಕೆಂಪೇಗೌಡರ ಜಯಂತಿ ಹೆಸರಿನಲ್ಲಿ ಹದಿನೈದು ಲಕ್ಷ ಗಿಡ ನೆಡುವುದರಲ್ಲೂ ಕೋಟಿಗಟ್ಟಲೇ ಲೂಟಿ ಹೊಡೆಯಲು ಹೊರಟಿದ್ದಾರೆ.



> ನಾನು ಸಿಎಂ ಆಗಿದ್ದಾಗ ರೈತರ ಬದುಕಿಗೆ ಕಾಯಕಲ್ಪ ಮಾಡಲು, ಬೆಂಗಳೂರಿನ ಸಮಸ್ಯೆ ನಿವಾರಣೆ ಕೆಲಸ ಮಾಡಿದೆ. ಗ್ರಾಮೀಣ ಭಾಗದ ಜನರ ಸಮಸ್ಯೆ ಆಲಿಸಲು ಗ್ರಾಮವಾಸ್ತವ್ಯ ಪ್ರಾರಂಭ ಮಾಡಿದ್ದು, ಇಂದಿಗೂ ಜನರ ಮನಸ್ಸಿನಲ್ಲಿ ಉಳಿದಿದೆ.
> ■ **ಎಚ್.ಡಿ.ಕುಮಾರಸ್ವಾಮಿ**, ಕೇಂದ್ರ ಸಚಿವ

ನಕಲಿ ದಾಖಲೆ ಸೃಷ್ಟಿ ಮಾಡಿ ಕಾಲೇಜು ಕಟ್ಟಿಸಲು ಅಮಾಯಕರ ಭೂಮಿ ಲೂಟಿ ಹೊಡೆದಿದ್ದಾರೆ. ಇವರಂತೆ ನಮ್ಮ ಕುಟುಂಬ ಬದುಕುತ್ತಿಲ್ಲ ಎಂದು ತಿಳಿಸಿದರು.

ಈಗಲ್ಟನ್ ರೆಸಾರ್ಟ್‌ನವರು ಬಳಕೆ ಮಾಡಿಕೊಂಡಿರುವ ಸರ್ಕಾರಿ ಖರಾಬ್ ಭೂಮಿಗೆ 12 ಕೋಟಿ ಹಣ ನಿಗಧಿಪಡಿಸಿರುವ ಸರ್ಕಾರ ಅದರ ಪಕ್ಕದಲ್ಲಿಯೇ ಇರುವ ರೈತರ ಭೂಮಿಗೆ ಎರಡು ಕೋಟಿ ನಿಗದಿಪಡಿಸಿರುವುದನ್ನು ನೋಡಿದರೆ ಎಷ್ಟು ಹಣ ಲೂಟಿ ಹೊಡೆಯಲು ಮುಂದಾಗಿದ್ದಾರೆ ಎಂಬುದು ತಿಳಿಯುತ್ತದೆ ಎಂದು ತಿಳಿಸಿದರು.

ಬೈರಮಂಗಲ ಗ್ರಾಮದ ರೈತರ ಹೋರಾಟ ರಾಜ್ಯದ ಇಂದಿನ ಪರಿಸ್ಥಿತಿಯಲ್ಲಿ ಹೊಸ ಆಯಾಮ ಸೃಷ್ಟಿಸಲಿದೆ. ಜನರ ಆಶೀರ್ವಾದದಿಂದ ಐದು ಬಾರಿ ಮರುಜೀವ ಮರುಹುಟ್ಟು ಪಡೆದಿದ್ದೇನೆ ಎಂದು ತಿಳಿಸಿದರು. ಕಳೆದ ನಲ್ವತ್ತು ವರ್ಷಗಳ ಹಿಂದೆ ದೇವೇಗೌಡರ ಒತ್ತಾಯದಿಂದ ಕೇತುಗಾನಹಳ್ಳಿಯಲ್ಲಿ ಜಮೀನು ಖರೀದಿ ಮಾಡಿದೆ.

ನನ್ನ ಜಮೀನಿನಲ್ಲಿ ತೆಂಗು, ಮಾವು ಬೆಳೆದಿದ್ದೇನೆಯೇ ಹೊರತು ಜಮೀನಿನಲ್ಲಿ ರಿಯಲ್ ಎಸ್ಟೇಟ್ ಮಾಡಿಲ್ಲ. ಇಂದು ರೈತರನ್ನು ಲೂಟಿ ಮಾಡಿ ರಿಯಲ್ ಎಸ್ಟೇಟ್ ಮಾಡಲು ಹೊರಟಿರುವವರು ಉತ್ತರ ಕೊಡಬೇಕು ಎಂದರು.

ಮೂವತ್ತು ವರ್ಷ ಕಳೆದರು ನೈಸ್ ರಸ್ತೆಗೆ ಭೂಮಿ ಕಳೆದುಕೊಂಡ ನಾಲ್ಕು ಸಾವಿರ ರೈತರಿಗೆ ಪರ್ಯಾಯ ಭೂಮಿ ನೀಡಿಲ್ಲ. ಹಲವು ಜನ ಮರಣವಾಗಿದ್ದಾರೆ. ಈಗ ಬಿಡದಿಯಲ್ಲಿ ರೈತರನ್ನು ಒಕ್ಕಲೆಬ್ಬಿಸಲು ಹೊರಟಿದ್ದಾರೆ. ನಾನು ಸಿಎಂ ಆಗಿದ್ದಾಗ ಬಿಡದಿ ರೈತರಿಗೆ ನೋವು ನೀಡಿ ಟೌನ್ ಷಿಪ್ ನಿರ್ಮಾಣ ಮಾಡುವುದಿಲ್ಲ ಎಂದು ನೀಡಿರುವ ಹೇಳಿಕೆ ದಾಖಲೆಯಲ್ಲಿದೆ. ಆದರೂ ಸಿಎಂ ಅವರು ನನ್ನ ವಿರುದ್ಧ ನೀಡುತ್ತಿರುವ ಹೇಳಿಕೆ ಬೇಸರ ತರಿಸಿದೆ ಎಂದರು.

ರಾಜ್ಯದ ಯಾವುದೆ ಭಾಗದ ರೈತರು ತಮ್ಮ ಭೂಮಿ ಕಳೆದುಕೊಂಡು ಬೀದಿಗೆ ಬರಬೇಡಿ, ರೈತರ ಕಣ್ಣಲ್ಲಿ ನೀರು ತರಿಸುವ ಕೆಲಸ ಮಾಡಿದರೆ ನನ್ನ ಮಗನಿಗೆ ಒಳ್ಳೆಯದಾಗಲ್ಲ ಎಂದ ಅವರು ಸಿಎಂ ಅವರು ಟೌನ್ ಶಿಪ್ ಬಗ್ಗೆ ಚರ್ಚಿಸಲು ವಿಧಾನಸೌಧಕ್ಕೆ ಕರೆದರು. ಆದರೆ ನಾನು ರೈತರ ಸಮ್ಮುಖದಲ್ಲಿಯೇ ತೀರ್ಮಾನಕ್ಕೆ ಆಹ್ವಾನ ಕೊಟ್ಟೆ. ಆದರೆ ಅವರು ಬರಲಿಲ್ಲ ಎಂದರು.

ಟೌನ್‌ಶಿಪ್ ವಿಚಾರ ರೈತರಿಗೆ ತೊಂದರೆ ಸಲ್ಲ: ಸೋಮಣ್ಣ

• **ದಾವಣಗೆರೆ:** ಬಿಡದಿ ಟೌನ್‌ಶಿಪ್ ವಿಚಾರವಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳುವುದರಲ್ಲಿ ಅರ್ಥವಿದೆ. ಅಭಿವೃದ್ಧಿ ಹಾಗೂ ಟೌನ್‌ಶಿಪ್ ನಿರ್ಮಾಣದ ಹೆಸರಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ರೈತರಿಗೆ ತೊಂದರೆ ಕೊಡಬಾರದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.



ಶನಿವಾರ ಸುದ್ದಿಗಾರರ ಜತೆ ಮಾತನಾಡಿ, ಈ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಠಮಾರಿ ಧೋರಣೆ ಕೈಬಿಟ್ಟು ಜನರ ಭಾವನೆಗಳಿಗೆ ಸ್ಪಂದಿಸಬೇಕು. ಅಲ್ಲಿಂದ ಒಂದು 10 ಕಿಲೋಮೀಟರ್ ಮುಂದಕ್ಕೆ ಹೋದರೆ ಜಾಗ ಸಿಗುತ್ತದೆ. ಈಗಾಗಲೇ ಆ ಭಾಗದಲ್ಲಿ ಸಾಕಷ್ಟು ಕಾರ್ಖಾನೆ, ಟೌನ್ ಶಿಪ್‌ಗಳು ಬಂದಿವೆ. ರಾಜ್ಯದ ಮುಖ್ಯಮಂತ್ರಿಯಾಗಿ ನನ್ನದೇ ನಡೀಬೇಕು ಎಂಬ ಹಠಕ್ಕೆ ಬೀಳಬೇಡಿ ಎಂದು ಅವರು ಸಲಹೆ ನೀಡಿದರು.

ನಾನು ಕೂಡ ವಸತಿ ಸಚಿವನಾಗಿ 10-12 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಹಿಂದೆ ನಾವು ಸೂರ್ಯನಗರದ 1, 2, 3 ಮತ್ತು 4ನೇ ಹಂತದ ಟೌನ್ ಶಿಪ್ ಮಾಡಿದ್ದೆವು. 4ನೇ ಹಂತದಲ್ಲಿ ಸುಮಾರು 2 ಸಾವಿರ ಎಕರೆ ಭೂಮಿಯನ್ನು ವಶಪಡಿಸಿಕೊಂಡಾಗಲೂ ಒಬ್ಬನೇ ಒಬ್ಬ ರೈತ ರಸ್ತೆಗಿಳಿದು ಪ್ರತಿಭಟಿಸದಂತೆ ಯೋಜನೆ ರೂಪಿಸಿ ಅನುಷ್ಠಾನಗೊಳಿಸಿದ್ದೆವು. ಅಂದು ನಾವು ಮಾಡಿದ ಯೋಜನೆಯ ಫಲಾನುಭವಿಗಳು ನೀವಾಗಿದ್ದೀರಿ. ಒಮ್ಮೆ ಆನೇಕಲ್ ತಾಲೂಕಿನ ಜಿಗಣಿ, ಸರ್ಜಾಪುರ ಭಾಗಕ್ಕೆ ಭೇಟಿ ನೀಡಿ, ನಾವು ಮಾಡಿರುವ ಸೂರ್ಯನಗರ 4ನೇ ಹಂತದ ಪ್ರಧಾನಮಂತ್ರಿಗಳ ಟೌನ್ ಶಿಪ್ ಅನ್ನು ವೀಕ್ಷಿಸಿ ಬನ್ನಿ ಎಂದರು.



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಹಗಲಿರುಳೂ ಚಿಂತಿಸಬೇಕಾದುದು ಯಾವುದು?

ಭಗವಚ್ಚರಣವೇ ಹೊರತು ಸಂಸಾರವಲ್ಲ.

ಚಿಂತಿಸಲೇಬೇಕಾದದ್ದು ಯಾವುದು ಎಂದರೆ ಅದು ಭಗವಂತನ ಪಾದಾರವಿಂದ. ಯಾವುದನ್ನು ಚಿಂತಿಸಬೇಕಾಗಿದೆಯೋ ಅದನ್ನು ಚಿಂತಿಸದೆ, ಯಾವುದನ್ನು ಚಿಂತಿಸಿದರೆ ಸಮಯವೂ, ಆಯುಷ್ಯವೂ ವ್ಯರ್ಥವೋ ಅಂತಹ ವಿಷಯವನ್ನು ಚಿಂತಿಸುವ ಪ್ರವೃತ್ತಿಗೆ ಉತ್ತರರೂಪವಾಗಿ ಇಲ್ಲಿ ವಿಷಯವನ್ನು ನೀಡಲಾಗಿದೆ. ಸಂಸಾರದ ಬಗ್ಗೆ ನಾವು ಪ್ರತಿನಿತ್ಯ ಪ್ರತಿಕ್ಷಣವೂ ಯೋಚಿಸುತ್ತಿದ್ದೇವೆ. ಇದರ ಮಧ್ಯದಲ್ಲಿ ನಮಗೆ ಯಾವುದನ್ನು ಚಿಂತಿಸಬೇಕು ಎಂಬುದರ ಬಗ್ಗೆ ಸ್ವಲ್ಪವೂ ನಿಗಾ ಇಲ್ಲದಿರುವ ಪರಿಸ್ಥಿತಿ ಬಂದಿದೆ. ಅಷ್ಟರಮಟ್ಟಿಗೆ ನಮ್ಮ ಚಿಂತನೆಯ ದಿಕ್ಕು ಬದಲಾಗಿದೆ. ಆದರೆ ವಸ್ತುತಃ ನಾವು ಯಾವ ದಿಕ್ಕಿನ ಕಡೆ ನಿರಂತರವಾಗಿ ಚಿಂತಿಸಬೇಕಾಗಿದೆ ಎಂಬುದನ್ನು ಇಲ್ಲಿ ಹೇಳಲಾಗಿದೆ. ಹೀಗೊಂದು ಮಾತು ಬರುತ್ತದೆ-'ಸಂಸಾರೇ ಕಿಂ ಸಾರಂ? ಕಂಸಾರೇಃ ಪದಕಮಲಂ ಸಾರಂ' ಎಂಬುದಾಗಿ. ಈ ಸಂಸಾರದಲ್ಲಿ ಒಂದು ಸಾರ ಎಂಬುದಾಗಿ ಬರಬೇಕಾದರೆ ಅದಕ್ಕೆ ಕಂಸಾರಿಯದ ಭಗವಾನ್ ಶ್ರೀ ಕೃಷ್ಣನ ಅನವರತ ಚಿಂತನೆಯೇ ಇದಕ್ಕೆ ಸಾರ ಎಂಬುದಾಗಿ ಈ ಮಾತು ತಿಳಿಸುತ್ತದೆ. ನಮ್ಮ ಚಿಂತನೆಯು ಕೇವಲ ಸಂಸಾರದಲ್ಲೇ ಇದೆ ಎಂದರ್ಥ.

ಸಂಸಾರ ಎಂದರೇನು? ಸಂಸಾರದ ಬಗ್ಗೆ ಚಿಂತಿಸುವುದು ತಪ್ಪೇ? ಇತ್ಯಾದಿ ಪ್ರಶ್ನೆಗಳು ಬರಬಹುದು. ಸಂಸಾರದಲ್ಲಿ ಇದ್ದು ಸಂಸಾರವನ್ನು ದಾಟುವ ಬಗ್ಗೆ ಚಿಂತಿಸುವ ವಿಷಯ ಇಲ್ಲಿದೆ. ಆದರೆ ನಾವಿಂದು ಸಂಸಾರವನ್ನು ಮಾತ್ರ ಚಿಂತಿಸುತ್ತಿದ್ದೇವೆ. ಸಂಸಾರದಲ್ಲಿ ಇದ್ದು ಸಂಸಾರವನ್ನು ದಾಟುವ, ಸಂಸಾರದ ಸಾರ್ಥಕತೆಯನ್ನು ಪಡೆಯುವ ಬಗ್ಗೆ ನಮ್ಮ ಚಿಂತನೆ ಇಲ್ಲದಾಗಿದೆ. ಮಡದಿ ಮಕ್ಕಳ ಚಿಂತೆ ಬಿಡು ಮನವೇ! ಕಡೆಗೆ ಸತ್ಯನು ನೀನಲ್ಲವೇ? ಪುರಂದರ ವಿಠಲ ನಿನ್ನೊಳಿದು ನಂಬಿದರೆ, ಸಿರಿ ಸಂಪತ್ತುಗಳೆಲ್ಲವು ಬರುವವು, ಕರವ ಕೂಡಿಸಿ, ನಿತ್ಯ ಹರಿನಾಮವ ಪಾಡು, ನಿರ್ಮಲ ಮುಕ್ತಿಯು ದೊರೆಯುವುದು ಮನವೇ ಎಂಬ ಪುರಂದರ ದಾಸರ ಕೃತಿ ನಮಗೆ ಇದನ್ನು ಎಚ್ಚರಿಸುತ್ತದೆ. ಸಂಸಾರ ಎಂದರೆ ಗಂಡನಿಗೆ ಹೆಂಡತಿಯ ಚಿಂತೆ, ಹೆಂಡತಿಗೆ ಗಂಡನ ಚಿಂತೆ, ಗಂಡಹೆಂಡಂದಿರಿಗೆ ಮಕ್ಕಳ ಚಿಂತೆ. ಅಜ್ಜ ಅಜ್ಜಿಯರಿಗೆ ಮಕ್ಕಳು ಮೊಮ್ಮಕ್ಕಳ ಚಿಂತೆ. ಹೀಗೆ ಎಲ್ಲ ಕಡೆಗೆ ಚಿಂತೆಯೇ ಆವರಿಸಿದೆ. ಇಷ್ಟನ್ನು ಸೇರಿ ಸಂಸಾರ ಎಂಬುದಾಗಿ ಕರೆಯುವಂತಾಗಿದೆ. ತನ್ನ ಜೀವಿತದಲ್ಲಿ ಇವರ ಬಗ್ಗೆಯೇ ಯೋಚಿಸುತ್ತಾ, ತನ್ನ ಜೀವನವನ್ನು ಇವರಿಗಾಗಿಯೇ ಕಳೆದು, ಜೀವನವನ್ನು ಒಂದು ದಿನ ಮುಗಿಸುವ ಜನರೂ ಇದ್ದಾರೆ. ಅಂತಹವರಿಗಾಗಿ ಈ ಒಂದು ಸೂಚನೆ ಇಲ್ಲಿದೆ. ಪುರಂದರ ವಿಠಲನನ್ನು ನಂಬಿ, ವಿಶ್ವಾಸದಿಂದ ಅವನನ್ನು ಭಾವಿಸಿದರೆ ಅವನೇ ಎಲ್ಲವನ್ನು ಕೊಡಬಲ್ಲ, ಕೈಗೆತ್ತಿ ತುತ್ತು ಈಯಬಲ್ಲ. ಹೀಗಿರುವಾಗ ನಾವೇ ಸಂಸಾರವನ್ನು ತೂಗಿಸುತ್ತೇವೆ; ಸಂಸಾರದ ಭಾರವನ್ನು ನಾವೇ ಹೊರುತ್ತೇವೆ ಎಂಬ ಅಹಂಕಾರ ಬೇಡ. ಹಾಗಾದಾಗ ಈ ಸಂಸಾರ ನಮಗೆ ಭಾರವಾಗುತ್ತದೆ. ಅದೇ ಹೊಣೆಗಾರಿಕೆಯನ್ನು ಅವನಿಗೆ ಒಪ್ಪಿಸಿದರೆ ಸಂಸಾರವು ನಮಗೆ ಸಾರವಾಗಿ, ಅಂದರೆ ನಮಗೆ ಅದು ಅತ್ಯಂತ ಆಪ್ಯಾಯಮಾನವಾಗಿ ಕಾಣುತ್ತದೆ ಎಂಬ ಅಭಿಪ್ರಾಯ ಇಲ್ಲಿದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಸಹದೇವನ ದಕ್ಷಿಣ ದಿಗ್ವಿಜಯ

ಕಿಷ್ಕಿಂಧೆಯಲ್ಲಿ ವಾನರರಾಜರಾದ ಮೈಂದ-ದ್ವಿವಿದರಿತ್ತ ರತ್ನಗಳನ್ನು ಸ್ವೀಕರಿಸಿದ ಸಹದೇವನು, ಮಾಹಿಷ್ಮತಿಯ ನೀಲನನ್ನು ಎದುರಿಸಿದನು. ಅಲ್ಲಿ ಅವರಿಬ್ಬರಿಗೆ ಭಯಂಕರವಾದ ಯುದ್ಧವೇ ಆಯಿತು. ನೋಡುತ್ತಿದ್ದಂತೆಯೇ ಅಲ್ಲಿ ಆಶ್ಚರ್ಯವೊಂದು ಘಟಿಸಿತು. ಸಹದೇವನ ಕಡೆಯ ರಥ-ಗಜ-ತುರಗಗಳೂ ಸೈನಿಕರೂ ಅವರ ಕವಚಗಳೂ ಇದ್ದಕ್ಕಿದ್ದಂತೆ ಬೆಂಕಿಯಿಂದ ಉರಿಯಲಾರಂಭಿಸಿದವು!

ಅದಕ್ಕೊಂದು ಹಿನ್ನೆಲೆಯಿದೆ. ಈ ನೀಲಮಹಾರಾಜನಿಂದ ಅಗ್ನಿದೇವನಿಗೆ ಹಿಂದೊಂದು ಉಪಕಾರವಾಗಿತ್ತು. ಆ ಕಾರಣ, ಅಗ್ನಿಯು ನೀಲನ ಸೈನ್ಯಕ್ಕೆ ಅಭಯ ಪ್ರದಾನವನ್ನು ಮಾಡಿದ್ದನು. ಇದನ್ನರಿತಿದ್ದ ಯಾವುದೇ ಅರಸರೂ ನೀಲರಾಜನ ಮೇಲೆ ದಂಡೆತ್ತಿಹೋಗುತ್ತಿರಲಿಲ್ಲ. ತನ್ನ ಸೈನ್ಯವೆಲ್ಲಾ ಅಗ್ನಿಯಿಂದ ಸುತ್ತುವರಿಯಲ್ಪಡುತ್ತಿರುವುದನ್ನು ಸಹದೇವನೂ ಕಂಡನು. ಆದರೆ ಅದರಿಂದಾಗಿ ಕಂಪಿತನಾಗಲಿಲ್ಲ. ಬದಲಾಗಿ ಆಚಮನವನ್ನು ಮಾಡಿ ಶುದ್ಧನಾಗಿ, ಅಗ್ನಿದೇವಸ್ತುತಿಯನ್ನು ಮಾಡಿದನು. ಜೊತೆಗೆ, ಹೀಗೆ ಬಿನ್ನವಿಸಿಕೊಂಡನು ಕೂಡ: ''ಹವ್ಯವಾಹನನೆನಿಸಿದ ಅಗ್ನಿದೇವನೇ, ಯಜ್ಞಕ್ಕೆ ನೀನೇ ವಿಘ್ನವನ್ನುಂಟುಮಾಡುವುದು ತರವಲ್ಲ'' ಎಂದು. ಅಷ್ಟೇ ಅಲ್ಲ, ನೆಲದ ಮೇಲೆ ದರ್ಭೆಯನ್ನು ವಿಧಿವತ್ತಾಗಿ ಹಾಸಿಕೊಂಡನು. ತನ್ನ ಸೈನ್ಯವೇ ಭಯೋದ್ವೇಗಗಳಿಗೆ ತುತ್ತಾಗಿದ್ದರೂ, ಅವರ ಎದುರೇ ಅದರ ಮೇಲೆ ಆಸೀನನಾದನು. ಸಹದೇವನ ಈ ವರ್ತನೆಯಿಂದ ಅಗ್ನಿಯು ಪ್ರಸನ್ನನಾದನು. ಶಾಂತನಾಗಿ ಸಾಂತ್ವನದ ಮಾತುಗಳನ್ನೇ ಆಡಿದನು: ''ಏಳು ಸಹದೇವಾ, ನಿನ್ನ ಹಾಗೂ ಧರ್ಮರಾಜನ ಅಭಿಪ್ರಾಯಗಳು ನನಗೆ ವಿದಿತವಾಗಿವೆ. ಈ ಪುರಿಯನ್ನು ರಕ್ಷಿಸಬೇಕೆಂಬುದು ನನ್ನ ಸಂಕಲ್ಪವಾಗಿತ್ತು ಅಷ್ಟೆ'' ಎಂದನು. ಅಗ್ನಿಯು ಹೀಗೆ ಶಾಂತನಾಗಿ ಹಿಂದಿರುಗಲು, ನೀಲರಾಜನೇ ಸಹದೇವನ ಬಳಿಗೆ ಬಂದನು. ಸಹದೇವನನ್ನು ಸತ್ಕರಿಸಿದನು. ಸಹದೇವನು ನೀಲರಾಜನೊಡನೆ ಮಾತನಾಡಿ, ಆತನೂ ಕರವನ್ನೊಪ್ಪಿಸುವಂತೆ ಮಾಡಿದನು. ತನ್ನ ದಿಗ್ವಿಜಯ ಪ್ರಯಾಣವನ್ನು ಮುಂದುವರಿಸಿದನು. ಆಮೇಲೆ ತ್ರಿಪುರಾಧಿಪತಿ, ಪೌರವರಾಜ್ಯಾಧಿಪತಿ, ಸುರಾಷ್ಟ್ರಾಧಿಪತಿ-ಇವರುಗಳನ್ನು ವಶಪಡಿಸಿಕೊಂಡನು. ಬಳಿಕ ಭೋಜಕಟ ರಾಜ್ಯಕ್ಕೆ ಒಡೆಯನಾದ ರುಕ್ಮಿ ಹಾಗೂ ಆತನ ತಂದೆಯಾದ ಭೀಷ್ಮಕರಲ್ಲಿಗೆ ತನ್ನ ರಾಯಭಾರಿಯನ್ನು ಕಳುಹಿಸಿಕೊಟ್ಟನು. ಅವರು ವಾಸುದೇವನ ನಿಕಟತೆಯನ್ನು ಸ್ಮರಿಸಿ, ತಮ್ಮ ಸಹಕಾರವನ್ನು ಸೂಚಿಸಿದರು. ಮತ್ತೂ ದಕ್ಷಿಣದ ದಂಡಕಾರಣ್ಯವನ್ನೂ ಸಹದೇವನು ವಶಕ್ಕೆ ತೆಗೆದುಕೊಂಡನು. ಆಮೇಲೆ ಸಮುದ್ರ ದ್ವೀಪವಾಸಿಗಳಾಗಿದ್ದ ಮ್ಲೇಚ್ಛರನ್ನು ಜಯಿಸಿದನು. ಹಾಗೆಯೇ ನಿಷಾದರು, ಪುರುಷಾದರು (ನರಮಾಂಸ-ಭಕ್ಷಕರು) ಹಾಗೂ ಕಾಲಮುಖ ಎಂಬ ಹೆಸರಿನ ನರರಾಕ್ಷಸರುಗಳನ್ನೂ, ಈ ತೆರನಾದ ಇನ್ನೂ ಅನೇಕರನ್ನೂ ಜಯಿಸಿದನು. ಕೇರಳ, ಕರ-ಹಾಟಕದೇಶಗಳಿಗೆ (ಕರ್ನಾಟಕವೇ ಸರಿ) ತನ್ನ ದೂತರನ್ನು ಕಳುಹಿಸಿ, ಅದಷ್ಟರಿಂದಲೇ ಅವರನ್ನು ವಶವರ್ತಿಗಳನ್ನಾಗಿಸಿಕೊಂಡನು. ಹಾಗೆಯೇ ಪಾಂಡ್ಯರು, ದ್ರವಿಡರು, ಆಂಧ್ರರು, ಕಲಿಂಗರುಗಳನ್ನೂ ದೂತದ್ವಾರಾ ವಶಪಡಿಸಿಕೊಂಡನು. ಆಮೇಲೆ ಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿ, ತನ್ನ ಭ್ರಾತೃವಿನ ಪುತ್ರನಾದ ಘಟೋತ್ಕಚನನ್ನು ಸ್ಮರಿಸಿಕೊಂಡನು. ಆತನೋ, ಚಿಂತಿತ-ಮಾತ್ರದಿಂದಲೇ ಪ್ರತ್ಯಕ್ಷನಾದನು! ಆತನನ್ನು ವಿಭೀಷಣನಲ್ಲಿಗೆ ದೂತನನ್ನಾಗಿ ಕಳುಹಿಸಿಕೊಟ್ಟನು. ಆತನ ಮಾತುಗಳನ್ನು ವಿಭೀಷಣನು ಸಂತೋಷವಾಗಿಯೇ ಒಪ್ಪಿದನು ಹಾಗೂ ನಾನಾರತ್ನಗಳನ್ನೂ ದಿವ್ಯಾಭರಣಗಳನ್ನೂ ಬೆಲೆಬಾಳುವ ಮಣಿಗಳನ್ನೂ ವಿಶೇಷವಸ್ತ್ರಗಳನ್ನೂ ಕಾಣಿಕೆಯಾಗಿತ್ತನು.

ಇವೆಲ್ಲವನ್ನೂ ಸಂಗ್ರಹಿಸಿ ಹಿಂದಿರುಗಿದ ಸಹದೇವನು, ಯುಧಿಷ್ಠಿರನಿಗೆ ಸಮಸ್ತವನ್ನೂ ಸಮರ್ಪಿಸಿದನು. ಯುಧಿಷ್ಠಿರನೂ ಸಹದೇವನ ಸಾಧನೆಗೆ ಸಂತೋಷಿಸಿದನು.

ಸೀನುವಿನ ಗಾನಾರ್ಥಮಂಜರಿ (ಗಾನಾರ್ಥಮಂ ಜರಿ!)



ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

''ಹಾಡೊಂದ ಹಾಡುವೆ ನೀ ಕೇಳು ಮಗುವೇ...'' ಪಿ.ಬಿ. ಶ್ರೀನಿವಾಸರ ಮಧುರ ಕಂಠಕ್ಕೆ ಕಿವಿಯಾಗಿದ್ದೆ. ಸೀನು ವಕ್ಕರಿಸಿ ''ಮಗುವಿಗೆ ಯಾವ ಹಾಡು ಹಾಡಿದರೂ ನಡೆಯತ್ತೆ. ಪ್ರಾರ್ಥನೆಯ ಹಾಡನ್ನು ಆಯ್ಕೆ ಮಾಡುವುದೇ ಕಷ್ಟ'' ಎಂದ.

''ಅದೇನ್ಮಹಾಕಷ್ಟವೋ? ಸ್ಕೂಲ್ ಫಂಕ್ಷನ್ ಆದರೆ ಸರಸ್ವತಿಯ ಪ್ರಾರ್ಥನೆ...'' ಎನ್ನುತ್ತಿದ್ದಂತೆಯೇ,

''ಅದು ಅಷ್ಟು ಸಿಂಪಲ್ ಅಲ್ಲ. ಪ್ಲೇಸೂ ಡಿಸೈಡ್ಸ್ ದ ಸಾಂಗೂ'' ಎಂದ.

''ವಿವರಿಸು.''

''ಕ್ಯಾಸೆಟ್‌ಗಳು ಸೆಟ್ ಲೆಕ್ಕದಲ್ಲಿ ವ್ಯಾಪಾರವಾಗುತ್ತಿದ್ದ ಕಾಲದಲ್ಲಿ ಆ ಅಂಗಡಿಗಳ ಉದ್ಘಾಟನೆಯ ಸಮಯದಲ್ಲಿ 'ಕಲ್ಯಾಣಿ ಗೀರ್ವಾಣಿ...' ಹಾಡನ್ನು ಹಾಡುತ್ತಿದ್ದರು.''

''ಏಕೆ?''

''ತೆಳುವಾದ ಟೇಪಿನ ಮೇಲೆ ವಿಧವಿಧವಾದ ಗೀರುಗಳು ಮೂಡುವ ಮೂಲಕ ವಾಣಿಯ ಪ್ರಸಾರವಾಗುತ್ತಿದ್ದುದರಿಂದ ಆ ಸಮಯಕ್ಕೆ ಗೀರ್-ವಾಣಿ ಪ್ರಸ್ತುತವಾಗಿತ್ತು. 'ಲರ್ನ್ ಫ್ರೆಂಚ್', '30 ದಿನಗಳಲ್ಲಿ ಇಂಗ್ಲಿಷ್' ಮೊದಲಾದ ಟುಟೋರಿಯಲ್‌ಗಳಲ್ಲಿ 'ಸರಸ್ವತಿ ನಮಸ್ತುಭ್ಯಮ್ ವರದೇ ಕಾಮರೂಪಿಣಿ' ಸೂಕ್ತ.'

''ಏಕೆ?''

''ಇಲ್ಲಿನ ಕ್ಯಾಚ್ ವರ್ಡ್ 'ಕಾಮರೂಪಿಣಿ'. ಭಾಷೆ ಬಳಸುವಾಗ ಎಲ್ಲಿ ಕಾಮಾ, ಫುಲ್ ಸ್ಟಾಪ್ ಮೊದಲಾದವನ್ನು ಹಾಕಬೇಕೆಂದು ತಿಳಿಸು ಎಂದು ದೇವಿಯನ್ನು ಪ್ರಾರ್ಥಿಸಲು ಇದು ಸರಿ.''

''ಕಲಾ ಶಾಲೆಗೆ?''

''ಯಾ ಕುಂದೇಂದು ತುಷಾರ ಹಾರಧವಳಾ.''

''ಕ್ಯಾನ್ವಾಸಿನ ಬಣ್ಣ ಧವಳ ಉರುಫ್ ವೈಟ್ ಇರುವುದರಿಂದೇನು?''

''ಅದೂ ಒಂದು ಪಾಯಿಂಟೇ. ಇಂದು (ಚಂದ್ರ) ವಿನಲ್ಲಿನ ಕುಂದಿನಂತೆ ಇಲ್ಲಿ ಕುಂದು ಸಂಭವಿಸದಿರಲಿ ಎಂದು ಪ್ರಾರ್ಥಿಸಲು ಈ ಗೀತೆ.''

''ಶಾರದೇ ದಯೆ ತೋರಿದೆ ಎಂಬ ಹಾಡನ್ನು ಯಾವಾಗ ಹಾಡಬೇಕು?''

''ಸಿಇಟಿ ಪರೀಕ್ಷೆಯಲ್ಲಿ ಒಳ್ಳೆ ಸ್ಕೋರ್ ಬಂದು ಅನ್ನೊಂಡ್ಕಾಲೇಜಲ್ಲಿ ಸೀಟ್ ಸಿಕ್ಕಾಗ ಆಪ್ತರಿಗೆ ಕೊಡೋ ಪಾರ್ಟಿಯಲ್ಲಿ ಇದನ್ನ ಹಾಡಬೇಕು.''

''ಪೊರೆಯೇ ಶಾರದೆ...?''

''ಕಣ್ಣಿನ ಪೊರೆಯನ್ನು ಹೋಗಲಾಡಿಸುವ ಕ್ಯಾಟರಾಕ್ಟ್ ಸರ್ಜರಿಯಲ್ಲಿ ಎಕ್ಸ್‌ಪರ್ಟ್ ಆಗಬೇಕೆನ್ನುವವರು ನುತಿಸಲೇಬೇಕಾದ ಹಾಡು.''

''ಲಕ್ಷ್ಮಿಯ ಬಾಬ್ತೂ ಹೀಗೇ ಏನು?''

''ಡೆಫನೆಟ್ಲಿ! ಸರ್ಕಾರದ ಭಾಗ್ಯಗಳಿಗೆಲ್ಲ ಹಣ ಒದಗಿ ಬರಲೆಂದು ಸರ್ಕಾರವು ಪ್ರಾರ್ಥಿಸಲು 'ಭಾಗ್ಯದಲಕ್ಷ್ಮೀ ಬಾರಮ್ಮ'. ಅತ್ತೆಸೊಸೆಯರ ಅಕೌಂಟಿಗೆ ಸರ್ಕಾರಿ ಹಣ ತಲುಪಲೆಂದು ಪ್ರಾರ್ಥಿಸಲು 'ಬಾರೇ ಭಾಗ್ಯದ ನಿಧಿಯೆ.' ಎಟಿಎಂ ಉದ್ಘಾಟನೆಯ ಸಮಯದಲ್ಲಿ 'ಧನಲಕ್ಷ್ಮಿ ದಯೆ ತೋರು ಬಾಮ್ಮಾ...''

''ಯಾಕೆ?''

''ಕಾರ್ಡು, ನೋಟುಗಳು ಸಿಕ್ಕಿಹಾಕಿಕೊಳ್ಳದಿರಲಿ, ದುಡ್ಡು ಸರಾಗವಾಗಿ ಸರಿದು ಬರಲಿ ಎಂದು.''

''ವಾದಿರಾಜರು ರಚಿಸಿದ 'ಇಂತವಗ್ಯಾಗೆ ಮನಸೋತೆ' ಗೀತೆಯನ್ನು ಯಾರು ಹಾಡಿದರೆ ಸೂಕ್ತ?''

''ಹಣವಿದ್ದೂ, 80ಸಿಸಿ ಅಡಿಯಲ್ಲಿ ಟ್ಯಾಕ್ಸ್ ಬೆನಿಫಿಟ್ ಇದ್ದೂ, ದಾನ ಮಾಡದವನನ್ನು ಕಂಡು ಇತರರು ಹಾಡುವುದು ಸಮಂಜಸ.''

ಹೀಗೆಯೇ ದೇವತೆಗಳ ವಿವಿಧನಾಮಗಳ ಒಳಾರ್ಥಗಳನ್ನು ಹಿಡಿದು ಸೀನುವು 'ಸಮಯಕ್ಕೆತಕ್ಕಹಾಡು' ಸೂಚಿಸುತ್ತಿರುವುದನ್ನು ಮುಂದುವರಿಸಿದ್ದಲ್ಲದೆ ಹಿಂದಿ ಚಿತ್ರಗೀತೆಗಳಲ್ಲಿಯೂ ದೇವರ ಸ್ತುತಿಯಿದೆಯೆಂದ.

''ಯಾವ್ದಾಡೋ?'' ಎಂದೆ.

''ಬದನ್ ಪೆ ಸಿತಾರೆ ಲಪೇಟೆ ಹುಯೇ; ಓ ಜಾನೆ ತಮನ್ನ ಕಿಧರ್ ಜಾ ರಹೀ ಹೋ; ಝರಾ ಪಾಸ್ ಆವೋ ತೋ ಚೈನ್ ಆಜಾಯೇ'' ಎಂದ.

''ಅದು ಪ್ರೇಮಗೀತೆಯಲ್ಲವೇನೋ?''

''ಗಮನಿಸು. 'ಸಿತಾರೆ ಲಪೇಟೇ ಹುಯೇ' ಎಂದರೆ ಫಳಫಳ ಹೊಳೆಯುವುದನ್ನು ಧರಿಸಿರುವವಳು ಎಂದರ್ಥ. ದೇವಿಯ ಮೈಮೇಲೆ ಹೊಳೆಯುವುದು ನಕ್ಕಿಯಲ್ಲ, ನಗ ಎನ್ನುವುದೇ ನಕ್ಕಿ. ಬಂಗಾರದ ಆಭರಣಗಳನ್ನು ಧರಿಸಿ ಎಲ್ಲಿಯೋ ಹೋಗುತ್ತಿರುವೆಯಲ್ಲ, ಸ್ವಲ್ಪ ನನ್ನ ಕಡೆಯೂ ಕೃಪೆ ತೋರಿದರೆ ಕನಿಷ್ಠ ಕುತ್ತಿಗೆಗೊಂದು ಸರವಾದರೂ ಲಭ್ಯವಾದೀತು ಎನ್ನುವುದು ಈ ಲಕ್ಷ್ಮಿಯ ಭಕ್ತನ ಅಳಲು'' ಎಂದ ಸೀನುವು ''ಸಾಯಂಕಾಲ ಮುಸ್ಸಂಜೆಯ ಹೊತ್ತಿನಲ್ಲಿ ಲಕ್ಷ್ಮಿಯು ಮನೆಗೆ ಬರುತ್ತಾಳಲ್ಲವೆ, ಅದಕ್ಕೂ ಒಂದು ಹಾಡಿನ ಸಾಲಿದೆ'' ಎಂದ.

''ಯಾವುದು?''

''ಚಿತ್ ಚೋರ್ ಚಿತ್ರದ 'ಜಬ್ ದೀಪ್ ಜಲೇ ಆನಾ; ಜಬ್ ಶ್ಯಾಮ್ ಢಲೇ ಆನಾ' ಎಂಬ ಹಾಡು. ಸಂಜೆ ದೀಪ ಹೊತ್ತುವ ಹೊತ್ತಿಗೆ ಬಾ ಎನ್ನುವುದು ಸೊಳ್ಳೆಗಳಿಗಲ್ಲ, ದೇವತೆಗೆ ಎಂದು ಅರಿಯುವಂಥವನಾಗು'' ಎಂದುದ್ಗರಿಸಿದ.

''ನಿನ್ನ ಹಿಂದಿ ಹೇರಿಕೆಗೆ ಧಿಕ್ಕಾರ! ಕನ್ನಡದ ಚಿತ್ರಗೀತೆಗಳಲ್ಲಿ ಇಂತಹವು ಯಾವುವೂ ಇಲ್ಲವೇನು?''

''ಹಾಡಿನ ಒಂದೇ ಸಾಲಿನಲ್ಲಿ ಎರಡೆರಡು ಕ್ಷೇತ್ರಗಳವರು ಪ್ರಾರ್ಥಿಸುವ ವಿಧವಿದೆ'' ಎಂದು ಬೀಗಿದ.

''ಯಾವ ಹಾಡಿನ ಯಾವ ಸಾಲು?''

''ವಿಠಲ ವಿಠಲ ಪಾಂಡುರಂಗ ವಿಠಲ...'' ಎನ್ನುತ್ತಾ ಭಾವಪರವಶನಾದ. (ಈ ಪದವೇ ವಿಚಿತ್ರ. ಭಾವನಿಗೆ ಪರವಶವಾಗತಕ್ಕದ್ದು ಅಕ್ಕ ಒಬ್ಬಳೇ ಅಲ್ಲವೆ? ಹೆಚ್ಚೆಂದರೆ ಒಂದು ಮಟ್ಟದಲ್ಲಿ ಭಾವಮೈದನು ಪರವಶನಾಗಬಹುದು. ಮಿಕ್ಕಂತೆ ಯಾರ್ಯಾರೋ ಭಾವನಿಗೆ ಪರವಶರಾಗುವುದು ವಿಚಿತ್ರವೇ ಸೈ!)

''ಮೂರು ವಿಠಲ ಬಿಟ್ಟರೆ ಇರುವುದೇ ಒಂದು ಪದ. ಇದರಲ್ಲಿ ನಿನಗೆ ಎರಡು ಕ್ಷೇತ್ರಗಳು ಎಲ್ಲಿ ಕಂಡವು?''

''ಪಾಂಡು ಎನ್ನುವುದು pond ಎನ್ನುವುದರ ಕನ್ನಡ ರೂಪ. ಕೆರೆ ಅಭಿವೃದ್ಧಿ ಪ್ರಾಧಿಕಾರದವರು ಮತ್ತು 'ರಂಗ' ಉರುಫ್ ನಾಟಕಕ್ಷೇತ್ರದವರು ಇಬ್ಬರಿಗೂ ಪ್ರಿಯವಾದ ಹಾಗೂ ಸೂಕ್ತವಾದ ಭಕ್ತಿಗೀತೆ ಇದು'' ಎಂದು ವಿವರಿಸಿದನವ.

ಪಂಡರಾಪುರದಲ್ಲಿ ಸ್ಥಿತನಾದ ಕಾರಣ ಪಾಂಡುರಂಗನಾದ ವಿಷ್ಣುವು ಭಾಷಾಪಭ್ರಂಶಿ ಸೀನುವಿನ ಬಾಯಿಗೆ ಸಿಲುಕಿ ಹೊಸ ಅರ್ಥಗಳಿಗೆ ಒಳಗಾಗಿದ್ದ.

''ವಿಠಲನಾಮ ಸ್ಮರಣೆಯ ಹಾಡನ್ನು ಹಾಡಿದ್ದು ಗೋರಕುಂಬಾರ. ನೀನು ಘೋರ ಕುಂಬಾರ. ಅವನು ಕಟ್ಟಿದ ಅರ್ಥಗಳನ್ನು ನೀನು ನಿನ್ನ ಅನರ್ಥದಿಂದ ಒಡೆದುಹಾಕುತ್ತೀಯೆ. ಅವನದು ಭಕ್ತಿ. ನಿನ್ನದೂ...''

''ತಡೆ. ಭಕ್ತ ಎಂದರೆ 'ಕತ್ತರಿಸಿದ' ಎಂಬ ಅರ್ಥವಿದೆ. ಅವನ ಹಾಡು ಭಕ್ತನ ಗೀತೆ, ನನ್ನದು ಭಕ್ತ ಗೀತೆ; ಇಷ್ಟೇ ವ್ಯತ್ಯಾಸ. ಕೊಂಚ ವ್ಯತ್ಯಾಸವನ್ನೂ ಸಹಿಸದ ನೀನೆಂಥ ಕನ್ನಡಿಗನಯ್ಯ! ಹಾರವನ್ನು ಆರ ಎಂದೂ, ಅನ್ನವನ್ನು ಹನ್ನ ಎಂದೂ, ಧನವನ್ನು ದನ ಎಂದೂ ಉಚ್ಚರಿಸಿದರೂ ಸಕಲ ಹುಚ್ಚುಚ್ಚಾರಗಳನ್ನು ಕ್ಷಮಿಸಿ ಟಿವಿ ವೀಕ್ಷಿಸುವ ಶುದ್ಧ ಕನ್ನಡಿಗರ ಪೈಕಿ ಇದ್ದೂ ನಿನಗೆ ಇಂತಹ ಅಸಹನೆ ತರವಲ್ಲ'' ಎಂದು ಗುಡುಗಿದ ಸೀನು.

''ಬಿಡು ಚಿತ್ರಗೀತೆಗಳನ್ನು. ಮರಳು ಪ್ರಾರ್ಥನಗೀತೆಗಳಿಗೆ. ಎಲ್ಲ ವ್ರತಗಳಲ್ಲಿಯೂ ಅಗ್ರಪೂಜೆ ಗಣಪತಿಯದೇ. ಗಣೇಶನ ಯಾವ ಯಾವ ಹಾಡುಗಳು ಎಲ್ಲೆಲ್ಲಿ ಸೂಕ್ತ?'' ಎನ್ನುತ್ತಾ ಹಳಿಯುವುದರಲ್ಲಿ ನಿರತನಾದ ಸೀನುವನ್ನು ಹಳಿಗೆ ತರಲು ಯತ್ನಿಸಿದೆ.

''ಹಾಡುಗಳನ್ನು ಗುನುಗುತ್ತಾ ಬಾ.''

''ಶರಣು ಸಿದ್ಧಿ ವಿನಾಯಕ; ಶರಣು ವಿದ್ಯಾ ಪ್ರದಾಯಕ.''

''ಶರಣು ಶರಣಾರ್ಥಿ ಎನ್ನುವವರು ನಡೆಸುವ ಕಾರ್ಯಕ್ರಮಗಳಲ್ಲಿ ಇದನ್ನು ಬಳಸುವುದು ಸೂಕ್ತ. ಶರಣುವಿಗೆ ಶರಣುವೇ ಮ್ಯಾಚಿಂಗ್.''

''ಶ್ರೀ ಗಣನಾಥ ಸಿಂಧೂರಾ ವರ್ಣ...?''

''ರೆಡ್ ಕ್ರಾಸ್ ಸಂಸ್ಥೆಯವರದು ಸಿಂಧೂರ ವರ್ಣಕ್ಕೆ ಸಮೀಪವಾದುದು. ಅಲ್ಲದೆ 'ಆಪರೇಷನ್ ಸಿಂಧೂರ'ಕ್ಕೆ ಸಂಬಂಧಿಸಿದ ಸಕಲ ಕಾರ್ಯಕ್ರಮಗಳಲ್ಲಿಯೂ ಇದನ್ನು ಪ್ರಾರ್ಥನೆಯಾಗಿ ಬಳಸಬಹುದು.''

''ವಾತಾಪಿ ಗಣಪತಿಂ ಭಜೆ?''

''ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಮತ್ತು ಸಕಲ ಮಾಲಿನ್ಯ ವಿರೋಧಿ ಜನಗಳು ಹಾಡಬೇಕಾದ ಹಾಡದು.''

''ಎತ್ತಣ ಸಂಬಂಧವಂ ಹುಡುಕಿರುವೆ?''

''ಕಲುಷವಿದೂರಂ ಭೂತಾಕಾರಂ ಎಂಬ ಸಾಲು ಆ ಹಾಡಿನಲ್ಲಿದೆ. ಭೂತಾಕಾರದ ಸಮಸ್ಯೆಯೆನಿಸುವ ಕಲುಷವನ್ನು ನಮ್ಮಿಂದ ದೂರಗೊಳಿಸಲು ಯಾವ ನಗರಪಾಲಿಕೆಯವರಿಗೂ ಸಾಧ್ಯವಿಲ್ಲ. ಅದು ದೇವನೊಬ್ಬನೇ ಸಾಧಿಸಬಲ್ಲ ಕಾರ್ಯ. ತತ್ಕಾರಣ ಈ ಗೀತೆ ಅಲ್ಲಿಯೇ ಹೆಚ್ಚು ಪ್ರಸ್ತುತ.''

''ಮಹಾಗಣಪತಿಂ...''

''ಇದು ನನ್ನನ್ನು ವಿಸ್ಮಯಗೊಳಿಸಿರುವ ಗೀತೆ. 'ಮನಸಾ ಸ್ಮರಾಮಿ' ಎನ್ನುತ್ತಾ ಮೈಕ್ ಕಿತ್ತುಹೋಗುವಂತೆ ಹಾಡುವುದು ಸರಿಯೆ? ಈ ಹಾಡನ್ನು ನಿಜಭಕ್ತಿಯುಳ್ಳವರು ಧ್ಯಾನಾಸಕ್ತರಾದಾಗ ಮನದಲ್ಲೇ ಹಾಡಿಕೊಳ್ಳುವುದು ಸರಿಯೆಂದು ನನ್ನ ಅಭಿಪ್ರಾಯ.''

''ಗಣನಾಯಕಾಯ ಗಣದೈವತಾಯ...''

''ಪ್ರಾರ್ಥನೆಯೆಂದರೆ ಇದು! ಅನೇಕ ಜನರಿಗೆ ಸೂಕ್ತವಾಗುವ ಹಾಡಿದು!'' ಸೀನು ಅತ್ಯುತ್ಸಾಹದಿಂದ ಉಲಿದ.

''ಯಾರ್ಯಾರಿಗೆ?''

''ಗುಣಶರೀರಾಯ ಎಂದರೆ ಸ್ವಸ್ಥವಾದ ಶರೀರವುಳ್ಳವರಿಗೆ; ಯೋಗ ಕೇಂದ್ರಗಳು ಮತ್ತು ನರ್ಸಿಂಗ್ ಹೋಂಗಳು ಈ ಪದವನ್ನು ಪದೇ ಪದೇ ಉಚ್ಚರಿಸಬೇಕು. ಗುಣಮಂಡಿತಾಯ ಎನ್ನುವುದು ಕಂಗ್ಲಿಷ್ ಜನರಲ್ಲಿ ವಿಶೇಷ ಅರ್ಥವನ್ನು ಕೊಡುತ್ತದೆ. ಮಂಡಿ ಸವೆದ ಮಂದಿ 'ಮಂಡಿ ಮರ್ಚೆಂಟ್ಸ್' ಬಳಿ ಹೋಗಿ ಸರಿಯಾದ ಮಂಡಿಯನ್ನು (ಚಿಪ್ಪನ್ನು) ಒದಗಿಸು ಎಂದು ಕೇಳುವುದರ ಶುದ್ಧ ಅಪಭ್ರಂಶ ರೂಪವೇ 'ಗುಣ ಮಂಡಿ ತಾ yar' ಎನ್ನುವುದು. ಗುಣೇಶಾನಾಯ ಎನ್ನುವುದು ಫ್ಯಾಶನ್ ಇಂಡಸ್ಟ್ರಿಯವರು ಸ್ತುತಿಸಬೇಕಾದ ಪದ.''

''ಏಕೆ? ಹೇಗೆ ಪ್ರಸ್ತುತವಿದು?''

''ಗುಣ ಎಂದರೆ ನೂಲು. ಗುಣೇಶರೆಂದರೆ ನೂಲಿನೊಡೆಯರು ಉರುಫ್ ಟೆಕ್ಸ್‌ಟೈಲ್ ಇಂಡಸ್ಟ್ರಿಯ ಮಾಲಿಕರು. ಟೆಕ್ಸ್‌ಟೈಲಿನ ವಿವಿಧ ಫ್ಯಾಶನ್‌ಗಳ ವಸ್ತ್ರಗಳನ್ನು ಮಾರುವುದರ ಮೂಲಕ ಆಯ(ಧನ) ಪಡೆಯಲು ಈ ಪದದ ಪ್ರಾರ್ಥನೆಯೇ ಸೂಕ್ತ'' ಎಂದನವ.

''ನಿನ್ನ ಬುದ್ಧಿ ಹಾಳಾಗಿದೆ. ನೀನು ವಿದ್ಯಾಗಣಪತಿಯ ಪ್ರಾರ್ಥನೆ ಮಾಡುವುದು ಅತ್ಯವಶ್ಯ'' ಎಂದೆ.

ಸೀನು ನನ್ನತ್ತ ವಿರೋಧಪಕ್ಷದವನು ಮುಖ್ಯಮಂತ್ರಿಗಳತ್ತ ಬೀರುವ ಕ್ರುದ್ಧದೃಷ್ಟಿಯನ್ನು ಬೀರುತ್ತಾ ಹೊರನಡೆದ.

ಚರಿತ್ರೆ ಮೆಚ್ಚಿದ ಸಂಯಮದ ಹಾದಿ

ಪ್ರತಿಯೊಂದು ಪ್ರಚೋದನೆಗೂ ಪ್ರತಿಕ್ರಿಯಿಸಲೇಬೇಕಾದ ಅಗತ್ಯವಿಲ್ಲ ಎಂಬುದನ್ನು ಶ್ರೇಷ್ಠ ನಾಯಕರು ಮತ್ತು ಕಾಲವನ್ನು ಗೆದ್ದು ನಿಂತ ಸಂಸ್ಥೆಗಳು ನಮಗೆ ನೆನಪಿಸಿವೆ.

ಸಾತ್ವಿಕ್ ರಮೇಶ್

ಇತ್ತೀಚಿನ ವಾರಗಳಲ್ಲಿ ಸಂಘದ ವಿರುದ್ಧ ಹಳೆಯ ಆರೋಪಗಳನ್ನೇ ಮತ್ತೆ ಮುನ್ನೆಲೆಗೆ ತರುತ್ತಿರುವುದು ಕಂಡುಬರುತ್ತಿದೆ.

ಸೂಕ್ಷ್ಮವಾಗಿ ಗಮನಿಸುವ ಯಾರಿಗಾದರೂ, ಈ ಎಲ್ಲ ವಿಶ್ಲೇಷಣೆಗಳ ಹಿಂದಿರುವುದು ಸತ್ಯದ ಅನ್ವೇಷಣೆಯಲ್ಲ, ಬದಲಿಗೆ ಅನಗತ್ಯ ವಿವಾದ ಸೃಷ್ಟಿಸಿ ರಾಜಕೀಯ ಲಾಭ ಮಾಡಿಕೊಳ್ಳುವ ಹಠ ಎಂಬುದು ಸ್ಪಷ್ಟವಾಗುತ್ತದೆ. ಈ ಆರೋಪಗಳ ಕುರಿತು ಸಾರ್ವಜನಿಕ ವಲಯದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಗಳು ನಡೆದಿವೆ; ಪ್ರಮುಖ ಕಾನೂನು ತಜ್ಞರು ಹಾಗೂ ಸಾರ್ವಜನಿಕ ಚಿಂತಕರು ಇವುಗಳಿಗೆ ಸೂಕ್ತ ಉತ್ತರವನ್ನೂ ನೀಡಿದ್ದಾರೆ. ಆದಾಗ್ಯೂ, ಆ ಎಲ್ಲ ಸ್ಪಷ್ಟೀಕರಣಗಳನ್ನು ಬದಿಗಿಟ್ಟು, ಇದೇ ವಿವಾದವನ್ನು ಹಠಕ್ಕೆ ಬಿದ್ದಂತೆ ಮತ್ತೆಮತ್ತೆ ಕೆದಕಲಾಗುತ್ತಿದೆ.

ಇಂತಹ ಸಂದಿಗ್ಧ ಸಂದರ್ಭಗಳಲ್ಲಿ ಚರಿತ್ರೆಯು ನಮಗೊಂದು ದಾರಿದೀಪವಾಗುತ್ತದೆ. ಪ್ರತಿಯೊಂದು ಪ್ರಚೋದನೆಗೂ ಪ್ರತಿಕ್ರಿಯಿಸಲೇಬೇಕಾದ ಅಗತ್ಯವಿಲ್ಲ ಎಂಬುದನ್ನು ಇತಿಹಾಸದ ಶ್ರೇಷ್ಠ ನಾಯಕರು ಮತ್ತು ಕಾಲವನ್ನು ಗೆದ್ದು ನಿಂತ ಸಂಸ್ಥೆಗಳು ನಮಗೆ ಪದೇ ಪದೇ ನೆನಪಿಸಿವೆ. ಅನೇಕ ಬಾರಿ, ಅತ್ಯಂತ ಕಠಿಣವಾದ ಮಾರ್ಗವೇ ಅತ್ಯಂತ ವಿವೇಕಯುತವಾದದ್ದಾಗಿರುತ್ತದೆ; ಅದೇ 'ಸಂಯಮದ ಮಾರ್ಗ'.

ಯಾವುದೇ ಒಂದು ಸಂಸ್ಥೆ, ಚಳವಳಿ ಅಥವಾ ನಾಯಕನಿಗೆ ಎದುರಾಳಿಗಳಿಂದ ವಿರೋಧ ವ್ಯಕ್ತವಾಗುವುದು ಸಹಜವೇ. ಆದರೆ ಅವರ ನೈಜ ಪರೀಕ್ಷೆ ಎದುರಾಗುವುದು ಶತ್ರುಗಳ ವಿರೋಧದಿಂದಲ್ಲ, ಬದಲಿಗೆ ತಮ್ಮವರಲ್ಲೇ ಮೂಡುವ ಸಂಶಯದಿಂದ. ವಿರೋಧಿಗಳ ಟೀಕೆಗಳನ್ನು ನಿರ್ಲಕ್ಷಿಸಬಹುದು, ಹಿತೈಷಿಗಳ ಪ್ರಶ್ನೆಗಳಿಗೆ ಉತ್ತರಿಸುವುದು ಕೊಂಚ ಕಷ್ಟವೇ. ಆದರೆ ನಾಯಕತ್ವದ ಅತ್ಯಂತ ದೊಡ್ಡ ಜವಾಬ್ದಾರಿಯೆಂದರೆ, ತಾವು ನಂಬಿದ ಹಾದಿಯಲ್ಲಿ ಸಾಗುವಾಗ, ಯಾರ ಹಿತಕ್ಕಾಗಿ ಶ್ರಮಿಸುತ್ತಿದ್ದೇವೆಯೋ ಅವರೇ ಭರವಸೆ ಕಳೆದುಕೊಳ್ಳಲು ತೊಡಗಿದಾಗಲೂ ತನ್ನ ದೃಢತೆಯನ್ನು ಕಳೆದುಕೊಳ್ಳದಿರುವುದು.

ನಮ್ಮ ಇತಿಹಾಸದಲ್ಲಿ ಇದಕ್ಕೆ ಅಪಾರ ಉದಾಹರಣೆಗಳಿವೆ.

ಚರಿತ್ರೆ ಕಲಿಸಿದ ಪಾಠ

ಛತ್ರಪತಿ ಶಿವಾಜಿ ಮಹಾರಾಜರ ವಿರುದ್ಧ ಅಫ್ಜಲ್ ಖಾನ್ ದಂಡೆತ್ತಿ ಬಂದಾಗ, ಅದು ಕೇವಲ ಒಂದು ಸೈನಿಕ ಆಕ್ರಮಣವಾಗಿರಲಿಲ್ಲ, ಅದೊಂದು ವ್ಯವಸ್ಥಿತ ಪ್ರಚೋದನೆಯಾಗಿತ್ತು. ಹಳ್ಳಿಗಳನ್ನು ಹಾಳುಗೆಡವಲಾಯಿತು,



ಧಾರ್ಮಿಕ ಶ್ರದ್ಧಾಕೇಂದ್ರಗಳನ್ನು ಧ್ವಂಸಗೊಳಿಸಲಾಯಿತು, ಮನೆಗಳನ್ನು ಲೂಟಿ ಮಾಡಿ ಅಸಂಖ್ಯಾತ ಮುಗ್ಧ ಜನರನ್ನು ಹಿಂಸಿಸಲಾಯಿತು. ಈ ದಾಳಿಯ ಉದ್ದೇಶ ಕೇವಲ ವಿನಾಶ ಉಂಟುಮಾಡುವುದಷ್ಟೇ ಆಗಿರಲಿಲ್ಲ; ಜನರಲ್ಲಿ ತೀವ್ರ ಆಕ್ರೋಶವನ್ನು ಹುಟ್ಟುಹಾಕಿ, ಶಿವಾಜಿ ಮಹಾರಾಜರು ತಮ್ಮ ಯುದ್ಧತಂತ್ರವನ್ನು ಮರೆತು ಕೇವಲ ಭಾವಾವೇಶಕ್ಕೆ ಒಳಗಾಗಿ ತಕ್ಷಣವೇ ಪ್ರತಿಕ್ರಿಯಿಸುವಂತೆ ಮಾಡುವುದಾಗಿತ್ತು. ಸಾಮಾನ್ಯ ಜನರ ನಿರೀಕ್ಷೆಯೂ ಅಷ್ಟೇ ಸರಳವಾಗಿತ್ತು: ಶಿವಾಜಿ ಮಹಾರಾಜರು ತಕ್ಷಣವೇ ಕೋಟೆಯಿಂದ ಹೊರಬಂದು ಶತ್ರುವನ್ನು ಎದುರಿಸಬೇಕೆಂಬುದೇ ಅವರ ಹಂಬಲವಾಗಿತ್ತು.

ದಿನಗಳು ಉರುಳಿದಂತೆ ಸಾರ್ವಜನಿಕರಲ್ಲಿ ಪ್ರಶ್ನೆಗಳು ಎದ್ದವು. ಈ ವಿಳಂಬವು ಅವರ ದೌರ್ಬಲ್ಯವನ್ನು ತೋರಿಸುತ್ತಿದೆಯೋ ಎಂದು ಕೆಲವರು ಸಂದೇಹಪಟ್ಟರೆ, ಇನ್ನು ಕೆಲವರು ಅವರ ವಿವೇಚನೆಯನ್ನೇ ಪ್ರಶ್ನಿಸಿದರು. ಆದರೆ, ಶತ್ರುಗಳು ನಿರ್ದೇಶಿಸಿದ ನಿಯಮಗಳ ಪ್ರಕಾರ ಪ್ರತಿಕ್ರಿಯಿಸುವುದು ಕೇವಲ ಶತ್ರುವಿನ ಉದ್ದೇಶಕ್ಕೆ ಮಾತ್ರ ಲಾಭದಾಯಕ ಎಂಬುದು ಶಿವಾಜಿ ಮಹಾರಾಜರಿಗೆ ಚೆನ್ನಾಗಿ ತಿಳಿದಿತ್ತು. ಅವರು ಆತುರದ ತೀರ್ಮಾನದ ಬದಲಾಗಿ ತಾಳ್ಮೆಯನ್ನೂ, ಭಾವನೆಗಳ ಬದಲಾಗಿ ತಂತ್ರಗಾರಿಕೆಯನ್ನೂ ಆರಿಸಿಕೊಂಡರು. ಆ ಸಂದರ್ಭದಲ್ಲಿ ಅವರಿಗೆ ಅಫ್ಜಲ್ ಖಾನನ ಪ್ರಚೋದನೆಗಿಂತಲೂ, ಮಹತ್ತರವಾದ ಗುರಿಯನ್ನು ನೆರವೇರಿಸುವ ಹಾದಿಯಲ್ಲಿ ಸ್ವಂತ ಜನರಿಂದ ಎದುರಾದ ಅಪನಂಬಿಕೆಯನ್ನು ಭರಿಸುವುದೇ ಅತ್ಯಂತ ಕಠಿಣವಾದ ಸವಾಲಾಗಿರಬೇಕು.

ಆ ನಂತರ ಇತಿಹಾಸದಲ್ಲಿ ಏನಾಯಿತು ಎಂಬುದು ಜಗಜ್ಜಾಹೀರು. ಸರಿಯಾದ ಸಮಯ ಬಂದಾಗ ಶಿವಾಜಿ ಮಹಾರಾಜರು ಅತ್ಯಂತ ನಿರ್ಣಾಯಕವಾಗಿ ಮುನ್ನುಗ್ಗಿದರು ಮತ್ತು ಅಫ್ಜಲ್ ಖಾನನ ಆಕ್ರಮಣವು ಅಂತ್ಯಕಂಡಿತು. ತಾಳ್ಮೆಯು ಅವರ ಸಂಕಲ್ಪವನ್ನು ದುರ್ಬಲಗೊಳಿಸಿರಲಿಲ್ಲ; ಬದಲಿಗೆ ಅವರ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸಿತ್ತು.

ಮಹಾತ್ಮಾ ಗಾಂಧೀಜಿಯವರ ಹತ್ಯೆಯ ನಂತರದ ಅತ್ಯಂತ ಕಠಿಣ ಕಾಲಘಟ್ಟದಲ್ಲಿ ಸಂಘವು ಕೂಡ ಇಂತಹುದೇ ತತ್ವವನ್ನು ಅನುಸರಿಸಿತ್ತು. ನಿರಂತರ ನಿಂದನೆಗಳು, ನಿಷೇಧಗಳು, ಬಂಧನ ಗಳು ಹಾಗೂ ಸಾರ್ವಜನಿಕ ದ್ವೇಷವು ಅಸಂಖ್ಯಾತ ಸ್ವಯಂ ಸೇವಕರಲ್ಲಿ ತೀವ್ರ ತಲ್ಲಣವನ್ನು ಉಂಟುಮಾಡಿದ್ದವು. ಭಾವನೆಗಳು ಉಕ್ಕಿಹರಿಯುತ್ತಿದ್ದ ಆ ಹೊತ್ತಿನಲ್ಲಿ ಆಕ್ರೋಶಭರಿತವಾಗಿ ಪ್ರತಿಕ್ರಿಯಿಸುವುದು ಯಾರಿಗಾದರೂ ಸಹಜವಾಗಿತ್ತು. ಆದರೆ ಅಂದಿನ ಸರಸಂಘಚಾಲಕರಾಗಿದ್ದ ಗುರೂಜಿಯವರು ಸ್ವಯಂಸೇವಕರಲ್ಲಿ ಸಂಯಮ ಹಾಗೂ ಶಾಂತಿಯನ್ನು ಕಾಯ್ದುಕೊಳ್ಳಲು ಕರೆ ನೀಡಿದರು. ಸ್ವಯಂಸೇವಕರಿಗೆ ಅವರ ಸಂದೇಶ ಸರಳವಾಗಿತ್ತು: ''Be calm at all cost'' ಸಮಾಜವು ಎಷ್ಟೇ ಆಕ್ರೋಶಗೊಂಡಿದ್ದರೂ, ನಮ್ಮನ್ನು ತಪ್ಪಾಗಿ ಗ್ರಹಿಸಿದ್ದರೂ ಅದು ನಮ್ಮದೇ ಸಮಾಜ. ಆಕಸ್ಮಿಕವಾಗಿ ಹಲ್ಲು ನಾಲಿಗೆಯನ್ನು ಕಚ್ಚಿತೆಂದು ಯಾರೂ ಹಲ್ಲುಗಳನ್ನು ಮುರಿದುಕೊಳ್ಳುವುದಿಲ್ಲವಷ್ಟೇ? ಹಾಗೆಯೇ ನೋವಿನ ಕ್ಷಣಗಳಲ್ಲಿ ನಮ್ಮದೇ ಸಮಾಜದ ವಿರುದ್ಧ ನಾವು ತಿರುಗಿಬೀಳಲು ಸಾಧ್ಯವಿಲ್ಲ. ಮುಂದಿನ ವರ್ಷಗಳು ಅವರ ಆ ಅಚಲ ವಿಶ್ವಾಸಕ್ಕೆ ಸಾಕ್ಷಿಯಾದವು. ನಿಷೇಧಗಳು, ಪುನರಾವರ್ತಿತ ಆರೋಪಗಳು ಮತ್ತು ಪ್ರತಿಕೂಲ ಪರಿಸ್ಥಿತಿ ಗಳ ನಡುವೆಯೂ ಸಂಘವು ನಿರಂತರವಾಗಿ ಬೆಳೆಯಿತು. ಇಂದು ಸಂಘವು ತನ್ನ ಶತಮಾನೋತ್ಸವದ ವರ್ಷದಲ್ಲಿದ್ದು, ಎಂದಿಗಿಂತಲೂ ಹೆಚ್ಚು ಸದೃಢವಾಗಿ ಮತ್ತು ವ್ಯಾಪಕವಾಗಿ ದೇಶಾದ್ಯಂತ ಪಸರಿಸಿದೆ.

ಆವೇಶ ವರ್ಜಿತ ವಿವೇಚನೆ

ಅನೇಕ ನಾಯಕರು ಮತ್ತು ಸಂಸ್ಥೆಗಳು ತಾವು ಮಾಡಿದ ಕೆಲಸಗಳಿಗಿಂತ ಹೆಚ್ಚಾಗಿ, ತಾವು ಮಾಡದೇ ಇರಲು ನಿರ್ಧರಿಸಿದ (ಸಂಯಮ ವಹಿಸಿದ) ನಿರ್ಧಾರಗಳಿಗಾಗಿ ಇತಿಹಾಸದಲ್ಲಿ ಟೀಕೆಗೆ ಒಳಗಾಗಿವೆ. ವ್ಯೂಹಾತ್ಮಕ ತಾಳ್ಮೆಯನ್ನು ಆಯಾ ಸಂದರ್ಭದಲ್ಲಿ ಯಾರೂ ಪ್ರಶಂಸಿಸುವುದಿಲ್ಲ, ಸಂಯಮವನ್ನು ದುರ್ಬಲತೆಯೆಂದೂ, ಮೌನವನ್ನು ಅಸಹಾಯಕತೆಯೆಂದೂ, ಕಾಯುವಿಕೆಯನ್ನು ಅನಿಶ್ಚಿತತೆಯೆಂದೂ ತಪ್ಪಾಗಿ ಅರ್ಥೈಸಲಾಗುತ್ತದೆ. ಆದರೆ ಇತಿಹಾಸವು ಆಯಾ ಕ್ಷಣದ ಕೋಲಾಹಲವನ್ನು ನೆನಪಿಟ್ಟುಕೊಳ್ಳುವುದಿಲ್ಲ, ಬದಲಿಗೆ ವಿವೇಕಯುತ ನಿರ್ಧಾರ ತಂದಿಟ್ಟ ಸುಸ್ಥಿರ ಫಲಿತಾಂಶವನ್ನು ಮಾತ್ರ ಗೌರವಿಸುತ್ತದೆ. ಸಮಾಜವು ಸದಾ ಪ್ರಶ್ನೆಗಳನ್ನು ಕೇಳುತ್ತಲೇ ಇರುತ್ತದೆ. ಎದುರಾಳಿಗಳು ಪ್ರಚೋದಿಸುತ್ತಲೇ ಇರುತ್ತಾರೆ. ಹಿತೈಷಿಗಳೂ ಸಹ ಕೆಲವು ಭಾರಿ ತಾಳ್ಮೆ ಕಳೆದುಕೊಳ್ಳಬಹುದು. ಇವೆಲ್ಲವೂ ತೀರಾ ಸ್ವಾಭಾವಿಕ ಪ್ರತಿಕ್ರಿಯೆಗಳು. ಆದರೆ, ನಾಯಕತ್ವವು ಇದಕ್ಕಿಂತಲೂ ಮಿಗಿಲಾದ ಔನ್ನತ್ಯವನ್ನು ಬೇಡುತ್ತದೆ. ಸದ್ಯದ ಪರಿಸ್ಥಿತಿಯನ್ನು ಮೀರಿ ನಿಂತು, ವಿಶಾಲವಾದ ಧ್ಯೇಯೋದ್ದೇಶಗಳಿಗೆ ಬದ್ಧವಾಗಿರುವುದೇ ನೈಜ ನಾಯಕತ್ವ. ಭಾವಾವೇಶವು ಪ್ರಚೋದಿತ ಆತುರಕ್ಕೆ ಪ್ರೇರೇಪಿಸಿದರೆ, ಆತ್ಮವಿಶ್ವಾಸವು ವಿವೇಕಯುತ ಪ್ರತಿಕ್ರಿಯೆಗೆ ದಾರಿ ತೋರುತ್ತದೆ. ಆತುರದ ಆಕ್ರೋಶವು ಕ್ಷಣಿಕ ತೃಪ್ತಿಯನ್ನು ನೀಡಬಹುದು; ಆದರೆ ವಿವೇಚನೆಯು ಶಾಶ್ವತವಾದ ಯಶಸ್ಸನ್ನು ತಂದುಕೊಡುತ್ತದೆ. ಆಕ್ರೋಶವನ್ನು ಹೊರಹಾಕಲು ಕೇವಲ ಉದ್ವೇಗ ಸಾಕು; ಆದರೆ ಸಂಯಮವನ್ನು ಕಾಯ್ದುಕೊಳ್ಳಲು ಅಪಾರವಾದ ಆತ್ಮಬಲ ಬೇಕು.

ಮೆಸ್ಸಿ, ರೊನಾಲ್ಡೋ: ಯಾರು ಮೇಲೆಂಬ ಅನವಶ್ಯ ಚರ್ಚೆ!

ದಿನೇಶ್ ನಾಯಕ್

ಅರ್ಜೆಂಟೀನಾದ ಫುಟ್ಬಾಲಿಗ ಲಿಯೋನೆಲ್ ಮೆಸ್ಸಿಗೆ ಈಗ 39 ವರ್ಷ. ಪೋರ್ಚುಗಲ್‌ನ ಕ್ರಿಸ್ಟಿಯಾನೋ ರೊನಾಲ್ಡೋಗೆ 41 ವರ್ಷ. ಅವರಿಬ್ಬರೊಳಗೆ ಯಾರು ಶ್ರೇಷ್ಠರು ಎಂಬ ಕುರಿತಂತೆ ಅವರ ಅಭಿಮಾನಿಗಳು ಮತ್ತು ಫುಟ್ಬಾಲ್ ಪಂಡಿತರು ಕೆಲವು ವರ್ಷಗಳಿಂದ ಚರ್ಚಿಸುತ್ತಲೇ ಇದ್ದಾರೆ. ಆದರೆ ಆ ಚರ್ಚೆ ಮುಗಿಯುವಂತೆ ಕಾಣುತ್ತಿಲ್ಲ. ಏಕೆಂದರೆ ಇಬ್ಬರೂ ತಮ್ಮ ನಿರ್ವಹಣೆಯಲ್ಲಿ ಕುಂದು ತೋರುತ್ತಿಲ್ಲ. ಹೊಸ ಹೊಸ ದಾಖಲೆಗಳನ್ನು ಬರೆಯುತ್ತಲೇ ಇದ್ದಾರೆ. ವಯಸ್ಸು ಅವರ ನಿರ್ವಹಣೆಯ ಮೇಲೆ ಪ್ರಭಾವ ಬೀರಿದಂತೆ ಕಂಡುಬರುತ್ತಿಲ್ಲ. ವಯಸ್ಸು ಮಾಗಿದಂತೆ ಅವರ ಗೋಲು ಗಳಿಕೆಯ ಸಾಮರ್ಥ್ಯವೂ ಹೆಚ್ಚುತ್ತಿದೆ.

ಈ ಬಾರಿಯ ವಿಶ್ವಕಪ್‌ನಲ್ಲಿ ಆಸ್ಟ್ರೀಯಾದೆದುರಿನ ತನ್ನ ಮೊದಲ ಪಂದ್ಯದಲ್ಲಿ ಮೆಸ್ಸಿ 3 ಗೋಲು ಬಾರಿಸುವ ಮೂಲಕ ವಿಶ್ವಕಪ್‌ನಲ್ಲಿ ತಮ್ಮ ಗೋಲುಗಳ ಸಂಖ್ಯೆಯನ್ನು 18ಕ್ಕೇರಿಸಿಕೊಂಡು, ವಿಶ್ವಕಪ್‌ಗಳಲ್ಲಿ ಅತ್ಯಧಿಕ ಗೋಲು ಬಾರಿಸಿದ ವಿಶಿಷ್ಟ ಸಾಧನೆಗೈದರು. ಅದಕ್ಕೆ ಮುನ್ನ ರೊನಾಲ್ಡೋ ಕಾಂಗೋ ವಿರುದ್ಧ ಗೋಲು ಗಳಿಸಲು ವಿಫಲರಾಗಿದ್ದುದರಿಂದ ಎಲ್ಲರೂ ಮೆಸ್ಸಿಯೇ ರೊನಾಲ್ಡೋಗಿಂತ ಶ್ರೇಷ್ಠ ಎಂಬುದಾಗಿ ಮಾತನಾಡತೊಡಗಿದರು. ಆದರೆ ಮೆಸ್ಸಿ ವಿಶ್ವದಾಖಲೆ ಮಾಡಿದ ರಾತ್ರಿಯೇ ರೊನಾಲ್ಡೋ ಉಜ್ಬೇಕಿಸ್ತಾನದ ವಿರುದ್ಧ 2 ಗೋಲು ಬಾರಿಸುವ ಮೂಲಕ ತಾವಾಡಿದ ಎಲ್ಲಾ ಆರು ವಿಶ್ವಕಪ್‌ಗಳಲ್ಲೂ (2006, 2010, 2014, 2018, 2022, 2026) ಗೋಲು ದಾಖಲಿಸಿದ ವಿಶೇಷ ಸಾಧನೆಗೆ ಪುರಸ್ಕೃತರಾದರು. ಅಲ್ಲಿಂದ ಮೆಸ್ಸಿ ಮತ್ತು ರೊನಾಲ್ಡೋ ಮಧ್ಯೆ ಯಾರು ಶ್ರೇಷ್ಠರೆಂಬ ಚರ್ಚೆ ಮತ್ತೆ ಕಾವೇರಿತು. ಮೆಸ್ಸಿ ಕೂಡಾ ಈ ಆರೂ ವಿಶ್ವಕಪ್‌ಗಳಲ್ಲಿ ಆಡಿದ್ದಾರಾದರೂ 2010ರ ವಿಶ್ವಕಪ್‌ನಲ್ಲಿ ಗೋಲು ಗಳಿಸಲು ವಿಫಲರಾಗಿದ್ದರು.

ರೊನಾಲ್ಡೋ ತಮ್ಮ ವಿರುದ್ಧ ಟೀಕೆಗಳು ಕೇಳಿಬಂದಾಗಲೆಲ್ಲ ತಿರುಗಿಬಿದ್ದು ಟೀಕಾಕಾರರು ಬಾಯಿ ಮುಚ್ಚುವಂತೆ ಮಾಡುತ್ತಾರೆ. ಅವರು ಉಜ್ಬೇಕಿಸ್ತಾನದ ವಿರುದ್ಧ ಗೋಲು ಬಾರಿಸುವ ಮುನ್ನ ವಿಶ್ವಕಪ್‌ನ ನಿರಂತರ 11 ಪಂದ್ಯಗಳಲ್ಲಿ ಗೋಲು ಬಾರಿಸಲಾಗದೆ ನಿರಾಶೆ ಹೊಂದಿದ್ದರು. 2022ರ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಘಾನಾ ವಿರುದ್ಧ ಗೋಲು ಸಾಧಿಸಿದ ಬಳಿಕ ಅವರು ಯಾವುದೇ ಗೋಲು ಬಾರಿಸಿರಲಿಲ್ಲ. ಆ ಬರವನ್ನೀಗ ನೀಗಿದ್ದಾರೆ.

41 ವರ್ಷ ದಾಟಿರುವ ರೊನಾಲ್ಡೋ ಈಗ ವಿಶ್ವಕಪ್‌ನ ಇತಿಹಾಸದಲ್ಲಿ ಗೋಲು ಬಾರಿಸಿದ ಎರಡನೇ ಅತ್ಯಂತ ಹಿರಿಯ ಆಟಗಾರರಾಗಿದ್ದಾರೆ. (ಕ್ಯಾಮರೂನ್‌ನ ರೋಜರ್ ಮಿಲಾ 42ನೇ ವಯಸ್ಸಿನಲ್ಲಿ ಗೋಲು ಬಾರಿಸಿದ್ದರು.)

ತಮ್ಮ ದೇಶದ ಪರವಾಗಿ ವಿಶ್ವಕಪ್‌ನಲ್ಲಿ ಗೋಲು ಬಾರಿಸಿದ



ಅತ್ಯಂತ ಕಿರಿಯ ಮತ್ತು ಅತ್ಯಂತ ಹಿರಿಯ ಆಟಗಾರನೆಂಬ ದಾಖಲೆಯೂ ಅವರಲ್ಲಿದೆ. ವಿಶೇಷವೆಂದರೆ ಅರ್ಜೆಂಟೀನಾ ಪರವಾಗಿ ಮೆಸ್ಸಿ ಕೂಡಾ ಅತ್ಯಂತ ಕಿರಿಯ ಮತ್ತು ಅತ್ಯಂತ ಹಿರಿಯ ಆಟಗಾರನಾಗಿ ವಿಶ್ವಕಪ್‌ನಲ್ಲಿ ಗೋಲು ಬಾರಿಸಿದ ದಾಖಲೆ ಹೊಂದಿದ್ದಾರೆ.

ವಿಶೇಷವೆಂದರೆ ಇಬ್ಬರೂ ಆಟಗಾರರು ವಯಸ್ಸಾದಂತೆ ಹೆಚ್ಚೆಚ್ಚು ಗೋಲು ದಾಖಲಿಸುತ್ತಿರುವುದು. ಮೆಸ್ಸಿ 35 ವರ್ಷ ದಾಟಿದ ಬಳಿಕ ವಿಶ್ವಕಪ್‌ನಲ್ಲಿ 12 ಗೋಲು ದಾಖಲಿಸಿದ್ದಾರೆ. ಆದರೆ 18ರಿಂದ 34 ವರ್ಷದ ಅವಧಿಯಲ್ಲಿ ತಾವಾಡಿದ 19 ವಿಶ್ವಕಪ್ ಪಂದ್ಯಗಳಲ್ಲಿ ಮೆಸ್ಸಿ ಗೋಲು ಗಳಿಸಿದ್ದು 6 ಮಾತ್ರ. ಬಾರ್ಸಿಲೋನಾ ಕ್ಲಬ್ ತ್ಯಜಿಸಿದ ಬಳಿಕ ಮೆಸ್ಸಿ ತಮ್ಮ ದೇಶದ ಪರವಾಗಿ ಹೆಚ್ಚು ಗೋಲು ಗಳಿಸಿದ್ದಾರೆ ಎಂಬುದು ಗಮನಾರ್ಹ.

ರೊನಾಲ್ಡೋ 35ರ ಹರಯದ ಬಳಿಕ ವಿಶ್ವಕಪ್ ಮತ್ತು ಯುರೋಪಿಯನ್ ಚಾಂಪ್ಯನ್‌ಶಿಪ್‌ನಲ್ಲಿ 8 ಗೋಲು ಬಾರಿಸಿದ್ದಾರೆ. ರೊನಾಲ್ಡೋ ತಮ್ಮ ವೃತ್ತಿ ಜೀವನದಲ್ಲಿ ಒಟ್ಟು 975 ಗೋಲುಗಳನ್ನು ಬಾರಿಸಿದ್ದು, ಮುಂದಿನ ದಿನಗಳಲ್ಲಿ ಇನ್ನೂ 25 ಗೋಲು ದಾಖಲಿಸಿ ಸಾವಿರ ಗೋಲುಗಳ ಸರದಾರನಾಗುವ ಗುರಿ ಹೊಂದಿದ್ದಾರೆ.

ಮೆಸ್ಸಿ ಮತ್ತು ರೊನಾಲ್ಡೋ ನಡುವಿನ ತುಲನೆಗೆ ಬರುವುದಾದರೆ ಯಾರೊಬ್ಬರನ್ನೂ ಪ್ರತ್ಯೇಕವಾಗಿ ತೂಗಿ ನೋಡಲಾಗುವುದಿಲ್ಲ. ಇಬ್ಬರೂ ಶ್ರೇಷ್ಠರೇ. ಅವರೊಳಗೆ ತುಲನೆ ಮಾಡುವುದೂ ಸಾಧುವಲ್ಲ. ''ಇಬ್ಬರು ಆಟಗಾರರೂ ಕಳೆದ ಕೆಲವು ವರ್ಷಗಳಿಂದ ಜಾಗತಿಕ ಫುಟ್ಬಾಲ್‌ಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಅವರೊಳಗಿನ ಸ್ಪರ್ಧೆಯು ಅವರ ಆಟದ ಸುಧಾರಣೆಗೇ ಹೆಚ್ಚು ಮಹತ್ವದ್ದಾಗಿದೆ'' ಎಂದು ಅರ್ಜೆಂಟೀನಾದ ಮಾಜಿ ಫುಟ್ಬಾಲಿಗ ಮಾರ್ಟಿನೆಜ್ ಹೇಳುತ್ತಾರೆ.

ಅವರಿಬ್ಬರೊಳಗೆ ಸ್ಪರ್ಧಾತ್ಮಕ ಪೈಪೋಟಿ ಇರುವುದು ಕೂಡಾ ನಿಜವೆ. ಒಬ್ಬರನ್ನೊಬ್ಬರು ಮೀರಿಸಲು ಸದಾ ಯತ್ನಿಸುತ್ತಾರೆ. ಮೆಸ್ಸಿ ದಾಖಲೆಯ ಕುರಿತಂತೆ ಇತ್ತೀಚೆಗೆ ರೊನಾಲ್ಡೋರನ್ನು ಪ್ರಶ್ನಿಸಿದಾಗ ಅವರು ಆ ಕುರಿತಂತೆ ಪ್ರತಿಕ್ರಿಯಿಸಲೇ ನಿರಾಕರಿಸಿದ ಪ್ರಸಂಗ ನಡೆದಿದೆ. ಮೆಸ್ಸಿ ತಂಡದ ಹಿತಕ್ಕನುಗುವಾಗಿ ಆಟವಾಡಿದರೆ, ರೊನಾಲ್ಡೋ ಸ್ವಾರ್ಥಿ ಆಟಗಾರ, ತಾನೇ ಗೋಲು ಹೊಡೆಯಲು ಹೆಚ್ಚು ಆದ್ಯತೆ ಕೊಡುತ್ತಾನೆ ಎಂದು ಕೆಲವರು ಟೀಕಿಸುವುದಿದೆ.

ಈ ವಿಶ್ವಕಪ್‌ನಲ್ಲಿ ಅವರಿಬ್ಬರು ಪರಸ್ಪರ ಮುಖಾಮುಖಿಯಾಗುವ ಸಂದರ್ಭ ಬರಬಹುದೆ ಎಂದು ಫುಟ್ಬಾಲ್ ಪ್ರೇಮಿಗಳು ನಿರೀಕ್ಷಿಸುತ್ತಿದ್ದಾರೆ. ಅರ್ಜೆಂಟೀನಾ ಮತ್ತು ಪೋರ್ಚುಗಲ್‌ಗಳು ತಮ್ಮ ತಮ್ಮ ಬಣಗಳಲ್ಲಿ ಮೇಲಕ್ಕೇರಿ ನಾಕೌಟ್ ಪಂದ್ಯಗಳನ್ನೂ ಗೆಲ್ಲುತ್ತಾ ಸಾಗಿದರೆ ಜುಲೈ 11ರಂದು ಕನ್ಸಾಸ್ ನಗರದಲ್ಲಿ ಅವರಿಬ್ಬರೊಳಗಿನ ಕ್ವಾರ್ಟರ್ ಫೈನಲ್ ಪಂದ್ಯವನ್ನು ವೀಕ್ಷಿಸಬಹುದಾಗಿದೆ. ಅದಕ್ಕಿಂತ ಮುನ್ನ ಮೆಸ್ಸಿಗೆ ಮತ್ತು ರೊನಾಲ್ಡೋಗೆ ಜೂನ್ 28ರಂದು ತಮ್ಮ ನಿರ್ವಹಣೆ ತೋರುವ ಅವಕಾಶವಿದೆ. ಅರ್ಜೆಂಟೀನಾವು ಜೋರ್ಡಾನನ್ನು ಮತ್ತು ಪೋರ್ಚುಗಲ್ ಕೊಲಂಬಿಯಾವನ್ನು ಎದುರಿಸಲಿಕ್ಕಿದೆ.

ಅವರಿಬ್ಬರ ವಿಶ್ವಕಪ್ ಇದೇ ಕೊನೆಯದು ಎಂಬುದಾಗಿ ಕಳೆದೆರಡು ವಿಶ್ವಕಪ್‌ನಿಂದಲೇ ಕೆಲವರು ಭವಿಷ್ಯ ನುಡಿಯುತ್ತಾ ಬರುತ್ತಿದ್ದಾರೆ. ಆದರೆ ಮೆಸ್ಸಿ ಮತ್ತು ರೊನಾಲ್ಡೋ ನಿರ್ವಹಣೆ ಗಮನಿಸಿದರೆ 2030ರ ವಿಶ್ವಕಪ್‌ನಲ್ಲಿ ಕೂಡಾ ಅವರನ್ನು ಕಾಣುವಂತಾದರೆ ಅಚ್ಚರಿ ಪಡಬೇಕಾಗಿಲ್ಲ.

ಮುಂದಿನ ವರ್ಷದ ಆರಂಭದಲ್ಲಿ ಭಾರತಕ್ಕೆ ಟ್ರಂಪ್

ಭಾರತ ಅಮೆರಿಕದ ಆಪ್ತ ಪಾಲುದಾರ

• ನ್ಯೂಯಾರ್ಕ್: ಭಾರತ-ಅಮೆರಿಕದ ಅತ್ಯಂತ ಆಪ್ತ ಪಾಲುದಾರ ಮತ್ತು ಮಿತ್ರ ರಾಷ್ಟ್ರವಾಗಿದೆ. ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಟ್ರಂಪ್ ನಡುವಿನ ಸಂಬಂಧ ಅತ್ಯುತ್ತಮವಾಗಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ತಿಳಿಸಿದ್ದಾರೆ. ಮುಖ್ಯವಾಗಿ ಟ್ರಂಪ್ ಅವರು ಮುಂದಿನ ವರ್ಷದ ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಸುದ್ದಿ ಸಂಸ್ಥೆಯೊಂದರ ಜತೆಗೆ ಮಾತನಾಡಿರುವ ರುಬಿಯೋ, ಈ ಭೇಟಿ, ಅಧ್ಯಕ್ಷ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ನಡುವಿನ ಬಲವಾದ ವೈಯಕ್ತಿಕ ಸಂಬಂಧವನ್ನು ಎತ್ತಿ ತೋರಿಸುತ್ತದೆ ಎಂದು ತಿಳಿಸಿದ್ದಾರೆ.ಅಧ್ಯಕ್ಷರ ಭೇಟಿಯ ಸಿದ್ಧತೆಗಳನ್ನು ಅಂತಿಮಗೊಳಿಸಲು ಈ ವರ್ಷದ ಅಂತ್ಯದೊಳಗೆ ತಾವು ಭಾರತಕ್ಕೆ ಪ್ರಯಾಣಿಸುವ ಸಾಧ್ಯತೆಯಿದೆ ಎಂದು ರುಬಿಯೋ ಸುಳಿವು ನೀಡಿದ್ದಾರೆ. ಈ ಪ್ರವಾಸ, ಫೆಬ್ರವರಿ 2020 ರ ನಂತರ ಟ್ರಂಪ್ ಅವರ ಮೊದಲ ಭಾರತ ಭೇಟಿಯಾಗಲಿದ್ದು, ಅವರು ಎರಡನೇ ಬಾರಿಗೆ ಶ್ವೇತಭವನಕ್ಕೆ ಮರಳಿದ ನಂತರದ ಮೊದಲ ಪ್ರವಾಸವಾಗಲಿದೆ.

ಉಭಯ ನಾಯಕರು ಕೊನೆಯದಾಗಿ ಫ್ರಾನ್ಸ್ ನ ಇವಿಯಾನ್‌ನಲ್ಲಿ ನಡೆದ ಜಿ7 ಶೃಂಗಸಭೆಯ ಸಂದರ್ಭದಲ್ಲಿ ಭೇಟಿಯಾಗಿದ್ದರು. ಇದು 16 ತಿಂಗಳುಗಳಲ್ಲಿ ಅವರ ಮೊದಲ ದ್ವಿಪಕ್ಷೀಯ ಸಭೆಯಾಗಿತ್ತು. ಭಾರತ ಮತ್ತು ಅಮೆರಿಕ ಪ್ರಸ್ತುತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ನಡೆಸುತ್ತಿದ್ದು, ಇದು ಪೂರ್ಣಗೊಳ್ಳುವ ಹಂತದಲ್ಲಿದೆ ಎಂದು ರುಬಿಯೊ ಹೇಳಿದ್ದಾರೆ.

ಜತೆಗೆ, ಎರಡೂ ರಾಷ್ಟ್ರಗಳು ಕ್ವಾಡ್ ಒಕ್ಕೂಟದ ಮತ್ತೊಂದು ಸಭೆಯನ್ನು ಎದುರು ನೋಡುತ್ತಿವೆ. ಇಂಧನ ಪೂರೈಕೆಯನ್ನು ಹೆಚ್ಚಿಸಲು ನಿಕಟವಾಗಿ ಕಾರ್ಯನಿರ್ವಹಿಸುತ್ತಿವೆ ಎಂದೂ ವಿದೇಶಾಂಗ ಕಾರ್ಯದರ್ಶಿ ಹೇಳಿದ್ದಾರೆ.



ಪ್ರಧಾನಿಯನ್ನು ಕೊಂಡಾಡಿದ ರುಬಿಯೊ!

ವಿಶ್ವದ ಅತ್ಯಂತ ಹಳೆಯ ಮತ್ತು ದೊಡ್ಡ ಪ್ರಜಾಪ್ರಭುತ್ವ ದೇಶಗಳಾಗಿ ಅಮೆರಿಕ ಮತ್ತು ಭಾರತ ಸಮಾನ ಮೌಲ್ಯಗಳನ್ನು ಹಂಚಿಕೊಂಡಿವೆ. ಉಭಯ ರಾಷ್ಟ್ರಗಳು ವಿವಿಧ ಕ್ಷೇತ್ರಗಳಲ್ಲಿ ಕಾರ್ಯತಂತ್ರವನ್ನು ಬಲಪಡಿಸುತ್ತಿವೆ. ಇದಲ್ಲದೆ, ಭಾರತೀಯ ಅಮೆರಿಕದ ಸಮುದಾಯ ಅಮೆರಿಕವನ್ನು ಸಮೃದ್ಧಗೊಳಿಸುತ್ತಿದೆ ಮತ್ತು ಎರಡೂ ದೇಶಗಳ ನಡುವೆ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಧಾನಿ ಮೋದಿ ನಾಯಕತ್ವದಲ್ಲಿ ಭಾರತ ಅದ್ಭುತ ಆರ್ಥಿಕ ಪ್ರಗತಿ ಸಾಧಿಸುತ್ತಿದೆ, ಪ್ರಭಾವಿ ಜಾಗತಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ ಎಂದಿದ್ದಾರೆ.

ಮತಾಂತರವಾಗಿದ್ದರೆ ಹಿಂದುಳಿದ ಜಾತಿ ಮುಸ್ಲಿಂ ಸ್ಥಾನಮಾನ ನೀಡಲಾಗದು

• ಚೆನ್ನೈ: ಇಸ್ಲಾಂಗೆ ಮತಾಂತರಗೊಂಡ ವ್ಯಕ್ತಿಗಳಿಗೆ ಹಿಂದುಳಿದ ಜಾತಿಯ ಮುಸಲ್ಮಾನನೆಂಬ ಸ್ಥಾನಮಾನ ನೀಡಲಾಗದು ಎಂದು ಮದ್ರಾಸ್ ಹೈಕೋರ್ಟ್ ಮಹತ್ವದ ತೀರ್ಪಿತ್ತಿದೆ ಮತ್ತು ಈ ವಿಷಯದಲ್ಲಿ ತಮಿಳುನಾಡು ಸರಕಾರದ 2024ರ ಆದೇಶವನ್ನು ನ್ಯಾಯಾಲಯ ತಳ್ಳಿಹಾಕಿದೆ.

ಹಿಂದುಳಿದ ಜಾತಿ , ತೀರಾ ಹಿಂದುಳಿದ ಜಾತಿಗಳು, ಅಸೂಚಿತ ಸಮುದಾಯಗಳು ಮತ್ತು ಪರಿಶಿಷ್ಟ ಜಾತಿ ಸಹಿತ ಸುಮಾರು ಏಳು ಜಾತಿ ವರ್ಗಗಳ ಜನರು ಇಸ್ಲಾಂಗೆ ಮತಾಂತರಗೊಂಡ ಬಳಿಕ, ಮುಸ್ಲಿಂ ಸಮುದಾಯದ ಹಿಂದುಳಿದ ಜಾತಿ -ವರ್ಗ ಸ್ಥಾನಮಾನ ಹೊಂದಬಹುದೆಂಬ ತಮಿಳುನಾಡು ಸರಕಾರದ ಆದೇಶ ತೀರಾ ಅಸಾಂವಿಧಾನಿಕ ಎಂದು ಹೈಕೋರ್ಟ್ ಹೇಳಿದೆ. ಮತಾಂತರಗೊಂಡ ವ್ಯಕ್ತಿ ಮುಸ್ಲಿಂ ಸಮುದಾಯದ ಹಿಂದುಳಿದ ಜಾತಿ ಸ್ಥಾನಮಾನಕ್ಕೆ ಆಗ್ರಹಿಸುವಂತಿಲ್ಲಫಿ. ಆತ ಮುಸಲ್ಮಾನ ಅಷ್ಟೆ ಎಂದು ನ್ಯಾಯಮೂರ್ತಿಗಳಾದ ಜಿ.ಆರ್. ಸ್ವಾಮಿನಾಥನ್ ಮತ್ತು ಪಿ.ಬಿ.ಬಾಲಾಜಿ ಅವರನ್ನು ಒಳಗೊಂಡ ನ್ಯಾಯಪೀಠ ತೀರ್ಪಿತ್ತಿದೆ.

ತಮಿಳುನಾಡಿನ ತೂತುಕುಡಿ ಜಿಲ್ಲೆ ಮೂಲ ವಾಸಿ, ಮೂಲತಃ ಹಿಂದುವಾಗಿದ್ದು ಇಸ್ಲಾಂಗೆ ಮತಾಂತರಗೊಂಡಿರುವ 33ರ ಯುವಕನೋರ್ವನ ಅರ್ಜಿ ವಿಚಾರಣೆ ಸಂದರ್ಭ ಉಚ್ಚ ನ್ಯಾಯಾಲಯ ಪ್ರಸ್ತುತ ಮಹತ್ವದ ತೀರ್ಪು ನೀಡಿದೆ. ಈ ಯುವಕ 2015ರಲ್ಲಿ ಇಸ್ಲಾಂಗೆ ಮತಾಂತರಗೊಂಡಿದ್ದು, ಬೆನ್ನಲ್ಲೇ ತನ್ನ ಹೆಸರು ಬದಲಿಸಿದ್ದ ಮತ್ತು ಇಸ್ಲಾಮಿಕ್ ಸಂಪ್ರದಾಯಗಳ ಪ್ರಕಾರ ವಿವಾಹವಾಗಿದ್ದ. ನಂತರ ತಮಿಳುನಾಡು ಸರಕಾರದ 2024ರ ಆದೇಶದಂತೆ, ತಮಿಳುನಾಡಿನಲ್ಲಿ ಹಿಂದುಳಿದ ಜಾತಿಗಳಿಗೆ ಸೇರಿದ ಮುಸಲ್ಮಾನರೆಂದು ಗುರುತಿಸಲಾಗುವ ಏಳು ಜಾತಿಗಳ ಪೈಕಿ ಒಂದಾಗಿರುವ , ಮುಸ್ಲಿಂ ಲೆಬ್ಬಾಯ್ ಜಾತಿಗೆ ಸೇರಿದವ ತಾನೆಂಬುದಾಗಿ ತನಗೆ ಮಾನ್ಯತೆ ಪ್ರಮಾಣಪತ್ರ ನೀಡಬೇಕೆಂದು ಈ ಯುವಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ.

ಜಾಗತಿಕ ಸಮಸ್ಯೆಗಳಿಗೆ ತಕ್ಷಣವೇ ಸಹಾಯಹಸ್ತ ಚಾಚುವ ದೇಶ

ಭಾರತ ವಿಶ್ವ ಸಂಜೀವಿನಿ



ಜಗತ್ತಿನಾದ್ಯಂತ ಯಾರೇ ಕಷ್ಟದಲ್ಲಿದ್ದರೂ ಭಾರತ ತನ್ನ ಸಹಾಯಹಸ್ತಚಾಚುತ್ತದೆ. ಪಾಕೃತಿಕ ವಿಕೋಪ, ಸಾಂಕ್ರಾಮಿಕ ರೋಗ ಮತ್ತು ಇತರ ಆಂತರಿಕ ಸಮಸ್ಯೆಗಳಿಂದ ದೇಶವು ತತ್ತರಿಸಿ ಹೋಗಿರುವಾಗ ಭಾರತ ತಕ್ಷಣವೇ ತನ್ನ ಕೈಲಾಗುವ ಸಹಾಯ ಮಾಡುತ್ತದೆ. ಇದಕ್ಕೆ ಹಲವು ಉದಾಹರಣೆಗಳು ಸಹ ಇವೆ. ಇತ್ತೀಚೆಗಷ್ಟೇ ಸವವೆನೆಜುವೆಲಾದಲ್ಲಿ ಸಂಭವಿಸಿದ ಅವಳಿ ಭೂಕಂಪಗಳಿಂದಾಗಿ ಸುಮಾರು ಸಾವಿರಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಇನ್ನು ಅನೇಕರು ನಾಪತ್ತೆಯಾಗಿದ್ದಾರೆ. ಕೂಡಲೇ ಭಾರತ ಸರ್ಕಾರ 41 ಸದಸ್ಯರ ವೈದ್ಯಕೀಯ ತಂಡವನ್ನು ಅಲ್ಲಿಗೆ ನಿಯೋಜಿಸಿದೆ. '60 ಪ್ಯಾರಾಚೂಟ್ ಫೀಲ್ಡ್ ಆಂಬ್ಯುಲೆನ್ಸ್' ಪಡೆಗೆ ಸೇರಿದ ಈ ತಂಡ 'ಆಪರೇಷನ್ ಅಮಿಸ್ತಾದ್' ಕಾರ್ಯಾಚರಣೆಯ ಭಾಗವಾಗಿ ಭಾರತೀಯ ವಾಯುಪಡೆಯ ಸಿ-17 ಯುದ್ಧ ವಿಮಾನದ ಮೂಲಕ ಪ್ರಯಾಣ ಬೆಳೆಸಿದೆ.

ಪ್ರಮುಖಾಂಶಗಳು

- ಆಪರೇಷನ್ ಅಮಿಸ್ತಾದ್ ಅನ್ವಯದಲ್ಲಿ 41 ಸದಸ್ಯರ ತಂಡ ಕಳುಹಿಸಿದ ಭಾರತ
- ಫೀಲ್ಡ್ ಆಸ್ಪತ್ರೆ, 35 ಟನ್ ಸಹಾಯ ಸಾಮಗ್ರಿ ಹೊತ್ತ ಎರಡು ಸಿ-17 ವಿಮಾನಗಳು
- ನೇಪಾಳ, ಯೆಮೆನ್, ದಕ್ಷಿಣ ಸುಡಾನ್, ಮ್ಯಾನ್ಮಾರ್ ಶ್ರೀಲಂಕಾದಲ್ಲೂ ಮಾದರಿಯಾಗಿದ್ದ ಭಾರತ
- ಗಡಿ ರಕ್ಷಣೆಯನ್ನು ಮೀರಿ ವಿಸ್ತರಿಸಿರುವ ಸಶಸ್ತ್ರ ಪಡೆಗಳ ವ್ಯಾಪ್ತಿ

ಸುದ್ದಿ ಸಮಗ್ರ

ರಕ್ಷಣಾ ಕಾರ್ಯಾಚರಣೆ (ದಿ ಮಿಷನ್)

ಒಂದು ಫೀಲ್ಡ್ ಆಸ್ಪತ್ರೆ, 35 ಟನ್ ಪರಿಹಾರ ಸಾಮಗ್ರಿಗಳು ಮತ್ತು 41 ಸದಸ್ಯರ ರಕ್ಷಣಾ ತಂಡವನ್ನು ಹೊತ್ತ ಎರಡು ಸಿ-17 ವಿಮಾನಗಳನ್ನು ಕಳುಹಿಸಲಾಗಿದೆ. ತೈಲ ಸಂಪದ್ಭರಿತ ದಕ್ಷಿಣ ಅಮೆರಿಕ ದೇಶವಾದ ವೆನೆಜುವೆಲಾದಲ್ಲಿ ಸದ್ಯ ರಕ್ಷಣಾ ಕಾರ್ಯಗಳು ಬಿರುಸಿನಿಂದ ನಡೆಯುತ್ತಿದ್ದು, ನಾಪತ್ತೆಯಾದವರಿಗಾಗಿ ಅಧಿಕಾರಿಗಳು ಹುಡುಕಾಟ ನಡೆಸುತ್ತಿದ್ದಾರೆ. ಸಂತ್ರಸ್ತರಿಗೆ ನೆರವು ನೀಡುವುದು ಈ ನಿಯೋಜನೆಯ ಮುಖ್ಯ ಉದ್ದೇಶವಾಗಿದೆ.

ಜಾಗತಿಕ ಸ್ಪಂದನೆಯಲ್ಲಿ ಭಾರತವೇ ಮಾದರಿ

ಭಾರತದ ಸಶಸ್ತ್ರ ಪಡೆಗಳು ದೇಶದ ಗಡಿಗಳನ್ನು ದಾಟಿ ಒದಗಿಸುವ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ (ಹೆಚ್‌ಎಡಿಆರ್) ಕಾರ್ಯಾಚರಣೆಗಳ ಸುದೀರ್ಘ ಪಟ್ಟಿಗೆ 'ಆಪರೇಷನ್ ಅಮಿಸ್ತಾದ್' ಇತ್ತೀಚಿನ ಸೇರ್ಪಡೆ. ಕಳೆದ ಒಂದು ದಶಕದಲ್ಲಿ ಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ಪ್ರಕೃತಿ ವಿಕೋಪಗಳಿಗೆ ಸ್ಪಂದಿಸುವುದರಿಂದ ಹಿಡಿದು ಯುದ್ಧ ಪೀಡಿತ ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸುವವರೆಗೆ ವಿದೇಶಗಳಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಗಳನ್ನು ನಡೆಸುತ್ತಲೇ ಬಂದಿವೆ. ದೂರ ಅಥವಾ ಭೂಪ್ರದೇಶದ ಸವಾಲುಗಳನ್ನು ಲೆಕ್ಕಿಸದೆ, ತುರ್ತು ಸಂದರ್ಭಗಳಲ್ಲಿ ಅತ್ಯಂತ ವೇಗವಾಗಿ ಸ್ಪಂದಿಸುವ ಭಾರತದ ಸಾಮರ್ಥ್ಯವನ್ನು ಈ ಕಾರ್ಯಾಚರಣೆಗಳು ಪ್ರತಿಬಿಂಬಿಸಿವೆ.

ನೇಪಾಳ ಮತ್ತು ಯೆಮೆನ್ 2015

2015ರಲ್ಲಿ ನೇಪಾಳದಲ್ಲಿ ಸಂಭವಿಸಿದ ಭೀಕರ ಭೂಕಂಪದ ನಂತರ 'ಆಪರೇಷನ್ ಮೈತ್ರಿ' ಎಂಬ ಕಾರ್ಯಾಚರಣೆಯಲ್ಲಿ ನೆರವು ಕಳುಹಿಸಿದ ಮೊದಲ ದೇಶ ಭಾರತ. ಸೇನೆ ಮತ್ತು ವಾಯುಪಡೆಯು ಸಾವಿರಾರು ಜನರನ್ನು ರಕ್ಷಿಸಿ, ಫೀಲ್ಡ್ ಆಸ್ಪತ್ರೆಗಳನ್ನು ಸ್ಥಾಪಿಸಿತಲ್ಲದೆ ಭೂಕಂಪ ಪೀಡಿತ ಪ್ರದೇಶಗಳಿಗೆ ಅಗತ್ಯ ಪರಿಹಾರ ಸಾಮಗ್ರಿಗಳನ್ನು ತಲುಪಿಸಿತು. ಅದೇ ವರ್ಷ, ಯೆಮೆನ್ ಅಂತರ್ ಯುದ್ಧದ ವೇಳೆ, ಭಾರತೀಯ ನೌಕಾಪಡೆ ಮತ್ತು ವಾಯುಪಡೆಯು 'ಆಪರೇಷನ್ ರಾಹತ್' ನಡೆಸಿ ಏಡನ್ ಬಂದರು ನಗರದಿಂದ 4,700 ಕ್ಕೂ ಹೆಚ್ಚು ಭಾರತೀಯರನ್ನು ಮತ್ತು ಸುಮಾರು 2,000 ವಿದೇಶಿ ನಾಗರಿಕರನ್ನು ಸ್ಥಳಾಂತರಿಸಿತು. ಈ ಕಾರ್ಯಾಚರಣೆ 40ಕ್ಕೂ ಹೆಚ್ಚು ದೇಶಗಳ ನಾಗರಿಕರನ್ನು ರಕ್ಷಿಸಿದ್ದು, ಇದು ಇಂದಿಗೂ ಭಾರತದ ಅತಿದೊಡ್ಡ ಸ್ಥಳಾಂತರ ಕಾರ್ಯಾಚರಣೆಗಳಲ್ಲಿ ಒಂದೆನಿಸಿದೆ.

ಗಡಿ ರಕ್ಷಣೆ ಮೀರಿ

ಒಟ್ಟಾರೆಯಾಗಿ, ಈ ಕಾರ್ಯಾಚರಣೆಗಳು ಭಾರತೀಯ ಸಶಸ್ತ್ರ ಪಡೆಗಳ ಪಾತ್ರ ದೇಶದ ಗಡಿಗಳನ್ನು ಕಾಯುವುದನ್ನು ಮೀರಿ ವಿಸ್ತರಿಸಿದೆ ಎಂಬುದನ್ನು ತೋರಿಸುತ್ತದೆ. ಭಾರತೀಯ ವಾಯುಪಡೆ ಭಾರತದ ಒಳಗಡೆ ಮತ್ತು ವಿದೇಶಗಳಲ್ಲಿ ವಿಪತ್ತು ಪೀಡಿತ ಪ್ರದೇಶಗಳಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಸಿಬ್ಬಂದಿಯನ್ನು ನಿಯಮಿತವಾಗಿ ವಿಮಾನಗಳ ಮೂಲಕ ತಲುಪಿಸುತ್ತಿದೆ. ಸ್ವದೇಶದಲ್ಲಾಗಲಿ ಅಥವಾ ಸಾವಿರಾರು ಕಿಲೋಮೀಟರ್ ದೂರದಲ್ಲಾಗಲಿ, ಮಾನವೀಯ ಬಿಕ್ಕಟ್ಟುಗಳು ಎದುರಾದಾಗ ತಕ್ಷಣವೇ ಸ್ಪಂದಿಸುವ ದೇಶದ ಸಾಮರ್ಥ್ಯವನ್ನು ಈ ದಾಖಲೆಗಳೇ ಸಾರಿ ಹೇಳುತ್ತವೆ ಎಂದು ಸೇನಾಪಡೆಯ ಅಧಿಕಾರಿಯೊಬ್ಬರು ಹೆಮ್ಮೆಯಿಂದ ಹೇಳುತ್ತಾರೆ

ದಕ್ಷಿಣ ಸುಡಾನ್, ಸಾಂಕ್ರಾಮಿಕ ರೋಗ

2016ರಲ್ಲಿ ದಕ್ಷಿಣ ಸುಡಾನ್‌ನ ಜುಬಾದಲ್ಲಿ ಹಿಂಸಾಚಾರ ಭುಗಿಲೆದ್ದಾಗ, ಭಾರತ 'ಆಪರೇಷನ್ ಸಂಕಟ್ ಮೋಚನ್' ನಡೆಸಿ, ನೆಲದ ಮೇಲಿನ ಕಠಿಣ ಮತ್ತು ಅಸ್ಥಿರ ಸುರಕ್ಷತಾ ಪರಿಸ್ಥಿತಿಯ ಹೊರತಾಗಿಯೂ ತನ್ನ 156 ನಾಗರಿಕರನ್ನು ವಿಮಾನದ ಮೂಲಕ ಸುರಕ್ಷಿತವಾಗಿ ಏರ್‌ಲಿಫ್ಟ್ ಮಾಡಿತು. 2020ರ ಕೋರೊನಾ ಸಾಂಕ್ರಾಮಿಕ ಅವಧಿಯಲ್ಲಿ, ಭಾರತೀಯ ನೌಕಾಪಡೆ 'ಆಪರೇಷನ್ ಸಮುದ್ರ ಸೇತು' ಎಂಬ ಪ್ರಮುಖ ಸ್ವದೇಶ ವಾಪಸಾತಿ ಕಾರ್ಯಾಚರಣೆ ಪ್ರಾರಂಭಿಸಿತು. ಇದು ಗಲ್ಫ್ ದೇಶಗಳಿಂದ ಮತ್ತು ಪ್ರಪಂಚದ ಇತರ ಪ್ರದೇಶಗಳಲ್ಲಿ ಸಿಲುಕಿಕೊಂಡಿದ್ದ ಸಾವಿರಾರು ಭಾರತೀಯರನ್ನು ಸಮುದ್ರ ಮಾರ್ಗದ ಮೂಲಕ ಸುರಕ್ಷಿತವಾಗಿ ತಾಯ್ನಾಡಿಗೆ ಕರೆತಂದಿತು.



ಮ್ಯಾನ್ಮಾರ್ ಮತ್ತು ಶ್ರೀಲಂಕಾ 2025

2025ರಲ್ಲಿ ಮ್ಯಾನ್ಮಾರ್‌ನಲ್ಲಿ ಪ್ರಬಲ ಭೂಕಂಪ ಸಂಭವಿಸಿದಾಗ, ಭಾರತೀಯ ಸೇನೆ 'ಆಪರೇಷನ್ ಬ್ರಹ್ಮ' ಹೆಸರಲ್ಲಿ 60 ಹಾಸಿಗೆಗಳ ಫೀಲ್ಡ್ ಆಸ್ಪತ್ರೆಯನ್ನು ಸ್ಥಾಪಿಸಿತು. ಚೇತರಿಕೆ ಪ್ರಯತ್ನಗಳನ್ನು ಬೆಂಬಲಿಸಲು ನೌಕಾಪಡೆ ಮತ್ತು ವಾಯುಪಡೆಯು ನೂರಾರು ಟನ್ ಪರಿಹಾರ ಸಾಮಗ್ರಿಗಳನ್ನು ಆ ದೇಶಕ್ಕೆ ಸಾಗಿಸಿತು. ಅದೇ ವರ್ಷದ ಕೊನೆಯಲ್ಲಿ, ಶ್ರೀಲಂಕಾದಲ್ಲಿ 'ದಿತ್ವಾ' ಚಂಡಮಾರುತದ ನಂತರ, ಭಾರತ 'ಆಪರೇಷನ್ ಸಾಗರ್ ಬಂಧು' ಕಾರ್ಯಾಚರಣೆ ಪ್ರಾರಂಭಿಸಿತು. ಈ ಕಾರ್ಯಾಚರಣೆ, ಸಂಪರ್ಕ ಜಾಲಗಳನ್ನು ಮರುಸ್ಥಾಪಿಸಲು ಸಹಾಯ ಮಾಡಿತು, 2,500 ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸಿತು ಮತ್ತು ಪೀಡಿತ ಸಮುದಾಯಗಳಿಗೆ 1,000 ಟನ್ ಗಿಂತಲೂ ಹೆಚ್ಚು ಪರಿಹಾರ ಸಾಮಗ್ರಿ ವಿತರಿಸಿತು.

ಕಿರುಸುದ್ದಿ

ಕ್ರಿಕೆಟಿಗ ಅಖ್ತರ್ ಸೋದರನ ಅಂತ್ಯಕ್ರಿಯೆಯಲ್ಲಿ ಉಗ್ರರು!

• ಇಸ್ಲಾಮಾಬಾದ್: ಪಾಕಿಸ್ತಾನಿ ಕ್ರಿಕೆಟಿಗ ಶೋಯೆಬ್ ಅಖ್ತರ್ ಹಿರಿಯ ಸಹೋದರ ಶಾಹಿದ್ ಅಂತ್ಯಕ್ರಿಯೆಯಲ್ಲಿ ಲಷ್ಕರ್ ಉಗ್ರರು ಪಾಲ್ಗೊಂಡಿದ್ದು, ಭಾರತೀಯ ಮತ್ತು ಅಂತಾರಾಷ್ಟ್ರೀಯ ಭದ್ರತಾ ಸಂಸ್ಥೆಗಳ ಗಮನಸೆದಿದೆ. ಇತ್ತೀಚೆಗೆ ಇಸ್ಲಾಮಾಬಾದ್‌ನಲ್ಲಿ ಶೋಯೆಬ್ ಹಿರಿಯ ಸಹೋದರ ಶಾಹಿದ್ ಅಂತ್ಯಕ್ರಿಯೆಯಲ್ಲಿ ಲಷ್ಕರ್ ಎ ತೈಬಾ (ಎಲ್‌ಇಟಿ) ಉಪ ಮುಖ್ಯಸ್ಥ ಸೈಫುಲ್ಲಾ ಕಸೂರಿ ಭಾಗವಹಿಸಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಯೋತ್ಪಾದಕ ರಾಷ್ಟ್ರದ ಬಣ್ಣ ಬಯಲಾಗಿದೆ. ಭಾರತದಲ್ಲಿ ಅತ್ಯಂತ ಭೀಕರ 26/11 ಮುಂಬೈ ಮತ್ತು ಪಹಲ್ಗಾಮ್ ದಾಳಿಗಳನ್ನು ಮಾಡಿದ ಲಷ್ಕರ್ ಉಗ್ರ ಸಂಘಟನೆಯ ಭಯೋತ್ಪಾದಕರು ಅಂತ್ಯಕ್ರಿಯೆಯಲ್ಲಿ ಹಾಜರಿದ್ದರು. ಕಸೂರಿ ಮಾತ್ರವಲ್ಲದೆ, ಎಲ್‌ಇಟಿ ನಿಯಂತ್ರಣದ ಪಾಕಿಸ್ತಾನ ಮರ್ಕಾಜಿ ಮುಸ್ಲಿಮ್ ಲೀಗ್(ಪಿಎಂಎಂಎಲ್) ಮುಖ್ಯಸ್ಥ ಇನಾಮ್ ಉರ್ ರೆಹ್ಮಾನ್ ಸಹ ಸ್ಥಳದಲ್ಲಿದ್ದ.

ಕೆಂಪು ಕೋಟೆ: ಮೂವರ ವಿರುದ್ಧ ದೋಷಾರೋಪ

• ಹೊಸದಿಲ್ಲಿ: ಕಳೆದ ವರ್ಷ ದಿಲ್ಲಿಯ ಕೆಂಪುಕೋಟೆಯ ಬಳಿ ನಡೆದಿದ್ದ ಕಾರ್ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ಭಯೋತ್ಪಾದಕರಾದ ಜಮ್ಮು-ಕಾಶ್ಮೀರದ ಜಮೀರ್ ಅಹ್ಮದ್ ಅಹಾಂಗರ್, ತುಫೈಲ್ ಅಹ್ಮದ್ ಭಟ್ ಮತ್ತು ಮುಜಾಫರ್ ಅಹ್ಮದ್ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ದೋಷಾರೋಪಣೆ ಪಟ್ಟಿ ಸಲ್ಲಿಸಿದೆ. ಈ ಪ್ರಕರಣದಲ್ಲಿ ದೋಷಾರೋಪಣೆ ಪಟ್ಟಿಗೆ ಸೇರಿದವರ ಒಟ್ಟು ಸಂಖ್ಯೆ 13ಕ್ಕೆ ಏರಿಕೆಯಾಗಿದೆ. 2025 ನವೆಂಬರ್ 10ರಂದು ಕೆಂಪುಕೋಟೆಯ ಬಳಿ ಸಂಭವಿಸಿದ ಮತ್ತು 11 ಜನರನ್ನು ಬಲಿಪಡೆದ ವಾಹನ ಆಧಾರಿತ ಸುಧಾರಿತ ಸ್ಫೋಟಕ ಸಾಧನ (ವಿಬಿಐಇಡಿ) ಸ್ಫೋಟದ ಪ್ರಮುಖ ಸಂಚುಕೋರರಲ್ಲಿ ಮುಜಾಫರ್ ಅಹ್ಮದ್ ಒಬ್ಬ ಎಂದು ತನಿಖೆಯಿಂದ ತಿಳಿದುಬಂದಿದೆ.

ಆಫ್ಘಾನ್‌ನಲ್ಲಿ ಭೂಕಂಪನ ಭಾರತದಲ್ಲಿ ಕಂಪನಾನುಭವ

• ಹೊಸದಿಲ್ಲಿ: ಈಶಾನ್ಯ ಅಫ್ಘಾನಿಸ್ತಾನದ ಹಿಂದು ಕುಶ್ ಪ್ರದೇಶದಲ್ಲಿ ಸಂಭವಿಸಿದ 6.2ರಷ್ಟು ತೀವ್ರತೆ ಪ್ರಬಲ ಭೂಕಂಪನದಿಂದಾಗಿ ಭಾರತದ ರಾಜಧಾನಿ ದಿಲ್ಲಿ ಸೇರಿದಂತೆ ಇಡೀ ಉತ್ತರ ಭಾರತದಾದ್ಯಂತ ಕಂಪನದ ಅನುಭವವಾಗಿದೆ. ಘಟನೆಯಲ್ಲಿ ಯಾವುದೇ ಸಾವು-ನೋವುಗಳು ದಾಖಲಾಗಿಲ್ಲ, ದಿಲ್ಲಿ, ಎನ್‌ಸಿಆರ್ ವ್ಯಾಪ್ತಿ ಹಾಗೂ ಜಮ್ಮು-ಕಾಶ್ಮೀರದಲ್ಲಿ ಕೆಲವು ಸೆಕೆಂಡು ಭೂಮಿ ತೀವ್ರವಾಗಿ ಕಂಪಿಸಿದೆ. ರಾಷ್ಟ್ರೀಯ ಭೂಕಂಪನ ಶಾಸ್ತ್ರ ಕೇಂದ್ರದ ಮಾಹಿತಿ ಪ್ರಕಾರ, ಭೂಕಂಪನದ ಕೇಂದ್ರಬಿಂದು ಈಶಾನ್ಯ ಅಫ್ಘಾನಿಸ್ತಾನದ ಕಲಾಫ್ಗನ್‌ನಿಂದ ಸುಮಾರು 81 ಕಿಮೀ ದೂರದಲ್ಲಿದ್ದು, ಭೂಮಿಯ ಆಳದಲ್ಲಿ ಅಂದರೆ ಸುಮಾರು 215 ಕಿಮೀ ಆಳದಲ್ಲಿ ಸೃಷ್ಟಿಯಾಗಿದೆ.

ದಾಳಿ ಬೆದರಿಕೆ ಇ-ಮೇಲ್ ಹಲವೆಡೆ ತೀವ್ರ ಕಟ್ಟೆಚ್ಚರ

• ಹೊಸದಿಲ್ಲಿ: ಸಂಭಾವ್ಯ ಭಯೋತ್ಪಾದಕ ದಾಳಿಯ ಕುರಿತು ಬಂದಿರುವ ಬೆದರಿಕೆ ಇಮೇಲ್‌ಗಳ ಹಿನ್ನೆಲೆಯಲ್ಲಿ ದಿಲ್ಲಿ ಮತ್ತು ಉತ್ತರಾಖಂಡ್ ರಾಜ್ಯಗಳಾದ್ಯಂತ ಭದ್ರತೆಯನ್ನು ತೀವ್ರಗೊಳಿಸಲಾಗಿದೆ. ಖಲಿಸ್ತಾನಿ ಭಯೋತ್ಪಾದಕರಿಂದ ದಾಳಿ ನಡೆಯಬಹುದು ಎಂಬ ಮುನ್ನೆಚ್ಚರಿಕೆಯ ನಂತರ ದಿಲ್ಲಿ ಪೊಲೀಸ್, ಉತ್ತರಾಖಂಡ್ ಪೊಲೀಸ್ ಮತ್ತು ಕೇಂದ್ರ ಗುಪ್ತಚರ ಸಂಸ್ಥೆಗಳು ಜಂಟಿಯಾಗಿ ತನಿಖೆ ಆರಂಭಿಸಿವೆ.

ಗುಪ್ತಚರ ಇಲಾಖೆಯ ಮಾಹಿತಿಯ ಪ್ರಕಾರ, ಪ್ರಮುಖ ದೇವಾಲಯಗಳು, ಸರ್ಕಾರಿ ಕಚೇರಿಗಳು, ರಾಜಕೀಯ ನಾಯಕರು, ಸಾರ್ವಜನಿಕ ಮೂಲಸೌಕರ್ಯಗಳು, ರೈಲ್ವೆ ನಿಲ್ದಾಣಗಳು ಮತ್ತು ಪೊಲೀಸ್ ಸಿಬ್ಬಂದಿಯನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಸಾಧ್ಯತೆಯಿದೆ. ಈ ಕಾರಣದಿಂದಾಗಿ, ಪ್ರಮುಖ ಧಾರ್ಮಿಕ ಸ್ಥಳಗಳು ಮತ್ತು ಪ್ರಮುಖ ಸಂಸ್ಥೆಗಳಲ್ಲಿ ಕಣ್ಗಾವಲು ಹೆಚ್ಚಿಸಲಾಗಿದ್ದು, ಭದ್ರತಾ ವ್ಯವಸ್ಥೆಗಳನ್ನು ಬಲಪಡಿಸಲಾಗಿದೆ.

ಘಟನೆಯ ಹಿನ್ನೆಲೆ: ಚಮೋಲಿ ಜಿಲ್ಲೆಯಲ್ಲಿ ಸ್ಥಳೀಯ ನಿವಾಸಿಗಳ ಮೇಲೆ ದಾಳಿ ಮಾಡಿದ ಆರೋಪದಲ್ಲಿ ನಾಲ್ವರು ನಿಹಾಂಗ್ ಯಾತ್ರಿಕರನ್ನು ಬಂಧಿಸಿದ ವಿಷಯವಾಗಿ ಉತ್ತರಾಖಂಡ್ ಪೊಲೀಸ್ ಮತ್ತು ನಿಹಾಂಗ್ ಸಿಖ್ಖರ ನಡುವೆ ಇತ್ತೀಚೆಗೆ ನಡೆದ ಘರ್ಷಣೆಯ ಬೆನ್ನಲ್ಲೇ ಈ ಕಟ್ಟೆಚ್ಚರ ವಹಿಸಲಾಗಿದೆ. ಜೂನ್ 16 ರಂದು ಕರ್ಣಪ್ರಯಾಗದಲ್ಲಿ ನಡೆದಗಲಾಟೆಯಲ್ಲಿನಾಲ್ವರುಯಾತ್ರಿಕರುತಲವಾರುಗಳಿಂದ ನಾಲ್ವರು ಸ್ಥಳೀಯ ನಿವಾಸಿಗಳನ್ನು ಗಾಯಗೊಳಿಸಿದ್ದರು.

ದೇಸಿ ಗಸ್ತು ಹಡಗು ಅಕ್ಷಯ್ ಕರಾವಳಿ ಪಡೆಗೆ ಸೇರ್ಪಡೆ

• ಪಣಜಿ: ಗೋವಾ ಶಿಪ್‌ಯಾರ್ಡ್ ಲಿ. ನಿರ್ಮಾಣದ ಐಸಿಜಿಎಸ್ ಅಕ್ಷಯ್ ಎಂಬ ಹೊಸ ತಲೆಮಾರಿನ ವೇಗದ ಗಸ್ತು ಹಡಗನ್ನು ಭಾರತೀಯ ಕರಾವಳಿ ಪಡೆಯು ಶನಿವಾರ ನಿಯೋಜನೆ ಮಾಡಿದೆ. ಸಾಗರೋತ್ತರ ಭದ್ರತೆ, ಸಂಶೋಧನೆ, ರಕ್ಷಣಾ ಕಾರ್ಯಾಚರಣೆ ಹಾಗೂ ಕರಾವಳಿ ಕಣ್ಗಾವಲು ಬಲವರ್ಧನೆಯ ಉದ್ದೇಶದಿಂದ ವೇಗದ ಗಸ್ತು ಹಡಗನ್ನು ಕರಾವಳಿ ಪಡೆ ನಿಯೋಜಿಸಿದೆ. ವಾಸ್ಕೋದಲ್ಲಿನ ಗೋವಾ ಶಿಪ್‌ಯಾರ್ಡ್ ಲಿ.ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಕರಾವಳಿ ಪಡೆ ಸಿಬ್ಬಂದಿ ಮತ್ತು ಸರ್ಕಾರಿ ಗಣ್ಯರ ಉಪಸ್ಥಿತಿಯಲ್ಲಿ ದೇಸಿ ಗಸ್ತು ಹಡಗನ್ನು ಕರಾವಳಿ ಪಡೆಯಲ್ಲಿ ನಿಯೋಜಿಸಲಾಗಿದೆ. ಕೇಂದ್ರ ಸರ್ಕಾರದ ಆತ್ಮನಿರ್ಭರ(ಸ್ವಾವಲಂಬಿ) ಭಾರತದ ಕನಸು ಮತ್ತು ಮೇಕ್ ಇನ್ ಇಂಡಿಯಾ ಯೋಜನೆಗಳ ಅನ್ವಯ ದೇಸಿ ಗಸ್ತು ಹಡಗನ್ನು ಗೋವಾ ಶಿಪ್‌ಯಾಡ್‌ನಲ್ಲೇ ವಿನ್ಯಾಸಗೊಳಿಸಿ ನಿರ್ಮಿಸಲಾಗಿದೆ. ಇದು ಭಾರತದ ದೇಸಿ ಹಡಗು ನಿರ್ಮಾಣದ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ನಾಶವಿಲ್ಲದ ಅಥವಾ ಅವಿನಾಶಿ ಅರ್ಥವಿರುವ ಅಕ್ಷಯ ಎಂಬ ಹೆಸರಿಡಲಾಗಿದೆ. ಇದು ದೇಶದ ಸಾಗರ ಹಿತಾಸಕ್ತಿಯ ರಕ್ಷಣೆ ಮತ್ತು ಸುರಕ್ಷಿತ, ಸುಭದ್ರ ಮತ್ತು ಸ್ವಚ್ಛವಾಗಿಡುವ ಕರಾವಳಿ ಪಡೆಯ ಬದ್ಧತೆಯ ಪ್ರತೀಕವಾಗಿದೆ. ಈ ನೌಕೆ ಸಮುದ್ರ ಕಾನೂನು ಜಾರಿಯಲ್ಲಿ ನೆರವಾಗಲಿದ್ದು, ಸಂಕಷ್ಟದಲ್ಲಿ ಸಿಲುಕುವ ನಾವಿಕರಿಗೆ ನೆರವು ನೀಡುವುದು ಸೇರಿ ವಿವಿಧ ಕರ್ತವ್ಯಗಳನ್ನು ನಿರ್ವಹಿಸಲಿದೆ. ಈ ನೌಕೆಯ ನೇತೃತ್ವವನ್ನು ಕಮಾಂಡೆಂಟ್ (ಜೂ. ಗ್ರೇಡ್) ದೀಪಕ್ ಚೌಬೆ ವಹಿಸಲಿದ್ದಾರೆ.



ವಿದೇಶಾಂಗ ನೀತಿಗಿಂತ ಮತ ಬ್ಯಾಂಕ್ ಮುಖ್ಯವಾಯಿತೇ?

• ಹೊಸದಿಲ್ಲಿ: ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಗಾಜಾ ವಿಚಾರದಲ್ಲಿ ಕೇಂದ್ರ ಸರ್ಕಾರ ಮೌನ ವಹಿಸಿದೆ ಎಂದು ಆರೋಪಿಸಿದ್ದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಬಿಜೆಪಿಯು, ಕಾಂಗ್ರೆಸ್ ನಾಯಕಿ ಭಾರತದ ವಿದೇಶಾಂಗ ನೀತಿಗಿಂತ ಜನರನ್ನು ದಾರಿತಪ್ಪಿಸಲು ಮತಬ್ಯಾಂಕ್ ರಾಜಕೀಯಕ್ಕೇ ಹೆಚ್ಚು ಆದ್ಯತೆ ನೀಡಿರುವುದು ವಿಪರ್ಯಾಸವೆಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಹೇಳಿದ್ದಾರೆ.

- **ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಕಿಡಿ**

ಭಾರತವು ಪ್ಯಾಲೆಸ್ತೀನ್ ಜನರ ಹಕ್ಕುಗಳ ಕುರಿತ ತನ್ನ ಐತಿಹಾಸಿಕ ನಿಲುವಿಗಿಂತ ಇಸ್ರೇಲ್‌ನೊಂದಿಗೆನಿಕಟಸಂಬಂಧಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಸೋನಿಯಾ ಆರೋಪಿಸಿದ್ದರು.ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ, ಜನರನ್ನು ದಾರಿತಪ್ಪಿಸಲು ಮತಬ್ಯಾಂಕ್ ರಾಜಕಾರಣಕ್ಕೆ ಆದ್ಯತೆ ನೀಡಲು ಸೋನಿಯಾ ಗಾಂಧಿ ಪ್ರಯತ್ನಿಸುತ್ತಿದ್ದಾರೆ. ಆದರೆ ಭಾರತ ಗಾಜಾ ಮತ್ತು ಪ್ಯಾಲೆಸ್ತೀನ್ ವಿಷಯದಲ್ಲಿ ಹಲವು ಬಾರಿ ತನ್ನ ನಿಲುವನ್ನು ಸ್ಪಷ್ಟಪಡಿಸಿದ್ದು, ಪ್ಯಾಲೆಸ್ತೀನ್‌ಗೆ ಮಾನವೀಯ ನೆರವನ್ನೂ ನೀಡಿರುವುದನ್ನು ಪೂನಾವಾಲಾ ಎತ್ತಿತೋರಿದರು. 2023ರಲ್ಲಿ ಹಮಾಸ್ ಉಗ್ರರು ಇಸ್ರೇಲ್ ಗಡಿಯಲ್ಲಿ ನಡೆಸಿದ ಅಮಾನುಷ ದಾಳಿಯಲ್ಲಿ ಸಾವಿರಕ್ಕೂ ಅಧಿಕ ಮಕ್ಕಳು, ಮಹಿಳೆಯರು, ನಾಗರಿಕರು ಬಲಿಯಾದ ಬಳಿಕ ಇಸ್ರೇಲ್ ವ್ಯಾಪಕವಾಗಿ ಪ್ರತಿದಾಳಿ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು. ಪ್ಯಾಲೆಸ್ತೀನ್-ಇಸ್ರೇಲ್ ನಡುವಣ ತಿಕ್ಕಾಟಕ್ಕೆ ಸಂಬಂಧಿಸಿದ ವಿಶ್ವಸಂಸ್ಥೆಯ ನಿರ್ಣಯಗಳ ಮೇಲೆ ಭಾರತ ಮತ ಚಲಾಯಿಸುವ ಮೂಲಕ ತನ್ನ ನಿಲುವು ಸ್ಪಷ್ಟಪಡಿಸಿದೆ.

ಪಾರದರ್ಶಕ ತನಿಖೆ ಖಚಿತಪಡಿಸಲು ಬದ್ಧ

• ಅಯೋಧ್ಯೆ: ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಶನಿವಾರ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಟ್ರಸ್ಟ್ ಸದಸ್ಯ ಅನಿಲ್ ಮಿಶ್ರಾ ಅವರ ರಾಜೀನಾಮೆ ಸಲ್ಲಿಸಿರುವುದನ್ನು ದೃಢೀಕರಿಸಿದ್ದು, ಶ್ರೀರಾಮ ಮಂದಿರ ದೇಣಿಗೆ ದುರುಪಯೋಗ ಆರೋಪಗಳ ಬಗ್ಗೆ ಪಾರದರ್ಶಕ ತನಿಖೆಯನ್ನು ಖಚಿತಪಡಿಸಲು ನಾವು ಬದ್ಧರಾಗಿದ್ದೇವೆ ಎಂದು ಭರವಸೆ ನೀಡಿದೆ. ಶ್ರೀರಾಮ ಮಂದಿರ ಟ್ರಸ್ಟ್‌ನ ಖಜಾಂಚಿ ಸ್ವಾಮಿ ಗೋವಿಂದ್ ದೇವ್ ಗಿರಿ ಮಹಾರಾಜ್ ಅವರು ಪ್ರಕಟಿಸಿದ ಹೇಳಿಕೆಯಲ್ಲಿ, ರಾಮ ಮಂದಿರ ವಿಚಾರದಲ್ಲಿ ಇತ್ತೀಚೆಗಿನ ಬೆಳವಣಿಗೆಗಳಿಂದ ಆಘಾತಕ್ಕೆ ಒಳಗಾಗಿದ್ದೇವೆ, ನೊಂದಿದ್ದೇವೆ. ಪಾರದರ್ಶಕ ತನಿಖೆ ನಡೆಸಲಾಗುವುದು. ಭಕ್ತರ ನಂಬಿಕೆಯನ್ನು ಪುನಃಸ್ಥಾಪಿಸುವ ಕುರಿತ ಖಚಿತಪಡಿಸಲು ಟ್ರಸ್ಟ್ ಬದ್ಧವಾಗಿದೆ. ಭಕ್ತರು ಶ್ರೀರಾಮನಿಗೆ ಸಲ್ಲಿಸಿದ ಬೆಳ್ಳಿ ಇಟ್ಟಿಗೆಗಳು, ಆಭರಣಗಳು ಸೇರಿದಂತೆ ಎಲ್ಲಾ ಬೆಲೆಬಾಳುವ ವಸ್ತುಗಳು ನಿಜವಾದ ಲೆಕ್ಕಸಮೇತ ಸುರಕ್ಷಿತವಾಗಿವೆ. ಭವಿಷ್ಯದಲ್ಲಿ ಇಂತಹ ಯಾವುದೇ ದುರದೃಷ್ಟಕರ ಪರಿಸ್ಥಿತಿ ಉದ್ಭವಿಸದಂತೆ ನಾವು ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಮಹಾರಾಜ್ ಭರವಸೆ ನೀಡಿದ್ದಾರೆ.


10 ಬೋಗಿಗಳ ರೈಲು ಜಿಂದ್-ಸೋನಿಪತ್ ಮಾರ್ಗದಲ್ಲಿ ಸಂಚಾರ

ಹೈಡ್ರೋಜನ್ ರೈಲು ಸಂಚಾರಕ್ಕೆ ಅನುಮತಿ

• ಲಖನೌ: ದೇಶದಲ್ಲಿ ಹಸಿರು ರೈಲು ಪ್ರಯಾಣ ಹಾಗೂ ಸ್ವಚ್ಛತೆಗೆ ಉತ್ತೇಜಿಸುವ ಉದ್ದೇಶದಿಂದ ದೇಶದ ಮೊದಲ ಸ್ವದೇಶಿ ಹೈಡ್ರೋಜನ್ ರೈಲಿಗೆ ಭಾರತೀಯ ರೈಲ್ವೆ ಕಾರ್ಯಾಚರಣಾ ಅನುಮತಿಯನ್ನು ನೀಡಿದೆ. ದೇಶದ ಮೊದಲ ಹೈಡ್ರೋಜನ್ ಇಂಧನ ಬ್ಯಾಟರಿ ಆಧಾರಿತ ರೈಲಾಗಿದ್ದು, ಜಿಂದ್-ಸೋನಿಪತ್ ಮಾರ್ಗದಲ್ಲಿ ಸಂಚರಿಸಲಿದೆ. ಹೈಡ್ರೋಜನ್ ರೈಲೆಂದರೆ ವೇಗದಲ್ಲಿ ಸಂಚರಿಸುವ ವಿದ್ಯುತ್ ಸ್ಥಾವರವಿದ್ದಂತೆ. ಈ 10 ಬೋಗಿಗಳ ರೈಲು ತಲಾ 1,200 ಕೆವ್ಯಾಟ್ ವಿದ್ಯುತ್ ಉತ್ಪಾದಿಸುವ ಎರಡು ಡ್ರೈವಿಂಗ್ ಕಾರುಗಳನ್ನು ಹೊಂದಿದೆ. ಅಂದರೆ ಇದು ಒಟ್ಟು 2,400 ಕೆವ್ಯಾಟ್ ವಿದ್ಯುತ್ ಉತ್ಪಾದಿಸುತ್ತದೆ. ಉಷ್ಣ ಮತ್ತು ನೀರಿನ ಆವಿಯನ್ನಷ್ಟೇ ಹೊರಸೂಸುವುದರಿಂದ ಇದು ಸಂಪೂರ್ಣ ಕಾರ್ಬನ್ ಮುಕ್ತವಾಗಿದೆ.

ಸುರಕ್ಷತೆ ಮತ್ತು ಶೇಖರಣೆ : ರೈಲಿನಲ್ಲಿ 54 ಹೈಡ್ರೋಜನ್ ಸಿಲಿಂಡರ್‌ಗಳು, ಅತ್ಯಾಧುನಿಕ ಸೋರಿಕೆ ಮತ್ತು ಬೆಂಕಿ ಪತ್ತೆಹಚ್ಚುವ ಉಪಕರಣಗಳು ಇರಲಿದ್ದು, ಜಿಂದ್‌ನಲ್ಲಿ ಇಂಧನ ಬಂಕ್ ನಿರ್ಮಿಸಲಾಗಿದೆ. ಇದು ಎಲ್ಲಾ ರೀತಿಯ ಸುರಕ್ಷತೆ ನೀಡಲಿದ್ದು, ಹೈಡ್ರೋಜನ್ ರೈಲಿನ ತಡೆರಹಿತ ಕಾರ್ಯಾಚರಣೆಯನ್ನು ಖಚಿತಪಡಿಸಲಿದೆ. ಈ ರೈಲಿನಲ್ಲಿ ಶಬ್ದ ಮಾಲಿನ್ಯ ಇರುವುದಿಲ್ಲ.

ಸ್ವದೇಶಿ ನಿರ್ಮಿತ (ಮೇಡ್ ಇನ್ ಇಂಡಿಯಾ): ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮನಿರ್ಭರ(ಸ್ವಾವಲಂಬಿ) ಭಾರತ ಉಪಕ್ರಮದ ಅನ್ವಯ ಸಂಪೂರ್ಣ ದೇಶೀಯ ನಿರ್ಮಾಣ ಮತ್ತು ವಿನ್ಯಾಸವನ್ನು ಹೊಂದಿದೆ. ಇದು ಮುಂದಿನ ತಲೆಮಾರಿನ ಸುಸ್ಥಿರ ರೈಲ್ವೆ ತಂತ್ರಜ್ಞಾನದ ಸಾಮರ್ಥ್ಯವನ್ನು ಪ್ರದರ್ಶಿಸಲಿದೆ.



- **ವೇಗ:** ಪ್ರತಿ ಗಂಟೆಗೆ 120ರಿಂದ 140 ಕಿ.ಮೀ.
- **ವಿದ್ಯುತ್ ಔಟ್‌ಪುಟ್:** 2,400 ಕೆವ್ಯಾಟ್
- **ಹಾರ್ಸ್ ಪವರ್:** 3,200ರಿಂದ 3,220 ಎಚ್‌ಪಿ
- **ಬೋಗಿಗಳು:** 10
- **ಕಾರ್ಬನ್ ಅಂಶ:** ಸಂಪೂರ್ಣ ಕಾರ್ಬನ್ ಮುಕ್ತ
- **ಸಂಚಾರ ಮಾರ್ಗ:** ಜಿಂದ್ -ಸೋನಿಪತ್, ಹರ್ಯಾಣ
- **ಇಂಧನ ಬಂಕ್:** ಜಿಂದ್
- **ಮೈಲೇಜ್:** 250 ಕಿ.ಮೀ.
- **ಹೈಡ್ರೋಜನ್:** 54 ಸಿಲಿಂಡರ್‌ಗಳು

ರಾಮಮಂದಿರ ದೇಣಿಗೆ ದುರುಪಯೋಗ

ಲಪಟಾಯಿಸಿದ್ದ 79 ಲಕ್ಷ ರೂ.ವಶ

• ಅಯೋಧ್ಯೆ: ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ದೇಣಿಗೆ ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಬಂಧಿಸಲಾದ 8 ಆರೋಪಿಗಳನ್ನು ಜೂ.29 ರವರೆಗೆ ನ್ಯಾಯಾಲಯ ಪೊಲೀಸ್ ಕಸ್ಟಡಿಗೆ ನೀಡಿದೆ, ಈ ಅವಧಿಯಲ್ಲಿ ತನಿಖಾಧಿಕಾರಿಗಳು ಅವರನ್ನು ವಿಚಾರಣೆ ಮುಂದುವರಿಸಲಿದ್ದಾರೆ. ಬಂಧಿತರಿಂದ 79.85ಲಕ್ಷ ರೂ.ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪ್ರಾಸಿಕ್ಯೂಷನ್ ಅಧಿಕಾರಿ ಕೆ.ಸಿ.ವರ್ಮಾ ತಿಳಿಸಿದ್ದಾರೆ. ಆರೋಪಿಗಳು ಸಾರ್ವಜನಿಕ ಸೇವಕರಾಗಿದ್ದು, ಆರು ಮಂದಿ ಬ್ಯಾಂಕ್ ಉದ್ಯೋಗಿಗಳಾಗಿದ್ದಾರೆ. ಇವರನ್ನು ಬ್ಯಾಂಕ್ ದೇವಾಲಯದಲ್ಲಿ ಸ್ವೀಕರಿಸಿದ ನಗದು ದೇಣಿಗೆಗಳನ್ನು ಎಣಿಸಲು ನಿಯೋಜಿಸಿತ್ತು. ಅವರು ಬ್ಯಾಂಕಿನಿಂದ ವೇತನ ಪಡೆಯುತ್ತಿದ್ದರು. ಇನ್ನೊಬ್ಬ ಆರೋಪಿ ಟಿನ್ನು ಯಾದವ್ ಅವರು ಮಂದಿರ ಟ್ರಸ್ಟಿನ ಕಾರ್ಯದರ್ಶಿಯಾಗಿದ್ದ ಚಂಪತ್ ರಾಯ್ ಅವರ ಮಾಜಿ ಕಾರು ಚಾಲಕನಾಗಿದ್ದ.

ಈ ಆರೋಪಿಗಳು ನಗದು ಎಣಿಕೆ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗದಂತೆ ಒಬ್ಬ ಅಡ್ಡಲಾಗಿ ನಿಂತರೆ, ಇನ್ನೊಬ್ಬ ಹುಂಡಿಯಿಂದ ಎಣಿಕೆಗೆ ತೆಗೆದ ಹಣವನ್ನು ಎಗರಿಸುತ್ತಿದ್ದ, ಮತ್ತೊಂದು ತಂಡ ಬಂಡಲ್‌ನೊಳಗೆ ಹೆಚ್ಚುವರಿ ನೋಟು ಸಿಕ್ಕಿಸಿ ಬ್ಯಾಂಕಿಗೆ ಜಮೆ ಮಾಡುವ ಮುನ್ನ ಅದನ್ನು ಲಪಟಾಯಿಸುತ್ತಿತ್ತಲ್ಲದೆ, ಕಡಿಮೆ ಲೆಕ್ಕತೋರಿಸುತ್ತಿತ್ತು. ಇನ್ನೊಂದು ತಂಡ ದೇಗುಲದ ಶೌಚಾಲಯದೊಳಗೆ ಅದನ್ನು ಬಚ್ಚಿಟ್ಟು ಬಳಿಕ ತಮ್ಮೊಳಗೆ ಹಂಚಿಕೊಳ್ಳುವ ಕೆಲಸ ಮಾಡುತ್ತಿತ್ತು

ಗುಪ್ತ ಕ್ಯಾಮರಾ ಇಟ್ಟ ಆಡಳಿತ ಮಂಡಳಿ- ಬಯಲಾಯ್ತು ಅಕ್ರಮ !: ದೇವಸ್ಥಾನದಿಂದ ನಿಯಮಿತವಾಗಿ ಬ್ಯಾಂಕಿಗೆ ಜಮೆ ಮಾಡಲಾಗುತ್ತಿದ್ದ ಕಾಣಿಕೆ ಹಣದ ಕಡತಗಳ ಪರಿಶೀಲನೆಯ ವೇಳೆ, ಎಲ್ಲೋ ವ್ಯತ್ಯಾಸವಾಗುತ್ತಿರುವ ಬಗ್ಗೆ ಸಂಶಯ ಬಂದಿದೆ.6-7ಲಕ್ಷ ರೂ.ಗಳವರೆಗೆ ಸಂಗ್ರಹಿಸಬಹುದಾದ ಹುಂಡಿಯಲ್ಲಿ 500ರೂ. ಮುಖಬೆಲೆಯ ನೋಟುಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಕಂಡುಬಂದಿದೆ. ಇದರಿಂದ ತೀವ್ರ ಅನುಮಾನಗೊಂಡ ಆಡಳಿತ ಮಂಡಳಿ ವಂಚನೆಯ ಪತ್ತೆಗಾಗಿ ಹಣಲೆಕ್ಕ ಮಾಡುತ್ತಿದ್ದ ಕೋಣೆಯೊಳಗೆ ರಹಸ್ಯ ಕ್ಯಾಮರಾಗಳನ್ನು ಅಳವಡಿಸಿತು.

ಕಿರುಸುದ್ದಿ

ಮಹನೀಯರ ಆದರ್ಶಗಳು ಯುವಜನತೆಗೆ ದಾರಿದೀಪ: ಗಾದೆಪ್ಪ

• **ಬಳ್ಳಾರಿ:** ನಾಡಿನ ಅಭಿವೃದ್ಧಿಗೆ ಶ್ರಮಿಸಿದ ಎಲ್ಲ ಮಹನೀಯರ ಜಯಂತಿ ಸರ್ಕಾರ ಆಚರಿಸುವ ಮೂಲಕ ಅವರ ಕೊಡುಗೆಗಳನ್ನು ಸ್ಮರಿಸುತ್ತಿದೆ ಎಂದು ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ ಹೇಳಿದರು. ನಗರದ ಡಾ.ರಾಜಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ಹೊಂಗಿರಣ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಆಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ ಕೆಂಪೇಗೌಡ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಕೆ.ಇ.ಚಿದಾನಂದಪ್ಪ ಮಾತನಾಡಿ, ನಾಡಪ್ರಭು ಕೆಂಪೇಗೌಡರು ತೀರಾ ಚಿಕ್ಕ ವಯಸ್ಸಿನಲ್ಲೇ ಕೃಷ್ಣದೇವರಾಯರ ಆಸ್ಥಾನಕ್ಕೆ ಭೇಟಿ ನೀಡಿದ್ದರು. ವಿಜಯನಗರ ಸಾಮ್ರಾಜ್ಯದ ವೈಭವ, ಅಲ್ಲಿನ ಸಂಪತ್ತು, ಕಟ್ಟಡಗಳು ಹಾಗೂ ದೇವಸ್ಥಾನಗಳನ್ನು ಕಂಡು ಪ್ರೇರಿತರಾಗಿದ್ದ ಅವರು, ತಾವೂ ಇಂತಹದೊಂದು ಸುಂದರ ನಾಡನ್ನು ಕಟ್ಟಬೇಕೆಂಬ ದೊಡ್ಡ ಕನಸನ್ನು ಕಂಡಿದ್ದರು. ಅವರ ಆ ಕನಸಿನ ಫಲವೇ ಇಂದಿನ ಬೆಂಗಳೂರು ಎಂದು ಅವರು ಸ್ಮರಿಸಿದರು. ಕುರುಗೋಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಸಹ ಪ್ರಾಧ್ಯಾಪಕ ಡಾ.ಶಶಿಕಾಂತ ಮಾತನಾಡಿ, ಕೆಂಪೇಗೌಡರು ಯಲಹಂಕ ನಾಡಪ್ರಭುಗಳಾಗಿದ್ದ ಜಯಗೌಡರ ವಂಶಸ್ಥರು. ಇವರ ತಂದೆ ಕೆಂಪನಂಜೇಗೌಡರು. ಕ್ರಿ.ಶ. 1510 ರಲ್ಲಿ ಜನಿಸಿದ ಕೆಂಪೇಗೌಡರು ಚಿಕ್ಕಂದಿನಿಂದಲೇ ಧೀರರೂ, ಕಲೆ ಮತ್ತು ಸಾಹಿತ್ಯ ಪ್ರೇಮಿಗಳೂ ಆಗಿದ್ದರು. ಕೆಂಪೇಗೌಡರು ನ್ಯಾಯಶಾಸ್ತ್ರ, ಇತಿಹಾಸ, ಭೂಗೋಳಶಾಸ್ತ್ರ ತರ್ಕಶಾಸ್ತ್ರ, ತತ್ವಶಾಸ್ತ್ರಗಳ ಜೊತೆಗೆ ಖಡ್ಗ ವಿದ್ಯೆ, ಆಡಳಿತ, ಧರ್ಮನಿಷ್ಠೆ, ರಾಜ್ಯಭಾರ ಹಾಗೂ ಯುದ್ಧ ಕಲೆಗಳನ್ನು ಕರಗತ ಮಾಡಿಕೊಂಡರು. ಕ್ರಿ.ಶ. 1515ರಲ್ಲಿ ಮೊದಲ ಬಾರಿಗೆ ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದರು ಎಂದು ಕೆಂಪೇಗೌಡರ ಜೀವನ ಚರಿತ್ರೆ ಪ್ರಸ್ತುತಪಡಿಸಿದರು. ಈ ವೇಳೆ ಸಂವಿಧಾನ ಪ್ರಸ್ತಾವನೆಯನ್ನು ಬೋಧಿಸಲಾಯಿತು. ಬಳ್ಳಾರಿಯ ಎಸ್.ಲಕ್ಷ್ಮಿ, ಪವನ್ ಕುಮಾರ್ ತಂಡ ಭಕ್ತಿ ಸಂಗೀತ ಕಾರ್ಯಕ್ರಮ ಗಮನಸೆಳೆಯಿತು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಮುಖಂಡರಾದ ವಿಷ್ಣುವರ್ಧನ್ ಬೊಯಪಾಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಾನಸೂರ ವಿದ್ಯಾರ್ಥಿ ಸಾವು: ಶಿಕ್ಷಕನ ಬಂಧನ

• **ಸಿದ್ದಾಪುರ:** ತಾಲೂಕಿನ ಕಾನಸೂರಿನ ಇಂದಿರಾಗಾಂಧಿ ವಸತಿ ಶಾಲೆಯ ವಿದ್ಯಾರ್ಥಿ ಗೋಕುಲ ಗೌಡ



ಈತನ ಸಾವಿಗೆ ಸಂಬಂಧಿಸಿದಂತೆ ಶಾಲೆಯ ಹಿಂದಿ ಶಿಕ್ಷಕ ಅಬು ತಲಹ ಅವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಮೃತ ವಿದ್ಯಾರ್ಥಿಯ ತಾಯಿಯ ದೂರಿನ ಹಿನ್ನೆಲೆಯಲ್ಲಿ ಶಿಕ್ಷಕನನ್ನು ವಿಚಾರಣೆಗೆಂದು ವಶಕ್ಕೆ ಪಡೆಯಲಾಗಿತ್ತು. ಈ ಶಿಕ್ಷಕನು ವಿದ್ಯಾರ್ಥಿಗಳೊಂದಿಗೆ ಅಸಭ್ಯ ನಡವಳಿಕೆ ಮಾಡುತ್ತಿದ್ದು ತನ್ನ ಗುಟ್ಟು ರಟ್ಟಾಗುವ ಭಯದಲ್ಲಿ ನೇಣಿಗೆ ಶರಣಾದ ವಿದ್ಯಾರ್ಥಿ ಗೋಕುಲ ಗೌಡನನ್ನು ಬೆದರಿಸಿ ಥಳಿಸಿದ್ದನೆಂದು ದೂರಿನಲ್ಲಿ ಸ್ಪಷ್ಟಪಡಿಸಲಾಗಿತ್ತು. ವಿದ್ಯಾರ್ಥಿಯ ಸಾವಿನ ಕುರಿತು ಅನುಮಾನ ವ್ಯಕ್ತಪಡಿಸಿ ಪಾಲಕರು, ಊರವರು ಸೇರಿದಂತೆ ಸಿದ್ದಾಪುರ ಪಟ್ಟಣದಲ್ಲಿ ಹಲವಾರು ಪ್ರತಿಭಟನೆಗಳು ನಡೆದಿದ್ದವು. ಈ ಘಟನೆಯ ತನಿಖೆಯನ್ನು ಕಾರವಾರ ಡಿವೈಎಸ್‌ಪಿ ಎಸ್.ವಿ.ಗಿರೀಶ ಅವರಿಗೆ ವಹಿಸಿದ್ದು ತನಿಖೆ ಕೈಗೊಂಡಿರುವ ಗಿರೀಶ ಅವರು ಶಿಕ್ಷಕ ಅಬು ತಲಹ ಅವರ ಬಂಧನವನ್ನು ಖಚಿತಪಡಿಸಿದ್ದಾರೆ.

ವಿದ್ಯಾರ್ಥಿ ಆತ್ಮಹತ್ಯೆ

• **ಸಿದ್ದಾಪುರ:** ತಾಲೂಕಿನ ಕಾನಸೂರ ಕಲ್ಲಟ್ಟೆಯಲ್ಲಿ ವಿದ್ಯಾರ್ಥಿಯೋರ್ವ ಪರೀಕ್ಷೆಯಲ್ಲಿ ಫೇಲಾದ ವಿಷಯವನ್ನು ಮನಸ್ಸಿಗೆ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಶುಕ್ರವಾರ ಸಂಭವಿಸಿದೆ. ಉಡುಪಿಯ ಪಿಪಿಸಿ ಕಾಲೇಜಿನಲ್ಲಿ ಬಿಕಾಂ ಎರಡನೇ ವರ್ಷದಲ್ಲಿ ಓದುತ್ತಿರುವ ವಿದ್ಯಾರ್ಥಿ ಅಭಿರಾಮ ವೆಂಕಟ್ರಮಣ ಹೆಗಡೆ (21) ಜೂನ್ 22ರಂದು ಪರೀಕ್ಷೆ ಮುಗಿಸಿಕೊಂಡು ಉಡುಪಿಯಿಂದ ಮನೆಗೆ ಬಂದವನು ಈ ಹಿಂದಿನ ಪರೀಕ್ಷೆಯಲ್ಲಿಯೂ ನಪಾಸಾದ ವಿಷಯವನ್ನು ಮನಸ್ಸಿಗೆ ಹಚ್ಚಿಕೊಂಡು ತಂದೆ ತಾಯಿಯರು ಕೆಲಸದ ನಿಮಿತ್ತ ಕಾನಸೂರಿಗೆ ಹೋದ ಸಂದರ್ಭದಲ್ಲಿ ನೋಟ್‌ಬುಕ್‌ನಲ್ಲಿ ಬರೆದಿಟ್ಟು ಮನೆಯ ಬಚ್ಚಲು ಮನೆಯ ಪಕಾಸಿಗೆ ಹಗ್ಗ ಕಟ್ಟಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ಪೊಲೀಸ್ ವರದಿ ತಿಳಿಸಿದೆ. ಈ ಕುರಿತು ಮೃತನ ತಂದೆ ವೆಂಕಟ್ರಮಣ ಗಣಪತಿ ಹೆಗಡೆ ದೂರು ಸಲ್ಲಿಸಿದ್ದು, ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಕೈ ಕೊಟ್ಟ ಮಳೆ | ಸಂಕಷ್ಟದಲ್ಲಿ ಅನ್ನದಾತ

ಟ್ಯಾಂಕರ್‌ನಿಂದ ಬೆಳೆಗೆ ನೀರು ಪೂರೈಕೆ

▸ ಶರಣಪ್ಪ ಲೈನದ

ದಿಗಂತ ವಿಶೇಷ

• **ಕುಷ್ಟಗಿ:** ಅಶ್ವಿನಿ, ಭರಣಿ, ಕೃತಿಕಾ, ಮೃಗಶಿರ ಬಾರದ ಮುಂಗಾರು ಮಳೆಯ ಅಭಾವದಿಂದ ಅನ್ನದಾತ ಮಳೆಯ ಆಗಮನಕ್ಕಾಗಿ ಆಕಾಶದತ್ತ ಮುಖ ಮಾಡಿ ನಿತ್ಯ ನೋಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ರೈತ ಸಾಲ ಶೂಲ ಮಾಡಿ ಬಿತ್ತನೆ ಕಾರ್ಯ ಮಾಡಿದ ಬೆಳೆಗಳು ಬಾಡುವಂತಹ ಸ್ಥಿತಿ ನಿರ್ಮಾಣವಾಗಿದೆ ನಾಡಿನ ಅನ್ನದಾತ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾನೆ.

ತಾಲೂಕಿನ ಗುಮಗೇರ ಗ್ರಾಮದ ರೈತರೊಬ್ಬ 8 ಎಕರೆ ತೊಗರಿ ಬಿತ್ತಿದ್ದಾನೆ. ಆದರೆ ತೊಗರಿ ಬೆಳೆ ಬಾಡಿ ಹೋಗಿದ್ದರಿಂದ ನೀರಿನ ಟ್ಯಾಂಕರ್‌ಗಳ ಮೂಲಕ ತೊಗರಿ ಬೆಳೆಗೆ ನೀರನ್ನು ಹಾಯಿಸುತ್ತಿದ್ದಾನೆ. ಈ ಬಾರಿ ಮಳೆ ಕೈಕೊಟ್ಟಿದ್ದರಿಂದ ರೈತಾಪಿ ವರ್ಗಕ್ಕೆ



ಬಹಳಷ್ಟು ಸವಾಲುಗಳು ಎದುರಾಗಿವೆ. ರೈತರು ಚಿಂತಾಕ್ರಾಂತರಾಗಿದ್ದಾರೆ. ರೈತರು ತಮ್ಮ ಜಮೀನಿನಲ್ಲಿ ಬಿತ್ತನೆ ಕಾರ್ಯ ಮಾಡಿದ್ದು ಕೆಲವು ಕಡೆಗಳಲ್ಲಿ ಮೊಳಕೆ ನಾಟಿದ್ದರೆ ಇನ್ನೂ ಕೆಲವು ಹೊಲದಲ್ಲಿ ಮಣ್ಣಿನಲ್ಲಿ ಹುದುಗಿಕೊಂಡಿವೆ. ಇದರಿಂದಾಗಿ ಮುಂಗಾರು ಮಳೆ ಕೊರತೆಯಿಂದಾಗಿ ಕೃಷಿ ಚಟುವಟಿಕೆಗಳು ಹಿನ್ನಡೆಯಾಗಿದೆ. ಮಳೆ ಕೊರತೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ಬೆಳೆ ನಷ್ಟ ಹಿನ್ನೆಲೆಯಲ್ಲಿ ಪರಿಹಾರ ಕೊಡುವಂತಾಗಬೇಕು. ಪ್ರತಿ ವರ್ಷ ರೈತರು ಬೆಳೆ ವಿಮೆಯನ್ನು ಮಾಡಿಸುತ್ತಿದ್ದಾರೆ. ಆದರೆ ರೈತರು ಬೆಳೆದ ಬೆಳೆಗಳಿಗೆ ನಷ್ಟವಾಗಿದ್ದ ಬೆಳೆವಿಮೆ ಸರಿಯಾಗಿ ಜಮೆ ಮಾಡುತ್ತಿಲ್ಲ ಪ್ರಸಕ್ತ ವರುಷ ಬಹಳಷ್ಟು ಹಾನಿಯಾಗಿದ್ದರಿಂದ ಸರ್ಕಾರಗಳು ಕಡ್ಡಾಯವಾಗಿ ರೈತರಿಗೆ ಬೆಳೆವಿಮೆ ಜಮಾ ಮಾಡಬೇಕು ರೈತರ ಕಣ್ಣೀರನ್ನು ಸರಕಾರಗಳು ವರೆಸಬೇಕು ಎನ್ನುತ್ತಿದ್ದಾರೆ ರೈತರು.

> **ಗುಮಗೇರ ಗ್ರಾಮದಲ್ಲಿ ರೈತರು ಒಬ್ಬರನ್ನು ವಿಚಾರಿಸಿದಾಗ ಹವಾಮಾನ ಇಲಾಖೆಯ ಪ್ರಕಾರ ಪ್ರಸಕ್ತ ವರ್ಷ ಮಳೆ ಕಡಿಮೆಯಾಗುವ ಸಂಭವ ತಿಳಿದು ಟ್ಯಾಂಕರಗಳ ಮೂಲಕ 8 ಎಕರೆ ತೊಗರಿ ಬೆಳೆಗೆ ನೀರನ್ನು ಹಾಯುಸುತ್ತಿದ್ದೇನೆ.**
> ■ ವೀರನಗೌಡ ಪೊಲೀಸ್‌ಪಾಟೀಲ, ಗುಮಗೇರಾ ರೈತ

ಯೋಗ ಜಾಥಾ ಕಾರ್ಯಕ್ರಮಕ್ಕೆ ಚಾಲನೆ

• **ಕೊಪ್ಪಳ:** 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಆಯುಷ್ ಇಲಾಖೆ ಹಾಗೂ ಜಿಲ್ಲೆಯ ಸರ್ವಯೋಗ ಸಂಸ್ಥೆಗಳ ಸಹಯೋಗದಲ್ಲಿ ಶನಿವಾರ ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ಹಮ್ಮಿಕೊಳ್ಳಲಾದ ಯೋಗ ಜಾಥಾ ಮೂಲಕ ವಿಶೇಷ ಅರಿವು ಮೂಡಿಸಲಾಯಿತು.

ಕೊಪ್ಪಳ ನಗರದ ಶ್ರೀಗವಿಮಠ ಆವರಣದಿಂದ ನಡೆದ ಯೋಗ ಜಾಥಾ ಕಾರ್ಯಕ್ರಮಕ್ಕೆ ಜಿಲ್ಲಾ ಆಯುಷ್ ಅಧಿಕಾರಿ ಡಾ.ಪಿ.ಬಿ.ಹಿರೇಗೌಡರ ಅವರು ಪತಂಜಲಿ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ನಂತರ ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು.

ಬಳಿಕ ಅವರು ಮಾತನಾಡಿ, ಈ ವರ್ಷದ ಘೋಷವಾಕ್ಯವು 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಎಂಬುವುದಾಗಿದ್ದು, ಇದರ ಭಾಗವಾಗಿ ಇಂದು ಜಿಲ್ಲಾ ಆಯುಷ್ ಇಲಾಖೆ, ಜಿಲ್ಲೆಯ ವಿವಿಧ ಆಯುರ್ವೇಧ ಮಹಾವಿದ್ಯಾಲಯಗಳು ಮತ್ತು ಸರ್ವಯೋಗ ಸಂಸ್ಥೆಗಳ ಸಹಯೋಗದಲ್ಲಿ ಯೋಗಾ ಜಾಥಾ ಮೂಲಕ ಸಾರ್ವಜನಿಕರಲ್ಲಿ ಯೋಗದ ಮಹತ್ವದ ಕುರಿತು ಅರಿವು ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಈ ವೇಳೆ ಕೊಪ್ಪಳ ಜಿಲ್ಲಾ ತರಬೇತಿ ಸಂಸ್ಥೆ ಪ್ರಾಚಾರ್ಯ ಕೃಷ್ಣ ಮೂರ್ತಿ ದೇಸಾಯಿ, ಗವಿಸಿದ್ದೇಶ್ವರ ಆಯುರ್ವೇಧ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಸಾಲಿಮಠ, ಕೊಪ್ಪಳ ಜಿಲ್ಲೆ ಆಯುಷ್ ವೈದ್ಯಾಧಿಕಾರಿ ಡಾ.ಯಮುನಪ್ಪ ಶಿರವಾರ, ಡಾ.ಗುರುರಾಜ್ ಉಮಚಗಿ, ಡಾ. ವಿ.ಆರ್.ತಾಳಿಕೋಟಿ, ಡಾ.ಶರಣಪ್ಪ ಹೈದ್ರಿ, ಡಾ.ರಾಜಶೇಖರ ನಾರಿನಾಳ, ಡಾ.ಕವಿತಾ ಎಚ್.ಎಫ್., ಇತರೆ ವೈದ್ಯಾಧಿಕಾರಿಗಳು, ಶ್ರೀ ಗವಿಸಿದ್ದೇಶ್ವರ, ನಿಂಗೋಜಿ ಮತ್ತು ಅಗಸ್ತ್ಯ ಆಯುರ್ವೇಧ ಮಹಾವಿದ್ಯಾಲಯ ವೈದ್ಯಾಧಿಕಾರಿಗಳು ಹಾಗೂ ಪ್ರಾಧ್ಯಾಪಕರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಆಯುಷ್ ಇಲಾಖೆ ಸಿಬ್ಬಂದಿ, ಸರ್ವಯೋಗ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಶಾಶ್ವತ ವಿದ್ಯುತ್ ಸಂಪರ್ಕಕ್ಕೆ ಸ್ವಾಧೀನಾನುಭವ ಪ್ರಮಾಣಪತ್ರ ವಿನಾಯಿತಿ: ಹೆಸ್ಕಾಂ

• **ಹುಬ್ಬಳ್ಳಿ:** ಮೇ 31, 2026ರಂದು ಅಥವಾ ಅದಕ್ಕೂ ಮುಂಚಿತವಾಗಿ ಪೂರ್ಣಗೊಂಡಿರುವ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವ ಅಥವಾ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ, ಹಾಗೂ ಯಾವುದೇ ವಿದ್ಯುತ್ ಸಂಪರ್ಕ ಪಡೆಯದೇ ಪೂರ್ಣಗೊಂಡಿರುವ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ (ಒಸಿ) ಪಡೆಯುವುದರಿಂದ ಒಂದು ಬಾರಿ ವಿನಾಯಿತಿ ನೀಡಿ ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ. ಇದರ ಸದುಪಯೋಗ ಪಡೆಯುವಂತೆ ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಹೆಸ್ಕಾಂ ವ್ಯಾಪ್ತಿಯ ಧಾರವಾಡ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಉತ್ತರ ಕನ್ನಡ, ಗದಗ, ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಮಹಾನಗರ ಪಾಲಿಕೆಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೂ ಸಹ 2400 ಚದರ ಅಡಿ ಗಳವರೆಗೆ (+20% ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ಅಳತೆಯ

ನಿವೇಶನಗಳಲ್ಲಿ ನಿರ್ಮಿಸಲಾಗಿರುವ ಜಿ + 3 ಅಂತಸ್ತಿನ ವಸತಿ ಕಟ್ಟಡಗಳು ಅಥವಾ ಸ್ಟಿಲ್ಟ್ ಪಾರ್ಕಿಂಗ್ + 4 ಮಹಡಿಗಳನ್ನು ಹೊಂದಿದ್ದು, 31.05.2026ರ ಒಳಗಾಗಿ ಪೂರ್ಣಗೊಂಡ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ (ಒಸಿ) ಪ್ರಮಾಣಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.

ಈ ಆದೇಶವು 2026ರ ಮೇ 31ರೊಳಗೆ 1) ವಸತಿ ಕಟ್ಟಡ ನಿರ್ಮಾಣ ಪೂರ್ಣಗೊಂಡಿದ್ದು, ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವ ಪ್ರಕರಣಗಳು. 2) ವಸತಿ ಕಟ್ಟಡ ನಿರ್ಮಾಣ ಪೂರ್ಣಗೊಂಡು ತಾತ್ಕಾಲಿಕ ವಿದ್ಯುತ್ ಸಂಪರ್ಕ ಹೊಂದಿದ್ದು, ಶಾಶ್ವತ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸದಿರುವ ಪ್ರಕರಣಗಳು. 3) ವಸತಿ ಕಟ್ಟಡ ನಿರ್ಮಾಣ ಪೂರ್ಣಗೊಂಡು ವಿದ್ಯುತ್ ಸಂಪರ್ಕಕ್ಕಾಗಿ (ತಾತ್ಕಾಲಿಕ/ ಶಾಶ್ವತ) ಅರ್ಜಿ ಸಲ್ಲಿಸದೆ ಇರುವ ಪ್ರಕರಣಗಳಿಗೆ ಮಾತ್ರ ಅನ್ವಯಿಸುತ್ತದೆ. ಸರ್ಕಾರ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 15 ದಿನಗಳ ವರೆಗೆ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಿ ಒಂದು ಬಾರಿಯ ಕ್ರಮವಾಗಿ ಸ್ವಾಧೀನಾನುಭವ (ಒಸಿ) ಪ್ರಮಾಣಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ರೈತರು ವಾಸಿಸುವ ಮನೆ, ತೋಟದ ಮನೆ, ಕೃಷಿ ಉಪಕರಣಗಳನ್ನು ಇಡುವ ಮನೆ, ದನದ ಕೊಟ್ಟಿಗೆ, ರೇಷ್ಮೆ ಗೂಡಿನ ಮನೆಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಸ್ವಾಧೀನಾನುಭವ (ಒಸಿ) ಪ್ರಮಾಣಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.

ಪುರಸ್ಕಾರ ಅನೇಕ ಸಾಧಕ ವಿದ್ಯಾರ್ಥಿಗಳಿಗೆ ಪ್ರೇರಣೆ

• **ಅಥಣಿ:** ಪ್ರತಿಭಾ ಪುರಸ್ಕಾರಗಳು ವಿದ್ಯಾರ್ಥಿಗಳ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸುತ್ತವೆ. ಅನೇಕ ಸಾಧಕ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗುತ್ತದೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಇಲ್ಲಿನ ಶಿವಣಗಿ ಸಾಂಸ್ಕೃತಿಕ ಭವನದಲ್ಲಿ ಆದಿ ಬಣಜಿಗ ಯುವ ವೇದಿಕೆಯಿಂದ ಹಮ್ಮಿಕೊಳ್ಳಲಾಗಿದ್ದ ರಾಜ್ಯಮಟ್ಟದ 9ನೇ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆದಿಬಣಜಿಗ ಯುವವೇದಿಕೆಯಿಂದ ಕಳೆದ ಒಂಬತ್ತು ವರ್ಷಗಳಿಂದ ಎಸ್ ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಗುತ್ತಿಗೆದಾರ ರಾಜು ಅಲಬಾಳ ನೇತೃತ್ವದಲ್ಲಿ ಆದಿ ಬಣಜಿಗ ಯುವ ವೇದಿಕೆಯಿಂದ ಸಮಾಜದ ಸಂಘಟನೆ ಮತ್ತು ಇನ್ನಿತರ ಕಾರ್ಯಕ್ರಮಗಳನ್ನು ನಡೆಸಲು ಅಗತ್ಯವಿರುವ ಸಮುದಾಯ ಭವನ ನಿರ್ಮಾಣಕ್ಕೆ ಈಗಾಗಲೇ ನಿವೇಶನ ಖರೀದಿಸಿರುವುದು



ಒಳ್ಳೆಯ ಬೆಳವಣಿಗೆ. ಮುಂಬರುವ ದಿನಗಳಲ್ಲಿ ನಿರ್ಮಾಣ ಆಗಲಿರುವ ಸಮುದಾಯ ಭವನ ನಿರ್ಮಾಣಕ್ಕೆ 25 ಲಕ್ಷ ರೂಪಾಯಿ ಸಹಾಯಧನ ನೀಡುವುದಾಗಿ ಘೋಷಿಸಿದರು.


ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಮಾತನಾಡಿ, ಆದಿಬಣಜಿಗ ಸಮಾಜದ ವತಿಯಿಂದ ಕಳೆದ 9 ವರ್ಷಗಳಿಂದ ನಿರಂತರ ಪ್ರತಿಭಾವ ಪುರಸ್ಕಾರ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿರುವುದು ನಮ್ಮೆಲ್ಲರಿಗೆ ಸಂತಸ ಮತ್ತು ಹೆಮ್ಮೆಯ ವಿಚಾರ. ಜೊಲ್ಲೆ ಉದ್ಯೋಗ ಸಮೂಹದಿಂದ ಸು. 1 ಕೋಟಿ ರೂಪಾಯಿ ಕಾಯ್ದಿರಿಸುವ ಮೂಲಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಶಿಷ್ಯವೇತನ ನೀಡುವ ಸಂಕಲ್ಪ ಹೊಂದಿದ್ದೇವೆ. ಸಮುದಾಯದ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಬೆಳಗಾವಿ ಬಿಡಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಮಾತನಾಡಿದರು. ಶೆಟ್ಟರ ಮಠದ ಮರಳುಸಿದ್ದ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಆದಿ ಬಣಜಿಗ ಸಮಾಜದ ತಾಲೂಕ ಅಧ್ಯಕ್ಷ ಚಂದ್ರಶೇಖರ ಬಳ್ಳೊಳ್ಳಿ, ಐಎಎಸ್ ಅಧಿಕಾರಿ ಸುನಿಲ ಟಾಕಳೆ, ಮುಖಂಡರಾದ ಸಿ ಎಸ್. ನೇಮಗೌಡ, ಬಿ ಎಸ್ ಬಿರಾದಾರ, ಎ. ಎಸ್ ತೆಲಸಂಗ, ಬೈರಪ್ಪ ಬಿಜ್ಜರಗಿ, ಸಿದ್ದು ಗದ್ಯಾಳ, ಸುರೇಶ ಬಳ್ಳೊಳ್ಳಿ, ಸ್ವಾಗತ ತೋರಿ, ಚನ್ನಬಸಪ್ಪ ತೋರಿ, ಸತೀಶ ಪಾಟೀಲ, ರಮೇಶ ಮುಚ್ಚಂಡಿ, ಅಶೋಕ ಮಾರಾಪೂರ, ಬಸವರಾಜ ಮಾದಗುಡಿ, ಸುರೇಶ ಅಲಬಾಳ, ಚನ್ನಬಸು ಬಳ್ಳೊಳ್ಳಿ ರಾಜು ಮರಡಿ, ಕುಮಾರ ಬಿಳ್ಳೂರ, ಪರಸುರಾಮ ಬಿರಾದಾರ, ಹಣಮಂತ ವನಜೋಳಿ ಉಪಸ್ಥಿತರಿದ್ದರು. ಸುರೇಶ್ ಬಳ್ಳೊಳ್ಳಿ ಸ್ವಾಗತಿಸಿದರು, ವಿಜಯ ಹುದ್ದಾರ ನಿರೂಪಿಸಿದರು, ಸ್ವಾಗತ ತೋರಿ ವಂದಿಸಿದರು.

> **ಕಳೆದ 9 ವರ್ಷಗಳಿಂದ ನಿರಂತರವಾಗಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಎಲ್ಲ ಜಿಲ್ಲೆಯ ಮುಖಂಡರು ಒಗ್ಗೂಡಿ ಪ್ರತಿ ವರ್ಷ ಕಾರ್ಯಕ್ರಮ ಆಯೋಜಿಸಿಕೊಂಡು ಬರಲಾಗುತ್ತಿದೆ. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಉತ್ತೀರ್ಣಗೊಂಡ 230ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸನ್ಮಾನಿಸುತ್ತಿದ್ದೇವೆ.**
> ■ ರಾಜು ಆಲಬಾಳ, ಆದಿ ಬಣಜಿಗ ಯುವ ವೇದಿಕೆಯ ಅಧ್ಯಕ್ಷ

ಶೇಡಿದಂಟ್ಕಲ್‌ನಲ್ಲಿ ಅಡಿಕೆ ಚೀಲಗಳು ಬೆಂಕಿಗಾಹುತಿ

• **ಸಿದ್ದಾಪುರ:** ತಾಲೂಕಿನ ಕೋಡ್ಸರ್ ಫಿರ್ಕಾ ಮುತ್ಮುರ್ಡು ಗ್ರಾಮದ ಶೇಡಿದಂಟ್ಕಲ್‌ನಲ್ಲಿ ವಿದ್ಯುತ್ ಶಾರ್ಟ ಸರ್ಕ್ಯೂಟ್‌ನಿಂದಾಗಿ ಶೇಖರಿಸಿಟ್ಟಿದ್ದ ಚಾಲಿಅಡಿಕೆ ಚೀಲಗಳಿಗೆ ಬೆಂಕಿ ಹತ್ತಿ ಉರಿದು ಭಸ್ಮವಾದ ಘಟನೆ ಸಂಭವಿಸಿದೆ.



ವಿನಾಯಕ ಮಂಜುನಾಥ ಹೆಗಡೆ ಅವರು 70 ಚೀಲ ಚಾಲಿ ಅಡಿಕೆಯನ್ನು ಮನೆಯ ಹಿಂಭಾಗದಲ್ಲಿಯ ಕೋಣೆಯಲ್ಲಿ ಶೇಖರಿಸಿಟ್ಟಿದ್ದು ಶುಕ್ರವಾರ ರಾತ್ರಿ 1 ಗಂಟೆ ಸುಮಾರಿಗೆ ವಿದ್ಯುತ್ ಶಾರ್ಟ ಸರ್ಕ್ಯೂಟ್ ನಿಂದಾಗಿ ಬೆಂಕಿ ಹತ್ತಿಕೊಂಡು ಅಡಿಕೆ ಚೀಲಗಳು ಬೆಂಕಿಯ ಕೆನ್ನಾಲಿಗೆಗೆ ಸಿಕ್ಕು ಸುಟ್ಟು ಕರಕಲಾದವೆಂದು ತಿಳಿದುಬಂದಿದೆ.

ಬೆಂಕಿ ಹತ್ತಿಕೊಂಡ ವಿಚಾರ ಅರಿವಿಗೆ ಬರುತ್ತಿದ್ದಂತೆ ಸುತ್ತಮುತ್ತಲಿನವರು, ಗ್ರಾಮಸ್ಥರು ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ಹತೋಟಿಗೆ ತಂದು ಸಮೀಪದ ಆಸ್ತಿಪಾಸ್ತಿಗಳಿಗೆ ಹಾನಿಯಾಗದಂತೆ ರಕ್ಷಿಸುವಲ್ಲಿ ಮುಂದಾದರೆಂದು ಹೇಳಲಾಗಿದೆ. ಇಡೀವರ್ಷ ಕಷ್ಟಪಟ್ಟು ದುಡಿದು ಸಂಗ್ರಹಿಸಿಟ್ಟಿದ್ದ ಬೆಳೆಯಲ್ಲಿ 90 ಶೇಕಡಾದಷ್ಟು ಬೆಳೆ ಬೆಂಕಿಗೆ ಆಹುತಿಯಾದ ಕುರಿತು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದಂತಾಗಿದೆ.

ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಕಂದಾಯ ಇಲಾಖೆಯವರು ಸ್ಥಳ ಪರಿಶೀಲನೆ ನಡೆಸಿದ್ದು, ಅಂದಾಜು 4 ಲಕ್ಷ ರೂ.ಗಳಷ್ಟು ಹಾನಿಯಾಗಿದ್ದಾಗಿ ಪ್ರಾಥಮಿಕ ವರದಿ ಸಲ್ಲಿಸಿದ್ದಾರೆ. ಅಗ್ನಿ ಅವಘಡದಿಂದಾಗಿ ಅಪಾರ ನಷ್ಟ ಅನುಭವಿಸಿದ ಬೆಳೆಗಾರರಿಗೆ ಸರ್ಕಾರದಿಂದ ಶೀಘ್ರವಾಗಿ ಪರಿಹಾರ ಒದಗಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಚಾಲನೆ

• **ಕುಡಚಿ:** ಕುಡಚಿ ಮತಕ್ಷೇತ್ರದ ಹಾರೂಗೇರಿ, ಹಾರೂಗೇರಿ ಕ್ರಾಸ್, ಯಬರಟ್ಟಿ, ಸುಟ್ಟಟ್ಟಿ ಹಾಗೂ ಬಸ್ತವಾಡ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಚಾಲನೆ ನೀಡಿದರು.

ಶನಿವಾರ ಕುಡಚಿ ವಿಧಾನಸಭಾ ಕ್ಷೇತ್ರದಾದ್ಯಂತ ಅಭಿವೃದ್ಧಿ ಕಾಮಗಾರಿಗಳ ಮಹಾಪೂರವೇ ಹರಿದು ಬಂದಿತು, ಹಾರೂಗೇರಿ ಪುರಸಭೆ ವ್ಯಾಪ್ತಿಯ ಎಸ್.ಸಿ. ಜನವಸತಿ ಕಾಲೋನಿಯಲ್ಲಿ ರೂ. 50 ಲಕ್ಷ ಅನುದಾನದಡಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ, ರೂ. 50 ಲಕ್ಷ ಅನುದಾನದಡಿ ಡಿ.ವೈ ಕಿ. ಮೀ. 1 ಕಾಲುವೆಗೆ ಸಿಸಿ ಲೈನಿಂಗ್ ಕಾಮಗಾರಿ, ಯಬರಟ್ಟಿ ಗ್ರಾಮದಲ್ಲಿ ರೂ. 50 ಲಕ್ಷ ಅನುದಾನದಡಿ ಹಾರೂಗೇರಿ



ಪಿಕಪ್ವೇಯಿಂದ ಹಾರೂಗೇರಿ-ಯಬರಟ್ಟಿ ಸೀಮೆಯವರೆಗಿನ ರಸ್ತೆ ಡಾಂಬರೀಕರಣ ಕಾಮಗಾರಿ, ರೂ. 50 ಲಕ್ಷ ಅನುದಾನದಡಿ ಕುಡಚಿ-ಜಮಖಂಡಿ ರಸ್ತೆಯಿಂದ ಹಾರೂಗೇರಿ ಹಂಚು ಕಾಲುವೆ ಮೇಲಿನ ರಸ್ತೆ ಡಾಂಬರೀಕರಣ ಕಾಮಗಾರಿ, ಸುಟ್ಟಟ್ಟಿ ಗ್ರಾಮದ ಎಸ್ .ಸಿ. ಕಾಲೋನಿಗಳಲ್ಲಿ ರೂ. ಒಂದು ಕೋಟಿ ಅನುದಾನದಡಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣಕ ಕಾಮಗಾರಿ, ರೂ. 1.5 ಕೋಟಿ ಅನುದಾನದಡಿ ನೀಲಜಿ-ಸುಟ್ಟಟ್ಟಿ ಕುಡಚಿ ರಸ್ತೆಯ ಸುಧಾರಣೆ ಕಾಮಗಾರಿ, ಹಾಗೂ ರೂ. 40 ಲಕ್ಷ ಅನುದಾನದಡಿ ಹಿಡಕಲ್ ಕೂಡುವ ರಸ್ತೆಯ ಡಾಂಬರೀಕರಣ ಅಭಿವೃದ್ಧಿ ಕಾಮಗಾರಿಗಳಿಗೆ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಭೂಮಿ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಬಸ್ತವಾಡ ಗ್ರಾಮದ ಬಹುದಿನಗಳ ಬೇಡಿಕೆಯಾಗಿದ್ದ ನೂತನ 110ಕೆವಿ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಗೆ ಶಂಕು ಸ್ಥಾಪನೆ ನೆರವೇರಿಸಿದರು.

ನಂತರ ಅವರು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯೇ ನನ್ನ ಮೊದಲ ಆದ್ಯತೆಯಾಗಿದ್ದು, ಹಳ್ಳಿ ಹಳ್ಳಿಗಳಿಗೂ ಮೂಲಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಈ ಕಾಮಗಾರಿಗಳು ಪ್ರಮುಖ ಪಾತ್ರ ವಹಿಸಲಿವೆ. ನಿಗದಿಪಡಿಸಿದ ಅವಧಿಯೊಳಗೆ ಗುಣಮಟ್ಟದ ಕೆಲಸ ಪೂರ್ಣಗೊಳಿಸಲು ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚನೆ ನೀಡಿದರು. ಆನಂದ ಪಾಟೀಲ, ಬಾಳು ಹಾಡಕಾರ, ಬಾಳು ಹಾಡಕಾರ, ಮುರಾರಿ ಬಾನೆ, ಅಜೀತ ಹೆಗಡೆ, ಬಾಬು ನಿಂಗನೂರೆ, ಸುಭಾಸ್ ಮಾನೆ, ಶಿವಾನಂದ ಹೆಗಡೆ, ವಾಮನ ಹಟ್ಟಿಮನಿ, ಜಯವೀರ ಬಾಲೋಜಿ ಸಿದ್ದಪ್ಪಾ ಖಿಲಾರೆ, ವಿಠ್ಠಲ ಕೂಗೆ ಇತರರು ಇದ್ದರು.

ಹತ್ಯೆಗೈದು ಗಿಡಕ್ಕೆ ನೇಣು ಹಾಕಿದ ದುಷ್ಕರ್ಮಿಗಳು

• **ಕಲಬುರಗಿ:** ಜಿಲ್ಲೆಯ ಸೇಡಂ ತಾಲೂಕಿನ ಅಳ್ಳೊಳ್ಳಿ ಗ್ರಾಮದಲ್ಲಿ ವ್ಯಕ್ತಿಯೊಬ್ಬರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಹತ್ಯೆಗೈದಿರುವ ಘಟನೆ ಬೆಳಕಿಗೆ ಬಂದಿದೆ.

ಹತ್ಯೆಯಾದ ವ್ಯಕ್ತಿಯನ್ನು ಅಳ್ಳೊಳ್ಳಿ ಗ್ರಾಮದ ಸಾಬಣ್ಣ ತಳವಾರ್ (43) ಎಂದು ಗುರುತಿಸಲಾಗಿದೆ. ಹಳೆ ವೈಷಮ್ಯದ ಹಿನ್ನೆಲೆಯಲ್ಲಿ ಈ ಕೃತ್ಯ ನಡೆದಿರುವ ಶಂಕೆ ವ್ಯಕ್ತವಾಗಿದೆ.

ದುಷ್ಕರ್ಮಿಗಳು ಸಾಬಣ್ಣ ತಳವಾರ್ ಅವರನ್ನು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಹತ್ಯೆಗೈದ ಬಳಿಕ, ಪ್ರಕರಣವನ್ನು ಆತ್ಮಹತ್ಯೆಯಂತೆ ಬಿಂಬಿಸಲು ಮೃತದೇಹವನ್ನು ಗಿಡಕ್ಕೆ ನೇಣು ಹಾಕಿ ಪರಾರಿಯಾಗಿರುವುದಾಗಿ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.


ಘಟನಾ ಸ್ಥಳಕ್ಕೆ ಸೇಡಂ ಸಿಪಿಐ ಹಾಗೂ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಈ ಸಂಬಂಧ ಸೇಡಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಬಾಲಕನಿಂದ ಟ್ರ್ಯಾಕ್ಟರ್ ಚಾಲನೆ: ಯುವಕ ಸಾವು

• **ಮುನಿರಾಬಾದ್:** ಅಪ್ರಾಪ್ತ ಬಾಲಕ ಟ್ಯಾಕ್ಟರ್ ಚಾಲನೆಯಿಂದ ನಿಂತ ಬೈಕ್‌ಗೆ ಗುದ್ದಿದ ಪರಿಣಾಮ ಸ್ಥಳದಲ್ಲೇ ಯುವಕನೋರ್ವ ಮೃತಪಟ್ಟಿರುವ ಘಟನೆ ಅಗಳಕೇರಾ-ಗಂಗಾವತಿ ರಸ್ತೆಯಲ್ಲಿ ಶಿವಪುರ ಕ್ರಾಸ್ ಹತ್ತಿರ ನಡೆದಿದೆ. ಯಲಬುರ್ಗಾದ ಮೃತ ಯುವಕ ಪ್ರಕಾಶ (25). ಶನಿವಾರ ಮಂಜುನಾಥ ಅವರು ತಮ್ಮ ಗ್ರಾಮದ ಪ್ರಕಾಶ ಅವರ ಸಂಬಂಧಿಕರ ಪೆಟ್ರೋಲ್ ಖಾಲಿಯಾಗಿದ್ದರಿಂದ ಕ್ರಾಸ್‌ನಲ್ಲಿದ್ದ ಸಾರ್ವಜನಿಕರನ್ನು ವಿಚಾರಣೆ ಮಾಡುತ್ತಿದ್ದರು. ಹಿಂಬದಿಯಿಂದ ಬಂದ ಟ್ರ್ಯಾಕ್ಟರ್ ನಿಂತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಮೃತ ಯುವಕ ಯಲಬುರ್ಗಾದಿಂದ ಆಂಜನಾದ್ರಿ ದೇವಸ್ಥಾನಕ್ಕೆ ಹೋಗುತ್ತಿದ್ದರು. ಮೃತದೇಹವನ್ನು ಕೊಪ್ಪಳ ಜಿಲ್ಲಾಸ್ಪತ್ರೆಗೆ ಸಾಗಿಸಿ, ನಂತರ ಮಂಜುನಾಥ ಠಾಣೆಗೆ ಬಂದು ದೂರು ನೀಡಿದ್ದಾರೆ. ಪ್ರಕರಣ ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.



ಮೊಬೈಲ್ ಮರಳಿಸಿದ ದಾರಿಹೋಕರು



• **ಗೋಕರ್ಣ:** ಬೈಕ್ ಮೇಲೆ ಇಟ್ಟಿದ್ದ ಮೊಬೈಲ್ ಕಳೆದಿದ್ದನ್ನ ಪೊಲೀಸರು ಹುಡುಕಿ ಪ್ರವಾಸಿಗರಿಗೆ ಪೊಲೀಸರು ವಾಪಸ್ ನೀಡಿದ ಘಟನೆ ಶನಿವಾರ ನಡೆದಿದೆ.

ಮೈಸೂರಿನ ದೀಕ್ಷಾ ಹಾಗೂ ರಜತ್ ಎನ್ನುವವರು ರಥಬೀದಿಯಲ್ಲಿ ಬೈಕ್ ಇಟ್ಟು ಬೈಕ್ ಬ್ಯಾಗಲ್ಲಿ ಎರಡು ಮೊಬೈಲ್ ಮರೆತು ದೇವರ ದರ್ಶನಕ್ಕೆ ಹೋಗಿದ್ದರು. ಹಲವು ಗಂಟೆಗಳ ಬಳಿಕ ಮರಳಿ ಬಂದು ನೋಡಿದಾಗ ಮೊಬೈಲ್ ಇರಲಿಲ್ಲ. ತಕ್ಷಣ ಮಹಾಬಲೇಶ್ವರ ಮಂದಿರದ ಹೊರ ಠಾಣೆ ಸಂಪರ್ಕಿಸಿದ್ದು, ಸಿಬ್ಬಂದಿ ಮೊಬೈಲ್ ಸಂಖ್ಯೆಗೆ ಕರೆಮಾಡಿದರು ಸ್ವೀಕರಿಸಲಿಲ್ಲ. ನಂತರ ಲೋಕೇಷನ್ ಪತ್ತೆ ಮಾಡಿದಾಗ ರಥಬೀದಿ ಎಂದು ಬಂದಿದ್ದು, ಅಕ್ಕಪಕ್ಕದ ಮನೆ ವಿಚಾರಿಸಿದಾಗ ಯಾರೂ ಇಲ್ಲಿ ಬ್ಯಾಗ್ ಇಟ್ಟಿದ್ದಾರೆ ಎಂದು ಪರಿಶೀಲಿಸಿದಾಗ ಇವರದೇ ಮೊಬೈಲ್ ಎಂದು ತಿಳಿದು ಬಂದಿದೆ. ಮಳೆ ಸುರಿಯುತ್ತಿರುವ ವೇಳೆ ದಾರಿಯಲ್ಲಿ ಹೋಗುವವರು ಗಮನಿಸಿ ಹತ್ತಿರದ ಮನೆಯಲ್ಲಿ ಇಟ್ಟು ಹೋಗಿದ್ದು ನಂತರ ತಿಳಿದು ಬಂತು. ಎರಡು ಮೊಬೈಲ ಹಸ್ತಾಂತರಿಸಲಾಯಿತು. ಈ ವೇಳೆ ಪಿ.ಐ. ಶ್ರೀಧರ ಎಸ್.ಆರ್., ಪಿ.ಎಸ್.ಐ. ಅನಿಲ್, ಹೊರಠಾಣೆ ಹವಾಲ್ದಾರ ಜಟ್ಟಪ್ಪ ನಾಯ್ಕ ಹಾಗೂ ಪೊಲೀಸ್ ಸಿಬ್ಬಂದಿಗಳು ಉಪಸ್ಥಿತರಿದ್ದರು. ಪ್ರವಾಸಿಗರು ಮೊಬೈಲ್ ಪತ್ತೆ ಹಚ್ಚಿ ಮರಳಿಸಿದ ಪೊಲೀಸರಿಗೆ ಅಭಿನಂದನೆ ಸಲ್ಲಿಸಿದರು.

ಮನೆಯ ಹಂಚು ತೆಗೆದು ಬಂಗಾರ, ಹಣ ಎಗರಿಸಿದ್ದ ಖದೀಮರು

ಕಾರ್ ಸಾಲ ತುಂಬಲು ಕಳ್ಳತನ !

• **ಚನ್ನಮ್ಮನ ಕಿತ್ತೂರು:** ಕಳ್ಳತನ ಮಾಡಿದ್ದ ಆರೋಪಿಗಳಿಬ್ಬರನ್ನು ಬಂಧಿಸಿ ಅವರಿಂದ ಸುಮಾರು 9 ಲಕ್ಷ ಮೌಲ್ಯದ 60 ಗ್ರಾಂ ಚಿನ್ನ ಮತ್ತು 15 ಸಾವಿರ ಮೌಲ್ಯದ ಬೆಳ್ಳಿ ಆಭರಣ ಸೇರಿದಂತೆ ಒಂದು ಎರ್ಟಿಗಾ ಕಾರು, ದ್ವಿಚಕ್ರ ವಾಹನ ವಶಪಡಿಸಿಕೊಳ್ಳುವಲ್ಲಿ ಕಿತ್ತೂರು ಪೊಲೀಸರು ಯಶಸ್ವಿಯಾಗಿದ್ದಾರೆ.

ಹೊಳಿ ನಾಗಲಾಪೂರದ ಪತ್ರಯ್ಯ ನಿಂಗಯ್ಯ ಹಿರೇಮಠ ಹಾಗೂ ಬೈಲಹೊಂಗಲದ ಅನಿಲಕುಮಾರ ಪ್ರಭುಸ್ವಾಮಿ ಹಿರೇಮಠ ಬಂಧಿತ ಆರೋಪಿಗಳು.

ಅವರಾದಿ ಗ್ರಾಮದ ರೇಣುಕಾ ಆನಂದ ಪುರದ ಎಂಬುವವರ ಮನೆಯ ಮೇಲ್ಛಾವಣಿ ಹಂಚುಗಳನ್ನು ತೆಗೆದು ಒಳ ನುಗ್ಗಿ ಟ್ರೇಜರಿಯಲ್ಲಿನ ಬಂಗಾರ ಮತ್ತು ಬೆಳ್ಳಿಯ ಆಭರಣಗಳನ್ನು ಕಳ್ಳತನ ಮಾಡಿ ಪರಾರಿಯಾಗಿದ್ದರು.

ಈ ಪ್ರಕರಣವನ್ನು ಕೈಗೆತ್ತಿಕೊಂಡ ಪೋಲಿಸರು ಜೂ.22ರಂದು ತಾಲೂಕಿನ ಚಿಕ್ಕನಂದಿಹಳ್ಳಿ ಕ್ರಾಸ್ ಹತ್ತಿರ ಈ ಆರೋಪಿಗಳನ್ನು ಮೋಟರ್ ಸೈಕಲ್ ಹಾಗೂ ಕಳುವು ಮಾಡಿದ್ದ ಬೆಳ್ಳಿ ಆಭರಣ ಸಮೇತ ಬಂಧಿಸಿದ್ದಾರೆ.



ಸಂಗೊಳ್ಳಿ ಗ್ರಾಮದ ಮನೆಯೊಂದರಲ್ಲಿ ಕಳುವು ಮಾಡಿದ ಬಂಗಾರದ ಆಭರಣಗಳನ್ನು ಬೈಲಹೊಂಗಲ, ಕಿತ್ತೂರು, ಹುಕ್ಕೇರಿ, ಬೆಳಗಾವಿ ಮುಂತಾದ ಕಡೆಗಳ ಫೈನಾನ್ಸ್ ಸಂಸ್ಥೆಗಳಲ್ಲಿ ಅಡವಿಟ್ಟ ಬಂಗಾರ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಕಾರ್ಯಾಚರಣೆಯಲ್ಲಿ ಬೈಲಹೊಂಗಲ ಡಿಎಸ್‌ಪಿ ಡಾ.ವೀರಯ್ಯ ಹಿರೇಮಠ ಹಾಗೂ ಸಿಪಿಆಯ್ ಶಿವಾನಂದ ಗುಡಗನಟ್ಟಿ ಮಾರ್ಗದರ್ಶನದಲ್ಲಿ ಪಿಎಸ್‌ಆಯ್‌ಗಳಾದ ಭರತ್ ಎಸ್ ಹಾಗೂ ಗಂಗಾಧರ ಹಂಪಣ್ಣವರ ಸೇರಿದಂತೆ ಸಿಬ್ಬಂದಿಗಳಾದ ಸುನೀಲ್ ಮುರಗೋಡ, ಎಸ್.ಎ.ದಫೇದಾರ, ಎ.ಎಮ್. ಚಿಕ್ಕೇರಿ, ನಾಗರಾಜ ಕಡಗನ್ನವರ, ಬಾಹುಬಲಿ ಅಗಸಿಮನಿ, ರಾಜು ಗೌರಕ್ಕನವರ, ಎಮ್ .ಬಿ.ಕಂಬಾರ, ಸಚಿನ್ ಪಾಟೀಲ ಮುಂತಾದವರು ಪಾಲ್ಗೊಂಡಿದ್ದರು. ಈ ಪತ್ತೆ ಕಾರ್ಯಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ ರಾಮರಾಜನ್ ಹಾಗೂ ಹೆಚ್ಚುವರಿ ಪೋಲಿಸ್ ವರಿಷ್ಠಾಧಿಕಾರಿ ಆರ್.ಬಿ.ಬಸರಗಿ ಶ್ಲಾಘಿಸಿದ್ದಾರೆ.

ವಶಕ್ಕೆ ಪಡೆದ ಸ್ವತ್ತುಗಳು


- 9 ಲಕ್ಷ ಮೌಲ್ಯದ 60 ಗ್ರಾಂ ಚಿನ್ನ
- 15 ಸಾವಿರ ಮೌಲ್ಯದ ಬೆಳ್ಳಿ ಆಭರಣ
- ಕಾರ್, ಬೈಕ್

- **ವಿಚಾರಣಾವೇಳೆ ಕಳೆದ ವರ್ಷ ಡಿಸೆಂಬರ್‌ನಲ್ಲಿ ಬೈಲಹೊಂಗಲ ಪೊಲೀಸ್ ಠಾಣಾ ವ್ಯಾಪ್ತಿಯ ಸಂಗೊಳ್ಳಿ ಗ್ರಾಮದ ಮನೆಯೊಂದರಲ್ಲಿ ಚಿನ್ನಾಭರಣಗಳನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಈ ಬಂಗಾರ ಆಭರಣ ಮಾರಿದ ಹಣದಿಂದಲೇ ಕಾರ್ ಲೋನ್ ತುಂಬಲು ಬಳಸಿದ್ದಾಗಿ ಹೇಳಿಕೆ ನೀಡಿದ್ದು, ಕಳ್ಳತನಕ್ಕೆ ಬಳಸಿದ ಕಾರು ಮತ್ತು ಬೈಕ್‌ನ್ನು ವಶಪಡಿಸಿಕೊಂಡಿದ್ದಾರೆ.**

ಶ್ರೀಗಳ ಆಶೀರ್ವಾದ ಪಡೆದ ಟೆಂಗಿನಕಾಯಿ

• **ಹುಬ್ಬಳ್ಳಿ:** ತಾಲೂಕಿಗೆ ಆಗಮಿಸಿದ್ದ ಉತ್ತರಾಖಂಡ ಕೇದಾರಪೀಠದ ರಾವಲ್ ಪದವಿ ವಿಭೂಷಿತ ಭೀಮಾಶಂಕರ ಸ್ವಾಮೀಜಿಯನ್ನು ಹುಬ್ಬಳ್ಳಿಯಲ್ಲಿ ಭೇಟಿಯಾದ ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಅವರು ಶ್ರೀಗಳ ಆಶೀರ್ವಾದ ಪಡೆದರು.

ಈ ಸಂಧರ್ಭದಲ್ಲಿ ಪ್ರಮುಖರಾದ ಪ್ರಕಾಶ ಬೆಂಡಿಗೇರಿ ಉಪಸ್ಥಿತರಿದ್ದರು.



ಕಸಾಯಿಖಾನೆಗೆ ಜಾನುವಾರುಗಳ ಅಕ್ರಮ ಸಾಗಾಟ | ರಕ್ಷಣೆಗೆ ಆಗ್ರಹ

ಹಿಂದು ಸಂಘಟನೆಗಳಿಂದ ಪ್ರತಿಭಟನೆ



• **ಹುಬ್ಬಳ್ಳಿ:** ಇಲ್ಲಿಯ ಇಸ್ಲಾಂಪುರದಲ್ಲಿರುವ ಕಾನೂನು ಬಾಹಿರವಾಗಿ ಜಾನುವಾರುಗಳನ್ನು ಕಸಾಯಿಖಾನೆಗೆ ಸಾಗಿಸಿದ್ದು, ಅವುಗಳನ್ನು ರಕ್ಷಣೆ ಮಾಡಬೇಕು ಎಂದು ಆಗ್ರಹಿಸಿ ವಿಶ್ವ ಹಿಂದೂ ಪರಿಷತ್, ಸೇರಿದಂತೆ ಹಿಂದು ಸಂಘಟನೆ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಶನಿವಾರ ಇಲ್ಲಿಯ ಕಸಬಾಪೇಟ ಪೊಲೀಸ್ ಠಾಣೆಯ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು ಪೊಲೀಸ್ ಹಾಗೂ ಮಹಾನಗರ ಪಾಲಿಕೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ತಕ್ಷಣ ಈ ಕುರಿತು ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು. ಈ ವೇಳೆ ಪೊಲೀಸ್ ಹಾಗೂ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು. ಪ್ರತಿಭಟನೆ ತಡರಾತ್ರಿವರೆಗೂ ಮುಂದುವರಿದಿತ್ತು.

ಈ ವೇಳೆ ಹಿಂದು ಮುಖಂಡ ಜಯತೀರ್ಥ ಕಟ್ಟಿ ಮಾತನಾಡಿ, ಹಳೇಹುಬ್ಬಳ್ಳಿಯ ಇಸ್ಲಾಂಪುರದಲ್ಲಿರುವ ಅಕ್ರಮ ಕಸಾಯಿ ಖಾನೆಯಲ್ಲಿ ಐದು ನೂರಕ್ಕೂ ಹೆಚ್ಚು ಆಕಳು, ಕರುಗಳನ್ನು ಕೂಡಿ ಹಾಕಿರುವ ಕುರಿತು ಶನಿವಾರ ಮಧ್ಯಾಹ್ನ ಮಾಹಿತಿ ಬಂದಿತ್ತು. ಪೊಲೀಸರಿಗೆ ವಿಷಯ ತಿಳಿಸಿ ಸ್ಥಳಕ್ಕೆ ತೆರಳಿದಾಗ ಸಮುದಾಯದ ನೂರಾರು ಮಂದಿ ನಮ್ಮ ಕಾರ್ಯಕರ್ತರ ಮೇಲೆ ಹಲ್ಲೆಗೆ ಮುಂದಾಗಿದ್ದರು. ಪೊಲೀಸರು ಸಹ ಲಾಠಿ ಬೀಸಿ ಬೆದರಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಪಾಲಿಕೆ ಆಯುಕ್ತರಿಗೆ ಈ ಹಿಂದೆಯೇ ಕಸಾಯಿಖಾನೆಗಳ ಸಮೀಕ್ಷೆ ನಡೆಸಲು ವಿನಂತಿಸಲಾಗಿತ್ತು. ಅಷ್ಟಾದರೂ ಪಾಲಿಕೆ ಜಾಗದಲ್ಲಿ ಅಕ್ರಮವಾಗಿ ಹೇಗೆ ಗೋವುಗಳನ್ನು ಕೂಡಿಹಾಕಿದ್ದಾರೆ ಎಂದು ತಿಳಿಯುತ್ತಿಲ್ಲ. ರಾಜಕೀಯ ಒತ್ತಡದಿಂದಲೋ ಏನೋ ಇನ್ನೂ ನಡೆಸಿಲ್ಲ. ಪೊಲೀಸರ ವರ್ತನೆಯೂ ಭಯ ತರಿಸುತ್ತಿದೆ. ಸುಮೊಟೊ ಪ್ರಕರಣ ದಾಖಲಿಸಿಕೊಳ್ಳುವುದಾಗಿ ಹೇಳುತ್ತ ವಿಳಂಬ ಮಾಡುತ್ತಿದ್ದಾರೆ. ಪ್ರಕರಣ ದಾಖಲಾಗುವವರೆಗೆ ನಾವು ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಹೇಳಿದರು.

ಪ್ರತಿಭಟನೆ ಯಲ್ಲಿ ಹನುಮಂತಸಾ ನಿರಂಜನ, ದೀಪ ಬೊಮ್ಮಸಾಗರ, ರಘು ಯಲ್ಲಕನವರ, ವಿಜಯಕ್ಷೀರಸಾಗರ, ಸುನೀಲ ಕಟ್ಟಿಮನಿ, ಮಲ್ಲಿಕಾರ್ಜುನ ಸತ್ತಿಗೇರಿ, ಚೇತನ ರಾವ್ ಇದ್ದರು.

> ಖಾಸಗಿ ಜಾಗದಲ್ಲಿ ಜಾನುವಾರುಗಳನ್ನು ಕಟ್ಟಿ ಹಾಕಿರುವುದು ಕಂಡು ಬಂದಿದ್ದು, ಪರಿಶೀಲನೆ ನಡೆಯುತ್ತಿದೆ. ಯಾಕಾಗಿ ತಂದಿದ್ದು, ಅದರ ಹಿನ್ನೆಲೆ ಏನು ಎಂದು ಪೊಲೀಸರು ಮಾಹಿತಿ ಸಂಗ್ರಹಿಸಲಿದ್ದಾರೆ.
> ■ ಡಾ.ರುದ್ರೇಶ ಘಾಳಿ, ಆಯುಕ್ತ ಮಹಾನಗರ ಪಾಲಿಕೆ

ಶಿಂಗನಮನೆಯಲ್ಲಿ ಭೀಕರ ಕೊಲೆ ಪ್ರಕರಣ

ಮೃತನ ಪತ್ನಿ, ಪ್ರಿಯಕರನ ಬಂಧನ




• **ಶಿರಸಿ:** ತಾಲೂಕಿನ ಇಟಗುಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಿಂಗನಮನೆಯಲ್ಲಿ ನಡೆದ ಭೀಕರ ಕೊಲೆ ಪ್ರಕರಣಕ್ಕೆ ಅಕ್ರಮ ಸಂಬಂಧವೇ ಕಾರಣ ಎಂದು ತಿಳಿದು ಬಂದಿದ್ದು, ಮೃತನ ಪತ್ನಿ ಹಾಗೂ ಆಕೆಯ ಪ್ರಿಯಕರನನ್ನು ಶಿರಸಿ ಗ್ರಾಮೀಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಿಂಗನಮನೆ ನಿವಾಸಿ ಪರಮೇಶ್ವರ ಬಾಬು ನಾಯ್ಕ (35) ಕೊಲೆಯಾದ ದುರ್ದೈವಿ. ಮೃತನ ಪತ್ನಿ ಅರ್ಪಿತಾ ಹಾಗೂ ಆಕೆಯ ಪ್ರಿಯಕರ, ಪಕ್ಕದ ಮನೆಯ ನಿವಾಸಿ ಪರಮೇಶ್ವರ ತಿಮ್ಮ ನಾಯ್ಕ ಬಂಧಿತ ಆರೋಪಿಗಳು.

ದಟ್ಟ ಅರಣ್ಯದ ಮಧ್ಯೆ ಅಕ್ಕಪಕ್ಕದ ಮನೆಯವರಾಗಿದ್ದ ಇವರಿಬ್ಬರ ನಡುವೆ ಕಳೆದ 8 ವರ್ಷಗಳಿಂದ ಅನೈತಿಕ ಸಂಬಂಧವಿತ್ತು. ಈ ವಿಷಯ ತಿಳಿದ ಪತಿ ಪರಮೇಶ್ವರ ಬಾಬು ನಾಯ್ಕ, ಇಬ್ಬರು ಪುಟ್ಟ ಮಕ್ಕಳ ಭವಿಷ್ಯಕ್ಕಾಗಿ ಎಲ್ಲ ನೋವನ್ನು ನುಂಗಿಕೊಂಡು ಮೌನವಾಗಿದ್ದ. ಆದರೆ, ತಮ್ಮ ಸಂಬಂಧಕ್ಕೆ ಗಂಡ ಎಂದಿಗೂ ಕಂಟಕ ಎಂದು ನಿರ್ಧರಿಸಿದ ಅರ್ಪಿತಾ ಮತ್ತು ಪ್ರಿಯಕರ ಆತನನ್ನು ಮುಗಿಸಲು ಸ್ಕೆಚ್ ಹಾಕಿದ್ದರು.

ಜೂನ್ 25ರ ರಾತ್ರಿ 8 ಗಂಟೆಗೆ ಸಂಚಿನ ಭಾಗವಾಗಿ ಪ್ರಿಯಕರ ಪರಮೇಶ್ವರ ತಿಮ್ಮ ನಾಯ್ಕ ಫೋನ್ ಮಾಡಿ ಮೃತನನ್ನು ನಿರ್ಜನ ಅರಣ್ಯಕ್ಕೆ ಕರೆಸಿಕೊಂಡಿದ್ದಾನೆ. ಅಲ್ಲಿ ವಾದ ತಾರಕಕ್ಕೇರಿದಾಗ, ಕುರಿ ಕಡಿಯುವ ವೃತ್ತಿ ಮಾಡುತ್ತಿದ್ದ ಆರೋಪಿಯು ಮೊದಲೇ ಅಡಗಿಸಿಟ್ಟಿದ್ದ ಕತ್ತಿಯಿಂದ ಪರಮೇಶ್ವರ ಬಾಬು ನಾಯ್ಕನ ಕತ್ತು ಸೀಳಿ ಬರ್ಬರವಾಗಿ ಹತ್ಯೆ ಮಾಡಿದ್ದಾನೆ. ರಾತ್ರಿಯಿಡೀ ಪೊಲೀಸರು ಮತ್ತು ಗ್ರಾಮಸ್ಥರು ಹುಡುಕಾಟ ನಡೆಸಿದಾಗ ಜೂನ್ 26ರ ಮುಂಜಾನೆ ರಕ್ತಸಿಕ್ತ ಶವ ಪತ್ತೆಯಾಗಿದೆ.

ಕೊಲೆ ನಡೆದ ನಂತರವೂ ಪತ್ನಿ ಅರ್ಪಿತಾ ಪ್ರಿಯಕರನಿಗೆ ನೂರಾರು ಮೆಸೇಜ್ ಹಾಗೂ ಕರೆ ಮಾಡಿದ್ದಳು. ಗಂಡನ ಸಾವಿಗೆ ಕಣ್ಣೀರು ಸುರಿಸುತ್ತಿದ್ದ ಆಕೆಯನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸಿದಾಗ ಕರಾಳ ಸಂಚು ಬಯಲಾಗಿದೆ. ಎಸ್ಪಿ ದೀಪನ್ ಎಂ.ಎನ್. ಹಾಗೂ ಡಿವೈಎಸ್ಪಿ ಗೀತಾ ಪಾಟೀಲ್ ಮಾರ್ಗದರ್ಶನದಲ್ಲಿ, ಪಿಎಸ್ಐಗಳಾದ ಸಂತೋಷ ಕುಮಾರ್ ಹಾಗೂ ಅಶೋಕ ರಾಥೋಡ್ ಸಹಕಾರದೊಂದಿಗೆ ಗ್ರಾಮೀಣ ಪೊಲೀಸರು ಆರೋಪಿಗಳನ್ನು ಕಂಬಿ ಹಿಂದೆ ತಳ್ಳಿದ್ದಾರೆ. ಸ್ಥಳಕ್ಕೆ ಶ್ವಾನದಳ ಮತ್ತು ಎಫ್.ಎಸ್.ಎಲ್ ತಂಡ ಭೇಟಿ ನೀಡಿ ಸಾಕ್ಷ್ಯ ಕಲೆಹಾಕಿದೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	2550	4629
ಕಡಲೆಕಾಳು	3649	5849
ಉದ್ದಿನಕಾಳು	4110	6229
ಒಣ ಮೆಣಸಿನಕಾಯಿ	6900	56199
ಹೆಸರುಕಾಳು	1355	5660
ನೆಲಗಡಲೆ (ಶೇಂಗಾ)	700	5116
ಜೋಳ	2456	4539
ಮೆಕ್ಕೆಜೋಳ	1406	2023
ಮಡಿಕೆ (ಮಟಕಿ)	3009	3009
ಕುಸುಬಿ	500	2100
ಆಲೂಗಡ್ಡೆ	1200	1800
ಸೋಯಾಬಿನ್	1509	7049
ತೊಗರಿ	4259	4259
ಗೋಧಿ	2219	3526

CHANGE OF NAME
I, **ABDUL KHADAR** (Old Name) Resident of Kasturba Nagar, Taluk : Sirsi, Uttara Kannada District, Pin Code : 581402, Karnataka, India, have changed my name as **ABDUL KHADAR KANAVALLI** (New Name) for all purposes affidavit Dtd.: 27-06-2026 sworn before notary **S. G. Hedge.**

CHANGE OF NAME
I, **ASFIYA BANKAPUR** (Old Name) Resident of Makan Galli Jakani Bhavi Road Dharwad 580001 (address), have changed my name as **ASFIYA NAVALUR** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **SABIHA JAMADAR** (Old Name) Resident of H No: 29/1 Bommapur Oni Hubli 580028 Dist.: Dharwad (address), have changed my name as **SABIHA MITTEBHAI** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **ARIFAHMED** (Old Name) Resident of Ward No 28 Navabag Hameed Nagar Bijapur 586101 (address), have changed my name as **ARIFAHMED BAGWAN** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **MAHAMMAD SADIK MITTEBAI** (Old Name) Resident of H No: 29/1 Bommapur Oni Hubli 580028 Dist.: Dharwad (Address), have changed my name as **MOHAMMED SADIQ MITTEBHAI** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **MUSKAN ABDUL MUNAF SOUDAGAR** (Old Name) Resident of Msah Allah House 1st Cross On Nagar Beside Ozone Hotel P B Road Dharwad 580004 (address), have changed my name as **MUSKAN BAGEWADI** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **FAYAZ AHMED ABDUL KAREEM SAB KAZI** (Old Name) Resident of H No 80 Ward No 10 Near Laxmi Temple Bagalkot 587101 (address), have changed my name as **SAYED FAYAZ KAZI** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **NOORAHEMD MAHABOOBSAB HANCHINAL (Old Name)** R/o H.No. 05, Mahalaxmi Layout, Goppankoppa, Hubballi-580023 have changed my name to **NOORAHMED HANCHINAL (New Name)** Vide Affidavit Sworn Before Notary Patil V.H. on 27-06-2026

CHANGE OF NAME
I, **MAINUDDIN ANNU SAB KONNUR** (Old Name) Resident of Plot No 11/C Road E Sector No 82 Navanagar Bagalkot 587103 (address), have changed my name as **MAINUDDIN KONNUR** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **BHARATI SHIRAGANVE** (Old Name) Resident of House No: 716 Near Bus Stand Taluk Raibag Morab, Raybag Belgaum Karnataka 591317, have changed my name as **BHARATI RAJU SHIRAGANVE** (New Name) henceforth I will be called and recognized by new name for all future purposes, dated: 27/06/2026.

G & W No. 100/2026
IN THE COURT OF HON'BLE I-ADDL. SR. CIVIL JUDGE, HUBBALLI, AT: HUBBALLI
Petitioners : 1) Smt. Rihanabanu W/o Mahamood Ali Makadam and others,
V/s.
Respondent : Nil

CITATION

Whereas the petitioners above named has filed an Petition under section 7 & 10 of Guardianship & Wards Act, seeking to appoint guardian of Mohammed Jaffar S/o Mahamad Ali Makadam and Mubarak S/o Mahamood Ali Makadam, to enable the Petitioner No.1 to sell the undivided share of the minor in the property bearing City Sy No. 942, CTS Ward No. 05, measuring 107.20 Sq. Meters & City Sy. No. 945/2, CTS Ward No. 05, measuring 12.82 Sq. Meters, situated at Kolekar Plot, Sadarsofa, Old Hubballi, Hubballi.

If anybody having objection for the same, he/they shall appear before this Court either personally or through duly instructed advocate & file objections if any on 15-07-2026 at 10:30 a.m. Failing which the case will be heard & decided.

Given under my hand & seal of the Court on 27-06-2026 at Hubballi.

COURT SEAL
By order of the Court
Sd/- Sherestedar
I Addl. Sr. Civil Judge, Hubballi
(A.A. Kamangar)
Advocate for Petitioners

CHANGE OF NAME
I, **MOHAMED ARIF ALI MOHAMED BUDDEN SAB** (Old Name) Resident of Kote Galli Sirsi 581401 (address), have changed my name as **MAHAMMED ARIF** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **SYED KHADAR BASHA HANGAL** (Old Name) Resident of Cheeranahalli At Post Baichavalli Tq Hangal 581104 (address), have changed my name as **SAYED KHADR BASHA HANGAL** (New Name) henceforth I will be called and recognized by new name for all future purposes, dated: 27/06/2026.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲ.
ಜಾಹೀರಾತು ವ್ಯವಸ್ಥಾಪಕರು

CHANGE OF NAME
I, **SHAMIMAMATAZ MORAB** (Old Name) Resident of 2336, Jamiya Masjid Road, Ainavar, Dharwad, Karnataka, Pin Code: 581103, have changed my name as **SHAMIMAMATAZ SAYEED AHAMMED AWARADI** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **GUDDAPPA KATENAVAR** (Old Name) Resident of H No 92, 2nd Main, 3rd Cross, Radhakrishna Nagar Gokul Road Hubballi - 580030, have changed my name as **GUDDAPPA NARAYANAPPA KATENAVAR** (New Name) henceforth I will be called and recognized by new name for all future purposes, dated: 27/06/2026.

IN THE COURT OF THE I ADDITIONAL CIVIL JUDGE & JMFC AT BALLARI
Cri M.C. 252 of 2026
BETWEEN:-1.Shaiksab, S S/o. Late. Husain Sab, aged about 54 years, 2.Hussain Bi.P W/o.Hameed Sab.P and D/o. Late. Hussain Sab, aged about 68 years, 3.Hasena Bi W/o. P. Najira Aham ad and D/o. Hussain Sab, aged about 53years, 4.Moula Bee D/o. Late. Hussain Sab, aged about 37 yearsAll are Resident at Ward No.37, Behind Remand Home, Near Mallappa Compound, Shanthi Marga, Ballari . ...Petitioners
And
RESPONDENT: The Register of Birth & Death's Register, City Corporation, Ballari.
NOTICE
WHEREAS, the above named pet itioner has filed the above petition under section 13(2) of Birth and Deaths Act, 1969 against the resp ondent for the purpose of seeking date of death of Petitioner's No.1 father by Hussain Sab S/o. Dodda Moula Sab was died on 27.03.2006 at Ward No.37, Behind Remand Home, Near Mallappa Compound, Shanthi Marga, Ballari in the above mentioned address. name Therefore, If any persons are interested you are hereby directed to appear in this court in person or by a pleader duly instructed on 27-07-2026 at about 11.00 am to show cause against the above suit, failing which the suit will be heard and determined ex-parte against you.
Given under my hand and seal of the court on this 27thday June 2026
By Order of the court.
Sd/-Chief Ministerial, Officer 1st Addl Civil Judge and JMFC at Ballari.
Sd/-G.Venkatarama, Advocates for the petitioners

CHANGE OF NAME
I, **TANISHABANU M DODDAMANI (Old Name)** R/o # Gudikeri Oni, Hangal Pattana Matty Taluk, Dist : Haveri-581104 have changed my name to **TANISHABANU YAVAGAL (New Name)** Vide Affidavit Sworn Before Notary A.S. Kusugal on 27-06-2026

CHANGE OF NAME
I, **SAMEERAHMED MANSHINKOP (Old Name)** R/o H.No. 37/B, Sector No. 14, Navanagar, Bagalkot have changed my name to **SAMEERAHMED BALLARI (New Name)** Vide Affidavit Sworn Before Notary T.G. Balannavar on 25-06-2026

CHANGE OF NAME
I, **SHAIK FAIROZ AHMED** (Old Name) R/o. 1039 Ground Floor Pipeline C Main Road Near Kamala Nehru extension Gokula 1st Stage 4 Phase Yeshwantpur Bangalore 560022, have changed my name as **FAIROZ AHMED SHAIKH** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **HEENA BAGBAN** (Old Name) Resident of Ward No 28 Navabag Hameed Nagar Bijapur 586101 (address), have changed my name as **HEENA BAGWAN** (New Name) henceforth I will be called and recognized by new name for all future purposes, dated: 27/06/2026.

THE COURT OF THE HON'BLE I ADDL.DISTRICT JUDGE AND MACT-II AT BALLARI
M V C NO.727/2025
Between: Sri. Nandish KM ....Petitioner.
And
Md.Samir Ali & others ...Respondents
To,
Respondent No.1:Md. Samir Ali son of Sarur Ali, Driver of the JCB Hitachi No.215LCM Machine No.2778416 [Engine No.84823934] care of Sangangoud Karigoud Amatigoudar, LIC 282,Ward No.33, RS No.246/1, New Radhakrishna Nagar, Mulgund road, GADAG-592103.
NOTICE
WHEREAS, the above named petitioner have filed the above claim petition against you and another respondents under section 166 of Motor Vehicles Act for seeking compensation for the injuries sustained by Nandish K M in the motor vehicle accident, which took place on 30-06-2025 at about 04-00 p.m. at SRC Pvt Ltd., work spot i.e., Siruguppa-Anantapur Construction New Bypass Road, near Canal, Kappagal village, Ballari taluk.
You are hereby directed to appear in this court in person or by a pleader duly instructed on 25th July 2026 at about 11-00 a.m. in the fore-noon before this Honorable Court to show cause against the above petition, failing which the petition will be heard and determined ex-parte.
Given under my hand and seal of the court on this 27th day of June 2026.
By Order of the Court,
Sd/-Chief Administrative Officer HON'BLE I ADDL.DISTRICT JUDGE AND MACT-II AT BALLARI
Sd/-MALLIKARJUNA V
Advocate for the Petitioner

CHANGE OF NAME
I, **AYSHA** (Old Name) Resident of #284, Tonka-1, Post: Kasarkod, Taluk: Honavar, Uttara Kannada District, Pin code: 581342, Karnataka, India, have changed my name as **AYSHA SALEEM SHIRALI** (New Name) for all purposes affidavit Dtd.: 27-06-2026 sworn before notary **S. G. Hedge.**

CHANGE OF NAME
I, **KAMRUDDIN SHAIKH ISMAIL SHAIKH** (Old Name) R/o. 4910 Kathinkon Sunkeri Karwar 581305, have changed my name as **KAMRUDDIN ISMAIL SHAIKH** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **SATISH NILAKANTH RAO** (Old Name) Resident of H No: 13/A, Avadhoot 2nd Stage, Shakti, Colony Near J K School, Hubli - 580032 have changed my name as **SATISH JOSHI** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **MEHARAJ BIJAPUR (Old Name)** R/o H.No. 22, Anjaneya Badavane, 2nd Stage, ZP Road, Opp : Pawar Farm House, Keshwapur, Hubli-580023 have changed my name to **MEHRAJ SHAIKH (New Name)** Vide Affidavit Sworn Before Notary A.S. Kusugal on 27-06-2026

E.P. No. 208/2025
ಮಾ॥2ನೆ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದಲ್ಲಿ
1) ಶ್ರೀ. ಬಸವರಾಜ ತಂ. ಮರಿಗೆಪ್ಪ ಬೆಂಬಳಗಿ ......ಡಿಕ್ರಿ ಹೋಲ್ಡರ್
ವಿರುದ್ಧ
1) ವಿಶೇಷ ಭೂ ಸ್ವಾಧೀನ ಅಧಿಕಾರಿಗಳು, ಹಾಗೂ ಇತರರು .... ಜೇ.ಡಿ.ಆರ್ಸ್
ಗೆ
6)ಶ್ರೀಮತಿ. ಸರ್ವಮಂಗಳಾ ಗಂ. ಮಹಾಂತೇಶ ಬೆಂಬಳಗಿ ವಯಾ॥ 57,ಉ:ಮನೆಕೆಲಸ ಸಾ॥ ಬೆಂಬಳಗಿ ಚಾಳ, ಮುಚಕಂಡಿ ಕ್ರಾಸ, ತಾ॥ ಜಿ॥ ಬಾಗಲಕೋಟೆ
7)ಶ್ರೀಮತಿ. ಮುಕ್ತಾ ಗಂ.ಮುರುಗೇಶ ಪಟ್ಟಣಶೆಟ್ಟಿ ವಯಾ॥31 ಉ:ಮನೆಕೆಲಸ ಸಾ॥ಬೆಂಬಳಗಿ ಚಾಳ, ಮುಚಕಂಡಿ ಕ್ರಾಸ, ತಾ॥ ಜಿ॥ ಬಾಗಲಕೋಟ
. ಜೇ.ಡಿ.ಆರ್. ನಂ.6 ಮತ್ತು7
ಸಾರ್ವಜನಿಕ ಪ್ರಕಟಣೆ
(ಆರ್ಡ ಕ್ರಮಾದೇಶ 5ನಿಯಮ20ಎ ದಿವಾಣಿ ಪ್ರಕ್ರಿಯ ಸಂಹಿತೆ ಅಡಿಯಲ್ಲಿ ಕೋರ್ಟ ನೋಟಿಸು/ ಸಮನ್ಸ)
ಸದರಿ ಮೇಲ್ಕಾಣಿಸಿದ ಪ್ರಕರಣದಲ್ಲಿ ಡಿಕ್ರಿ ಆರ್ ಹೋಲ್ಡರ್‌ರು ಜೇ. ಡಿ. ಆರ್ಸ್ ವಿರುದ್ಧ E.P. No.208/2025 ಮಾ॥2ನೆ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ಇವರ ಮಧ್ಯಂತರ ಅರ್ಜಿಗೆ ಸಂಬಂಧಿಸಿದಂತೆ ಮೇಲಿನ ಜೇ. ಡಿ. ಆರ್ ಈ ನ್ಯಾಯಾಲಯದಿಂದ ನೋಟಿಸು ಹೊರಡಿಸಿದ್ದು, ಆದರೆ ತಾವು ಉದ್ದೇಶಪೂರ್ವಕವಾಗಿ ಕೋರ್ಟ ನೋಟಿಸನ್ನು ತಗೆದುಕೊಳ್ಳದೇ ಇರುವುದರಿಂದ ಈ ಪ್ರಕಟಣೆಯ ಮೂಲಕ ನಿಮಗೆ ತಿಳಿಸುವ ದೇನೆಂದರೆ. ಈ ಪ್ರಕರಣದಲ್ಲಿ ನೀವು ಖುದ್ದಾಗಿ ಅಥವಾ ನಿಮ್ಮ ವಕೀಲರ ಮುಖಾಂತರ ದಿ: 17/07/2026 ರಂದು ಮುಂಜಾನೆ 11:00 ಗಂಟೆಗೆ ಈ ನ್ಯಾಯಾಲಯಕ್ಕೆ ಸದರಿ ಪ್ರಕರಣದಲ್ಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಬೇಕು, ಒಂದು ವೇಳೆ ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕತರ್ಫಿ ಆದೇಶವನ್ನು ಮಾಡಿ, ಸದರಿ ಪ್ರಕರಣವನ್ನು ನೀವು ಗೈರಹಾಜರಿಂದಾ ವಿಚಾರಣೆ ಮಾಡಲಾಗುವುದು ಅಂತಾ ಕೋರ್ಟ ನೋಟಿಸ್.
ಈ ದಿನ ದಿನಾಂಕ:27/06/2026ರಂದು ನ್ಯಾಯಾಲಯದ ಆದೇಶದ ಮೇರೆಗೆ ಹಾಗೂ ಸಹಿ ಮತ್ತು ಮುದ್ರೆಯೊಂದಿಗೆ ಕೊಡಲ್ಪಟ್ಟಿರುತ್ತದೆ.
ಸ್ಥಳ: ಬಾಗಲಕೋಟೆ
ದಿನಾಂಕ:27/06/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಪಿ.ಎಸ್. ಮಗಜಿ, ಡಿಕ್ರಿ, ಹೋಲ್ಡರ ಪರ ವಕೀಲರು.
ಹಿರಿಯ ಶಿರಸ್ತೇದಾರರು, ಮಾ॥ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟೆ.

CHANGE OF NAME
I, **FAZAL RAHEMAN SHAIK UMMAR SAB** (Old Name) R/o. Revanakatta post Balavalli Sirsi 581315, have changed my name as **FAZLUR REHMAN** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **ABUBAKAR** (Old Name) R/o. Bandi Bazar Ismail Complex Ankola 581314, have changed my name as **ABUBAKAR NOOR MOHAMMED SHAIKH** (New Name) henceforth I will be called and recognized by new name for all future purposes, dated: 27/06/2026.

CHANGE OF NAME
I, **GIRIJA SAN SHI** (Old Name) Resident of H No 41, 2nd Cross Shreya Park Gokul Road Hubballi - 580030, Lin The Distrect of Dharwad in Karnataka, have changed my name as **GIRIJA NAGATHAN** (New Name) for all purposes affidavit Dtd.: 24-06-2026 sworn before notary **S. J. Nirmanik.**

CHANGE OF NAME
I, **BEE BEE ASMA DALAWALA (Old Name)** R/o Anand Nagar Road, 7th Cross, Indraprasta Nagar, Old Hubli-580024 have changed my name to **BIBI ASMA DOKAWALE (New Name)** Vide Affidavit Sworn Before Notary S.F. Huilgol on 25-06-2026

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 746/2026
ಅರ್ಜಿದಾರರು:1)ಮರಿಸ್ವಾಮಿ ತಂದೆ ಲೇಟ್ ಗಂಗಣ್ಣ, ವಯಸ್ಸು:36ವರ್ಷ ವಾಸ:ಮೆಟ್ರಿಕಿ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.2) ಶ್ರೀಮತಿ ಭಾಗ್ಯಮ್ಮ ಗಂಡ ಕೊಲ್ಲಪ್ಪ ತಂದೆ ಲೇಟ್ ಗಂಗಣ್ಣ, ವಯಸ್ಸು: 34ವರ್ಷ, ವಾಸ: ಕೊಳಗಲ್ಲು ಗ್ರಾಮ, ಬಳ್ಳಾರಿ ತಾಲೂಕು, ಬಳ್ಳಾರಿ ಜಿಲ್ಲೆ.
ವಿರುದ್ಧ
ಎದುರುದಾರರು :ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಸಂಡೂರು.
ನೋಟಿಸ್
ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ 1 & 2ರ ತಂದೆಯವರಾದ ಗಂಗಣ್ಣ ತಂದೆ ಚೆಣಿಗೆಪ್ಪ ಇವರು ದಿನಾಂಕ: 28-01-2023 ರಂದು ಮೆಟ್ರಿಕಿ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 31-07-2026 ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 24-06-26 ರಂದು ನೀಡಲಾಯಿತು.
ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/–ಶಿರಸ್ತೇದಾರರು
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ನ್ಯಾಯಾಲಯ, ಸಂಡೂರು
ಸಹಿ/–ಡಿ.ನಾಗರಾಜ್
ಅರ್ಜಿದಾರರ ಪರ ವಕೀಲರು,ಸಂಡೂರು



ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ :752/2026
ಅರ್ಜಿದಾರರು: 1)ಲೋಕ್ಯನಾಯ್ಕ ತಂದೆ ಕಶನ್ಯನಾಯ್ಕ, ವಯಸ್ಸು 72ವರ್ಷ, 2)ವೆಂಕೋಬಿ ನಾಯ್ಕ ತಂದೆ ಕಶನ್ಯನಾಯ್ಕ, ವಯಸ್ಸು 53ವರ್ಷ. 3)ಪಾಪಿಬಾಯಿ ಗಂಡ ಕೆ ಬಿ ರಾಜು ನಾಯ್ಕ, ತಂದೆ ಕಶನ್ಯನಾಯ್ಕ, ವಯಸ್ಸು 45ವರ್ಷ. 4)ಚಂದ್ರನಾಯ್ಕ ತಂದೆ ದಿವಂಗತ ಲಚ್ಚನಾಯ್ಕ, ವಯಸ್ಸು 43 ವರ್ಷ, 5)ಶೇಖರ್ ನಾಯ್ಕ ತಂದೆ ದಿ:ಲಚ್ಚನಾಯ್ಕ, ವಯಸ್ಸು 38 ವರ್ಷ, ಎಲ್ಲಾರ ವಾಸ ವಾಸ: ವೆಂಕಟಗಿರಿ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಹಾಗೂ
ಎದುರುದಾರರು :ಮಾನ್ಯ ತಹಶೀಲ್ದಾರರು ಮತ್ತು ಜನನ ಮರಣ ನೊಂದಣಾಧಿಕಾರಿಗಳು ತಾಲೂಕು ಕಛೇರಿ ಸಂಡೂರು
ನೋಟಿಸ್
ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ 1 ಮತ್ತು 2ರವರ ತಾಯಿ 4 ಮತ್ತು 5 ರವರ ತಾತಾನವರಾದ ಕಶನ್ಯನಾಯ್ಕ ತಂದೆ ಟಾಕ್ಯಾ ನಾಯ್ಕ ಇವರು ದಿನಾಂಕ:16.09.1994 .ವೆಂಕಟಗಿರಿ ಗ್ರಾಮದಲ್ಲಿ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 03-08-2026 ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 24-06-26 ರಂದು ನೀಡಲಾಯಿತು.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶೀರಸ್ತೆದಾರರು,
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಹಿ/–ಚಂದ್ರನಾಯ್ಕ
ಅರ್ಜಿದಾರರ ಪರ ವಕೀಲರು, ಸಂಡೂರು

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ :751/2026
ಅರ್ಜಿದಾರರು:1) ಲೋಕ್ಯನಾಯ್ಕ ತಂದೆ ಕಶನ್ಯನಾಯ್ಕ, ವಯಸ್ಸು 72 ವರ್ಷ, 2)ವೆಂಕೋಬಿ ನಾಯ್ಕ ತಂದೆ ಕಶನ್ಯನಾಯ್ಕ, ವಯಸ್ಸು 53ವರ್ಷ.3)ಪಾಪಿಬಾಯಿ ಗಂಡ ಕೆ ಬಿ ರಾಜು ನಾಯ್ಕ, ತಂದೆ ಕಶನ್ಯನಾಯ್ಕ, ವಯಸ್ಸು 45 ವರ್ಷ. 4)ಚಂದ್ರನಾಯ್ಕ ತಂದೆ ದಿವಂಗತ ಲಚ್ಚನಾಯ್ಕ, ವಯಸ್ಸು 43 ವರ್ಷ. 5)ಶೇಖರ್ ನಾಯ್ಕ ತಂದೆ ದಿವಂಗತ ಲಚ್ಚನಾಯ್ಕ, ವಯಸ್ಸು 38ವರ್ಷ, ಎಲ್ಲಾರ ವಾಸ ವಾಸ:ವೆಂಕಟಗಿರಿ ಗ್ರಾಮ. ಸಂಡೂರು ತಾಲೂಕು. ಬಳ್ಳಾರಿ ಜಿಲ್ಲೆ.
ಹಾಗೂ
ಎದುರುದಾರರು :ಮಾನ್ಯ ತಹಶೀಲ್ದಾರರು ಮತ್ತು ಜನನ ಮರಣ ನೊಂದಣಾಧಿಕಾರಿಗಳು ತಾಲೂಕು ಕಛೇರಿ ಸಂಡೂರು
ನೋಟಿಸ್
ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ 1 ಮತ್ತು 2ರವರ ತಾಯಿ 4 ಮತ್ತು 5 ರವರ ಅಜ್ಜಿಯವರಾದ ಚಂಟ್ರಿಬಾಯಿ ತಂದೆ ಕಶನ್ಯನಾಯ್ಕ, ಇವರು ದಿನಾಂಕ:20.06.1998ರಂದು ವೆಂಕಟಗಿರಿ ಗ್ರಾಮದಲ್ಲಿ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರ ರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 03-08-2026 ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫ ಮುಂದಿನ ಆದೇಶ ಕೈಗೊಳ್ಳಲಾಗುವುದು.
ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 24-06-26 ರಂದು ನೀಡಲಾಯಿತು.
ನ್ಯಾಯಾಲಯದ ಆದೇಶದ ಮೇರೆಗೆ
.ಸಹಿ/–ಶೀರಸ್ತೆದಾರರು, ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಹಿ/–ಚಂದ್ರನಾಯ್ಕ
ಅರ್ಜಿದಾರರ ಪರ ವಕೀಲರು, ಸಂಡೂರು

ಕ್ರಿಮಿನಲ್ ಮಿಸಲೇನಿಯಸ್ ನಂ: 156/2026
ಮಾನ್ಯ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ನವಲಗುಂದ, ಇವರ ನ್ಯಾಯಾಲಯದಲ್ಲಿ ನವಲಗುಂದ.
ಅರ್ಜಿದಾರರು:ಶ್ರೀ ಚನ್ನಬಸವ್ವ ಜಕ್ಕಪ್ಪ ಹೆಬಸೂರ, ವಯಾ:48, ಉದ್ಯೋಗ:ಶೇತ್ಕಿ ಮಕಾಶಿ ಓಣಿ, ಸಾ:ಬಸಾಪೂರ, ತಾ:ಅಣ್ಣಿಗೇರಿ, ಜಿ:ಧಾರವಾಡ.
ವಿರುದ್ಧ
ಎದುರುಗಾರರು: ಮಾ॥ ತಹಶೀಲ್ದಾರ ಸಾಹೇಬರು, ನವಲಗುಂದ.
ಸಾರ್ವಜನಿಕ ಪ್ರಕಟಣೆ
ಅರ್ಜಿದಾರರ ತಂದೆಯಾದ ಶ್ರೀ ಜಕ್ಕಪ್ಪ ಚನ್ನಬಸಪ್ಪ ಹೆಬಸೂರ,ಇವರು ದಿನಾಂಕ:14.05.1976 ರಂದು ಬಸಾಪೂರ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರ ಮರಣದ ದಿನಾಂಕವನ್ನು ಮಾ॥ ತಹಶೀಲ್ದಾರ ಸಾಹೇಬರು, ಅಣ್ಣಿಗೇರಿ ಇವರ ಮರಣ ದಾಖಲಾತಿಗಳ ರಜಿಸ್ಟರದಲ್ಲಿ ದಾಖಲಿಸುವ ಹುಕುಂ ಪಡೆಯುವ ಕುರಿತು ಅರ್ಜಿದಾರನು ಮಾ: ಜೆ.ಎಮ್.ಎಫ್.ಸಿ ನವಲಗುಂದ ಇವರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸಲೇನಿಯಸ್ ನಂ.156/2026 ನೇದ್ದನ್ನು ದಾಖಲಿಸಿದ್ದು, ಯಾರದಾದರೂ ಏನಾದರೂ ತಕರಾರು ವಗೈರೆ ಇದ್ದಲ್ಲಿ, ಈ ಪ್ರಕರಣದ ಮುದ್ದತಿನ ದಿನಾಂಕವಾದ 22/07/2026ರಂದು ಮುಂಜಾನೆ11–00ಘಂಟೆಗೆ ಮೇಲ್ಕಾಣಿಸಿದ ನ್ಯಾಯಾಲಯದಲ್ಲಿ ಸ್ವತಃ ಅಥವಾ ನಿಮ್ಮಿಂದ ಮಾಹಿತಿ/ಅಧಿಕಾರ ಪಡೆದ ವಕೀಲರ ಮುಖಾಂತರ ಹಾಜರಾಗಿ ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು, ಇಲ್ಲದಿದ್ದಲ್ಲಿ ಯಾರದೂ ತಕರಾರು ಇರುವುದಿಲ್ಲ ಅಂತಾ ಪರಿಗಣಿಸಿ ಏಕತರ್ಫಿಯಾಗಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು.
ನ್ಯಾಯಾಲಯದ ಆದೇಶದ ಮೇರೆಗೆ
ನವಲಗುಂದ
ದಿನಾಂಕ:22/06/2026
ಸಹಿ/–ಶಿರಸ್ತೇದಾರರು, ದಿವಾಣಿ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ನವಲಗುಂದ.
ಅರ್ಜಿದಾರರ ಪರ ವಕೀಲರು,
ಸಹಿ/–(ಎಸ್.ವ್ಹಿ.ಸಂಗಮ) ವಕೀಲರು, ನವಲಗುಂದ.

ಕ್ರಿಮಿ ನಂ–341/2026
ಮಾನ್ಯ ದಿವಾಣಿ ನ್ಯಾಯಾಧೀಶರ ಮತ್ತು ಜೆ.ಎಂ ಎಫ್.ಸಿ ನ್ಯಾಯಾಲಯ ಹಾವೇರಿ ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು:1) ಶರೀಫ್‌ಸಾಬ. ತಂದೆ ಮೌಲಾಸಾಬ ಬೆಳ್ಳಟ್ಟಿ ವಯಾ:43 ವರ್ಷ ಉದ್ಯೋಗ: ಶೇತ್ಕಿ ಸಾ: ಕೊರಡೂರ. ತಾ:ವ ಜಿ: ಹಾವೇರಿ. ಹಾಗೂ ಇತರರು
ವಿರುದ್ಧ
ಎದುರುಗಾರರು: 1) ಮಾನ್ಯ ತಹಶೀಲ್ದಾರರು ಹಾವೇರಿ ಜನನ ವ ಮರಣ ನೋಂದಣಿ ಅಧಿಕಾರಿಗಳು ಹಾವೇರಿ ಹಾಗೂ ಇನ್ನೊಬ್ಬರು
ಇಶ್ತಿಯಾರ ನಾಮೆ
ಈ ಪ್ರಕರಣದಲ್ಲಿ ಅರ್ಜಿದಾರರಾದ ನಾವು ಈ ಮೂಲಕ ಸಾರ್ವಜನಿಕರ
ಗಮನಕ್ಕಾಗಿ ಪ್ರಕಟಿಸಿದ ನೋಟಿಸು ಏನೆಂದರೆ
ಈ ಮೇಲ್ಕಾಣಿಸಿದ ಅರ್ಜಿದಾರರ ತಾಯಿಯಾದ ದಿ॥ ಮಾಲನಬಿ ಕೋಂ ಮೌಲಾಸಾಬ ಬೆಳ್ಳಟ್ಟಿ ಇವರು ದಿನಾಂಕ:-15/08/1996ರಂದು ಹಾವೇರಿ ತಾಲೂಕ ಕೊರಡೂರ ಗ್ರಾಮದ ತಮ್ಮ ಸ್ವಂತ ಮನೆಯಲ್ಲಿ ಮರಣ ಹೊಂದಿದ್ದು ಇರುತ್ತದೆ ಅಂತಾ ಆದೇಶ ಪಡೆಯುವ ಕುರಿತು ಎದುರುಗಾರರ ಮೇಲೆ ಮಾನ್ಯ ಹಾವೇರಿ ಅಧಿಕ ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ. ಇವರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸಲೇನಿಯಸ್ ನಂಬರ :341/2026ನೇದ್ದನ್ನು ದಾಖಲ ಪಡಿಸಿದ್ದು ಇರುತ್ತದೆ.
ಕಾರಣ ಈ ಮೇಲ್ಕಂಡ ವಿಷಯದ ಬಗ್ಗೆ ಯಾರಾದರೂ ಹಿತಾಸಕ್ತಿಯುಳ್ಳವರು ತಮ್ಮ ತಕರಾರು ಏನಾದರೂ ಇದ್ದಲ್ಲಿ ದಿನಾಂಕ:30-07-2026 ರಂದು ಮುಂಜಾನೆ 11ಘಂಟೆಗೆ ನೀವಾಗಲೇ ಇಲ್ಲವೇ ನಿಮ್ಮಿಂದ ಅಧಿಕಾರ ಪಡೆದ ನ್ಯಾಯವಾದಿಗಳಾಗಲೀ ಮಾನ್ಯ ನ್ಯಾಯಾಲಯಕ್ಕೆ ಹಾಜರ ಆಗಿ ತಕರಾರು ಸಲ್ಲಿಸಬೇಕು. ತಪ್ಪಿದ್ದಲ್ಲಿ ಸದರ ಕೇಸಿನಲ್ಲೆ ಮುಂದಿನ ಆದೇಶ ಮಾಡಲಾಗುವುದು.
ಈ ದಿವಸ ದಿನಾಂಕ 24ನೇ ಜೂನ 2026 ರಂದು ತಮ್ಮ ಸಹಿ ಹಾಗೂ ಕೋರ್ಟಿನ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–(ಶ್ರೀ ಎಸ್.ಆರ್.ಕದಂ), ಶಿರಸ್ತೇದಾರರು ಸಿವ್ಹಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹಾವೇರಿ
ಅರ್ಜಿದಾರ ಪರ ನ್ಯಾಯವಾದಿಗಳು
ಸಹಿ/–(ಶ್ರೀ ಎಸ್.ಎಂ.ಕಾರದ) ನ್ಯಾಯವಾದಿಗಳು ಹಾವೇರಿ

ಗ್ರೀನಿರ್ಥೋನ್ ಅಗ್ರಿಟೆಕ್ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್, 711, ಟ್ರೇಡ್ ಸೆಂಟರ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ ಪೂರ್ವ,ಮುಂಬೈ–400051
ಸಾರ್ವಜನಿಕ ನೋಟಿಸ್
ಸುಸ್ತಿದಾರರ ಭಾವಚಿತ್ರ ಮತ್ತು ವಿವರಗಳ ಪ್ರಕಟಣೆ
ಈ ನೋಟಿಸನ್ನು ಸಾರ್ವಜನಿಕ ಹಿತಾಸಕ್ತಿಯಿಂದ ಪ್ರಕಟಿಸಲಾಗಿದೆ. ಈ ಕೆಳಗೆ ಸಹಿ ಮಾಡಿರುವವರು ವಿಶೇಷವಾಗಿ ಸಾರ್ವಜನಿಕರಿಗೆ, ಬ್ಯಾಂಕ್‌ಗಳಿಗೆ, ಹಣಕಾಸು ಸಂಸ್ಥೆಗಳಿಗೆ, ಸಾಲಗಾರರಿಗೆ, ವ್ಯವಹಾರ ಸಹವರ್ತಿಗಳು, ಪೂರೈಕೆದಾರರು, ಗ್ರಾಹಕರು,ಹೂಡಿಕೆದಾರರು ಮತ್ತು ಸಂಬಂಧಪಟ್ಟ ಎಲ್ಲ ವ್ಯಕ್ತಿಗಳಿಗೆ ತಿಳಿಯಪಡಿಸಲು ಬಯಸುವುದೇನೆಂದರೆ, ಕರ್ನಾಟಕದ ಬೆಳಗಾವಿ ನಿವಾಸಿ ಈರನಗೌಡ ಪಾಟೀಲ 06-08-2021ರಿಂದೀಚೆಗೆ ಗ್ರೀನಿರ್ಥೋನ್ ಅಗ್ರಿಟೆಕ್ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್ ಮೂಲಕ ಒದಗಿಸಲಾದ ಹಣಕಾಸು ಸೌಲಭ್ಯಗಳು/ ಸಾಲಗಳಿಗೆ ಸಂಬಂಧಿಸಿದಂತೆ ಗ್ರೀನಿರ್ಥೋನ್ ಅಗ್ರಿಟೆಕ್ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್ ಮತ್ತು ಅದರ ಸಾಲ ಪಾಲುದಾರ ಸಂಸ್ಥೆಯಾದ ಕ್ರೆಡೋಸ್ ಫೈನಾನ್ಸ್ ಅಂಡ್ ಇನ್ವೆಸ್ಟ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ಗೆ ಸುಸ್ತಿದಾರರಾಗಿರುತ್ತಾರೆ.
ಸಾಲಗಾರರ ಹೆಸರು: **ಶ್ರೀ ಈರನಗೌಡ ಪಾಟೀಲ,**
ವಿಳಾಸ: ಬಂಗ್ಲೆ ಸಂಖ್ಯೆ 52, ಸಂಸ್ಕೃತಿ ಫಾರ್ಮ್, ಮಂಡೋಳಿ ರಸ್ತೆ, ಭವಾನಿನಗರ, ಟಿಳಕವಾಡಿ, ಹುಕ್ಕೇರಿ, ಬೆಳಗಾವಿ– 590006.

ಮೇಲೆ ಹೇಳಿದ ವ್ಯಕ್ತಿಯು ಒಟ್ಟು ಮೊತ್ತವನ್ನು, ಅಂದರೆ **ರೂ. 79,10,767/- (ರೂಪಾಯಿ ಎಪ್ಪತ್ತೊಂಬತ್ತು ಲಕ್ಷದ ಹತ್ತು ಸಾವಿರದ ಏಳು ನೂರ ಅರುವತ್ತೇಳು ಮಾತ್ರ)** ಮೊತ್ತವನ್ನು ಪಾವತಿಸದೇ ಬಾಕಿ ಉಳಿಸಿಕೊಂಡಿರುತ್ತಾರೆ. ಬಾಕಿ ಮೊತ್ತವನ್ನು ಮತ್ತು ಬಡ್ಡಿಯನ್ನು ಮೇಲೆ ಹೇಳಿದ ವ್ಯಕ್ತಿಯು ಪಾವತಿ ಮಾಡಬೇಕಾಗಿದ್ದು, [illegible] ಮೇಲೆ ಹೇಳಿದ ಬಾಕಿ ಮೊತ್ತವನ್ನು ಪಾವತಿಸಿರುವುದಿಲ್ಲ. ಈ ಮೂಲಕ ಮತ್ತೊಮ್ಮೆ ತಿಳಿಯಪಡಿಸುವುದೇನೆಂದರೆ, ಮೇಲೆ ಹೇಳಿದ ವಹಿವಾಟಿಗೆ ಸಂಬಂಧಿಸಿದಂತೆ ಮತ್ತು ಅದಕ್ಕೆ ಸಂಬಂಧಿಸಿದ ವಂಚನೆ ಕೃತ್ಯಗಳ ಕುರಿತಂತೆ ಈರನಗೌಡ ಪಾಟೀಲ ಅವರ ವಿರುದ್ಧ [illegible] ಎಫ್‌ಐಆರ್ ದಾಖಲಿಸಲಾಗಿದೆ ಹಾಗೂ ಪ್ರಸ್ತುತ ಈ ಪ್ರಕರಣವು [illegible] ನಮ್ಮ ಕಾನೂನು ಹಕ್ಕುಗಳು ಮತ್ತು ಪರಿಹಾರಗಳಿಗೆ ಸಂಬಂಧಿಸಿದಂತೆ ಯಾವುದೇ ಪೂರ್ವಾಗ್ರಹವಿಲ್ಲದೇ ನೀಡಲಾಗಿದೆ, ಅದರ ಅನುಸಾರವಾಗಿ ಸಾರ್ವಜನಿಕರಿಗೆ ವಿಶೇಷವಾಗಿ ಮತ್ತು ಎಲ್ಲ ಹಕ್ಕುದಾರರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಮೇಲೆ ಹೇಳಿದ ವ್ಯಕ್ತಿಯ ಜತೆ ಯಾವುದೇ ವಾಣಿಜ್ಯ, ಹಣಕಾಸು ಮತ್ತು ವ್ಯಾಪಾರ ವ್ಯವಹಾರಗಳಿಗೆ ಸಂಬಂಧಿಸಿದಂತೆ ವ್ಯವಹರಿಸುವಾಗ ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಮೇಲೆ ಹೇಳಿದ ವ್ಯಕ್ತಿಯ ಜತೆ ಯಾವುದೇ ವ್ಯಕ್ತಿ ಸ್ವಂತ ರಿಸ್ಕ್, ವೆಚ್ಚ ಮತ್ತು ಪರಿಣಾಮಗಳನ್ನು ಎದುರಿಸಿ ವ್ಯವಹರಿಸಬೇಕಾಗುತ್ತದೆ.
ಇವರ ಪರವಾಗಿ
ಸಹಿ/–
ಪ್ರಕಟಣೆ: ಅಸ್ತಿ ವಸೂಲಾತಿ ತಂಡ
ಗ್ರೀನಿರ್ಥೋನ್ ಅಗ್ರಿಟೆಕ್ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್, ಮುಂಬೈ
ಸ್ಪಷ್ಟನೆಗಳಿಗೆ ದಯವಿಟ್ಟು ಸಂಪರ್ಕಿಸಿ: ಗ್ರೀನಿರ್ಥೋನ್ ಅಗ್ರಿಟೆಕ್ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್, ಅಥವಾ ಇ–ಮೇಲ್ ಮಾಡಿ:
compliance@jai-kisan.com

ಭಾನುವಾರದ ಪಂದ್ಯ

ಕೊಲಂಬಿಯಾ-ಪೋರ್ಚುಗಲ್ (ಬೆಳಗ್ಗೆ 5:00)
ಡಿಆರ್ ಕಾಂಗೊ-ಉಜ್ಬೇಕಿಸ್ತಾನ (ಬೆಳಗ್ಗೆ 5:00)
ಅಲ್ಜೀರಿಯಾ-ಆಸ್ಟ್ರಿಯಾ (ಬೆಳಗ್ಗೆ 7:30)
ಜಾರ್ಡನ್-ಅರ್ಜೆಂಟಿನಾ (ಬೆಳಗ್ಗೆ 7:30)
ದ.ಆಫ್ರಿಕಾ-ಕೆನಡಾ (ನಾಕೌಟ್) (ಮಧ್ಯರಾತ್ರಿ 12:30)

ಕಿರುಸುದ್ದಿ

ಕಿರಿಯರ ಏಷ್ಯನ್ ಕುಸ್ತಿ: ಭಾರತಕ್ಕೆ 5 ಪದಕ

ಹೊಸದಿಲ್ಲಿ: 15 ವರ್ಷದೊಳಗಿನವರ ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನ ಮೊದಲ ದಿನದಂದು ಭಾರತದ ಗ್ರೀಕೋ-ರೋಮನ್ ತಂಡ ಐದು ಪದಕಗಳನ್ನು ಗೆದ್ದುಕೊಂಡಿತು, ಭಾರತೀಯ ಕುಸ್ತಿಪಟು ದರ್ಪಣ್ ರಾಜು ಚೌಧರಿ ಚಿನ್ನದ ಪದಕ ಗೆದ್ದರು. 62 ಕೆಜಿ ತೂಕ ವಿಭಾಗದಲ್ಲಿ ಸ್ಪರ್ಧಿಸಿದ ದರ್ಪಣ್ ಚೌಧರಿ ಫೈನಲ್‌ನಲ್ಲಿ ತಜಿಕಿಸ್ತಾನದ ಅಮ್ರಿದಿನ್ ಕುರ್ಬೊನೊವ್ ವಿರುದ್ಧ 5-0 ಅಂತರದ ಸುಲಭ ಜಯ ಸಾಧಿಸಿ ಭಾರತಕ್ಕೆ ದಿನದ ಏಕೈಕ ಚಿನ್ನ ತಂದುಕೊಟ್ಟರು. ಭಾರತ ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕವನ್ನೂ ಗೆದ್ದಿತು. 75 ಕೆಜಿ ವಿಭಾಗದಲ್ಲಿ ಗೌರವ್ ಗುಂಡಾಜಿ ಪಾಟೀಲ್ ಅಗ್ರ ಬಹುಮಾನವನ್ನು ತಪ್ಪಿಸಿಕೊಂಡರು. ಯಶ್ (48 ಕೆಜಿ) ಮತ್ತು ಜತಿನ್ (85 ಕೆಜಿ) ಕಝಾಕಿಸ್ತಾನದ ರೋಲನ್ ಕಿಮ್ ಮತ್ತು ಯೆರಾಲಿ ಮುರಾಟೋವ್ ವಿರುದ್ಧ 0-8 ಅಂತರದಿಂದ ಸೋತ ನಂತರ ಬೆಳ್ಳಿ ಪದಕಗಳಿಗೆ ತೃಪ್ತಿಪಟ್ಟರು.

ಅಂಜು ದಾಖಲೆ ಮುರಿದ ಆನ್ಸಿ

ಭುವನೇಶ್ವರ್: ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನಡೆದ 65ನೇ ರಾಷ್ಟ್ರೀಯ ಅಂತರ-ರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಅಂಜು ಬಾಬಿ ಜಾರ್ಜ್ ಅವರ ಮಹಿಳಾ ಲಾಂಗ್ ಜಂಪ್ ರಾಷ್ಟ್ರೀಯ ದಾಖಲೆಯನ್ನು ಕೇರಳದ ಆನ್ಸಿ ಸೋಜನ್ ಮುರಿದರು. 25 ವರ್ಷದ ಆನ್ಸಿ ಸೋಜನ್ 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಸ್ಥಾಪಿಸಲಾದ ಅಂಜು ಅವರ 6.83 ಮೀಟರ್ ದೂರವನ್ನು +0.7 ಮೀ/ಸೆಕೆಂಡ್‌ನೊಂದಿಗೆ 6.88 ಮೀಟರ್ ಜಿಗಿದು ಉತ್ತಮ ಸಾಧನೆ ಮಾಡಿದರು. ಈ ದಾಖಲೆ ಸುಮಾರು 22 ವರ್ಷಗಳ ಕಾಲ ಹಾಗೆಯೇ ಇತ್ತು.

ಭಾರತಕ್ಕೆ ಭರ್ಜರಿ ಮುನ್ನಡೆ

ಗಾಲೆ: ಶ್ರೀಲಂಕಾ ತಂಡವನ್ನು 330 ರನ್‌ಗಳಿಗೆ ಆಲೌಟ್ ಮಾಡಿರುವ ಭಾರತ ಎ ತಂಡವು ದೊಡ್ಡ ಮುನ್ನಡೆ ಸಾಧಿಸಿದ್ದು, ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಗೆಲುವಿನತ್ತ ಸಾಗಿದೆ. ಬ್ಯಾಟಿಂಗ್ ಆಯ್ದುಕೊಂಡಿದ್ದ ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ 452 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಬಳಿಕ ಶ್ರೀಲಂಕಾ ತಂಡವನ್ನು 330 ರನ್‌ಗಳಿಗೆ ಆಲೌಟ್ ಮಾಡಿ ಮೊದಲ ಇನ್ನಿಂಗ್ಸ್‌ನಲ್ಲೇ 122 ರನ್ ಮುನ್ನಡೆ ಸಾಧಿಸಿತು. ಎರಡನೇ ಇನ್ನಿಂಗ್ಸ್ ಬ್ಯಾಟಿಂಗ್ ಆರಂಭಿಸಿರುವ ಭಾರತ ಯಾವುದೇ ವಿಕೆಟ್ ಕಳೆದುಕೊಳ್ಳದೆ 48 ರನ್ ಗಳಿಸಿದೆ. ಶ್ರೀಲಂಕಾ ಎ ತಂಡವನ್ನು ಕಟ್ಟಿ ಹಾಕುವಲ್ಲಿ ವೇಗಿ ಆಕಿಬ್ ನಬಿ ಮಹತ್ವದ ಪಾತ್ರ ವಹಿಸಿದರು. 58 ರನ್ ನೀಡಿ 4 ವಿಕೆಟ್ ಕಿತ್ತರು. ಯಶ್, ಹರ್ಷ 2 ವಿಕೆಟ್ ಕಿತ್ತರು.

ನೆದರ್ಲೆಂಡ್ಸ್‌ಗೆ ಸೋಲು

ಬ್ರಿಸ್ಟಾಲ್: ಗುಲ್ ಫಿರೋಜಾ ಅವರ 62ರನ್‌ಗಳ ಬ್ಯಾಟಿಂಗ್ ಮತ್ತು ಫಾತಿಮಾ ಸನಾ, ಆಯೇಶಾ ಅವರ ಪ್ರಖರ ಬೌಲಿಂಗ್ ದಾಳಿಯೊಂದಿಗೆ ಪಾಕಿಸ್ತಾನ ನೆದರ್ಲೆಂಡ್ಸ್ ಮಹಿಳೆಯರ ತಂಡದೊಂದಿಗೆ 37 ರನ್‌ಗಳ ಗೆಲುವು ಸಾಧಿಸಿದೆ. ಪಂದ್ಯಾವಳಿಯಿಂದ ಬಹುತೇಕ ಹೊರಬಿದ್ದಿರುವ ಪಾಕಿಸ್ತಾನ ಈ ಗೆಲುವಿನೊಂದಿಗೆ ಅಭಿಯಾನ ಮುಗಿಸಿದೆ. ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಪಾಕ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 126 ರನ್ ಗಳಿಸಿತು. ಗುಲ್ 52 ಬಾಲ್‌ಗಳಲ್ಲಿ ಔಟಾಗದೇ 62 ರನ್ ಗಳಿಸಿದರು. ನೆದರ್ಲೆಂಡ್ಸ್ ಪರ ಇರಿಸ್ 19 ರನ್‌ಗೆ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ 86 ರನ್‌ಗಳಿಗೆ ಆಲೌಟ್ ಆಯಿತು. ಲೀಡ್ 30 ರನ್ ಗಳಿಸಿದರು. ಪಾಕ್ ಪರ ಫಾತೀಮಾ ಮತ್ತು ಆಯೇಶಾ ತಲಾ 2 ವಿಕೆಟ್ ಕಿತ್ತರು.

ಶ್ರೀಲಂಕಾಗೆ ಗೆಲುವು

ಬ್ರಿಸ್ಟಾಲ್: ಸಾಂಘಿಕ ಬ್ಯಾಟಿಂಗ್ ಮತ್ತು ಕರಾರುವಾಕ್ ಬೌಲಿಂಗ್ ದಾಳಿ ಸಂಘಟಿಸಿದ ಶ್ರೀಲಂಕಾ ಮಹಿಳೆಯರ ತಂಡವು ಟಿ20 ವಿಶ್ವಕಪ್‌ನಲ್ಲಿ ಸ್ಕಾಟ್ಲೆಂಡ್ ವಿರುದ್ಧ ಗೆಲುವು ಸಾಧಿಸಿ ಸೆಮಿ ಆಸೆ ಜೀವಂತವಾಗಿರಿಸಿದೆ. ಶುಕ್ರವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಸ್ಕಾಟ್ಲೆಂಡ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 151 ರನ್ ಗಳಿಸಿತು. ಬ್ರೇಸ್ 47 ರನ್ ಗಳಿಸಿದರು. ಲಂಕಾ ಪರ ಮಿಥಾಲಿ 2, ಸುಗಂಧಿಕಾ ಮತ್ತು ಕವೀಶಾ ತಲಾ 1 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಶ್ರೀಲಂಕಾ 19.5 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 157 ರನ್ ಗಳಿಸಿತು. ಚಮಾರಿ 33, ಹರ್ಷಿತಾ 27 ರನ್ ಗಳಿಸಿದರು. ಮೂರು ಆಟಗಾರ್ತಿಯರು 20ಕ್ಕೂ ಅಧಿಕ ಸ್ಕೋರ್ ಮಾಡಿದ್ದರಿಂದ ಶ್ರೀಲಂಕಾ ಗೆಲುವು ಸಾಧಿಸಿದೆ.

ಮೊದಲ ವಿಶ್ವಕಪ್‌ನಲ್ಲೇ ನಾಕೌಟ್‌ಗೆ | ಅಜೇಯ ತಂಡವಾಗಿ ದಾಖಲೆ

ಕೇಪ್ ವರ್ದೆ ಕಮಾಲ್!

ಹ್ಯೂಸ್ಟನ್: ಫುಟ್‌ಬಾಲ್ ಲೋಕದಲ್ಲಿ ಮಿಂಚಿ ಹವಾ ಎಬ್ಬಿಸಿರುವ ದ್ವೀಪ ಕೇಪ್ ವರ್ದೆ ವಿಶ್ವವೇ ಎಂದೆಂದಿಗು ನೆನಪಿಡುವ ಸಾಧನೆಯೊಂದನ್ನು ಮಾಡಿದೆ. ಫಿಫಾ ವಿಶ್ವಕಪ್‌ನಲ್ಲಿ ಚೊಚ್ಚಲ ಬಾರಿಗೆ ಆಡುತ್ತಿರುವ ಕೇಪ್ ವರ್ದೆ, ಮತ್ತೊಮ್ಮೆ ಅಚ್ಚರಿ ಮೂಡಿಸಿ ನಾಕೌಟ್ ಹಂತಕ್ಕೇರಿದೆ. ಶುಕ್ರವಾರ ನಡೆದ ತನ್ನ ಕೊನೆಯ ಗುಂಪು ಹಂತದ ಪಂದ್ಯದಲ್ಲಿ ಸೌದಿ ಅರೇಬಿಯಾದ ವಿರುದ್ಧ 0-0 ಗೋಲುರಹಿತ ಡ್ರಾ ಸಾಧಿಸಿದ ಕೇಪ್ ವರ್ದೆ, ಮೂರು ಪಂದ್ಯಗಳಲ್ಲೂ ಅಜೇಯವಾಗಿ ಗುಂಪು ಹಂತವನ್ನು ಮುಗಿಸಿತು. ಆ ಮೂಲಕ ಜಗತ್ತಿನ ಕೆಲವೇ ರಾಷ್ಟ್ರಗಳು ಮಾಡಿರುವ ದಾಖಲೆಯೊಂದನ್ನು ಮಾಡಿತು.

ಸ್ಪೇನ್ ವಿರುದ್ಧ 0-0 ಡ್ರಾ ಮತ್ತು ಉರುಗ್ವೆ ವಿರುದ್ಧ 2-2 ಸಮಬಲ ಸಾಧಿಸಿದ್ದ ಕೇಪ್ ವರ್ದೆ, ಸೌದಿ ಅರೇಬಿಯಾದ ವಿರುದ್ಧವೂ ಸೋಲದೆ ಒಂದು ಅಂಕ ಗಳಿಸಿ ಒಟ್ಟು ಮೂರು ಅಂಕಗಳೊಂದಿಗೆ ಗುಂಪಿನಲ್ಲಿ ದ್ವಿತೀಯ ಸ್ಥಾನ ಪಡೆದು ರೌಂಡ್ ಆಫ್ 32ಕ್ಕೆ ಪ್ರವೇಶಿಸಿತು.

ಮೊದಲ ವಿಶ್ವಕಪ್‌ನಲ್ಲಿ ಸಾಧನೆ: ಸುಮಾರು ಐದು ಲಕ್ಷ ಜನಸಂಖ್ಯೆಯ ಪುಟ್ಟ ದ್ವೀಪ ರಾಷ್ಟ್ರವಾಗಿರುವ ಕೇಪ್ ವರ್ದೆ, ತನ್ನ ಮೊದಲ ವಿಶ್ವಕಪ್‌ನಲ್ಲೇ ಈ ಸಾಧನೆ ಮಾಡಿದ್ದು ಫುಟ್‌ಬಾಲ್ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದಿದೆ. ಈಗ ನಾಕೌಟ್ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ವಿರುದ್ಧ ಜುಲೈ 3ರಂದು ಮೈಯಾಮಿಯಲ್ಲಿ ಸೆಣಸಲಿದೆ.

ವೋಜಿನ್ಹಾ ಅಮೋಘ ಗೋಲ್‌ಕೀಪಿಂಗ್: ಕೇಪ್ ವರ್ದೆಯ ಯಶಸ್ಸಿನ ಹಿಂದಿನ ಪ್ರಮುಖ ಶಕ್ತಿ ಅನುಭವಿ ಗೋಲ್‌ಕೀಪರ್ ವೋಜಿನ್ಹಾ. 40 ವರ್ಷದ ಗೋಲ್‌ಕೀಪರ್ ಮೊದಲಾರ್ಧದ ಇಂಜುರಿ ಸಮಯದಲ್ಲಿ ಮೊಹಮ್ಮದ್ ಕನ್ನೋ ಅವರ ಹೆಡರ್ ಅನ್ನು ಅದ್ಭುತವಾಗಿ ತಡೆದರು. ಬಳಿಕ 66ನೇ ನಿಮಿಷದಲ್ಲಿ ಮೊಹಮ್ಮದ್ ಅಬು ಅಲ್-ಶಮಾತ್ ಅವರ ಬಲಿಷ್ಠ ಪ್ರಯತ್ನವನ್ನೂ, 92ನೇ ನಿಮಿಷದಲ್ಲಿ ಅಬ್ದುಲ್ಲಾ ಅಲ್-ಹಮ್ದಾನ್ ಅವರ ಶಾಟ್‌ನನ್ನೂ ತಡೆದು ತಂಡಕ್ಕೆ ಅಮೂಲ್ಯ ಡ್ರಾ ತಂದುಕೊಟ್ಟರು.

ಮುಂದಿನಪಂದ್ಯ: ಜುಲೈ 3ರಂದು ಕೇಪ್ ವರ್ದೆ, ಹಾಲಿ ವಿಶ್ವಚಾಂಪಿಯನ್ ಅರ್ಜೆಂಟೀನಾ ವಿರುದ್ಧ ರೌಂಡ್ ಆಫ್ 32ರಲ್ಲಿ ಸೆಣಸಲಿದೆ.





ಇರಾಕ್ ಮೇಲೆ ಹರಿಹಾಯ್ದ ಸೆನೆಗಲ್

ಇರಾಕ್ ಮೇಲೆ ಹರಿಹಾಯ್ದಿರುವ ಸೆನೆಗಲ್ ತಂಡವು 5-0 ಅಂತರದ ಭರ್ಜರಿ ಗೆಲುವು ದಾಖಲಿಸಿದೆ. ಪಂದ್ಯದ ಪ್ರತಿ ಕ್ಷಣವೂ ಇರಾಕ್ ಮೇಲೆ ಒತ್ತಡ ಹೇರಿದ ಸೆನೆಗಲ್ ಹಬಿಬ್ ದಿಯಾರಾ ಅವರ ನಾಲ್ಕನೇ ನಿಮಿಷದ ಗೋಲಿನೊಂದಿಗೆ ಆರಂಭ ಪಡೆಯಿತು. 13ನೇ ನಿಮಿಷಕ್ಕೆ ಆತ್ಮಘಾತಿ ಗೋಲು ಗಳಿಸಿದ ರೆಬಿನ್ ಇರಾಕ್‌ಗೆ ಮತ್ತಷ್ಟು ಹಿನ್ನಡೆ ತಂದರು. ಇಸ್ಮೈಲಾ 56ನೇ ನಿಮಿಷಕ್ಕೆ ಮತ್ತೊಂದು ಗೋಲು ಗಳಿಸಿ ಮುನ್ನಡೆ ತಂದರು. 71ನೇ ನಿಮಿಷಕ್ಕೆ ಪೇಪ್, 82ನೇ ನಿಮಿಷಕ್ಕೆ ಇಲಿಮನ್ ಗೋಲು ಗಳಿಸಿದರು.

ಡೆಂಬೆಲೆ ಹ್ಯಾಟ್ರಿಕ್ ಮ್ಯಾಜಿಕ್

ನಾರ್ವೆ ವಿರುದ್ಧ ಫ್ರಾನ್ಸ್‌ಗೆ 4-1 ಭರ್ಜರಿ ಜಯ

ಫಾಕ್ಸ್‌ಬೊರೋ (ಅಮೆರಿಕ): ಓಸ್ಮಾನ್ ಡೆಂಬೆಲೆ ಮೊದಲಾರ್ಧದಲ್ಲೇ ಹ್ಯಾಟ್ರಿಕ್ ಸಿಡಿಸಿ ಮಿಂಚಿದರೆ, ಕೈಲಿಯನ್ ಎಂಬಾಪ್ಪೆ ಮತ್ತೊಮ್ಮೆ ತನ್ನ ಸೃಜನಾತ್ಮಕ ಆಟದ ಮೂಲಕ ಮೆರಗು ನೀಡಿದರು. ಇವರ ಅಮೋಘ ಪ್ರದರ್ಶನದ ನೆರವಿನಿಂದ ಫ್ರಾನ್ಸ್ 4-1 ಅಂತರದಲ್ಲಿ ನಾರ್ವೆಯನ್ನು ಮಣಿಸಿ ವಿಶ್ವಕಪ್‌ನ ಗುಂಪು ಹಂತವನ್ನು ಅಗ್ರಸ್ಥಾನಿಯಾಗಿ ಮುಗಿಸಿತು.

ಬ್ಯಾಲನ್ ಡಿಓರ್ ವಿಜೇತ ಡೆಂಬೆಲೆ 7ನೇ, 20ನೇ ಹಾಗೂ 32ನೇ ನಿಮಿಷಗಳಲ್ಲಿ ಗೋಲು ಬಾರಿಸಿ ಮೊದಲಾರ್ಧದಲ್ಲೇಹ್ಯಾಟ್ರಿಕ್ ಪೂರ್ಣಗೊಳಿಸಿದರು. 1994ರ ವಿಶ್ವಕಪ್‌ನಲ್ಲಿ ರಷ್ಯಾದ ಒಲೆಗ್ ಸಲೇಂಕೊ ಬಳಿಕ ವಿಶ್ವಕಪ್‌ನಲ್ಲಿ ಮೊದಲಾರ್ಧದಲ್ಲೇ ಹ್ಯಾಟ್ರಿಕ್ ದಾಖಲಿಸಿದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಡೆಂಬೆಲೆ ಪಾತ್ರರಾದರು. ದ್ವಿತೀಯಾರ್ಧದ ಇಂಜುರಿ ಸಮಯದಲ್ಲಿ ಡಿಸೈರ್ ಡೌಯೆ ನಾಲ್ಕನೇ ಗೋಲು ದಾಖಲಿಸಿ ಫ್ರಾನ್ಸ್ ಜಯ ಖಚಿತಪಡಿಸಿದರು.

ಎಂಬಾಪ್ಪೆ-ಡೆಂಬೆಲೆ ಜೋಡಿ ಮಿಂಚು: ಫ್ರಾನ್ಸ್ ಆರಂಭದಿಂದಲೇ ದಾಳಿಯ ಆಟ ಪ್ರದರ್ಶಿಸಿತು. ಪಂದ್ಯ ಆರಂಭವಾಗಿ ಕೇವಲ 21 ಸೆಕೆಂಡ್‌ಗಳಲ್ಲಿ ಎಂಬಾಪ್ಪೆಯ ಶಾಟ್ ಕ್ರಾಸ್‌ಬಾರ್‌ಗೆ ತಾಗಿದರೂ,



ಏಳನೇ ನಿಮಿಷದಲ್ಲಿ ಅವರೇ ನೀಡಿದ ಪಾಸ್ ಅನ್ನು ಡೆಂಬೆಲೆ ಗೋಲಾಗಿ ಪರಿವರ್ತಿಸಿ ಮುನ್ನಡೆ ತಂದರು. 20ನೇ ನಿಮಿಷದಲ್ಲಿ ಮೂವರು ರಕ್ಷಣಾ ಆಟಗಾರರನ್ನು ಮೀರಿಸಿ ಡೆಂಬೆಲೆ ಎರಡನೇ ಗೋಲು ಗಳಿಸಿದರು. ನಾರ್ವೆಯ ಥೆಲೊ ಆಸ್ಗಾರ್ಡ್ 21ನೇ ನಿಮಿಷದಲ್ಲಿ ಗೋಲು ಬಾರಿಸಿ ಅಂತರ ಕಡಿಮೆ ಮಾಡಿದರೂ, 32ನೇ ನಿಮಿಷದಲ್ಲಿ ಡೆಂಬೆಲೆ ತನ್ನ ಮೂರನೇ ಗೋಲು ದಾಖಲಿಸಿ ಫ್ರಾನ್ಸ್‌ಗೆ 3-1 ಮುನ್ನಡೆ ನೀಡಿದರು.

ಬೆಲ್ಜಿಯಂಗೆ ಗೆಲುವು

ವ್ಯಾಂಕೂರ್ವ/ಸಿಯಾಟಲ್: ಲಿಯಾಂಡ್ರೊ ಟ್ರೊಸಾರ್ಡ್ ಅವರ ದ್ವಿಗೋಲು ಹಾಗೂ ಕೆವಿನ್ ಡಿ ಬ್ರೂಯ್ನೆ, ರೊಮೆಲು ಲುಕಾಕು ಮತ್ತು ಅಲೆಕ್ಸಿಸ್ ಸಲೆಮೇಕರ್ಸ್ ಅವರ ಗೋಲುಗಳ ನೆರವಿನಿಂದ ಬೆಲ್ಜಿಯಂ, ನ್ಯೂಜಿಲೆಂಡ್ ವಿರುದ್ಧ 5-1 ಅಂತರದ ಭರ್ಜರಿ ಜಯ ಸಾಧಿಸಿ ಜಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ವಿಶ್ವಕಪ್‌ನ ನಾಕೌಟ್ ಹಂತ ಪ್ರವೇಶಿಸಿತು. ಇದೇ ವೇಳೆ ಸಿಯಾಟಲ್‌ನಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಈಜಿಪ್ಟ್ ಮತ್ತು ಇರಾನ್ 1-1ರಿಂದ ಸಮಬಲ ಸಾಧಿಸಿದ್ದು, ಈಜಿಪ್ಟ್ ತನ್ನ ಇತಿಹಾಸದಲ್ಲೇ ಮೊದಲ ಬಾರಿಗೆ ವಿಶ್ವಕಪ್‌ನ ಗುಂಪು ಹಂತ ದಾಟಿತು.

ಬೆಲ್ಜಿಯಂ ಭರ್ಜರಿ ಪುನರಾಗಮನ: ಮೊದಲ ಎರಡು ಪಂದ್ಯಗಳಲ್ಲಿ ಈಜಿಪ್ಟ್ ವಿರುದ್ಧ 1-1 ಹಾಗೂ ಇರಾನ್ ವಿರುದ್ಧ ಗೋಲುರಹಿತ ಡ್ರಾ ಸಾಧಿಸಿದ್ದ ಬೆಲ್ಜಿಯಂ, ನಿರ್ಣಾಯಕ ಪಂದ್ಯದಲ್ಲಿ ತನ್ನ ನೈಜ ಸಾಮರ್ಥ್ಯ ಪ್ರದರ್ಶಿಸಿತು. ಲಿಯಾಂಡ್ರೊ ಟ್ರೊಸಾರ್ಡ್ ಎರಡು ಗೋಲುಗಳ ಮೂಲಕ ಗೆಲುವಿನ ಅಡಿಪಾಯ ಹಾಕಿದರೆ, ಕೆವಿನ್ ಡಿ ಬ್ರೂಯ್ನೆ, ರೊಮೆಲು ಲುಕಾಕು ಮತ್ತು ಅಲೆಕ್ಸಿಸ್ ಸಲೆಮೇಕರ್ಸ್ ತಲಾ ಒಂದು ಗೋಲು ದಾಖಲಿಸಿದರು. ನ್ಯೂಜಿಲೆಂಡ್ ಪರ ಎಲಿಜಾ ಜಸ್ಟ್ ಏಕೈಕ ಸಮಾಧಾನದ ಗೋಲು ಗಳಿಸಿದರು. ಈ ಸೋಲಿನೊಂದಿಗೆ ನ್ಯೂಜಿಲೆಂಡ್ ವಿಶ್ವಕಪ್ ಇತಿಹಾಸದಲ್ಲೇ ಮೊದಲ ಗೆಲುವಿನ ಕನಸನ್ನು ನನಸಾಗಿಸಿಕೊಳ್ಳದೆ ಟೂರ್ನಿಯಿಂದ ನಿರ್ಗಮಿಸಿತು.

ಈಜಿಪ್ಟ್ ಐತಿಹಾಸಿಕ ಸಾಧನೆ

ಸಿಯಾಟಲ್‌ನಲ್ಲಿ ನಡೆದ ಪಂದ್ಯದಲ್ಲಿ ಇರಾನ್ ವಿರುದ್ಧ ಐದನೇ ನಿಮಿಷದಲ್ಲೇ ಮಹ್ಮೂದ್ ಸಾಬರ್ ಗೋಲು ಬಾರಿಸಿ ಈಜಿಪ್ಟ್‌ಗೆ ಮುನ್ನಡೆ ತಂದುಕೊಟ್ಟರು. ಮೊಹಮದ್ ಸಲಾಹ್ ಅವರ ಚತುರ ಆಟದಿಂದ ರೂಪುಗೊಂಡ ಅವಕಾಶವನ್ನು ಸಾಬರ್ ಯಶಸ್ವಿಯಾಗಿ ಗೋಲಾಗಿ ಪರಿವರ್ತಿಸಿದರು. ಆದರೆ ಇರಾನ್ ಕೇವಲ ಒಂಬತ್ತು ನಿಮಿಷಗಳಲ್ಲೇ ರಮೀನ್ ರೆಜಾಯಿಯನ್ ಗೋಲಿನ ಮೂಲಕ ಸಮಬಲ ಸಾಧಿಸಿತು.

ವಿಎಆರ್‌ನಿಂದ ಇರಾನ್‌ಗೆ ನಿರಾಸೆ: ಇಂಜುರಿ ಸಮಯದ 93ನೇ ನಿಮಿಷದಲ್ಲಿ ಶೋಜಾ ಖಲೀಲ್‌ಜಾದೆಹ್ ಗೋಲು ಬಾರಿಸಿ ಇರಾನ್‌ಗೆ ಗೆಲುವು ತಂದುಕೊಟ್ಟಂತೆ ಕಂಡಿತು. ಆದರೆ ವೀಡಿಯೊ ಪರಿಶೀಲನೆ ಬಳಿಕ ಆ ಗೋಲನ್ನು ಆಫ್‌ಸೈಡ್ ಎಂದು ತಿರಸ್ಕರಿಸಲಾಯಿತು. ಆ ಗೋಲು ಮಾನ್ಯವಾಗಿದ್ದರೆ ಇರಾನ್ ನೇರವಾಗಿ ನಾಕೌಟ್ ಹಂತಕ್ಕೇರಬಹುದಾಗಿತ್ತು. ಈಗ ಇರಾನ್‌ನ ಭವಿಷ್ಯ ಇತರ ಗುಂಪುಗಳ ಫಲಿತಾಂಶಗಳ ಮೇಲೆ ಅವಲಂಬಿತವಾಗಿದೆ.

ಸ್ಪೇನ್ ವಿನ್, ಮನೆಗೆ ಉರುಗ್ವೆ

ಗ್ವಾಡಲಜಾರಾ (ಮೆಕ್ಸಿಕೊ): ಅನುಭವಿ ಗೋಲ್‌ಕೀಪರ್ ಫರ್ನಾಂಡೊ ಮುಸ್ಲೆರಾ ಅವರ ಮತ್ತೊಂದು ದುಬಾರಿ ತಪ್ಪಿನ ಲಾಭ ಪಡೆದ ಸ್ಪೇನ್, ಉರುಗ್ವೆಯನ್ನು 1-0 ಗೋಲುಗಳಿಂದ ಮಣಿಸಿ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಭರ್ಜರಿಯಾಗಿ ಪ್ರವೇಶಿಸಿತು. ಈ ಸೋಲಿನೊಂದಿಗೆ ಎರಡು ಬಾರಿ ವಿಶ್ವಚಾಂಪಿಯನ್ ಉರುಗ್ವೆ ಗುಂಪು ಹಂತದಲ್ಲೇ ಟೂರ್ನಿಯಿಂದ ಹೊರಬಿದ್ದಿತು. ಯುರೋಪಿಯನ್ ಚಾಂಪಿಯನ್ ಸ್ಪೇನ್ ಮೂರು ಪಂದ್ಯಗಳಿಂದ ಏಳು ಅಂಕ ಗಳನ್ನು ಗಳಿಸಿ ಗುಂಪು ಎಚ್'ನಲ್ಲಿ ಅಗ್ರಸ್ಥಾನ ಪಡೆದುಕೊಂಡಿತು. ರೌಂಡ್ ಆಫ್ 32ರಲ್ಲಿ ಸ್ಪೇನ್, ಜೆ ಗುಂಪಿನ ದ್ವಿತೀಯ ಸ್ಥಾನಿ ಆಸ್ಟ್ರಿಯಾ ಅಥವಾ ಅಲ್ಜೀರಿಯಾ ವಿರುದ್ಧ ಸೆಣಸಲಿದೆ.

ಮುಸ್ಲೆರಾ ತಪ್ಪು ದುಬಾರಿ: 42ನೇ ನಿಮಿಷದಲ್ಲಿ ಅಲೆಕ್ಸ್ ಬಯೇನಾ ಹೊಡೆದ ಶಾಟ್ ಅನ್ನು 40 ವರ್ಷದ ಗೋಲ್‌ಕೀಪರ್ ಫರ್ನಾಂಡೊ ಮುಸ್ಲೆರಾ ಸರಿಯಾಗಿ ತಡೆಯಲು ವಿಫಲರಾದರು. ಚೆಂಡು ಅವರ ಕೈಯಿಂದ ಜಾರಿಗೋಲಿನೊಳಗೆ ಸೇರಿತು. ಇದೇ ಗೋಲು ಪಂದ್ಯದ ನಿರ್ಣಾಯಕ ಕ್ಷಣವಾಯಿತು.

ಭಾರತಕ್ಕೆ ನಿರ್ಣಾಯಕ ಪಂದ್ಯ

ಪಂದ್ಯದ ವಿವರ
ಎಲ್ಲಿ: ಲಾರ್ಡ್ಸ್, ಯಾವಾಗ: ಭಾನುವಾರ
ಸಮಯ: ಸಂಜೆ 7:00

ಲಾರ್ಡ್ಸ್: ಸೆಮಿ ಫೈಟ್ ನಡೆಸಿರುವ ಭಾರತ ಮಹಿಳಾ ತಂಡವು ಗೆಲ್ಲಲೇಬೇಕಾದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಹಿಂದಿನ ಪಂದ್ಯದಲ್ಲಿ ಬಾಂಗ್ಲಾ ವಿರುದ್ಧ ಗೆದ್ದರೂ ದ.ಆಫ್ರಿಕಾ ವಿರುದ್ಧದ ಸೋಲು ಭಾರತಕ್ಕೆ ದೊಡ್ಡ ಹೊಡೆತ ನೀಡಿದಂತಿದೆ.

ಮಹಿಳೆಯರ ಟಿ20 ವಿಶ್ವಕಪ್‌ನಲ್ಲಿ ಎರಡು ಗುಂಪುಗಳಿವೆ. ಮೊದಲನೇ ಗುಂಪಿನಿಂದ ವಿಂಡೀಸ್ ಹಾಗೂ ಇಂಗ್ಲೆಂಡ್ ತಂಡಗಳು ಸಮರ್ಥ ಪ್ರದರ್ಶನ ನೀಡಿವೆ. ಇತ್ತ ಇನ್ನೊಂದು ಗುಂಪಿನಲ್ಲಿ ಆಸ್ಟ್ರೇಲಿಯಾ ಈಗಾಗಲೇ ಸೆಮಿಫೈನಲ್‌ಗೇರಿದೆ. ಇನ್ನೊಂದು ತಂಡ ಯಾವುದೆಂಬ ಪ್ರಶ್ನೆಗೆ ಭಾನುವಾರದ ಪಂದ್ಯ ಉತ್ತರ ಕೊಡಲಿದೆ. ಶನಿವಾರತಡರಾತ್ರಿಯೇದ.ಆಫ್ರಿಕಾ ಮತ್ತು ಬಾಂಗ್ಲಾದೇಶ ತಂಡಗಳು ಎದುರಾಗಲಿವೆ. ಇಲ್ಲಿ ದ.ಆಫ್ರಿಕಾ ಸೋತು ಬಿಟ್ಟರೆ ಭಾರತ ಸೆಮಿಗೆ ಲೀಲಾಜಾಲವಾಗಿ ಲಗ್ಗೆ ಹಾಕಲಿದೆ. ಆದರೆ, ದ.ಆಫ್ರಿಕಾ ದೊಡ್ಡ ಮೊತ್ತದಿಂದ ಗೆದ್ದು ಭಾರತಕ್ಕಿಂತ ಹೆಚ್ಚು ರನ್‌ರೇಟ್ ಏನಾದರೂ ಪಡೆದುಕೊಂಡರೆ, ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಭಾರತ ಗೆಲ್ಲಲೇಬೇಕಾದ ಒತ್ತಡಕ್ಕೆ ಸಿಲುಕಿಕೊಳ್ಳುತ್ತೆ. ಸದ್ಯ ಎರಡನೆ ಸ್ಥಾನದಲ್ಲಿರುವ ಭಾರತ ಉತ್ತಮ ರನ್‌ರೇಟ್ ಹೊಂದಿದೆ. ಆದರೆ 4 ಪಂದ್ಯಗಳಲ್ಲಿ 6 ಅಂಕಗಳನ್ನು ಗಳಿಸಿದೆ. ಈ ನಡುವೆ ಸೆಮಿಗೇರಲು ಹೆಚ್ಚುವರಿ ಅಂಕವೇನಾದರೂ ಬೇಕಿದ್ದರೆ ಭಾರತ ಈ ಪಂದ್ಯದಲ್ಲಿ ಗೆಲ್ಲಲೇಬೇಕು.

ವಿಶ್ವಾಸದಲ್ಲಿ ಭಾರತ: ಮೂರು ಪಂದ್ಯಗಳಲ್ಲಿ ಮಂಧಾನ ಉತ್ತಮ ಪ್ರದರ್ಶನ ನೀಡಿದ್ದಾರೆ. ಆದರೆ ಕಳೆದೆರಡು ಪಂದ್ಯಗಳಲ್ಲಿ ಅವರೂ ಹಿನ್ನಡೆ ಅನುಭವಿಸಿದ್ದರು. ಅತ್ತ ಸ್ಫೋಟಕ ಬ್ಯಾಟರ್ ಶೆಫಾಲಿ ವರ್ಮಾ ಬೌಲಿಂಗ್ ಮತ್ತು ಬ್ಯಾಟಿಂಗ್ ಎರಡರಲ್ಲೂ ಮಿಂಚುತ್ತಿರುವುದು ತಂಡಕ್ಕೆ ವಿಶ್ವಾಸ ತಂದಿದೆ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ರಾಡ್ರಿಗ್ಸ್ ಕೂಡ ಲಯಕ್ಕೆ ಮರಳಿರುವುದು ತಂಡಕ್ಕೆ ಬಲ ತಂದಿದೆ. ಇತ್ತ ಹರ್ಮನ್‌ಪ್ರೀತ್ ಕೌರ್ ಸ್ಫೋಟಕ ಬ್ಯಾಟಿಂಗ್ ಮಾಡಬೇಕಿದೆ. ಸ್ಕೋರ್ ಹಿಗ್ಗಿಸುವ ರಿಚಾ ಘೋಷ್ ರನ್ ಮಿಂಚಿದರೆ ಭಾರತಕ್ಕೆ ಕಟ್ಟಿಹಾಕುವವರೆ ಯಾರಿಲ್ಲ. ಅತ್ತ ಬೌಲಿಂಗ್‌ನಲ್ಲೂ ಬಲಾಢ್ಯ ಪಡೆಯನ್ನು ಹೊಂದಿರುವ ಭಾರತ ದಾಖಲೆ ಮಾಡಿರುವ ಶ್ರೀ ಚಾರಣಿ, ಆಲ್‌ರೌಂಡರ್ ದೀಪಿಕಾ ಮಿಂಚುತ್ತಿದ್ದಾರೆ.

ಸರಣಿ ಉಳಿಸಲು ಭಾರತ ಕಾದಾಟ

ಪಂದ್ಯದ ವಿವರ
ಯಾವಾಗ: ಭಾನುವಾರ, ಎಲ್ಲಿ: ಬೆಲ್‌ಫಾಸ್ಟ್ ಸಮಯ: ಸಂಜೆ 6:30

ಬೆಲ್‌ಫಾಸ್ಟ್: ಮೊದಲ ಪಂದ್ಯದಲ್ಲಿ ಅಚ್ಚರಿಯ ಸೋಲನುಭವಿಸಿರುವ ಭಾರತ ಪುರುಷರ ತಂಡ ಇಂದು ಐರ್ಲೆಂಡ್ ಸರಣಿಯ ಕೊನೆಯ ಮತ್ತು ಎರಡನೆ ಪಂದ್ಯದಲ್ಲಿ ಪರೀಕ್ಷೆ ಎದುರಿಸಲಿದೆ.

ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ಪ್ರವಾಸ ಮಾಡಿರುವ ಭಾರತ ತಂಡ ಇಂಗ್ಲೆಂಡ್ ಸರಣಿಗೂ ಮುನ್ನ ಭಾನುವಾರ ಐರ್ಲೆಂಡ್ ವಿರುದ್ಧ ಮತ್ತೊಂದು ಪಂದ್ಯದಲ್ಲಿ ಎದುರಿಸಬೇಕಿದೆ. ಶುಕ್ರವಾರ ನಡೆದ ಪಂದ್ಯದಲ್ಲಿ ಅಚ್ಚರಿಯ ಸೋಲನುಭವಿಸಿದ್ದ ಶ್ರೇಯಸ್ ಪಡೆ ಈ ಪಂದ್ಯದಲ್ಲಿ ಸೋತರೆ ಐತಿಹಾಸಿಕ ಹಿನ್ನಡೆ ಅನುಭವಿಸಲಿದೆ. ಶುಕ್ರವಾರದ ಪಂದ್ಯಕ್ಕೂ ಮುನ್ನ ಭಾರತಐರ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಗೆಲ್ಲಲೇಬೇಕಾದ ಒತ್ತಡ ಎದುರಿಸಬೇಕಿದೆ. ತೀವ್ರ ಬ್ಯಾಟಿಂಗ್ ವೈಫಲ್ಯ ಎದುರಿಸಿದ್ದ ಭಾರತ 34 ರನ್‌ಗಳ ಸೋಲನುಭವಿಸಿದೆ. ಅಭಿಷೇಕ್ ಶರ್ಮ ಅವರನ್ನು ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟರ್ ಕೂಡ ನಿಲ್ಲಲೂ ಇಲ್ಲ, ಶಿವಂ ದುಬೆ ಹೋರಾಟಕ್ಕೂ ಸರಳವಾಗಿ ತಡೆಯೊಡ್ಡಿತ್ತು. ಈ ನಡುವೆ ಐರ್ಲೆಂಡ್ ವಿರುದ್ಧದ ಎರಡನೇ ಪಂದ್ಯದಲ್ಲಿ ಭಾರತ ಬ್ಯಾಟಿಂಗ್ ಬಲ ಹೆಚ್ಚಿಸಿಕೊಂಡೇ ಹೋಗಬೇಕಿದೆ. ಅಭಿಷೇಕ್ ಶರ್ಮ ಅವರು ಲಯದಲ್ಲೇ ಇದ್ದಾರೆ. ಇನ್ನೋರ್ವ ಆರಂಭಿಕ ಸಂಜು ಸ್ಯಾಮ್ಸನ್ ಬ್ಯಾಟ್‌ನಿಂದ ರನ್ ಬರಬೇಕಿದೆ. ಈ ನಡುವೆ ಇಶಾನ್ ಕಿಶನ್ ಕೂಡ ವಿಫಲರಾಗಿದ್ದರು. ಮಧ್ಯಮ ಕ್ರಮಾಂಕದಲ್ಲಿ ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್ ಅವರನ್ನು ಆಡಿಸಲಾಗಿದೆ. ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗಬೇಕಿದೆ. ಫಿನಿಶಿಂಗ್‌ನಲ್ಲಿ ಅಲ್ಪ ಪ್ರಯತ್ನ ಪಟ್ಟಿರುವ ಶಿವಂ ದುಬೆ ಮಿಂಚಬೇಕಿದೆ. ಬೌಲಿಂಗ್ ವಿಭಾಗದಲ್ಲಿ ಹರ್ಷಿತ್ ರಾಣಾ ಕಂಬ್ಯಾಕ್ ಮಾಡಿದ್ದರೂ ಪ್ರಸಿದ್ಧ ಕೃಷ್ಣ ಸೇರಿದಂತೆ ವಿವಿಧ ಆಟಗಾರರು ದುಬಾರಿಯಾಗಿದ್ದಾರೆ.

ಗ್ಲೋಬಲ್ ಚೆಸ್ ಲೀಗ್‌ಗೆ ಸಕಲ ಸಿದ್ಧತೆ

ಬೆಂಗಳೂರು: ಗ್ಲೋಬಲ್ ಚೆಸ್ ಲೀಗ್‌ನ ನಾಲ್ಕನೇ ಆವೃತ್ತಿಗೆ ವೇದಿಕೆ ಸಜ್ಜಾಗಿದ್ದು, ಸೋಮವಾರದಂದು ಮುಂಬೈನಲ್ಲಿ ಆಟಗಾರರ ಡ್ರಾಫ್ಟ್ ನಡೆಯಲಿದೆ. ಸೆಪ್ಟೆಂಬರ್ 3ರಿಂದ 13ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ಟೂರ್ನಿಗಾಗಿ ಆರು ಫ್ರಾಂಚೈಸಿಗಳು ತಮ್ಮ ತಂಡಗಳನ್ನು ಇದೇ ಡ್ರಾಫ್ಟ್ ಮೂಲಕ ಆಯ್ಕೆ ಮಾಡಲಿವೆ. ಒಂದು ಆವೃತ್ತಿಯ ವಿರಾಮದ ಬಳಿಕ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್ಸನ್ ಮತ್ತೆ ಲೀಗ್‌ಗೆ ಮರಳುತ್ತಿದ್ದು, ಇತ್ತೀಚಿನ ಮಹಿಳಾ ವಿಶ್ವಕಪ್ ಚಾಂಪಿಯನ್ ದಿವ್ಯಾ ದೇಶಮುಖ್ ಮೊದಲ ಬಾರಿಗೆ ಗ್ಲೋಬಲ್ ಚೆಸ್ ಲೀಗ್‌ನಲ್ಲಿ ಆಡಲಿದ್ದಾರೆ. ಈ ಬಾರಿ ಒಟ್ಟು 36 ಗ್ರ್ಯಾಂಡ್‌ಮಾಸ್ಟರ್‌ಗಳು ಆಟಗಾರರ ಪಟ್ಟಿಯಲ್ಲಿದ್ದಾರೆ. ವಿಶ್ವ ಚಾಂಪಿಯನ್‌ಗಳು, ವಿಶ್ವಕಪ್ ವಿಜೇತರು, ಒಲಿಂಪಿಯಾಡ್ ಪದಕ ವಿಜೇತರು ಹಾಗೂ ಉದಯೋನ್ಮುಖ ಪ್ರತಿಭೆಗಳು ಡ್ರಾಫ್ಟ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಪ್ರತಿ ತಂಡವು ಒಬ್ಬ ಐಕಾನ್, ಇಬ್ಬರು ಸೂಪರ್‌ಸ್ಟಾರ್ ಪುರುಷರು, ಇಬ್ಬರು ಸೂಪರ್‌ಸ್ಟಾರ್ ಮಹಿಳೆಯರು ಮತ್ತು ಒಬ್ಬ ಪ್ರಾಡಿಜಿ ಸೇರಿ ಆರು ಸದಸ್ಯರ ತಂಡವನ್ನು ರಚಿಸಲಿದೆ. ಕೂಟದಲ್ಲಿ ಒಟ್ಟು 6 ಫ್ರಾಂಚೈಸಿಗಳು ಇರಲಿವೆ. ಡ್ರಾಫ್ಟ್‌ನ ಪ್ರಮುಖ ಆಟಗಾರರಲ್ಲಿ ವಿಶ್ವನಾಥನ್ ಆನಂದ್, ಇಯಾನ್ ನೆಪೊಮ್ನಿಯಾಚ್ಚಿ, ಲೆವೊನ್ ಅರೋನಿಯನ್, ಕೊನೆರು ಹಂಪಿ, ಅಲೆಕ್ಸಾಂಡ್ರಾ ಕೋಸ್ಟೆನಿಯುಕ್, ಜಾವೋಖಿರ್ ಸಿಂದರೋವ್, ಭಾರತದ ಲಿಯೊನ್ ಸೇರಿದ್ದಾರೆ.

ಬೆಂಗಳೂರು ಬ್ಲಾಸ್ಟರ್ಸ್‌ಗೆ ಭರ್ಜರಿ ಜಯ

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಬೆಂಗಳೂರು ತಂಡದ ರೋಹನ ಪಾಟೀಲ ಅವರ ಅರ್ಧ ಶತಕ (62, 46ಎ, 4ಹಿ5, 6ಹಿ2) ಹಾಗೂ ಆಲ್‌ರೌಂಡರ್ ಪ್ರವೀಣ್ ದುಬೆ(39,15,4ಹಿ3,6ಹಿ3) ಆಕರ್ಷಕ ಬ್ಯಾಟಿಂಗ್‌ಗೆ ಶಿವಮೊಗ್ಗ ಯೋಧಾಸ್ ತತ್ತರಿಸಿದ್ದು, ಇಲ್ಲಿಯ ನೃಪತುಂಗ ಬೆಟ್ಟದ ತಪ್ಪಲಿನಲ್ಲಿರುವ ರಾಜನಗರ ಕೆಎಸ್‌ಸಿಎ ಮೈದಾನದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಪಂದ್ಯದಲ್ಲಿ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡ 7 ವಿಕೆಟ್ ಅಂತರದಿಂದ ಅಧಿಕಾರಯುತ ಗೆಲುವು ದಾಖಲಿಸಿತು.

ಶಿವಮೊಗ್ಗ ಯೋಧಾಸ್ ನೀಡಿದ 174 ರನ್ ಗುರಿ ಬೆನ್ನಟ್ಟಿದ ಬೆಂಗಳೂರ ಬ್ಲಾಸ್ಟರ್ಸ್ 19 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಪೇರಿಸಿ ಗೆದ್ದಿತು.

ದುಬೆ, ರೋಹನ್ ಅಬ್ಬರ: ಗುರಿ ಬೆನ್ನತ್ತುವಾಗ ಭುವನ್ ರಾಜ್ ಹಾಗೂ ರೋಹನ ಪಾಟೀಲ ಜೊತೆಯಾಗಿ 65 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿದರು. ಭುವನ್ ರಾಜ್ ಔಟಾದ ನಂತರ ಇನ್ನೊಂದೆಡೆ ರೋಹನ ಪಾಟೀಲ ಕೂಡ ಮಿಂಚಿ 32 ಎಸೆತದಲ್ಲಿ ಅರ್ಧ ಶತಕ ಪೂರೈಸಿದರು. ಬ್ಯಾಟಿಂಗ್ ಮುಂದುವರಿಸಿ ಶ್ರೀಜೀತ್ ಅವರೊಂದಿಗೆ ಜೊತೆ ಸೇರಿ 54ರನ್ ರನ್‌ಗಳ ಜೊತೆಯಾಟ ನಿರ್ಮಿಸಿದರು. ಅವರಿಬ್ಬರೂ ವಿಕೆಟ್ ಒಪ್ಪಿಸಿದ ನಂತರ ಆಲ್‌ರೌಂಡರ್ ಪ್ರವೀಣ ದುಬೆ ಬಿರುಸಿನ ಆಟವಾಡಿದರು. ಬೌಲಿಂಗ್‌ನಲ್ಲಿ ಪ್ರಮುಖ ಒಂದು ವಿಕೆಟ್ ಪಡೆದು ಮಿಂಚಿದ್ದ ಪ್ರವೀಣ ಕೇವಲ 15 ಬೌಲ್‌ಗೆ 39 ರನ್ ಗಳಿಸಿ ಪಂದ್ಯ ಗೆಲ್ಲಿಸಿದರು.



ಚಿತ್ರ: ಮಂಜುನಾಥ ಜರತಾರಘರ

ಇದಕ್ಕೂ ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ ತಂಡ ಆರಂಭಿಕ ಲವನೀತ್ ಸಿಸೋಡಿಯಾ (51, 32ಎ, 4ಹಿ6, 6ಹಿ2) ಅವರನ್ನು ಬಿಟ್ಟರೆ ಉಳಿದ ಆಟಗಾರರಿಂದ ಹೆಚ್ಚು ರನ್ ಮೂಡಿ ಬರಲಿಲ್ಲ.

ಸಂಕ್ಷಿಪ್ತ ಸ್ಕೋರ್
ಶಿವಮೊಗ್ಗ ಯೋಧಾಸ್ 20 ಓವರ್‌ಗಳಲ್ಲಿ 173/6: ಲವನೀತ 51, ಸ್ಮರಣ ಆರ್.36★; ರೋಹನ 21/3.
ಕಲ್ಯಾಣಿ ಬೆಂಗಳೂರ ಬ್ಲಾಸ್ಟರ್ಸ್ 19 ಓವರ್‌ಗಳಲ್ಲಿ 177/3: ರೋಹನ 62, ಪ್ರವೀಣ 39★; ಶ್ರೀಶ 34/1

ವಿಂಬಲ್ಡನ್‌ಗೆ ವೇದಿಕೆ ಸಿದ್ಧ

ಲಂಡನ್: ವಿವಿಧ ಕನಸುಗಳನ್ನು ಹೊತ್ತು ಇಂಗ್ಲೆಂಡ್‌ಗೆ ಬಂದಿರುವ ವಿಶ್ವದ ಮೂಲೆ ಮೂಲೆಯ ಟೆನಿಸ್ ಆಟಗಾರರು ಸೋಮವಾರದಿಂದ ಆರಂಭವಾಗಲಿರುವ ವಿಂಬಲ್ಡನ್ ಪಂದ್ಯಾವಳಿಗೆ ಸಜ್ಜಾಗಿದ್ದಾರೆ.

ಫ್ರೆಂಚ್ ಓಪನ್‌ನ ನಂತರ ಹಾಗೂ ಯುಎಸ್ ಓಪನ್‌ನ ಮೊದಲು ನಡೆಯುವ ಗ್ರ್ಯಾಂಡ್‌ಸ್ಲಾಮ್ ಟೂರ್ನಿಯಾದ ವಿಂಬಲ್ಡನ್ ಪಂದ್ಯಾವಳಿಗೆ ಭರಪೂರ ಸಿದ್ಧತೆಗಳು ನಡೆದಿದ್ದು ಪಂದ್ಯಗಳು ಸೋಮವಾರ ಶುರುವಾಗಲಿದೆ. ಅರ್ಹತಾ ಸುತ್ತಿನ ಪಂದ್ಯಗಳು ಈಗಾಗಲೇ ನಡೆಯುತ್ತಿದ್ದು, ಪ್ರಮುಖ ಆಟಗಾರರು ಪಂದ್ಯಾವಳಿಯ ಮುಖ್ಯ ಡ್ರಾಗೆ ಮುನ್ನಡೆಯುತ್ತಾರೆ. 2023, 2024ರ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಇರುವುದಿಲ್ಲ, ಗಾಯದಿಂದ ಇನ್ನೂ ಚೇತರಿಸಿಕೊಳ್ಳದ ಅವರು ಪಂದ್ಯಾವಳಿಯಿಂದ ದೂರ ಉಳಿಯುವುದಾಗಿ ಈಗಾಗಲೇ ಹೇಳಿದ್ದಾರೆ.

ಪ್ಲೇಆಫ್‌ನಲ್ಲೇ ದೊಡ್ಡ ಫೈಟ್, ಇದು ಟೂರ್ನಿಯ ವಿಶೇಷ: ಸಾಮಾನ್ಯದಂತೆ ಈ ಟೂರ್ನಿಯಲ್ಲಿ ಮೊದಲಿಗೆ ದೊಡ್ಡ ದೊಡ್ಡ ಆಟಗಾರರು ಮುಖಾಮುಖಿಯಾಗುವುದಿಲ್ಲ. ಆರು ಸುತ್ತುಗಳಲ್ಲಿ ಮೂರು ಸುತ್ತುಗಳನ್ನು ಲೀಗ್ ಉಳಿದ ಪಂದ್ಯಗಳನ್ನು



ಪ್ಲೇಆಫ್ ಎಂದು ಕರೆಯಲಾಗುತ್ತದೆ. ಮುಖ್ಯವಾಗಿ 32 ಆಟಗಾರರ ಪಟ್ಟಿಯೊಂದನ್ನು ಮಾಡಲಾಗುತ್ತದೆ. ಅದರಲ್ಲಿರುವ ಆಟಗಾರರು ಒಬ್ಬರಿಗೊಬ್ಬರು ಪ್ಲೇಆಫ್‌ನಲ್ಲೇ ಮುಖಾಮುಖಿಯಾಗುತ್ತಾರೆ.

128 ಪಟುಗಳ ಮುಖ್ಯ ಡ್ರಾ: ಟೆನಿಸ್ ವೇಳಾಪಟ್ಟಿ ಮತ್ತು ಪಂದ್ಯಾಟಗಳನ್ನು ವಿಭಿನ್ನ ರೀತಿಯಲ್ಲಿ ಆಡಿಸಲಾಗುತ್ತದೆ. ಮುಖ್ಯವಾಗಿ ರ್‍ಯಾಂಕಿಂಗ್ ಆಧಾರಿತ ಆಟಗಾರರು ನೇರ ಅರ್ಹತೆ ಪಡೆದಿರುತ್ತಾರೆ. ಉಳಿದ ಆಟಗಾರರನ್ನು ಅರ್ಹತಾ ಸುತ್ತಿನ ಮೂಲಕ ಆಯ್ಕೆ ಮಾಡಿಕೊಂಡು 128 ಜನರ ಡ್ರಾ ಅನ್ನು ಮಾಡಲಾಗುತ್ತದೆ.


ಮೊದಲ ದಿನವೇ ಬಿಗ್ ಫೈಟ್: ಸೋಮವಾರ ಆರಂಭಿಕ ದಿನದಂದೆ ವಿವಿಧ ಟೆನಿಸ್ ದಿಗ್ಗಜರು ಸೆಣಸಾಟ ನಡೆಸಲಿದ್ದಾರೆ. ಹಾಲಿ ಚಾಂಪಿಯನ್ ಎನ್ನಿಸಿರುವ ಯಾನಿಕ್ ಸಿನ್ನರ್, ಮಿಯೋಮಿರ್ ಅವರನ್ನು ಎದುರಿಸಲಿದ್ದಾರೆ. ನೋವಾಕ್ ಜೊಕೊವಿಚ್ ವೈ.ಬಿ. ವು ಅವರನ್ನು ಎದುರಿಸಲಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದ ವಿಶ್ವ ನಂ.1 ಆಟಗಾರ್ತಿ ಆರ್ನಾ ಸಬಲೆಂಕಾ ಅವರು ಕೊಸ್ಟವಿಕ್ ಅವರನ್ನು ಎದುರಿಸಲಿದ್ದಾರೆ.

ವಿಲಿಯಮ್ಸ್ ಸಂಚಲನ

ವಿಂಬಲ್ಡನ್ ಪಂದ್ಯಾವಳಿಯ ವಿಶೇಷವೆಂದರೆ ಈ ಬಾರಿ ಅಮೆರಿಕದ ದಿಗ್ಗಜ ಆಟಗಾರ್ತಿ ಸೆರೇನಾ ವಿಲಿಯಮ್ಸ್ ಕಂಬ್ಯಾಕ್ ಮಾಡಿದ್ದಾರೆ. ಕಳೆದ ಕೆಲವು ಪಂದ್ಯಾವಳಿಗಳಿಂದ ದೂರ ಉಳಿದಿದ್ದ ಅವರು, ಸಂಪೂರ್ಣ ಫಿಟ್ ಆಗಿದ್ದು 44ನೇ ವಯಸ್ಸಿನಲ್ಲಿ ಕಂಬ್ಯಾಕ್ ಮಾಡಲಿದ್ದಾರೆ. ಈ ಬಗ್ಗೆ ಟೆನಿಸ್ ಜಗತ್ತೇ ಖುಷಿ ಮತ್ತು ಅಭಿನಂದನೆ ವ್ಯಕ್ತಪಡಿಸಿದ್ದು, ಜೊಕೊವಿಚ್, ಸೆಬಲೆಂಕಾ ಸೇರಿದಂತೆ ಟೆನಿಸ್ ದಿಗ್ಗಜರು ಸ್ವಾಗತಿಸಿದ್ದಾರೆ. ವಿಲಿಯಮ್ಸ್ ಮೊದಲನೇ ಸುತ್ತಿನಲ್ಲಿ ಎಮ್ ಜಾಯಿಂಟ್ ಅವರನ್ನು ಎದುರಿಸಲಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6028

ಎಡದಿಂದ ಬಲಕ್ಕೆ
1.ಕೋಲಿನಂತೆ ದೇಹ ಚಾಚಿ ನಮಸ್ಕರಿಸುವುದು (5)
3.ಉದಾತ್ತ ಗುಣವುಳ್ಳ ದೊಡ್ಡ ಮನುಷ್ಯ (3)
4.ಮೂಕನ ನಡುವೆ ಇರುವ ಇಲಿ (3)
5.ಇದು ಶಾಸನಸಭೆ-ಪಾರ್ಲಿಮೆಂಟು (3)
9.ತಪ್ಪಿಸಿಕೊಳ್ಳಲಾಗದ ಕಾಲನ ಹಗ್ಗ (4)
11.ಕರ್ನಾಟಕ ಸಂಗೀತವನ್ನು ಹೀಗೂ ಕರೆಯುತ್ತಾರೆ (4)
13.ಈ ಶ್ರೀಗಂಧದ ಮರ ಒಂದು ವಾಹಿನಿಯ ಹೆಸರಾಗಿದೆ (3)
15.ಎರಡನೆಯ ತೀರ್ಥಂಕರರ ಹೆಸರು (3)
16.ಕೇಳದೆ ಉಪಯೋಗಿಸಿಕೊಳ್ಳುವುದು (3)
17.ಕಸುವಿನಲ್ಲಿ ನಿದ್ದೆಯಲ್ಲಿ ಮಾತನಾಡುವಿಕೆಯಿದೆ (5)

ಮೇಲಿನಿಂದ ಕೆಳಕ್ಕೆ
1.ಹಲ್ಲಿನ ಮೂಲಪ್ರದೇಶದಿಂದ ಹುಟ್ಟುವ ವರ್ಣ (5)
2.ಉಲ್ಟಾ ಮೂಡಿದ ಉತ್ಸಾಹ-ಅಧಿಕವಾದ ಸಂತೋಷ (3)
3.ಮತ್ತು ಇದರ ನಡುವೆ ಶ್ರೇಷ್ಠವಾದದ್ದಿದೆ (3)
6.ಅಂತಃಕರುಣಿ-ಸಹಾನುಭೂತಿಯುಳ್ಳವನು (4)
7.ಗಣಿತದಲ್ಲಿ ಭಿನ್ನರಾಶಿಯಲ್ಲಿ ಭಾಗಗಳು (4)
8.ಬಿಲ್ಲಿಗೆ ಹೂಡಿದ ಶರ ಕಡೆಯಲ್ಲಿ ದೀರ್ಘವಾಗಿದೆ (2)
10.ಚರ್ಮದ ಮೇಲಿನ ಕಪ್ಪುಬಣ್ಣದ ಗುರುತು (2)
12.ದಾರಿ ಕಾಣದಂತೆ ಮಾಡುವಿಕೆ (5)
13.ಜುಟ್ಟು-ಶಿಖೆಯ ಸಮಾನಪದ (3)
14.ಪಾಪಿಗಳನ್ನು ಶಿಕ್ಷಿಸುವ ಲೋಕ (3)


6027 ಉತ್ತರ

ಎಡದಿಂದ ಬಲಕ್ಕೆ:
1.ಪದವೀಧರ 5.ಸಾಟಿ
6.ಆವೇಶ 7.ಸುಲಕ್ಷಣ
8.ನಿಗರ್ವ 10.ತಿಲಕ
12.ಗಣಾಗ್ರಣಿ
14.ಸಂಗಮ 16.ಚಾಳಿ
17.ರಕ್ತಸಂಚಾರ

ಮೇಲಿನಿಂದ ಕೆಳಕ್ಕೆ
: 1.ಪದವಿಪೂರ್ವ
2.ಲಕ್ಷಿಸು 3.ರಸಾತಲ
4.ಪ್ರವೇಶ 6.ಆಣತಿ
9.ನಿಗಮ 11.ಕಮಲಾಕರ
13.ಗ್ರಹಚಾರ
14.ಸಂದೇಹ
15.ಸಂಗೀತ

ಕಿರುಸುದ್ದಿ

ಪರಿಷ್ಕರಣೆ ನಿಖರವಾಗಿರಲಿ



ಲಕ್ಷ್ಮೇಶ್ವರ: ಶಿರಹಟ್ಟಿ ಮತಕ್ಷೇತ್ರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸುವಂತೆ ಜಿಲ್ಲಾ ಸಮಾಜ ಕಲ್ಯಾಣ ಉಪ ನಿರ್ದೇಶಕ ಹಾಗೂ ಶಿರಹಟ್ಟಿ ಮತಕ್ಷೇತ್ರದ ಮತದಾರರ ನೋಂದಣಾಧಿಕಾರಿ ನಂದಾ ಹಣಬರಹಟ್ಟಿ ಹೇಳಿದರು.

ಅವರು ಪಟ್ಟಣದ ಚನ್ನಮ್ಮನವನ ಕಲ್ಯಾಣ ಮಂಟಪದಲ್ಲಿ ಶಿರಹಟ್ಟಿ ವಿಧಾನಸಭಾ ಕ್ಷೇತ್ರ-65 ತಾಲೂಕಿನ ಒಟ್ಟು 102ಮತಗಟ್ಟೆಗಳ ಬಿಎಲ್‌ಒ, ಮೇಲ್ವಿಚಾರಕರ ಹಾಗೂ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಬಿಎಲ್‌ಎ ಗಳ ತರಬೇತಿ ಕಾರ್ಯಾಗಾರಕ್ಕೆ ಸ್ಥಳ ಭೇಟಿ ನೀಡಿ ಮಾತನಾಡಿ, ಚುನಾವಣಾ ಆಯೋಗದ ಮಾರ್ಗಸೂಚಿಗಳ ಅನುಸಾರ ಪಾರದರ್ಶಕವಾಗಿ ಮತ್ತು ನಿಖರವಾಗಿ ಪರಿಷ್ಕರಣೆ ಮಾಡಬೇಕು ಎಂದರು.

ತಹಸೀಲ್ದಾರ್ ಹಾಗೂ ಸಹಾಯಕ ನೋಂದಣಾಧಿಕಾರಿ ಧನಂಜಯ ಎಂ. ಮಾತನಾಡಿದರು. ಎಸ್‌ಐಆರ್ ಬಗ್ಗೆ ತಹಶೀಲ್ದಾರರಿಂದ ನವೀನ ಅಂಗಡಿ ಹಾಗೂ ಎಂ.ಎಸ್. ಮಳ್ಳಿಮಠ ತರಬೇತಿ ಕಾರ್ಯಾಗಾರ ನಡೆಸಿಕೊಟ್ಟರು. ಕಂದಾಯ ನಿರೀಕ್ಷಕ ಎಂ.ಎ. ನದಾಫ, ಶಿರಸ್ತೇದಾರ ಜಿ.ಎ. ಮನಿಯಾರ, ಪ್ರವೀಣ ಬಾಳಿಕಾಯಿ, ಗಂಗಾಧರ ಮೆಣಸಿನಕಾಯಿ, ಜಗದೀಶಗೌಡ ಪಾಟೀಲ, ವಿಜಯ ಕುಂಬಾರ ಇತರರಿದ್ದರು.

ಪಲ್ಸ್ ಪೋಲಿಯೋ ಜಾಗೃತಿ ಜಾಥಾ



ಗಜೇಂದ್ರಗಡ: ಮಕ್ಕಳನ್ನು ಪೋಲಿಯೋ ಮುಕ್ತರನ್ನಾಗಿಸುವ ನಿಟ್ಟಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ. 3ರಲ್ಲಿ ಶನಿವಾರ ಪಲ್ಸ್ ಪೋಲಿಯೋ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಯಿತು. ಶಾಲೆಯ ಮುಖ್ಯಶಿಕ್ಷಕ ವೈ.ಎಚ್. ಪೂಜಾರ ಚಾಲನೆ ನೀಡಿ ಮಾತನಾಡಿ, ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಪಲ್ಸ್ ಪೋಲಿಯೋ ಲಸಿಕೆ ಹಾಕಿಸುವುದು ಪ್ರತಿಯೊಬ್ಬ ಪೋಷಕರ ಜವಾಬ್ದಾರಿಯಾಗಿದೆ. ಪೋಲಿಯೋ ನಿರ್ಮೂಲನೆಗೆ ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಬೇಕು ಎಂದರು. ಜಾಥಾದಲ್ಲಿ ಶಾಲೆಯ ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಪೋಲಿಯೋ ಲಸಿಕೆಯ ಮಹತ್ವವನ್ನು ತಿಳಿಸುವ ಕರಪತ್ರಗಳನ್ನು ಕೈಯಲ್ಲಿ ಹಿಡಿದು ಜನರಲ್ಲಿ ಜಾಗೃತಿ ಮೂಡಿಸಿದರು. ಜಿ.ಜಿ.ಚವಡಿ, ಡಿ.ಎಸ್. ಹುಂಡೇಕರ, ಎಂ.ಎಸ್. ಸಜ್ಜನರ, ಕೆ.ಬಿ.ಚಲವಾದಿ, ಸೇರಿದಂತೆ ಅನೇಕರು ಇದ್ದರು.

ಶೇ.93ರಷ್ಟು ಮತದಾನ



ನರಗುಂದ: ನಗರದ ಸರ್.ಎಮ್ ವಿಶ್ವೇಶ್ವರಯ್ಯ ಸಿಬಿಎಸ್‌ಇ ಶಾಲೆಯಲ್ಲಿ ಶನಿವಾರ ವಿದ್ಯಾರ್ಥಿ ಪರಿಷತ್ ಚುನಾವಣೆಯ ಮತದಾನ ಯಶಸ್ವಿಯಾಗಿ ನಡೆಯಿತು. ಶಾಲೆಯ ವಿದ್ಯಾರ್ಥಿಗಳು ಉತ್ಸಾಹದಿಂದ ಹಾಗೂ ಶಿಸ್ತುಬದ್ಧವಾಗಿ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಮತದಾನ ಮಾಡಿದರು. ಶಾಲೆಯ ಶಿಕ್ಷಕರು, ಸಿಬ್ಬಂದಿ, ವಾಹನ ಚಾಲಕರು ಹಾಗೂ ಆಶಾ ಕಾರ್ಯಕರ್ತೆಯರು ಸಹ ಮತದಾನದಲ್ಲಿ ಭಾಗವಹಿಸಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿದರು.

ಒಟ್ಟು ಶೇ.93 ರಷ್ಟು ಮತದಾನ ದಾಖಲಾಗಿದ್ದು, ಈ ಚುನಾವಣೆಯ ಮೂಲಕ ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವ ವ್ಯವಸ್ಥೆ, ಮತದಾನದ ಮಹತ್ವ ಹಾಗೂ ಜವಾಬ್ದಾರಿಯುತ ನಾಗರಿಕರಾಗಿ ಬೆಳೆಯುವ ಮೌಲ್ಯಗಳನ್ನು ಪ್ರಾಯೋಗಿಕವಾಗಿ ಪರಿಚಯಿಸಲಾಯಿತು ಎಂದು ನರಗುಂದದ ಎಸ್‌ಎಂವಿ ಸಿಬಿಎಸ್‌ಇ ಶಾಲೆ ಪ್ರಾಂಶುಪಾಲರು ತಿಳಿಸಿದ್ದಾರೆ.

ಮಾರುಕಟ್ಟೆ ಧಾರಣೆ — ಗದಗ (ಕ್ವಿಂಟಲ್)

ಕಡಲೆಕಾಳು	4560-5159
ಹೆಸರುಕಾಳು	3225-3225
ಸೋಯಾಬಿನ್	5580-5580
ಗೋಧಿ	2175-2175
ಶೇಂಗಾ	7390-7390
ಮೆಕ್ಕೆಜೋಳ	2293-2434



ಮುಂಡರಗಿ: ತಾಲೂಕಿನ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಗೂ ಗಣ್ಯ ವರ್ತಕ ವೀರಣ್ಣ ಮಡಿವಾಳರ ಅವರು ಮಾಡುತ್ತಿರುವ ಸಾಮಾಜಿಕ ಕಳಕಳಿಯ ಸೇವೆ ಪರಿಗಣಿಸಿ ಎಷ್ಯಾ ಇಂಟರ್‌ನ್ಯಾಶನಲ್ ಕಲ್ಚರಲ್ ರಿಸರ್ಚ್ ಅಕಾಡೆಮಿಯು ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಬೆಂಗಳೂರಿನಲ್ಲಿ ಅಕಾಡೆಮಿಯು ವೀರಣ್ಣ ಮಡಿವಾಳರ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿತು. ವೀರಣ್ಣ ಮಡಿವಾಳರ ಅವರು ಬಡ ಶಾಲಾ ಮಕ್ಕಳ ಶಿಕ್ಷಣಕ್ಕೆ ನೆರವಾಗುವುದರ ಜೊತೆಗೆ ಅನೇಕ ಸಂಘ ಸಂಸ್ಥೆಗಳ ಜೊತೆ ನಿಕಟ ಸಂಪರ್ಕ ಇಟ್ಟುಕೊಂಡು ಸಹಾಯ ಮಾಡುತ್ತಾ ಬಂದಿದ್ದಾರೆ. ಕಸಾಪ ಕಟ್ಟಡಕ್ಕೆ ಸಹಾಯ ಧನ ನೀಡುವುದರೊಂದಿಗೆ ಕಸಾಪ ಮತ್ತು ಶಸಾಪಗೆ ದತ್ತಿ ದೇಣಿಗೆ ನೀಡಿದ್ದು ವಿಶೇಷವಾಗಿದೆ.

ಹರಕೆ ಹೊತ್ತ ಜಿ.ಎಸ್.ಪಾಟೀಲ ಅಭಿಮಾನಿಗಳು

ರೋಣ: ಮೊಹರಂ ಹಬ್ಬದ ಸಂದರ್ಭದಲ್ಲಿ ತಮ್ಮ ಸ್ನೇಹಿತರ ಜೊತೆಗೆ ಮುದ್ಗಲ್ ಮಸಿದಿಗೆ ತೆರಳಿ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ಸಿಗಬೇಕು ಎಂದು ಅಲ್ಲಿ ದೇವರುಗಳಲ್ಲಿ ಬೇಡಿಕೊಂಡು ಬರುವ ಜೊತೆಗೆ ದೇವರ ಮೇಲೆ ನಮಗೆ ನಂಬಿಕೆಯಿದ್ದು ಅವರು ಸಚಿವರಾಗುವುದು ಪಕ್ಕಾ. ಅವರು ಸಚಿವರಾದ ಕೂಡಲೇ ಮುದ್ಗಲ್ ಮಸಿದಿಗೆ ತೆರಳಿ ಹರಕೆ ತೀರಿಸಲಾಗುವುದು ಎಂದು ತಾಪಂ ಮಾಜಿ ಸದಸ್ಯ ಅಂದಪ್ಪ ಬಿಚ್ಚೂರ, ಗ್ರಾಪಂ ಮಾಜಿ ಸದಸ್ಯ ಫಕೀರಪ್ಪ ಕುಕನೂರ ಸ್ಪಷ್ಟಪಡಿಸಿದರು.

ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ಸಿಗಬೇಕು ಎಂದು ಮುದ್ಗಲ್ ಅಲ್ಲಿ ದೇವರುಗಳಿಗೆ 51 ಕೆಜಿ ಸಕ್ಕರೆ ಸಮರ್ಪಿಸುತ್ತೇವೆ ಎಂದು ತಾಪಂ ಮಾಜಿ ಸದಸ್ಯ ಅಂದಪ್ಪ ಬಿಚ್ಚೂರ ಹಾಗೂ ಗ್ರಾಪಂ ಮಾಜಿ ಸದಸ್ಯ ಫಕೀರಪ್ಪ ಕುಕನೂರ ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಅದರಂತೆ ಅವರು ಮೊಹರಂ ಹಬ್ಬದ ಸಂದಲ್ ರಾತ್ರಿಯಂದು ಮುದ್ಗಲ್ ಅಸರ ಖಾನ್ ಮಸೀದಿಗೆ ತೆರಳಿ ಶಾಸಕ ಜಿ.ಎಸ್.ಪಾಟೀಲರಿಗೆ ದೇವರುಗಳು ಆಶೀರ್ವದಿಸಬೇಕು. ಅವರು ಸಚಿವರಾದ ಕೂಡಲೇ ಮಸಿದಿಗೆ ಆಗಮಿಸಿ 51 ಕೆಜಿ ಸಕ್ಕರೆ ಸಮರ್ಪಿಸುವುದಾಗಿ ಹರಕೆ ಹೊತ್ತು ಬಂದಿದ್ದಾರೆ. ತಾಪಂ ಮಾಜಿ ಸದಸ್ಯ ಅಂದಪ್ಪ ಬಿಚ್ಚೂರ, ಗ್ರಾಪಂ ಮಾಜಿ ಸದಸ್ಯ ಫಕೀರಪ್ಪ ಕುಕನೂರ ಗ್ರಾಮದಲ್ಲಿರುವ ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಇತ್ತೀಚೆಗೆ ಜಂಟಿ ಸುದ್ದಿಗೋಷ್ಠಿಯನ್ನು ನಡೆಸಿ ಅವರು ತಮ್ಮ ಹರಕೆ ವಿಚಾರವಾಗಿ ಮಾಧ್ಯಮಗಳ ಜೊತೆಗೆ ಹಂಚಿಕೊಂಡಿದ್ದರು.



ರೋಣ: ಮೊಹರಂ ಹಬ್ಬದ ಸಂದರ್ಭದಲ್ಲಿ ತಮ್ಮ ಸ್ನೇಹಿತರ ಜೊತೆಗೆ ಮುದ್ಗಲ್ ಮಸಿದಿಗೆ ತೆರಳಿ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ಸಿಗಬೇಕು ಎಂದು ಅಲ್ಲಿ ದೇವರುಗಳಲ್ಲಿ ಬೇಡಿಕೊಂಡು ಬರುವ ಜೊತೆಗೆ ದೇವರ ಮೇಲೆ ನಮಗೆ ನಂಬಿಕೆಯಿದ್ದು ಅವರು ಸಚಿವರಾಗುವುದು ಪಕ್ಕಾ. ಅವರು ಸಚಿವರಾದ ಕೂಡಲೇ ಮುದ್ಗಲ್ ಮಸಿದಿಗೆ ತೆರಳಿ ಹರಕೆ ತಿರಿಸಲಾಗುವುದು ಎಂದು ತಾಪಂ ಮಾಜಿ ಸದಸ್ಯ ಅಂದಪ್ಪ ಬಿಚ್ಚೂರ, ಗ್ರಾಪಂ ಮಾಜಿ ಸದಸ್ಯ ಫಕೀರಪ್ಪ ಕುಕನೂರ ಸ್ಪಷ್ಟಪಡಿಸಿದರು.

ಸಕಾಲಕ್ಕೆ ಬಾರದ ಮುಂಗಾರು | ತೇವಾಂಶದ ಕೊರತೆ | ಅನ್ನದಾತ ಕಂಗಾಲು

ಒಣಗುವ ಸ್ಥಿತಿ ತಲುಪಿದ ಬೆಳೆಗಳು



> ಮಳೆಯಾಗಬಹುದೆಂಬ ಮುನ್ಸೂಚನೆ ಇದೆ. ತೇವಾಂಶ ಇಲ್ಲದಿದ್ದಾಗ ಮೇಲುಗೊಬ್ಬರ (ಯುರಿಯಾ) ಬೆಳೆಗಳಿಗೆ ಕೊಡಬಾರದು. ತೇವಾಂಶದ ಕೊರತೆಯಿಂದಾಗಿ ಬೆಳೆಗಳು ಬಾಡಲು ಪ್ರಾರಂಭಿಸಿವೆ. ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ.
> ■ ಪ್ರಾಣೇಶ, ಸಹಾಯಕ ಕೃಷಿ ನಿರ್ದೇಶಕ, ಮುಂಡರಗಿ

ಸಿ.ಎಸ್.ಅರಸನಾಳ

ಮುಂಡರಗಿ: ತಾಲೂಕಿನಲ್ಲಿ ಮುಂಗಾರು ಮಳೆ ಸಕಾಲಕ್ಕೆ ಸರಿಯಾಗಿ ಆಗದೇ ಇರುವುದರಿಂದ ಬಿತ್ತಿದ್ದ ಅಲ್ಪ-ಸ್ವಲ್ಪ ಬೆಳೆಗಳು ಮೊಳಕೆ ಒಡೆದು ಒಣಗುವ ಸ್ಥಿತಿಯನ್ನು ತಲುಪಿವೆ. ತೇವಾಂಶದ ಕೊರತೆಯಿಂದಾಗಿ ಸಸಿಗಳು ಮೇಲೇಳದೆ ಇದ್ದಲ್ಲಿಯೇ ಕಮರುತ್ತಿವೆ.

ರೈತ ಸಮೂದಾಯ ಚಿಂತಾಕ್ರಾಂತವಾಗಿ ದಿನಾಲೂ ಮುಗಿಲು ನೋಡಿ ಮಳೆರಾಯನ ಆಗಮನಕ್ಕೆ ಕಾಯುತ್ತಿದ್ದಾನೆ. ದಿನಾಲೂ ಮೋಡಕವಿದ ವಾತಾವರಣ ಇದೆ. ಆದರೆ ಮಳೆರಾಯ ಬರುತ್ತಿಲ್ಲ. ಪ್ರಸ್ತುತ ಮುಂಗಾರು ಆರಂಭದಲ್ಲಿ ಬಿದ್ದ ಅಲ್ಪ-ಸ್ವಲ್ಪ ಮಳೆಗೆ ಭೂಮಿ ಹಸಿಯಾಗಿದ್ದರಿಂದ ಅನೇಕ ರೈತರು ಬೀಜವನ್ನು ಹೊಲಕ್ಕೆ ಹಾಕಿದ್ದಾರೆ. ಬೀಜಗಳು ಮೊಳಕೆ ಒಡದಿವೆ. ಆದರೆ ಮಳೆಯ ಕೊರತಯಿಂದ ಬಾಡುವ ಸ್ಥಿತಿ ತಲುಪಿವೆ. ಕೃಷಿ ಇಲಾಖೆ ನೀಡಿದ ಮಾಹಿತಿಯ ಪ್ರಕಾರ ತಾಲೂಕಿನಲ್ಲಿ ಶೇ.51.53 ರಷ್ಟು ಬಿತ್ತನೆಯಾಗಿದೆ. ಆದರೆ ಬಿತ್ತನೆಯ ನಂತರ ಮಳೆಯ ಕೊರತೆಯಿಂದಾಗಿ ಮೊಳಕೆಯೊಡೆದ ಬೆಳೆಗೆ ನೀರಿಲ್ಲದೆ ಚಿಗುರಿ ಬೆಳೆಯುವ ಹಂತದಲ್ಲಿಯೇ ಕಮರುವ ಸ್ಥಿತಿ ಎದುರಾಗಿದೆ. ಮಳೆಯ ಆಗಮನಕ್ಕೆ ರೈತರು ಅನ್ನಸಂತರ್ಪಣೆ, ತಮ್ಮ ಇಷ್ಟ ದೇವರಿಗೆ ವಿಶೇಷ ಪೂಜೆಯನ್ನು ಸಲ್ಲಿಸಿ ಮುಗುಲು ನೋಡುತ್ತಿದ್ದಾರೆ. ಮಳೆರಾಯ ಒಂದೆರಡು ದಿನದಲ್ಲಿ ಬಾರದಿದ್ದರೆ ಚಿಗುರೊಡೆದ ಬೆಳೆ ಸಂಪೂರ್ಣ ಒಣಗುತ್ತದೆ ಎಂದು ರೈತರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ನಿರೀಕ್ಷೆ ಹುಸಿ

ಸಾವಿರಾರು ರೂ.ಗಳನ್ನು ಖರ್ಚುಮಾಡಿ ಕಷ್ಟಪಟ್ಟು ಬಿತ್ತಿದ್ದ ಬೆಳೆಗಳು ತೇವಾಂಶದ ಕೊರತೆಯಿಂದ ಕಮರುತ್ತಿವೆ. ಇದರಿಂದ ರೈತರು ಸಂಕಷ್ಟ ಸ್ಥಿತಿಗೆ ಸಿಲುಕಿದ್ದಾರೆ. ಇವತ್ತು ಇಲ್ಲಾ ನಾಳೆ ಮಳೆಬರಬಹುದು ಎಂದು ನಿರೀಕ್ಷೆ ದಿನದಿಂದ ದಿನಕ್ಕೆ ಹುಸಿಯಾಗುತ್ತಿದೆ. ಹಮ್ಮಿಗಿ ಬ್ಯಾರೇಜಿನಿಂದ ಕಾಲುವೆಗಳಿಗೆ ನೀರು ಹರಿಸಿದರೆ ಆಯಾ ಭಾಗದ ರೈತರ ಜಮೀನಿನ ಬೆಳೆಗಳಿಗೆ ಅನುಕೂಲವಾಗುತ್ತದೆ ಎಂದು ಕರ್ನಾಟಕ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಶಿವಾನಂದ ಇಟಗಿ ಹೇಳಿದ್ದಾರೆ.

- ಮುಂಗಾರು ಹಂಗಾಮಿನಲ್ಲಿ 49,565 ಹೆಕ್ಟರ್ ಬಿತ್ತನೆ ಗುರಿ
- ಈ ವರೆಗೆ 25,539 ಹೆ. ಬಿತ್ತನೆ
- ಇದರಲ್ಲಿ ಹೈಬ್ರಿಡ್ ಜೋಳ 215 ಹೆ., ಗೋವಿನ ಜೋಳ 10,310 ಹೆ., ತೊಗರಿ 804 ಹೆ., ಹೆಸರು 8,202 ಹೆ., ಶೇಂಗಾ 926 ಹೆ., ಸೂರ್ಯಕಾಂತಿ 4,035 ಹೆ., ಹತ್ತಿ 248 ಹೆ., ಕಬ್ಬು 675 ಹೆ. ಮಾತ್ರ ಬಿತ್ತನೆ
- ಒಟ್ಟು ಬಿತ್ತನೆಯ ಕ್ಷೇತ್ರದಲ್ಲಿ ಖುಷ್ಕಿ 17,552 ಹೆ., ನೀರಾವರಿ ಕ್ಷೇತ್ರ 7,987 ಹೆ. ಒಳಗೊಂಡಿದೆ

ಜೂನ್ 1 ರಿಂದ 20 ರವರೆಗೆ 47 ಮಿ.ಮೀ. ವಾಡಿಕೆ ಮಳೆಯಾಗಬೇಕಿತ್ತು. ಆದರೆ ಈಗ ಮಳೆಯಾಗಿದ್ದು 33 ಮಿ.ಮೀ ಮಾತ್ರ. ಅಂದರೆ ಶೇ.23 ರಷ್ಟು ಮಳೆಯ ಕೊರತೆ ಉಂಟಾಗಿದೆ. ಇದರಿಂದ ಬೆಳೆಗಳಿಗೆ ತೇವಾಂಶದ ಕೊರತೆಯಿಂದಾಗಿ ಹುಟ್ಟಿದ ಬೆಳೆಗಳು ಒಣಗುತ್ತಿವೆ.

ದಿಗಂತ ವಿಶೇಷ

ಬ್ಯಾರೇಜಿನಿಂದ ಕಾಲುವೆಗೆ ನೀರು ಹರಿಸಿ

ಪ್ರತಿ ವರ್ಷ ಹಮ್ಮಿಗಿ ಬ್ಯಾರೇಜ್ ಹಿನ್ನೀರಿನಿಂದ ಜೂನ್ ತಿಂಗಳಿಂದ ಅಕ್ಟೋಬರ್ ತಿಂಗಳವರೆಗೆ ಕಾಲುವೆಗಳಿಗೆ ನೀರನ್ನು ಹರಿಸಲಾಗುತ್ತಿತ್ತು. ಅದು ಇನ್ನೂ ನಡೆದಿಲ್ಲ. ಬ್ಯಾರೇಜಿನಿಂದ ಮುಖ್ಯಕಾಲುವೆ ಮುಖಾಂತರ ನೀರು ಹರಿಸಿದರೆ ಕಾಲುವೆ ಪಾತ್ರದ ಜಮೀನುಗಳಿಗೆ ಅನುಕೂಲವಾಗುತ್ತದೆ. ಕಾಲುವೆಗಳ ಮೂಲಕ ಕೆರೆಗಳನ್ನು ತುಂಬಿಸುವ ಕಾರ್ಯ ನಡೆದರೆ ಆಯಾ ಕೆರೆ ಭಾಗದ ರೈತರಿಗೂ ಅನುಕೂಲವಾಗುತ್ತದೆ. ಬ್ಯಾರೇಜಿನಿಂದ ಕಾಲುವೆಗಳಿಗೆ ನೀರು ಬೀಡಬೇಕೆಂಬುದು ಇಲ್ಲಿನ ರೈತರು ಒತ್ತಾಯಿಸಿದ್ದಾರೆ.

ರಸ್ತೆಯಲ್ಲಿ ತಗ್ಗು ಗುಂಡಿಗಳದ್ದೇ ದರ್ಬಾರ್

ಶಿವಲಿಂಗಯ್ಯ ಹೊತಗಿಮಠ

ಲಕ್ಷ್ಮೇಶ್ವರ: ತಾಲೂಕಿನ ಗೋವನಾಳ ಗ್ರಾಪಂ ವ್ಯಾಪ್ತಿಗೆಬರುವ ವಡೆಯರ ಮಲ್ಲಾಪುರ ಗ್ರಾಮ ಅಂದಾಜು 1500 ಜನಸಂಖ್ಯೆ ಇರುವ ಗ್ರಾಮ, 2 ವಾರ್ಡ್‌ಗಳು ಇರುವ ಈ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಭಾಗ್ಯವಿಲ್ಲದೆ ಸವಣೂರ ರಸ್ತೆಯ ಅಗಡಿ ಎಂಜಿನಿಯರಿಂಗ್ ಕಾಲೇಜಿನ ಪಕ್ಕದ ರಸ್ತೆ ಮುರಾರ್ಜಿ ದೇಸಾಯಿ ವಸತಿ ಶಾಲೆಯಿಂದ ಅಂದಾಜು 2 ಕಿಲೋಮೀಟರ್ ಗ್ರಾಮವನ್ನು ಸಂಪರ್ಕಿಸುವ ರಸ್ತೆ ದಶಕಗಳಿಂದ ತಗ್ಗು ಗುಂಡಿಗಳಿಂದ ಕೂಡಿದ್ದು, ವಾಹನ ಸವಾರರ ಪರಿಸ್ಥಿತಿ ಹೇಳತೀರದಾಗಿದೆ.

ಮಳೆಗಾಲದಲ್ಲಿ ರಸ್ತೆಯ ಪರಿಸ್ಥಿತಿ ಅಯೋಮಯವಾಗಿರುತ್ತದೆ.

ಇತ್ತ ವಡೆಯರ ಮಲ್ಲಾಪುರದಿಂದ ಶಿಗ್ಲಿ ಹೋಗುವ ಮಾರ್ಗ ಮಧ್ಯೆ ಜಮೀನಿನ ಕಾಲು ರಸ್ತೆಯಲ್ಲಿ ಲಕ್ಷ್ಮೇಶ್ವರ ಶಿಗ್ಲಿ ಮೇನ್ ರಸ್ತೆಗೆ ಸುಮಾರು 1 ಕಿಲೋಮೀಟರ್ ವರೆಗೆ ದಶಕಗಳಿಂದ ಇಲ್ಲಿನ ಜನರು ನಡೆದುಕೊಂಡು ಹೋಗುತ್ತಿದ್ದಾರೆ. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವೃದ್ಧರಿಗೆ ಆಸ್ಪತ್ರೆ ಹೋಗುವ ರೋಗಿಗಳು ಪರದಾಡುವಂತಾಗಿದೆ. ಗ್ರಾಮಕ್ಕೆ ಬಸ್‌ಗಳ ಕೊರತೆಯಿದ್ದು, ಬೈಕ್, ವಾಹನ ಹಾಗೂ ಕಾಲ ನಡಿಗೆ ಮುಖಾಂತರ ಗ್ರಾಮಕ್ಕೆ ತಲುಪುವ ಮೂಲಕ ದಿನನಿತ್ಯ ಇಲ್ಲಿನ ಜನರು ಹರಸಾಹಸ ಪಡುತ್ತಿದ್ದಾರೆ ಎಂದು ನಿವಾಸಿಗಳ ಆರೋಪ.

> ಬಹಳ ವರ್ಷಗಳಿಂದ ಈ ರಸ್ತೆ ದುರಸ್ತಿ ಕಂಡಿಲ್ಲ. ರಸ್ತೆಯಲ್ಲಿ ದಿನನಿತ್ಯ ಅನೇಕ ಅವಘಡಗಳು ಸಂಭವಿಸುತ್ತಿವೆ. ಜನಪ್ರತಿನಿಧಿಗಳು, ಸಂಬಂಧಪಟ್ಟ ಇಲಾಖೆಯವರು ರಸ್ತೆ ನಿರ್ಮಾಣ ಮಾಡಲು ಮುಂದಾಗಬೇಕಾಗಿದೆ. ಗ್ರಾಮದಿಂದ ಶಿಗ್ಲಿ ಹೋಗುವ ದಾರಿ ಮಧ್ಯೆ ಜಮೀನನಲ್ಲಿ ಕಾಲು ರಸ್ತೆಯಲ್ಲಿ ಗ್ರಾಮಸ್ಥರು ಲಕ್ಷ್ಮೇಶ್ವರ ಮುಖ್ಯ ರಸ್ತೆಗೆ ಹೋಗಬೇಕಿದೆ. ರಸ್ತೆಗಾಗಿ ಸರ್ಕಾರ ಭೂಸ್ವಾಧೀನ ಪಡಿಸಿಕೊಂಡು ರಸ್ತೆ ನಿರ್ಮಾಣ ಮಾಡಲು ಮುಂದಾಗಲಿ.
> ■ ಪದ್ಮರಾಜ ಪಾಟೀಲ, ಗ್ರಾಪಂ ಮಾಜಿ ಸದಸ್ಯ

> ಇದು ಪಿಆರ್‌ಡಿ ವ್ಯಾಪ್ತಿಗೆ ಒಳಪಡುವ ರಸ್ತೆಯಾಗಿದ್ದು, ಹದಗೆಟ್ಟ ರಸ್ತೆಗಳ ಬಗ್ಗೆ ಈಗಾಗಲೇ ಗ್ರಾಮಸ್ಥರಿಂದ ದೂರು ಬಂದಿದೆ. ದುರಸ್ತಿಗೆ ಅಧಿಕಾರಿಗಳಿಗೆ ತಿಳಿಸುತ್ತೇನೆ.
> ■ ಜಿ.ಆರ್. ಕುರುಬರ, ಗೋವನಾಳ ಗ್ರಾಪಂ ಪಿಡಿಒ



ಮುಂಗಾರು ಮಳೆ ಕಡಿಮೆ, ಹಿಂಗಾರು ಸ್ವಲ್ಪ ಉತ್ತಮ!

ರೋಣ: ಮಾರನಬಸರಿ ಗ್ರಾಮದಲ್ಲಿ ಜರುಗುವ ಮೊಹರಂ ಹಬ್ಬದಲ್ಲಿ ಗ್ರಾಮದ ಎರಡು ಮಸೂತಿಗಳ ದೊಡ್ಡ ದೇವರುಗಳು ರಾಜಕೀಯ ಭವಿಷ್ಯವನ್ನು ಇತಿಹಾಸದುದ್ದಕ್ಕೂ ತಿಳಿಸಿಕೊಂಡು ಬರುತ್ತಿದ್ದು, ಅವುಗಳು ಎಂದಿಗೂ ಹುಸಿಯಾಗಿಲ್ಲ ಎಂಬ ನಂಬಿಕೆ ಭಕ್ತರಲ್ಲಿದ್ದು, ಇಲ್ಲಿನ ಅಲೈ ದೇವರುಗಳು ನುಡಿಯುವ ರಾಜಕೀಯ ಭವಿಷ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತದೆ.

ದೇವರು ಹೊಳಿಗೆ ಹೊಗುವ ದಿನ ಸಣ್ಣ ಮಸೂತಿಯ ದೊಡ್ಡ ದೇವರು ಕಮಲದ ಚಿಹ್ನೆಯನ್ನು ಭಕ್ತರಿಗೆ ತೋರಿಸುವ ಮೂಲಕ ಕೇಂದ್ರ ಸರ್ಕಾರ ಸುಭದ್ರ ಎಂದು ಸಾರಿತು. ಆದರೆ ದೊಡ್ಡ ಮಸೂತಿಯ ದೊಡ್ಡ ದೇವರು ರಾಜಕೀಯ ಭವಿಷ್ಯ ವಾಣಿಯ ಕಟ್ಟೆ ಎಂದು ಗುರುತಿಸಲ್ಪಡುವ ಧ್ವಜ ಸ್ತಂಭದ ಮೇಲೆ ನಿಲ್ಲುವ ಮೂಲಕ ಮೊದಲು ಕಮಲದ ಚಿಹ್ನೆಯನ್ನು ತೋರಿಸಿ ಉತ್ತತ್ತಿ ಎಸೆಯಿತು. ಮತ್ತೆ ಹಸ್ತದ ಚಿಹ್ನೆಯನ್ನು ತೋರಿಸಿ ಉತ್ತತ್ತಿ ಎಸೆದಿರುವುದುರಾಜಕೀಯಚರ್ಚೆಗೆಕಾರಣವಾಗಿದೆ. ಅಲೈ ದೇವರುಗಳು ತಿಳಿಸಿರುವ ಸಂಗತಿ ಏನೆಂದರೆ, ಕೇಂದ್ರದಲ್ಲಿ ಬಿಜೆಪಿ ಸ್ಪಷ್ಟಬಹುಮತವನ್ನು ಹೊಂದಿಲ್ಲ, ಇತರೆ ಪಕ್ಷಗಳ ಮೈತ್ರಿಯಿದೆ. ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಸ್ಪಷ್ಟ ಬಹುಮತ ಹೊಂದಿದ್ದರೂ ಅಸಮಾಧಾನದ ಹೊಗೆಯಿದ್ದು, ಯಾವಾಗ ಯಾವ ರೀತಿ ಸ್ಫೋಟಗೊಳ್ಳುತ್ತದೆ ಎಂಬುದನ್ನು ಉತ್ತತ್ತಿ ಎಸೆಯುವ ಮೂಲಕ ತಿಳಿಸಿದ್ದು, ಮೊದಲು ಪಕ್ಷದ ಚಿಹ್ನೆಗಳನ್ನು ತೊರಿಸಿದ ಪರಿಣಾಮ ಎರಡು ಸರ್ಕಾರಗಳು ಎಚ್ಚರ ತಪ್ಪದೆ ಸರ್ಕಾರ ನಡೆಸಿದರೆ ಅನಾಹುತವಿಲ್ಲ ಎಂದಾಗಿದೆ ಎಂದು ಹಿರಿಯರು ತಮ್ಮ ಅಭಿಮತವನ್ನು ವ್ಯಕ್ತಪಡಿಸಿದರು. ಮೊಹರಂ ಹಬ್ಬದ ಕೊನೆಯ ದಿನ ಸಣ್ಣ ಮಸೂತಿಯ ದೊಡ್ಡದೇವರು ಹಳ್ಳದಲ್ಲಿ ಕಣ ಸುತ್ತುವ ಮೂಲಕ ಈ ವರ್ಷದ ಮಳೆ, ಆರೋಗ್ಯ, ಜಾನುವಾರುಗಳ ಸ್ಥಿತಿಗತಿಗಳ ಬಗ್ಗೆ ವಿವರಿಸಿತು. ಮುಂಗಾರು ಮಳೆಯು ಕಡಿಮೆ ಪ್ರಮಾಣದಲ್ಲಿ ಸುರಿಯಲಿದ್ದು, ಹಿಂಗಾರು ಮಳೆಯೂ ಸ್ವಲ್ಪ ಮಟ್ಟಿಗೆ ಉತ್ತಮವಾಗಿದೆ. ಜನರು ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ತಕ್ಕ ಮಟ್ಟಿಗೆ ಕಡಿಮೆಯಾಗಬಹುದು. ಆದರೂ ತೊಂದರೆಯಾಗುವುದಿಲ್ಲ ಎಂದು ಭವಿಷ್ಯ ನುಡಿಯಿತು. ಮೊಹರಂ ಹಬ್ಬದ ಕತ್ತಲ್ ರಾತ್ರಿ ಹಾಗೂ ದೇವರು ಹೊಳಿಗೆ ಹೊಗುವ ದಿನಗಳಂದು ಸಾವಿರಾರು ಭಕ್ತರು ಗ್ರಾಮದ ಮಸೀದಿಗಳಿಗೆ ಭೇಟಿ ನೀಡಿ ಸಕ್ಕರೆ ನೈವೇದ್ಯ ಅರ್ಪಿಸಿದರು.



ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ

ಗದಗ: ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸರಳವಾಗಿ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ ನಿಮಿತ್ತ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಗೌರವ ಸಲ್ಲಿಸಲಾಯಿತು.


ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಹಾಗೂ ಜಿಲ್ಲಾ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ. ಬಸವರಾಜ ಬಳ್ಳಾರಿ, ನಿಕಟ ಪೂರ್ವ ಜಿಲ್ಲಾಧ್ಯಕ್ಷ ಡಾ. ರವಿ ಗುಂಜೀಕರ, ವಾರ್ತಾಧಿಕಾರಿ ವಸಂತ ಮಡ್ಲೂರ, ತಾಪಂ ಇಒ ಶ್ರೀಧರ ಚಿನಗುಂಡಿ, ರಾಜು ಕಂಟಿಗೊನ್ನವರ, ರಾಜು ಸೊಪಡ್ಲ, ನವೀನ ಸೇರಿದಂತೆ ಮತ್ತಿತರರು ಇದ್ದರು.



ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ

ಗಜೇಂದ್ರಗಡ: 2025-26ನೇ ಶೈಕ್ಷಣಿಕ ಸಾಲಿನಲ್ಲಿ ಅತ್ಯುತ್ತಮ ಶೈಕ್ಷಣಿಕ ಸಾಧನೆ ಮಾಡಿ ಎಸ್.ಎಂ.ಭೂಮರೆಡ್ಡಿ ಶಾಲೆಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಎಸ್.ಎಂ. ಭೂಮರಡ್ಡಿ ಪ್ರೌಢಶಾಲೆಯ ಆವರಣದಲ್ಲಿ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸ್ಮರಣಿಕೆ, ಪ್ರಶಂಸಾ ಪತ್ರ ಹಾಗೂ ಸನ್ಮಾನ ನೀಡಿ ಅಭಿನಂದಿಸಲಾಯಿತು. ಮುಖ್ಯಶಿಕ್ಷಕ ಸಿ.ಎಸ್.ಮುರಶಿಲ್ಲಿ ಮಾತನಾಡಿ, ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯೇ ಶಾಲೆಯ ಹೆಮ್ಮೆ. ಗೌರವವು ವಿದ್ಯಾರ್ಥಿಗಳಿಗೆ ಮತ್ತಷ್ಟು ಉತ್ತೇಜನ ನೀಡುವುದರ ಜೊತೆಗೆ ಇತರ ವಿದ್ಯಾರ್ಥಿಗಳಿಗೂ ಉತ್ತಮ ಸಾಧನೆ ಮಾಡಲು ಪ್ರೇರಣೆಯಾಗಲಿದೆ. ಪರಿಶ್ರಮ, ಶಿಸ್ತು ಮತ್ತು ಶಿಕ್ಷಕರ ಮಾರ್ಗದರ್ಶನದಿಂದ ಯಾವುದೇ ಗುರಿ ಸಾಧಿಸಬಹುದು ಎಂದರು. ಶಾಲೆಯ ಆರ್.ಎಸ್.ರಾಠೋಡ, ಎನ್.ಎನ್. ವಾಲಿಕಾರ, ಎಸ್.ಎಸ್. ನರೇಗಲ್, ಎಸ್.ಸಿ. ಹೂಗಾರ, ಲಕ್ಷ್ಮಿದೇವಿ ಎಂ., ಡಿ.ಎಸ್.ಭಜೇಂತ್ರಿ, ಪಿ.ಎಂ. ಜಾಲವಾದಿ, ಪ್ರೇಮಾ ಯರಗೇರಿ, ಶ್ರೀಮತಿ ದ್ಯಾಪೂರ ಇತರರಿದ್ದರು.



ಜನಪರ ಯೋಜನೆ ಅರ್ಹರಿಗೆ ತಲುಪಿಸಿ



ಗಜೇಂದ್ರಗಡ: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಕಳೆದ ಹಲವು ವರ್ಷಗಳಿಂದ ಬಡವರು, ದೀನ-ದಲಿತರು, ರೈತರು, ಮಹಿಳೆಯರು ಹಾಗೂ ಸಮಾಜದ ಎಲ್ಲ ವರ್ಗಗಳ ಅಭಿವೃದ್ಧಿಗೆ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿದೆ. ಈ ಯೋಜನೆಗಳ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಿ, ಅವುಗಳ ಪ್ರಯೋಜನ ಪ್ರತಿಯೊಬ್ಬ ಅರ್ಹ ಫಲಾನುಭವಿಗೆ ತಲುಪುವಂತೆ ಮಾಡಲು ಪಕ್ಷದ ಪ್ರತಿಯೊಬ್ಬ ಪದಾಧಿಕಾರಿ ಹಾಗೂ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಸಂಘಟನಾತ್ಮಕವಾಗಿ ಕಾರ್ಯನಿರ್ವಹಿಸಬೇಕು ಎಂದು ಬಿಜೆಪಿ ರೋಣ ಮಂಡಲ ಅಧ್ಯಕ್ಷ ಉಮೇಶ ಮಲ್ಲಾಪುರ ಹೇಳಿದರು.

ಪಟ್ಟಣದ ಮಾಜಿ ಸಚಿವ ಕಳಕಪ್ಪ ಜಿ. ಬಂಡಿ ಅವರ ಗೃಹ ಕಚೇರಿಯಲ್ಲಿ ನಡೆದ ಬಿಜೆಪಿ ಎಸ್‌ಟಿ ಮೋರ್ಚಾ ಹಾಗೂ ಯುವ ಮೋರ್ಚಾ ಕಾರ್ಯಕಾರಿಣಿ ಸಭೆಯಲ್ಲಿ ಅವರು ಮಾತನಾಡಿ, ಪಕ್ಷದ ಬಲವೇ ಕಾರ್ಯಕರ್ತರು. ಪ್ರತಿಯೊಬ್ಬ ಕಾರ್ಯಕರ್ತರೂ ತಮ್ಮ ವ್ಯಾಪ್ತಿಯ ಬೂತ್‌ಗಳಲ್ಲಿ ಮನೆ-ಮನೆ ಸಂಪರ್ಕ ಅಭಿಯಾನ ನಡೆಸಬೇಕು. ಫಲಾನುಭವಿಗಳ ಸಮಸ್ಯೆ ಆಲಿಸಿ ಅವರಿಗೆ ಅಗತ್ಯ ನೆರವು ಒದಗಿಸಬೇಕು ಎಂದರು.

ಯುವ ಮುಖಂಡ ಕರಣ್ ಬಂಡಿ ಮಾತನಾಡಿ, ಮುಂಬರುವ ದಿನಗಳಲ್ಲಿ ಪಕ್ಷದ ವಿವಿಧ ಸಂಘಟನಾತ್ಮಕ ಕಾರ್ಯಕ್ರಮಗಳು ಹಾಗೂ ಸದಸ್ಯತ್ವ ಅಭಿಯಾನಗಳನ್ನು ಯಶಸ್ವಿಗೊಳಿಸಲು ಎಸ್‌ಟಿ ಮೋರ್ಚಾ ಮತ್ತು ಯುವ ಮೋರ್ಚಾ ಪದಾಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದರು.

ಹಿರಿಯ ಮುಖಂಡ ಬಿ.ಎಂ. ಸಜ್ಜನರ ಮಾತನಾಡಿ, ಕಾರ್ಯಕರ್ತರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅಭಿವೃದ್ಧಿ ಕಾರ್ಯಗಳನ್ನು ಜನರಿಗೆ ಪರಿಣಾಮಕಾರಿಯಾಗಿ ತಿಳಿಸುವ ಮೂಲಕ ಸಂಘಟನೆಗೆ ಇನ್ನಷ್ಟು ಬಲ ತುಂಬಬೇಕು ಎಂದರು. ರಾಜ್ಯ ಎಸ್‌ಟಿ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಹನುಮಂತಪ್ಪ ಹಟ್ಟಿಮನಿ, ಜಿಲ್ಲಾ ಎಸ್‌ಟಿ ಮೋರ್ಚಾ ಅಧ್ಯಕ್ಷ ಯಲ್ಲಪ್ಪ ಅಡ್ನೂರ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ರಮೇಶ ವಕ್ಕರ ಹಾಗೂ ಬಾಲಾಜಿರಾವ ಭೋಸಲೆ, ಎಸ್‌ಟಿ ಮೋರ್ಚಾ ಅಧ್ಯಕ್ಷ ಸಂತೋಷ ಕಡಿವಾಲ, ಯುವ ಮೋರ್ಚಾ ಅಧ್ಯಕ್ಷ ಹುಲ್ಲಪ್ಪ ಕೆಂಗಾರ, ಶಿವಪ್ಪ ಬಿಡ್ನಾಳ ಇದ್ದರು.

ಗುಣಮಟ್ಟದ ಶಿಕ್ಷಣ ನೀಡುವ ಶಾಲೆ ಶಾಶ್ವತ



ನರಗುಂದ: ಗುಣಮಟ್ಟದ ಶಿಕ್ಷಣವಿರುವ ಶಾಲೆಯು ಸ್ಥಿರವಾಗಿ ನಿಲ್ಲುತ್ತದೆ. ಗುಣಮಟ್ಟದ ಶಿಕ್ಷಣವನ್ನು ಪೋಷಕರು ತಮ್ಮ ಮಕ್ಕಳಿಗೆ ಕೊಡಿಸುವಲ್ಲಿ ಸಿದ್ಧರಿದ್ದಾರೆ. ರಾಷ್ಟ್ರೀಯ ಮೌಲ್ಯವುಳ್ಳ ಶಿಕ್ಷಣದ ವ್ಯವಸ್ಥೆಯನ್ನು ಶಾಲೆಗಳಲ್ಲಿ ಕಾಣಬೇಕಾಗಿದೆ ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಪಟ್ಟಣದ ಟಿಪಿಎಂಎಸ್ ಆವರಣದಲ್ಲಿ ಶನಿವಾರ ಶ್ರೀ ಸಿದ್ದೇಶ್ವರ ವಿದ್ಯಾವರ್ಧಕ ಸಂಘದ ವಿಸ್ಡಮ್ ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆಯ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿದ ನಂತರ ಮಕ್ಕಳಿಗೆ ಪುಸ್ತಕಗಳನ್ನು ವಿತರಿಸಿ ಮಾತನಾಡಿ, ಶಾಲಾ ಶೈಕ್ಷಣಿಕ ವ್ಯವಸ್ಥೆಯಲ್ಲಿ ಆಡಳಿತ ಮಂಡಳಿಯ ಹಸ್ತಕ್ಷೇಪ ಪದೇ ಪದೇ ನಡೆದರೆ ಅಂತಹ ಶಾಲೆಗಳ ಭವಿಷ್ಯ ಅಲ್ಪಾವಧಿ ಆಗಿರುತ್ತದೆ ಎಂದರು. ಪಾಲಕರು ಮಕ್ಕಳಿಗೆ ಪ್ರೀತಿಯಿಂದ ಎಲ್ಲ ಸಾಮಗ್ರಿಗಳನ್ನು ಕೊಡಿಸುತ್ತಾರೆ. ಆದರೆ ಮೊಬೈಲ್ ಮಾತ್ರ ಕೊಡಿಸಬೇಡಿ. ಗೈಡ್ ಪುಸ್ತಕದ ಬದಲು ಪಠ್ಯಪುಸ್ತಕ ಕೊಡಿಸಿದರೆ ಮಕ್ಕಳು ಚುರುಕಾಗಿ ಬೆಳೆಯುತ್ತಾರೆ. ಈ ಶಾಲೆ ಬೆಳವಣಿಗೆಗೆ ಸಾಧ್ಯವಾದರೆ, ಶಾಸಕರ ಅನುದಾನ ನೀಡುವ ಪ್ರಯತ್ನ ಮಾಡುತ್ತೇನೆ ಎಂದರು.

ಸಂಸ್ಥೆಯ ಅಧ್ಯಕ್ಷ ಎಸ್.ವಿ. ಹೆಗಡಾಳ ಹಾಗೂ ಸಂಸ್ಥೆಯ ಕಾರ್ಯದರ್ಶಿ ಎಸ್.ಆರ್. ಪಾಟೀಲ ಮಾತನಾಡಿದರು. ಟಿಪಿಸಿಎಂಎಸ್ ಅಧ್ಯಕ್ಷ ಎ.ಎಂ. ಹುಡೇದ, ನಿಂಗಣ್ಣ ಗಾಡಿ, ವಸಂತ ಭೂಸಾರೆ, ಅಲೋಕ ನಾಯ್ಕರ, ಎಚ್.ಪಿ. ಮುದ್ದನಗೌಡ್ರ, ಎಂ.ಎಸ್. ಪಲ್ಲೇದ, ಐ.ಕೆ. ಪಾಟೀಲ, ನಾಗರಾಜ ಹೊನಕೇರಿ, ಶ್ರೇಯಸ್ ಜಿಡ್ಡಿಬಾಗಿಲ ಸ್ವಾಗತಿಸಿದರು. ಮುಖ್ಯೋಪಾಧ್ಯಾಯಿನಿ ಅಶ್ವಿನಿ ವಿ.ಜಿ. ನಿರೂಪಿಸಿದರು. ಶಿಕ್ಷಕಿ ಶಿಲ್ಪಾ ಪ್ರಾರ್ಥಿಸಿದರು.

ಸ್ವಾಸ್ಥ ಸಂಕಲ್ಪ ಕಾರ್ಯಕ್ರಮ

ಲಕ್ಷ್ಮೇಶ್ವರ: ಸಂಸ್ಥೆಯ ಮೂಲಕ ಹೆಗ್ಗಡೆಯವರು ಹಲವಾರು ಸಮಾಜಮುಖಿ ಕಾರ್ಯಕ್ರಮ ಮಾಡುತ್ತಿದ್ದಾರೆ ಎಂದು ಧರ್ಮಸ್ಥಳ ಸಂಸ್ಥೆಯ ಮೇಲ್ವಿಚಾರಕ ನಿಂಗಪ್ಪ ಪಾಟೀಲ್ ಹೇಳಿದರು.

ಅವರು ಪಟ್ಟಣದ ಸರಕಾರಿ ಪ್ರೌಢಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ , ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕು ಲಕ್ಷ್ಮೇಶ್ವರ ವಲಯ ವ್ಯಾಪ್ತಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಸ್ವಾಸ್ಥ ಸಂಕಲ್ಪ ಕಾರ್ಯಕ್ರಮ ಆಯೋಜನೆ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ, ದುಶ್ಚಟಮುಕ್ತ ಸಮಾಜ ನಿರ್ಮಾಣಕ್ಕಾಗಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮದ್ಯವರ್ಜನ ಶಿಬಿರ ಮಹಿಳೆಯರಿಗಾಗಿ ಜ್ಞಾನ ವಿಕಾಸ ಕಾರ್ಯಕ್ರಮ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳ ಸಂಘದಿಂದ ನಡೆಯುತ್ತಾ ಬಂದಿವೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಲಕ್ಷ್ಮೇಶ್ವರ ಪೊಲೀಸ್ ಠಾಣೆಯ ಎಎಸ್‌ಐ ಮೀನಾಕ್ಷಿ ಮಟ್ಟಿ ಮಾತನಾಡಿ, ಮಕ್ಕಳು ಮಾದಕ ವಸ್ತುಗಳ ಬಳಕೆಯಿಂದಾಗಿ ಆರೋಗ್ಯ ಹಾಳಾಗುವುದಲ್ಲದೆ ಕೌಟುಂಬಿಕ ಮತ್ತು ಸಮಾಜದ ಸ್ವಾಸ್ಥ್ಯ ಕೆಟ್ಟುಹೋಗುತ್ತಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯೋಪಾಧ್ಯಾಯ ಬಿ.ಸಿ. ಪಟ್ಟೇದ್ ಮಾತನಾಡಿ, ಮಕ್ಕಳಿಗೆ ಚಿಕ್ಕಂದಿನಿಂದಲೇ ಮಾದಕ ವಸ್ತುಗಳ ಬಗ್ಗೆ, ಅದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ನೀಡಬೇಕು ಎಂದರು. ಶಾಲಾ ಮಕ್ಕಳಿಗೆ ದುಶ್ಚಟಗಳಿಂದ ಆಗುವ ಪರಿಣಾಮಗಳ ಬಗ್ಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಿ ಬಹುಮಾನ ವಿತರಿಸಲಾಯಿತು. ಶಾಲೆಯ ಸಹ ಶಿಕ್ಷಕರು, ಸೇವಾಪ್ರತಿನಿಧಿಗಳು ಉಪಸ್ಥಿತರಿದ್ದರು. ಎ.ಎಂ. ಅಕ್ಕಿ ನಿರೂಪಿಸಿದರು. ಎನ್.ಬಿ. ರಡ್ಡೇರ ವಂದಿಸಿದರು.



ವಾಹನ ಚಾಲನೆಯಲ್ಲಿ ಅಜಾಗರೂಕತೆ ಸಲ್ಲ



ಗದಗ: ಶಾಲಾ ಮಕ್ಕಳ ಸುರಕ್ಷಿತ ಸಂಚಾರಕ್ಕೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ ಶಹರ ವಲಯದ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳ ಶಾಲಾ ವಾಹನಗಳ ಚಾಲಕರು ಮತ್ತು ನಿರ್ವಾಹಕರ ಸಭೆಯನ್ನು ನಗರದ ಶಹರ ಸಂಪನ್ಮೂಲ ಕೇಂದ್ರದಲ್ಲಿ ನಡೆಸಲಾಯಿತು.

ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿ ಅರುಣಕುಮಾರ ಕಟ್ಟಿಮನಿ ಮಾತನಾಡಿ, ವಾಹನಗಳನ್ನು ಓವರ್‌ಟೇಕ್ ಮಾಡುವಾಗ ಅಥವಾ ಇತರ ವಾಹನಗಳನ್ನು ಹಿಂದಿಕ್ಕುವ ವೇಳೆ ಯಾವುದೇ ರೀತಿಯ ಅಜಾಗರೂಕತೆ ತೋರಬಾರದು. ರಸ್ತೆಗಳಲ್ಲಿ ನಿಯಮಬದ್ಧವಾಗಿ ವಾಹನ ಚಲಾಯಿಸುವುದು, ಮಕ್ಕಳ ಸುರಕ್ಷತೆಯನ್ನು ಮೊದಲ ಆದ್ಯತೆಯಾಗಿ ಪರಿಗಣಿಸಬೇಕು ಎಂದರು. ಶಾಲಾ ವಾಹನಗಳಲ್ಲಿ ಮಕ್ಕಳನ್ನು ನಿಗದಿತ ಆಸನ ಸಾಮರ್ಥ್ಯಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಕೂರಿಸಬಾರದು. ಶಾಲಾ ವಾಹನದ ವೇಗವನ್ನು ಗಂಟೆಗೆ 40 ಕಿ.ಮೀ. ಮಿತಿಯೊಳಗೆ ಇಟ್ಟುಕೊಳ್ಳಬೇಕು. ವಾಹನದ ಸೀಟುಗಳು, ಬಾಗಿಲುಗಳು ಹಾಗೂ ಲಾಕ್ ವ್ಯವಸ್ಥೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತಿರಬೇಕು. ವಾಹನಗಳ ಫಿಟ್ನೆಸ್ ಪ್ರಮಾಣಪತ್ರ, ವಿಮೆ ಹಾಗೂ ಇತರೆ ದಾಖಲೆಗಳನ್ನು ನಿಯಮಿತವಾಗಿ ನವೀಕರಿಸಿಕೊಂಡಿರಬೇಕು ಎಂದು ಸೂಚಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ. ಮುಂದಿನಮನಿ ಮಾತನಾಡಿ, ಶಾಲಾ ವಾಹನಗಳಲ್ಲಿ ಜಿಪಿಎಸ್ ವ್ಯವಸ್ಥೆ ಅಳವಡಿಕೆ ಕಡ್ಡಾಯವಾಗಿದ್ದು, ತುರ್ತು ಪರಿಸ್ಥಿತಿಗಳನ್ನು ಎದುರಿಸಲು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದರು. ಅಧಿಕಾರಿ ಎಸ್.ಸಿ. ಪ್ರಭಯ್ಯನಮಠ, ಎಸ್.ಆರ್. ನದಾಫ್, ಎಂ.ಎ. ಯರಗುಡಿ, ಮುರಳಿ ಸೋಲಾಪುರ ಇತರರಿದ್ದರು.

ಶಿಕ್ಷಕರು ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಲಿ

ನರಗುಂದ: ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಶಿಕ್ಷಕರು, ಪಾಲಕರು ಶ್ರಮಿಸಬೇಕು. ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಹೊರತೆಗೆಯಲು ಶಿಕ್ಷಕರು ಪ್ರಾಮಾಣಿಕವಾಗಿ ಶ್ರಮಿಸಬೇಕು ಎಂದು ಸಂಸ್ಥೆಯ ಕಾರ್ಯದರ್ಶಿ ಡಾ.ಪ್ರಭು ನಂದಿ ಹೇಳಿದರು.

ಪಟ್ಟಣದ ಲಯನ್ಸ್ ಶಿಕ್ಷಣ ಸಂಸ್ಥೆಯ ಲಯನ್ಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶನಿವಾರ 2026-27ನೇ ಸಾಲಿನ ಸಾಂಸ್ಕೃತಿಕ ಕ್ರೀಡಾ ಹಾಗೂ ವಿಜ್ಞಾನ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ನಗಾರಿ ಬಾರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನಿರ್ದೇಶಕ ಜಿ.ಟಿ.ಗುಡಿಸಾಗರ ನೂತನ ಸಂಸತ್ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು. ಶಾಲಾ ಸಂಸತ್‌ನ ಪ್ರಧಾನ ಮಂತ್ರಿಯಾಗಿ ಸುಜಯ ಕುಲಕರ್ಣಿ, ಶಿಕ್ಷಣ ಮಂತ್ರಿಯಾಗಿ ಶ್ರೇಯಾ ಸಾಲಿಗೌಡ್ರ, ಹಣಕಾಸು ಮಂತ್ರಿಯಾಗಿ ಧ್ರುವ ಕಮತಗಿ, ಕ್ರೀಡಾ ಮಂತ್ರಿಯಾಗಿ ಸುಜೀತ ರಾಮದುರ್ಗ, ಆರೋಗ್ಯ ಮಂತ್ರಿಯಾಗಿ ಸಾಹಿತ್ಯ ರೇವಡಿಗಾರ, ಸಾಂಸ್ಕೃತಿಕ ಮಂತ್ರಿಯಾಗಿ ಶ್ರೇಯಾ ಕವಲೂರು, ಶಿಸ್ತು ಮಂತ್ರಿಯಾಗಿ ಮಲ್ಲಪ್ಪ ಮೋರೆ, ಪ್ರವಾಸ ಮಂತ್ರಿಯಾಗಿ ರಕ್ಷಿತಾ ಸವದತ್ತಿ ಅವರು ಪ್ರಮಾಣ ವಚನ ಸ್ವೀಕರಿಸಿದರು. ಜಂಟಿ ಕಾರ್ಯದರ್ಶಿ ವಿಜಯಕುಮಾರ ಬೇಲೇರಿ, ನಿರ್ದೇಶಕ ಸಿ.ಎಸ್. ಸಾಲೂಟಗಿಮಠ, ಮುಖ್ಯೋಪಾಧ್ಯಾಯ ಜಿ.ಬಿ.ಹಿರೇಮಠ ಇದ್ದರು. ಡಾ.ಬಸವರಾಜ ಹಲಕುರ್ಕಿ ಸ್ವಾಗತಿಸಿದರು. ಶಿಕ್ಷಕಿಯರಾದ ಸೌಂದರ್ಯ ಪವಾರ, ಸೌಮ್ಯ ಹರಪನಹಳ್ಳಿ ನಿರೂಪಿಸಿದರು. ಮೇಘನಾ ಹಡಗಲಿಮಠ ವಂದಿಸಿದರು.



3,166 ಟಿಎಂಸಿ ಸಾಮರ್ಥ್ಯ | ಕೇವಲ 0.302 ಟಿಎಂಸಿ ಮಾತ್ರ ನೀರು

ಮುಂಗಾರು ವೈಫಲ್ಯಕ್ಕೆ ಬತ್ತಿದ 'ಭೀಮಾ'

▸ ರಾಚಪ್ಪಾ ಜಂಬಗಿ



ಕಲಬುರಗಿ: ರಾಜ್ಯಾದ್ಯಂತ ಮುಂಗಾರು ಮಳೆ ತೀವ್ರವಾಗಿ ಕೈಕೊಟ್ಟ ಪರಿಣಾಮ ಜಿಲ್ಲೆಯ ಜೀವನಾಡಿಯಾಗಿರುವ ಭೀಮಾ ನದಿ ಬಹುತೇಕ ಬರಿದಾಗಿದ್ದು, ರೈತರು ಹಾಗೂ ಜಾನುವಾರು ಸಾಕಾಣಿಕೆಯಲ್ಲಿ ತೊಡಗಿರುವ ಜನರಲ್ಲಿ ಆತಂಕ ಮನೆ ಮಾಡಿದೆ.

ಕಲಬುರಗಿ ಮತ್ತು ವಿಜಯಪುರ ಜಿಲ್ಲೆಗಳ ಪ್ರಮುಖ ನೀರಿನ ಮೂಲವಾಗಿರುವ ಭೀಮಾ ನದಿಯಲ್ಲಿ ಒಂದೇ ಒಂದು ಹನಿ ಮಳೆಯ ನೀರು ಹರಿಯದ ಸ್ಥಿತಿ ನಿರ್ಮಾಣವಾಗಿದೆ. ಜಿಲ್ಲೆಯ ಅಫಜಲಪುರ ತಾಲೂಕಿನ ಸೊನ್ನ ಗ್ರಾಮದ ಸಮೀಪ ಭೀಮಾ ನದಿ ಸಂಪೂರ್ಣ ಖಾಲಿಯಾಗಿರುವ ದೃಶ್ಯಗಳು ಸಂಕಷ್ಟಕ್ಕೆ ದೂಡಿ ನದಿಪಾತ್ರವು ಮರಳುಗಾಡಿನಂತೆ ಬದಲಾಗಿರುವುದು ಸ್ಥಳೀಯರನ್ನು ಆತಂಕಗೊಳಿಸಿದೆ. ನದಿಯಲ್ಲಿ ನೀರಿನ ಕೊರತೆಯಿಂದ ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸುವುದೇ ದೊಡ್ಡ ಸವಾಲಾಗಿ ಪರಿಣಮಿಸಿದೆ.ಜಾನುವಾರುಗಳನ್ನು ಕರೆದುಕೊಂಡು ನೀರಿಗಾಗಿ ಕಿಲೋ ಮೀಟರ್‌ಗಟ್ಟಲೆ ಅಲೆದಾಡುವ ಪರಿಸ್ಥಿತಿ ಗ್ರಾಮೀಣ ಭಾಗಗಳಲ್ಲಿ ನಿರ್ಮಾಣವಾಗಿದೆ.

ಭೀಮಾ ನದಿಗೆ ನೀರು ಸಂಗ್ರಹಿಸುವ ಪ್ರಮುಖ ಮೂಲವಾಗಿರುವ ಸೊನ್ನ ಬ್ಯಾರೇಜ್‌ನಲ್ಲೂ ನೀರಿನ ಮಟ್ಟ ಆತಂಕಕಾರಿ ಹಂತಕ್ಕೆ ಇಳಿದಿದೆ. 3.2 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿರುವ ಬ್ಯಾರೇಜ್‌ನಲ್ಲಿ ಪ್ರಸ್ತುತ ಕೇವಲ 0.28 ಟಿಎಂಸಿ ನೀರು ಮಾತ್ರ ಉಳಿದಿದೆ. ಇನ್ನೂ ಒಂದು ವಾರ ಇದೇ ಪರಿಸ್ಥಿತಿ ಮುಂದುವರಿದರೆ ಜಿಲ್ಲೆಯ ಹಲವೆಡೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಳ್ಳುವ ಸಾಧ್ಯತೆ ಇದೆ.

ನೀರಿನ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಹಾಗೂ ರೈತರು ಚಿಂತಿತರಾಗಿದ್ದು, ಭೀಮಾ ನದಿಯಲ್ಲಿನ ನೀರಿನ ಕೊರತೆಯಿಂದ ಕೃಷಿ ಚಟುವಟಿಕೆಗಳ ಮೇಲೆಯೂ ಪರಿಣಾಮ ಬೀರುವ ಸಾಧ್ಯತೆ ಇದ್ದು, ಮುಂಗಾರು ವೈಫಲ್ಯ ಜಿಲ್ಲೆಯ ಆರ್ಥಿಕ ಚಟುವಟಿಕೆಗಳ ಮೇಲೂ ಹೊಡೆತ ನೀಡುವ ಭೀತಿ ಎದುರಾಗಿದೆ.

'ಎಲ್ ನಿನೋ' ಪರಿಣಾಮ ಮಳೆ ಚೂರು ವಿಳಂಬವಾಗಿದೆ.ಮುಂಬರುವ ದಿನಗಳಲ್ಲಿ ಮಳೆ ಬಂದರೆ ಜನ ಜಾನುವಾರುಗಳಿಗೆ ಅನುಕೂಲದ ಜೊತೆಗೆ ಜಿಲ್ಲೆಯ ಎಲ್ಲ ಜಲಾಶಯಗಳ ನೀರಿನ ಸಾಮರ್ಥ್ಯ ಕೂಡ ಹೆಚ್ಚಾಗಲಿದೆ. ಎಲ್ ನಿನೋ ಇರುವುದರಿಂದ ನಾವೆಲ್ಲರೂ ಇರುವ ನೀರನ್ನು ಮಿತವಾಗಿ ಬಳಸಿ ಪೋಲಾಗದಂತೆ ಸದ್ಬಳಕೆ ಮಾಡಿಕೊಳ್ಳಬೇಕು.
■ **ಇಕ್ರಮ್ ಶರೀಫ್,** ಡಿಸಿ,ಕಲಬುರಗಿ

ಭೀಮೆ ಬತ್ತಲು ಮೂಲ ಕಾರಣ ಮಹಾರಾಷ್ಟ್ರದಿಂದ ಹಕ್ಕಿನ ನೀರು ಪಡೆಯುವಲ್ಲಿ ನಮಗೆ ಆಗದೇ ಇರುವುದು. ನಮ್ಮ ಹಕ್ಕಿನ 15 ಟಿಎಂಸಿ ನೀರನ್ನು ಸಹ ಅವರು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಮಹಾರಾಷ್ಟ್ರಕ್ಕೆ ನಮ್ಮ ರಾಜ್ಯ ಸರ್ಕಾರ ನಿಯೋಗ ತೆಗೆದುಕೊಂಡು ಹೋಗಿ ಭೀಮೆಯ ಪಾಲಿನ ನೀರು ಹರಿಸುವಂತೆ ಒತ್ತಡ ಹಾಕಬೇಕು. ಈ ಪ್ರಯತ್ನ ನಮ್ಮಿಂದ ಗಂಭೀರವಾಗಿ ಆಗದೇ ಇರುವುದು ದುರ್ದೈವ ಸಂಗತಿ.
■ **ಶಿವಕುಮಾರ್ ನಾಟೀಕರ್,** ಜೆಡಿಎಸ್ ಮುಖಂಡ

ಜಲಾಶಯಗಳ ಸ್ಥಿತಿಗತಿ
(25-06-2026)

ಜಲಾಶಯ	ಸಾಮರ್ಥ್ಯ	ಸಂಗ್ರಹ (ಟಿಎಂಸಿ)
ಅಮರಜಾ	1554 ಸಾಮರ್ಥ್ಯ	0.910
ಬೆಣ್ಣೆತೋರಾ	5,297 ಸಾಮರ್ಥ್ಯ	3,726
ಭೀಮಾ	3,166 ಸಾಮರ್ಥ್ಯ	0.302
ಚಂದ್ರಂಪಳ್ಳಿ	1,208 ಸಾಮರ್ಥ್ಯ	0.380
ಗಂಡೋರಿ	1,887 ಸಾಮರ್ಥ್ಯ	1,129
ಕೆಳ ಮುಲ್ಲಾಮಾರಿ	1,736 ಸಾಮರ್ಥ್ಯ	1,319

ಶೇ.12 ರಷ್ಟು ಮಾತ್ರ ಹೆಚ್ಚು ಮಳೆ

ಕಳೆದ ಜ.1ರಿಂದ ಜೂ.25ರ ವರೆಗೆ ಜಿಲ್ಲೆಯಾದ್ಯಂತ 156.2 ಮಿಮಿ ಮಳೆಯಾಗಬೇಕಿದ್ದು, 174.3 ಮಿಮಿ ಮಳೆಯಾಗಿದೆ ಅಂದ್ರೆ ಶೇ.12ರಷ್ಟು ಮಾತ್ರ ಹೆಚ್ಚಾಗಿದೆ. ಅದರಂತೆ ಅಫಜಲಪುರ-174.3 ಮಿಮಿ, ಆಳಂದ-156 ಮಿಮಿ,ಚಿಂಚೋಳಿ-147.3 ಮಿಮಿ,ಚಿತ್ತಾಪುರ-221.5 ಮಿಮಿ, ಜೇವರ್ಗಿ -138.6 ಮಿಮಿ,ಸೇಡಂ-249.4 ಮಿಮಿ,ಕಾಳಗಿ-219.3 ಮಿಮಿ, ಕಮಲಾಪುರ -167.3 ಮಿಮಿ, ಯಡ್ರಾಮಿ -137.5 ಮಿಮಿ ಹಾಗೂ ಶಹಾಬಾದ್ -172.5 ಮಿಮಿ ಮಳೆಯಾಗಿದೆ ಎಂದು ಕೃಷಿ ಇಲಾಖೆ ತಿಳಿಸಿದೆ.

ಕೈ ಕೊಟ್ಟ ಮಳೆ | ಆಕಾಶದತ್ತ ಅನ್ನದಾತರ ಚಿತ್ತ

ಒಣಗುತ್ತಿರುವ ಬೆಳೆ: ಹೆಚ್ಚಿದ ಆತಂಕ

▸ ಬಾಳಗೌಡ ಪಾಟೀಲ



ಬೆಳಗಾವಿ: ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಗ್ರಾಮೀಣ ಪ್ರದೇಶಗಳಲ್ಲಿ ರೈತರಲ್ಲಿ ತೀವ್ರ ಆತಂಕ ಮನೆ ಮಾಡಿದೆ. ಮಳೆಯನ್ನೇ ನಂಬಿ ಬದುಕುವ ಅನ್ನದಾತರು ಸಾಲ ಸೂಲ ಮಾಡಿ ಮುಂಗಾರು ಬೆಳೆಯ ಬಿತ್ತನೆ ಕಾರ್ಯ ಪೂರ್ಣಗೊಳಿಸಿದ್ದರೂ, ಸಮರ್ಪಕ ಮಳೆ ಕೊರತೆಯಿಂದ ಬೆಳೆಗಳು ಒಣಗುವ ಹಂತ ತಲುಪಿವೆ.

ಮುಂಗಾರು ಆರಂಭದಲ್ಲಿ ಉತ್ತಮ ಮಳೆಯ ನಿರೀಕ್ಷೆಯೊಂದಿಗೆ ಬೀಜ, ಗೊಬ್ಬರ ಹಾಗೂ ಕೂಲಿ ವೆಚ್ಚ ಮಾಡಿ ಬಿತ್ತನೆ ನಡೆಸಿದ್ದ ರೈತರು ಇದೀಗ ಮುಂದಿನ ದಾರಿ ಕಾಣದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರತಿದಿನ ಆಕಾಶದತ್ತ ದೃಷ್ಟಿ ನೆಟ್ಟು, ಇಂದಲ್ಲ ನಾಳೆ ಮಳೆ ಬರುತ್ತದೆ ಎಂಬ ಭರವಸೆಯೊಂದಿಗೆ ದಿನ ಕಳೆಯುತ್ತಿದ್ದಾರೆ.

ಕೃಷಿಗಾಗಿ ಮಾಡಿದ ಸಾಲ ಹೇಗೆ ತೀರಿಸಬೇಕು ಎಂಬ ಚಿಂತೆ ಕಾಡುತ್ತಿದೆ. ನೀರಾವರಿ ಸೌಲಭ್ಯಗಳ ಕೊರತೆ ಹಾಗೂ ಹವಾಮಾನ ವೈಪರೀತ್ಯದಿಂದ ಪರಿಸ್ಥಿತಿ ಮತ್ತಷ್ಟು ಗಂಭೀರವಾಗಿದೆ. ತುರ್ತು ಪರಿಹಾರ ಕ್ರಮಗಳು, ಬೆಳೆ ಹಾನಿ ಸಮೀಕ್ಷೆ, ಅಗತ್ಯ ಪರಿಹಾರಧನ ಹಾಗೂ ನೀರಾವರಿ ಸೌಲಭ್ಯ ವಿಸ್ತರಣೆಗೆ ರೈತರು ಒತ್ತಾಯಿಸಿದ್ದಾರೆ.

ಹವಾಮಾನ ಇಲಾಖೆ ಮುನ್ಸೂಚನೆ: ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ, ಮುಂದಿನ ಐದು ದಿನ ಕರ್ನಾಟಕದ ಬಹುತೇಕ ಭಾಗಗಳಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು ಮಾಹಿತಿ ನೀಡಿದ್ದು, ಪಶ್ಚಿಮ ದಿಕ್ಕಿನಿಂದ ಗಂಟೆಗೆ ಸುಮಾರು 13 ಮೈಲಿ ವೇಗದಲ್ಲಿ ಗಾಳಿ ಬೀಸುತ್ತಿದ್ದು, ಗಾಳಿಯಲ್ಲಿನ ಆರ್ದ್ರತೆ ಶೇ.67ರಷ್ಟಿದೆ. ಮುಂದಿನ ದಿನಗಳಲ್ಲಿ ತಾಪಮಾನ 26ರಿಂದ 29 ಡಿಗ್ರಿ ಸೆಲ್ಸಿಯಸ್ ನಡುವೆ ದಾಖಲಾಗುವ ನಿರೀಕ್ಷೆಯಿದ್ದು, ಆರ್ದ್ರತೆ ಶೇ.80ಕ್ಕಿಂತ ಹೆಚ್ಚಾಗುವ ಸಾಧ್ಯತೆ ಇದೆ.

ಜುಲೈ ಮೊದಲ ವಾರದವರೆಗೂ ರಾಜ್ಯದ ಹಲವು ಭಾಗಗಳಲ್ಲಿ ಮಳೆಯ ಅರ್ಭಟ ಮುಂದುವರಿಯುವ ಸಾಧ್ಯತೆ ಇರುವುದರಿಂದ, ಸಾರ್ವಜನಿಕರು ಹಾಗೂ ರೈತರು ಅಗತ್ಯ ಮುನ್ನೆಚ್ಚರಿಕೆಗಳನ್ನು ವಹಿಸುವಂತೆ ಸೂಚಿಸಿದೆ.

ಜುಲೈ ಮೊದಲ ವಾರದವರೆಗೂ ರಾಜ್ಯದ ಹಲವು ಭಾಗಗಳಲ್ಲಿ ಮಳೆಯ ಅರ್ಭಟ ಮುಂದುವರಿಯುವ ಸಾಧ್ಯತೆ ಇರುವುದರಿಂದ, ಸಾರ್ವಜನಿಕರು ಹಾಗೂ ರೈತರು ಅಗತ್ಯ ಮುನ್ನೆಚ್ಚರಿಕೆಗಳನ್ನು ವಹಿಸುವಂತೆ ಭಾರತೀಯ ಹವಾಮಾನ ಇಲಾಖೆ ಸಲಹೆ ನೀಡಿದೆ. ಸೋಯಾಬಿನ್ ಬೆಳೆಯಲ್ಲಿ ಕೆಲವೆಡೆ ರೋಗ ಹಾಗೂ ಕೀಟಬಾಧೆ ಕಂಡು ಬಂದಿದ್ದು,ಅಗತ್ಯ ಔಷಧಿ ಸಿಂಪಡಿಸಲು ರೈತರಿಗೆ ಸಲಹೆ ನೀಡಲಾಗಿದೆ.
■ **ಡಾ.ಎಚ್.ಡಿ. ಕೋಳೇಕರ್,** ಕೃಷಿ ಇಲಾಖೆ ಜಂಟಿ ನಿರ್ದೇಶಕರು

ಬಿತ್ತನೆ ಬೀಜ, ಗೊಬ್ಬರ, ಭೂಮಿ ಹದಗೊಳಿಸುವುದಕ್ಕೆ ಸಾಲ ಸೂಲ ಮಾಡಿ ಸಾಕಷ್ಟು ಖರ್ಚು ಮಾಡಿದ್ದೇವೆ. ಮುಂಗಾರು ಬೆಳೆಗಳಿಗೆ ಇದೀಗ ಉತ್ತಮವಾದ ಮಳೆಯ ಅವಶ್ಯಕತೆ ಇದೆ. ಈಗಾಗಲೇ ಮುಂಗಾರಿ ಬೆಳೆಗಳು ಕೀಟಬಾಧೆ, ಹಾಗೂ ಬಿಸಿಲಿನ ತಾಪಮಾನಕ್ಕೆ ನಾಶವಾಗಿವೆ. ಇದೇ ರೀತಿ ಇನ್ನು ಒಂದು ವಾರ ಮಳೆಯಾಗದೆ ಇದ್ದರೆ ಬೆಳೆ ನಾಶವಾಗುತ್ತವೆ.
■ **ಬಸಯ್ಯಾ ಹಿರೇಮಠ,** ಗಣ್ಣಿಕೊಪ್ಪ ಗ್ರಾಮದ ಪ್ರಗತಿಪರ ರೈತ

ಮುಂದಿನ 5 ದಿನ ವ್ಯಾಪಕ ಮಳೆ

ಕರಾವಳಿ, ಮಲೆನಾಡಿಗೆ ಯೆಲ್ಲೋ ಅಲರ್ಟ್



ಬೆಳಗಾವಿ: ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ, ಮುಂದಿನ ಐದು ದಿನ ಕರ್ನಾಟಕದ ಬಹುತೇಕ ಭಾಗಗಳಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ ಭಾರೀ ಮಳೆಯ ಮುನ್ಸೂಚನೆ ನೀಡಿರುವ ಇಲಾಖೆ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಿಸಿದೆ.

ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ ಸೇರಿದಂತೆ ಹಲವು ಜಿಲ್ಲೆಗಳು ಮತ್ತು ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಜೂನ್ 28 ಮತ್ತು 29ರಂದು ಸಾಧಾರಣದಿಂದ ಭಾರೀ ಮಳೆಯಾಗುವ ಸಾಧ್ಯತೆ ಇದ್ದು, ಮಳೆಯ ಪ್ರಮಾಣವು ಶೇ.65ರಷ್ಟು ಇರಬಹುದೆಂದು ಇಲಾಖೆ ತಿಳಿಸಿದೆ.

ಪ್ರಸ್ತುತ ಹಗಲಿನ ವೇಳೆಯಲ್ಲಿ ಪಶ್ಚಿಮ ದಿಕ್ಕಿನಿಂದ ಗಂಟೆಗೆ ಸುಮಾರು 13 ಮೈಲಿ ವೇಗದಲ್ಲಿ ಗಾಳಿ ಬೀಸುತ್ತಿದ್ದು, ಗಾಳಿಯಲ್ಲಿನ ಆರ್ದ್ರತೆ ಶೇ.67ರಷ್ಟಿದೆ. ಮುಂದಿನ ದಿನಗಳಲ್ಲಿ ತಾಪಮಾನವು 26 ರಿಂದ 29 ಡಿಗ್ರಿ ಸೆಲ್ಸಿಯಸ್ ನಡುವೆ ದಾಖಲಾಗುವ ನಿರೀಕ್ಷೆಯಿದ್ದು, ಆರ್ದ್ರತೆ ಶೇಕಡಾ 80ಕ್ಕಿಂತ ಹೆಚ್ಚಾಗುವ ಸಾಧ್ಯತೆ ಇದೆ.

ಜುಲೈ ಮೊದಲ ವಾರದವರೆಗೂ ರಾಜ್ಯದ ಹಲವು ಭಾಗಗಳಲ್ಲಿ ಮಳೆಯ ಅರ್ಭಟ ಮುಂದುವರಿಯುವ ಸಾಧ್ಯತೆ ಇರುವುದರಿಂದ, ಸಾರ್ವಜನಿಕರು ಹಾಗೂ ರೈತರು ಅಗತ್ಯ ಮುನ್ನೆಚ್ಚರಿಕೆಗಳನ್ನು ವಹಿಸುವಂತೆ ಭಾರತೀಯ ಹವಾಮಾನ ಇಲಾಖೆ ಸಲಹೆ ನೀಡಿದೆ.

ಒಂದೇ ಕುಟುಂಬದ ಐವರು ಸೇರಿ 6 ಜನರ ಸಾವು

ಮಂತ್ರಾಲಯಕ್ಕೆ ಹೊರಟವರು ಮಸಣಕ್ಕೆ!



ಹಾವೇರಿ: ಮಂತ್ರಾಲಯಕ್ಕೆ ಹೊರಟ ಕುಟುಂಬವೊಂದು ರಾಯರ ದರ್ಶನಕ್ಕೂ ಮುನ್ನವೇ ಶವವಾಗಿ ಮನೆಗೆ ವಾಪಾಸಾದ ಹೃದಯ ವಿದ್ರಾವಕ ಘಟನೆ ನಡೆದಿದೆ. ಈ ಮಾಹಿತಿ ತಿಳಿದ ಕುಟುಂಬಸ್ಥರಿಗೆ ಬರಸಿಡಿಲು ಬಡಿದಂತಾಗಿ ಮನೆಯಲ್ಲಿದ್ದ ಸಂತಸದ ಕ್ಷಣಗಳು ಕ್ಷಣಾರ್ಧದಲ್ಲಿ ಕಣ್ಣೀರು ಮತ್ತು ಆಕ್ರಂದನಕ್ಕೆ ತಿರುಗಿದವು.

ನಗರದ ಲೋಕೋಪಯೋಗಿ ಇಲಾಖೆ ವಸತಿ ಗೃಹದಲ್ಲಿ ವಾಸವಿದ್ದ ಪ್ರವೀಣ ಬಾಳೀಕಾಯಿ ಅವರ ಕುಟುಂಬದ ಒಂಬತ್ತು ಮಂದಿ ಮಂತ್ರಾಲಯ ಯಾತ್ರೆಗೆ ಓಮಿನಿ ವಾನದಲ್ಲಿ ಹೊರಟಿದ್ದರು. ಆದರೆ, ಕೊಪ್ಪಳ ಜಿಲ್ಲೆಯ ಕುಕನೂರ ತಾಲೂಕಿನ ಬಾನಾಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಒಂದೇ ಕುಟುಂಬದ ಐವರು ಸೇರಿದಂತೆ 6 ಜನರು ಮೃತಪಟ್ಟಿದ್ದಾರೆ. ಈ ಸುದ್ದಿ ಶನಿವಾರ ಹಾವೇರಿಗೆ ತಲುಪುತ್ತಿದ್ದಂತೆಯೇ ಅವರ ಕುಟುಂಬದಲ್ಲಿ ಆಕ್ರಂದನ ಮುಗಿಲು ಮುಟ್ಟಿತು.

ಮೃತರನ್ನು ಹಾವೇರಿ ಲೋಕೋಪಯೋಗಿ ಇಲಾಖೆಯ ಸಿಬ್ಬಂದಿ ಪ್ರವೀಣ ಬಾಳಿಕಾಯಿ (40), ಅವರ ಪತ್ನಿ ಹೇಮಾ (ಕೆಂಚಮ್ಮ) ಬಾಳಿಕಾಯಿ (36), ಪುತ್ರ ಚಿನ್ಮಯ (16), ಸಂಬಂಧಿಯಾದ ರಟ್ಟಿಹಳ್ಳಿ ತಾಲೂಕಿನ ಹಿರೇಕಬ್ಬಾರದ ಅಮೃತಾ ಕೋಟಿಹಾಳ (25) ಅಮೃತಾ ಅವರ ಪುತ್ರ ಪ್ರಣವ್ (10) ಹಾಗೂ ಕಾರು ಚಾಲಕ ಹಾವೇರಿ ಶಿವಾಜಿನಗರದ ರಮೇಶ ಬಳ್ಳಾರಿ (45) ಎಂದು ಗುರುತಿಸಲಾಗಿದೆ.

ಅಪಘಾತದಲ್ಲಿ ಪ್ರವೀಣ-ಹೇಮಾ ದಂಪತಿಯ 12 ವರ್ಷದ ಪುತ್ರಿ ಸೋನಾಲಿಕಾ, ಅಮೃತಾ ಅವರ ಪತಿ ಪ್ರವೀಣ ಕೋಟಿಹಾಳ ಮತ್ತೊಬ್ಬ ವ್ಯಕ್ತಿ ಸೇರಿದಂತೆ ಮೂವರು ಗಂಭೀರವಾಗಿ ಗಾಯಗೊಂಡಿದ್ದು ಹುಬ್ಬಳ್ಳಿಯ ಕಿಮ್ಸ್‌ಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಪ್ರವೀಣ ಬಾಳೀಕಾಯಿ ಅವರ ಮನೆಯ ಮುಂದೆ ಬೆಳಗಿನಿಂದಲೇ ಬಂಧು-ಬಳಗ, ಸ್ನೇಹಿತರು ಹಾಗೂ ನೆರೆಹೊರೆಯವರು ಜಮಾಯಿಸಿದ್ದರು. ಆದರೆ, ಮನೆಯೊಳಗೆ ಕೇಳಿ ಬರುತ್ತಿದ್ದದ್ದು ಕೇವಲ ರೋಧನ ಅಲ್ಲಿದ್ದ ಪ್ರತಿಯೊಬ್ಬರ ಕಣ್ಣಾಲಿಗಳನ್ನು ತೇವಗೊಳಿಸಿತು. ದುಃಖದಿಂದ ಕುಸಿದ ಕುಟುಂಬದವರಿಗೆ ಸಾಂತ್ವನ ಹೇಳಲು ಬಂದವರ ಹೃದಯ ಭಾರವಾದವು.

ಇನ್ನೊಂದೆಡೆ, ಅಪಘಾತದಲ್ಲಿ ಮೃತಪಟ್ಟ ಕಾರು ಚಾಲಕ ರಮೇಶ್ ಬಳ್ಳಾರಿ ಅವರ ಶಿವಾಜಿನಗರದ ನಿವಾಸದಲ್ಲಿಯೂ ಅದೇ ನೋವಿನ ಚಿತ್ರಣ ಕಂಡುಬಂತು. ಮನೆಯ ಸದಸ್ಯರ ಆಕ್ರಂದನ, ಬಂಧುಗಳ ಕಣ್ಣೀರು, ನೆರೆಹೊರೆಯವರ ಮೌನ ಎಲ್ಲವೂ ಆ ದುರಂತದ ತೀವ್ರತೆಯನ್ನು ಹೇಳುತ್ತಿತ್ತು.

ರಟ್ಟೀಹಳ್ಳಿ ತಾಲೂಕಿನ ಹಿರೇಕಬ್ಬಾರ ಗ್ರಾಮದಲ್ಲೂ ಇದೇ ಅವಘಡದಲ್ಲಿ ಅಮೃತಾ ಕೋಟಿಹಾಳ ಹಾಗೂ ಪುತ್ರ ಪ್ರಣವ್ ಯಾತ್ರೆಗೆ ತೆರಳಿ ಮರಳಿ ಬಾರದ ಸುದ್ದಿಯಿಂದ ಇಡೀ ಗ್ರಾಮವೇ ಮೌನವಾಗಿತ್ತು. ಪತಿ ಪ್ರವೀಣ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಕುಟುಂಬದವರು ಅವರ ಚೇತರಿಕೆಗೆ ಪ್ರಾರ್ಥಿಸುತ್ತಿದ್ದಾರೆ.

ರೈತರ ಮುಖದಲ್ಲಿ ಮಂದಹಾಸ



ಜಮೀನಿನಲ್ಲಿ ಮಳೆ ನೀರು

ಕಳೆದ ಒಂದು ತಿಂಗಳಿನಿಂದ ಮಳೆಯ ಆಗಮನಕ್ಕಾಗಿ ಕಾಯುತ್ತಿದ್ದ ಜಿಲ್ಲೆಯ ರೈತರಿಗೆ ಶನಿವಾರ ಸುರಿದ ಮಳೆ ಕೊಂಚ ನಿಟ್ಟುಸಿರು ಬಿಡುವಂತೆ ಮಾಡಿದ್ದು, ಕಲಬುರಗಿ ಹುಣಸಿಹಡಗಿಲ ಗ್ರಾಮದ ಹೊಲದಲ್ಲಿ ನೀರು ನಿಂತಿದ್ದು ಮಂದಹಾಸ ಮೂಡಿಸಿದೆ.

ಕಲಬುರಗಿ: ಮುಂಗಾರು ಮಳೆಯ ನಿರೀಕ್ಷೆಯಲ್ಲಿ ಕಾದು ಕುಳಿತಿದ್ದ ಜಿಲ್ಲೆಯ ರೈತರಿಗೆ ಶನಿವಾರ ಮಧ್ಯಾಹ್ನ ಸುರಿದ ಮಳೆ ಸಂತಸ ತಂದಿದೆ.

ಹಲವು ದಿನಗಳಿಂದ ಮಳೆಯ ಕೊರತೆಯಿಂದ ಕಂಗಾಲಾಗಿದ್ದ ರೈತರು ಮೊದಲ ಉತ್ತಮ ಮಳೆಯ ಸಿಂಚನದಿಂದ ಹೊಸ ಉತ್ಸಾಹ ಕಂಡಿದ್ದಾರೆ.

ನಗರ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸುಮಾರು ಒಂದು ಗಂಟೆಗೂ ಅಧಿಕ ಕಾಲ ಮಳೆಯಾಗಿದ್ದು, ವರುಣನ ಆಗಮನದಿಂದ ಬಿತ್ತನೆ ಮಾಡಿದ್ದ ರೈತರಲ್ಲಿ ಆಶಾಭಾವನೆ ಮೂಡಿದೆ.

ಮುಂಗಾರು ಕೈಕೊಟ್ಟ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಕೃಷಿ ಚಟುವಟಿಕೆಗಳು ಕುಂಠಿತಗೊಂಡಿದ್ದವು. ಆದರೆ, ಶನಿವಾರ ಸುರಿದ ಮಳೆಯಿಂದ ಕೃಷಿ ಚಟುವಟಿಕೆಗಳಿಗೆ ಚೈತನ್ಯ ದೊರೆತಿದೆ. ತಾಲೂಕಿನ ಹುಣಸಿ ಹಡಗಿಲ, ಭೀಮಳ್ಳಿ, ಸಾವಳಗಿ, ಪಟ್ಟಣ ಸೇರಿದಂತೆ ಜಿಲ್ಲೆಯ ಆಳಂದ, ಅಫಜಲಪುರ, ಚಿಂಚೋಳಿ, ಸೇಡಂ ಹಾಗೂ ಜಿಲ್ಲೆಯ ಹಲವೆಡೆ ಉತ್ತಮ ಮಳೆಯಾಗಿದೆ. ಮುಂಗಾರು ಬೆಳೆಗಳನ್ನು ಬಿತ್ತನೆ ಮಾಡಿದ್ದ ರೈತರು ಮಳೆಯ ನಿರೀಕ್ಷೆಯಲ್ಲಿದ್ದರೆ, ಇದೀಗ ಮೊದಲ ಮಳೆಯೊಂದಿಗೆ ಬೆಳೆಗಳ ಬೆಳವಣಿಗೆ ಬಗ್ಗೆ ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ.

ಮಳೆಯ ಕೊರತೆಯಿಂದ ಆತಂಕಗೊಂಡಿದ್ದ ರೈತರ ಮುಖದಲ್ಲಿ ಇದೀಗ ಮಂದಹಾಸ ಮೂಡಿದ್ದು, ಮುಂದಿನ ದಿನಗಳಲ್ಲಿಯೂ ಉತ್ತಮ ಮಳೆಯಾಗಲಿ ಎಂಬ ಆಶಯ ವ್ಯಕ್ತವಾಗಿದೆ. ಜಿಲ್ಲೆಯ ಜನತೆಗೆ ಬಿಸಿಲಿನ ತಾಪ ದಿಂದಲೂ ಸ್ವಲ್ಪ ಮಟ್ಟಿನ ನೆಮ್ಮದಿ ದೊರೆತಿದೆ.

ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ

ಹಾವೇರಿ: ನಗರದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣಕ್ಕೆ ಶನಿವಾರ ಮಧ್ಯಾಹ್ನ ಅನಾಮಧೇಯ ಇಮೇಲ್ ಬಾಂಬ್ ಬೆದರಿಕೆ ಹಿನ್ನೆಲೆಯಲ್ಲಿ ಕೋರ್ಟ್ ಕಲಾಪಗಳನ್ನು ಮೊಟಕುಗೊಳಿಸಿದ ಘಟನೆ ನಡೆದಿದೆ.

ಮಧ್ಯಾಹ್ನ 1ರಿಂದ 2 ಗಂಟೆಯ ಅವಧಿಯ ನಡುವೆ ಇಮೇಲ್ ಬಂದ ತಕ್ಷಣ ಕೋರ್ಟ್ ಸಿಬ್ಬಂದಿಗಳು ನ್ಯಾಯವಾದಿಗಳು ಮತ್ತು ಕಕ್ಷಿದಾರರನ್ನು ಕೋರ್ಟ್ ಆವರಣದಿಂದ ಹೊರ ಕಳುಹಿಸಿ ಪೊಲೀಸರಿಗೆ ಮಾಹಿತಿ ನೀಡಿದರು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಶ್ವಾನದಳ ಹಾಗೂ ಬಾಂಬ್ ಸ್ಕ್ವಾಡ್ ತಂಡಗೊಂದಿಗೆ ಆಗಮಿಸಿ ಕೋರ್ಟ್ ಆವರಣವನ್ನು ಸಮಗ್ರವಾಗಿ ಪರಿಶೀಲನೆಗೊಳಪಡಿಸಿದರು. ನಂತರ ಹುಸಿ ಕರೆ ಎಂದು ತಿಳಿಸಿದ ನಂತರ ಆತಂಕಿತರಾಗಿದ್ದ ಕೋರ್ಟ್ ಸಿಬ್ಬಂದಿ, ನ್ಯಾಯವಾದಿಗಳು ಮತ್ತು ಕಕ್ಷಿದಾರರು ನಿಟ್ಟುಸಿರು ಬಿಟ್ಟರು.

ಹುಸಿ ಕರೆ ಎಂದು ಘೋಷಣೆ ಮಾಡುತ್ತಿದ್ದಂತೆಯೇ ಮಧ್ಯಾಹ್ನದ ನಂತರ ನ್ಯಾಯವಾದಿಗಳು ಮತ್ತು ಕಕ್ಷಿದಾರರನ್ನು ಕೋರ್ಟ್‌ಕಲಾಪಗಳಿಗೆಕರೆದೊಯ್ಯುವಮೂಲಕ ಕಲಾಪಗಳನ್ನು ಮುಂದುವರಿಸಲಾಯಿತು.

ಎರಡು ತಿಂಗಳ ಹಿಂದೆಕೂಡ ಇದೇ ರೀತಿ ಹುಸಿ ಬಾಂಬ್ ಕರೆಯ ಮೇಲ್ ಬಂದಿದ್ದು, ಆಗಲೂ ಸಹ ಇದೇ ರೀತಿ ತಪಾಸಣೆ ನಡೆಸಿ, ಹುಸಿ ಕರೆ ಖಚಿತಗೊಳ್ಳುತ್ತಿದ್ದಂತೆಯೇ ನಿರಾಳರಾಗಿದ್ದರು. ಒಟ್ಟಾರೆ 2-3 ತಿಂಗಳ ಅಂತರದಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ ಇದು ಎರಡನೇ ಹುಸಿ ಬಾಂಬ್ ಬೆದರಿಕೆ ಕರೆ ಎನ್ನಲಾಗಿದೆ.

ಗೃಹ ರಕ್ಷಕ ಸಿಬ್ಬಂದಿ ಮನೆ, ಬೈಕ್‌ಗೆ ಬೆಂಕಿ

ಮಸ್ಕಿ: ತಾಲೂಕಿನ ಬೆನಕನಾಳ ಗ್ರಾಮ ದಲ್ಲಿ ತಡರಾತ್ರಿ ಭೀಕರ ಘಟನೆಯೊಂ ದು ಸಂಭವಿಸಿದ್ದು, ಗೃಹ ರಕ್ಷಕ (ಹೋಂ ಗಾರ್ಡ್) ಸಿಬ್ಬಂದಿಯೊಬ್ಬರ ಮನೆ ಹಾಗೂ ದ್ವಿಚಕ್ರ ವಾಹನಕ್ಕೆ ದುಷ್ಕರ್ಮಿಗಳು ಬೆಂಕಿ ಹಚ್ಚಿ ವಿಕೃತಿ ಮೆರೆದಿದ್ದಾರೆ.

ಘಟನೆಯ ವಿವರ: ಬೆನಕನಾಳ ಗ್ರಾಮದ ನಿವಾಸಿಯಾದ, ನಾಗಪ್ಪ ಅವರ ಪುತ್ರ ನರಸಿಂಹ ನಾಯಕ್ ಅವರು ಗೃಹ ರಕ್ಷಕರ ದಳದಲ್ಲಿ (ಹೋಂ ಗಾರ್ಡ್) ಸೇವೆ ಸಲ್ಲಿಸುತ್ತಿದ್ದಾರೆ. ಎಂದಿನಂತೆ ರಾತ್ರಿ ಮನೆಯವರು ಮಲಗಿದ್ದ ವೇಳೆ ಬಂದ ಮುಸುಕುಧಾರಿ ಅಥವಾ ಅಪರಿಚಿತ ದುಷ್ಕರ್ಮಿಗಳು, ಇವರ ಮನೆ ಹಾಗೂ ಹೊರಗಡೆ ನಿಲ್ಲಿಸಲಾಗಿದ್ದ ಬೈಕ್‌ಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ ಎನ್ನಲಾಗಿದೆ.

ಬೆಂಕಿಯ ಜ್ವಾಲೆ ತೀವ್ರವಾಗಿದ್ದರಿಂದ ನರಸಿಂಹ ನಾಯಕ್ ಅವರಿಗೆ ಸೇರಿದ ಬೈಕ್ ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದು,ಮನೆಗೂ ಕೂಡ ಭಾರೀ ಹಾನಿಯಾಗಿದೆ. ತಡರಾತ್ರಿ ಬೆಂಕಿ ಹೊತ್ತಿ ಉರಿಯುತ್ತಿರುವುದನ್ನು ಗಮನಿಸಿದ ಕುಟುಂಬಸ್ಥರು ಹಾಗೂ ಸ್ಥಳೀಯರು ತಕ್ಷಣ ಎಚ್ಚೆತ್ತುಕೊಂಡು ಬೆಂಕಿ ನಂದಿಸಲು ಯತ್ನಿಸಿದ್ದರಿಂದ ದೊಡ್ಡ ಮಟ್ಟದ ಪ್ರಾಣಾಪಾಯವೊಂದು ಕೂದಲೆಳೆಯ ಅಂತರದಲ್ಲಿ ತಪ್ಪಿದಂತಾಗಿದೆ.

ಕಾನೂನು ಸುವ್ಯವಸ್ಥೆ ಕಾಪಾಡಲು ನೆರವಾಗುವ ಗೃಹರಕ್ಷಕ ಸಿಬ್ಬಂದಿಯ ಮನೆಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿರುವುದು ಬೆನಕನಾಳ ಗ್ರಾಮದಲ್ಲಿ ತೀವ್ರ ಆತಂಕ ಹಾಗೂ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಹಳೇ ವೈಷಮ್ಯ ಅಥವಾ ಇನ್ನಾವುದೋ ಕಾರಣಕ್ಕೆ ಈ ಕೃತ್ಯ ಎಸಗಲಾಗಿದೆಯೇ ಎಂಬ ಸಂಶಯ ವ್ಯಕ್ತವಾಗಿದೆ. ಸ್ಥಳಕ್ಕೆ ಮಸ್ಕಿ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದು, ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಬಲೆ ಬೀಸಿದ್ದಾರೆ.

ಜೆಸಿಬಿಯಿಂದ ರೈತರು, ಕಾರ್ಮಿಕರ ರಕ್ಷಣೆ

ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲೂಕಿನ ನೀಲೂರ ಗ್ರಾಮದ



ಗೊಬ್ಬೂರ ಹಳ್ಳದಲ್ಲಿ ಧಾರಾಕಾರ ಮಳೆಯಿಂದಾಗಿ ಪ್ರವಾಹ ಉಂಟಾಗಿ, ನೀರಿನ ಮಟ್ಟ ಏರಿಕೆಯಾಗಿದ್ದರಿಂದ ಕೆಲ ರೈತರು ಹಾಗೂ ಕೂಲಿ ಕಾರ್ಮಿಕರು ಸಿಲುಕಿಕೊಂಡ ಘಟನೆ ಶನಿವಾರ ನಡೆದಿದೆ. ಪ್ರವಾಹದ ನೀರು ವೇಗವಾಗಿ ಹರಿಯುತ್ತಿದ್ದ ಕಾರಣ ದಡಕ್ಕೆ ಬರಲು ಸಾಧ್ಯವಾಗದೇ ಸಂಕಷ್ಟಕ್ಕೆ ಸಿಲುಕಿದ್ದವರನ್ನು ಸ್ಥಳೀಯರ ಸಹಕಾರದೊಂದಿಗೆ ಜೆಸಿಬಿ ಯಂತ್ರದ ನೆರವಿನಿಂದ ಸುರಕ್ಷಿತವಾಗಿ ರಕ್ಷಿಸಿ ದಡಕ್ಕೆ ಕರೆತಂದ ಘಟನೆ ನಡೆದಿದೆ.ಸಮಯೋಚಿತವಾಗಿ ಕೈಗೊಂಡ ರಕ್ಷಣಾ ಕಾರ್ಯದಿಂದ ಯಾವುದೇ ಅನಾಹುತ ಸಂಭವಿಸದೇ ಎಲ್ಲ ಕೂಲಿ ಕಾರ್ಮಿಕರು ಸುರಕ್ಷಿತರಾಗಿದ್ದಾರೆ. ಪ್ರಕೃತಿಯ ರೌದ್ರ ರೂಪದ ನಡುವೆಯೂ ಮಾನವೀಯತೆ ಮೆರೆದ ಈ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು.

ಅತ್ಯಾಧುನಿಕ ತಂತ್ರಜ್ಞಾನ ಬಳಸಿದ ಹಾರೂಗೇರಿ ಪೊಲೀಸರು

ಕಾಣೆಯಾಗಿದ್ದ ವ್ಯಕ್ತಿ ಆರು ವರ್ಷಗಳ ಬಳಿಕ ಪತ್ತೆ!



ಬೆಳಗಾವಿ: ಜಿಲ್ಲೆಯ ಹಾರೂಗೇರಿ ಪಟ್ಟಣದಲ್ಲಿ 2020ರಲ್ಲಿ ದಾಖಲಾಗಿದ್ದ ಕಾಣೆಯಾದ ವ್ಯಕ್ತಿಯ ಪ್ರಕರಣವನ್ನು ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದ ಭೇದಿಸುವಲ್ಲಿ ಬೆಳಗಾವಿ ಜಿಲ್ಲೆಯ ಹಾರೂಗೇರಿ ಪೊಲೀಸ್ ಠಾಣೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಜಮಖಂಡಿ ತಾಲೂಕಿನ ಹುನ್ನೂರು ಗ್ರಾಮದ ನಿವಾಸಿ ಗುರುಪಾದ ಸಿದ್ರಾಮಪ್ಪ ಇಂಚಗೇರಿ, 2020ರ ಮೇ 19ರಂದು ತಮ್ಮ ಪತ್ನಿಯ ತವರು ಮನೆ ರಾಯಬಾಗ ತಾಲೂಕಿನ ಹಿಡಕಲ್ ಗ್ರಾಮಕ್ಕೆ ಬಂದಿದ್ದ ವೇಳೆ ಯಾರಿಗೂ ತಿಳಿಸದೇ ಮನೆಯಿಂದ ತೆರಳಿದ್ದರು. ಬಳಿಕ ಅವರು ಪತ್ತೆಯಾಗದ ಹಿನ್ನೆಲೆಯಲ್ಲಿ ಅವರ ಪತ್ನಿ ಭಾರತಿ ಗುರುಪಾದ ಇಂಚಗೇರಿ ಅವರು 2020ರ ಜೂನ್ 18ರಂದು ಹರೂಗೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಅಪರಾಧ ಸಂಖ್ಯೆ 102/2020ರಡಿ ಕಾಣೆಯಾದ ವ್ಯಕ್ತಿಯ ಪ್ರಕರಣ ದಾಖಲಾಗಿತ್ತು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರಂಭದಲ್ಲಿ ವ್ಯಾಪಕ ಶೋಧ ಕಾರ್ಯ ನಡೆಸಿದರೂ ಯಾವುದೇ ಸುಳಿವು ದೊರೆಯದ ಕಾರಣ ಪ್ರಕರಣವನ್ನು ತಾತ್ಕಾಲಿಕವಾಗಿ 'ಸಿ ನಾಪತ್ತೆ' ಎಂದು ಮುಕ್ತಾಯಗೊಳಿಸಲಾಗಿತ್ತು.

ಇತ್ತೀಚೆಗೆ ಹಾರೂಗೇರಿ ಠಾಣೆಯ ಪೊಲೀಸರು ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಪ್ರಕರಣ ಮರುಪರಿಶೀಲನೆ ನಡೆಸಿದಾಗ, ಕಾಣೆಯಾಗಿದ್ದ ಗುರುಪಾದ ಇಂಚಗೇರಿ ಅವರು ವಿಜಯಪುರದಲ್ಲಿ ವಾಸಿಸುತ್ತಿರುವುದು ಪತ್ತೆಯಾಯಿತು. ವಿಚಾರಣೆ ವೇಳೆ ಅವರು ಪತ್ನಿಯೊಂದಿಗೆ ಉಂಟಾದ ಮನಸ್ತಾಪದಿಂದ ಮನೆ ಬಿಟ್ಟು ಬಂದಿರುವುದಾಗಿ ತಿಳಿಸಿದ್ದಾರೆ.

ಈ ಕಾರ್ಯಾಚರಣೆ ಬೆಳಗಾವಿ ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ರಾಮರಾಜನ್ (ಐಪಿಎಸ್), ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್.ಬಿ.ಬಸರಗಿ, ಅಥಣಿ ಉಪವಿಭಾಗದ ಪೊಲೀಸ್ ಉಪಾಧೀಕ್ಷಕ ಪ್ರಶಾಂತ ಮುನ್ನೊಳ್ಳಿ ಹಾಗೂ ಹಾರೂಗೇರಿ ವೃತ್ತದ ಸಿಪಿಐ ರತ್ನಕುಮಾರ ಜೀರಗ್ಯಾಳ ಅವರ ಮಾರ್ಗದರ್ಶನದಲ್ಲಿ ನಡೆಯಿತು.

ಹಾರೂಗೇರಿ ಪೊಲೀಸ್ ಠಾಣೆಯ ಪಿಎಸ್ಐ (ಕಾನೂನು ಮತ್ತು ಸುವ್ಯವಸ್ಥೆ) ಮಳಪ್ಪ ಪೂಜಾರಿ ಅವರ ನೇತೃತ್ವದಲ್ಲಿ ಸಿಬ್ಬಂದಿಗಳಾದ ಸಿದ್ದು ಪಾಟೀಲ ಹಾಗೂ ರಮೇಶ್ ಮುಂದಿನಮನಿ ವಿಜಯಪುರಕ್ಕೆ ತೆರಳಿ ಕಾಣೆಯಾಗಿದ್ದ ವ್ಯಕ್ತಿಯನ್ನು ಯಶಸ್ವಿಯಾಗಿ ಪತ್ತೆ ಹಚ್ಚಿದ್ದಾರೆ.

ಹಲವು ವರ್ಷಗಳಿಂದ ಬಾಕಿ ಉಳಿದಿದ್ದ ಪ್ರಕರಣ ತಂತ್ರಜ್ಞಾನದ ಸಹಾಯದಿಂದ ಯಶಸ್ವಿಯಾಗಿ ಭೇದಿಸಿದ ಹರೂಗೇರಿ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ತ್ವರಿತ ಕಾರ್ಯಕ್ಕೆ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮೂವರು ಸಂಶೋಧಕರಿಗೆ ಪೇಟೆಂಟ್ ಗರಿ



ವಿಜಯಪುರ: ನಗರದ ಬಿ.ಎಲ್ .ಡಿ.ಈ ವಿಶ್ವವಿದ್ಯಾಲಯ, ಪುಣೆಯ ಭಾರತಿ ವಿದ್ಯಾಪೀಠ ವಿಶ್ವವಿದ್ಯಾಲಯದ ಪೂಣಾ ಫಾರ್ಮಸಿ ಕಾಲೇಜು ಹಾಗೂ ಬಿ.ಎಲ್.ಡಿ.ಇ ಸಂಸ್ಥೆಯ ಫಾರ್ಮಸಿ ಕಾಲೇಜಿನ ಸಂಶೋಧಕ ಡಾ.ರವೀಂದ್ರ ಜಿ.ಕುಲಕರ್ಣಿ, ಡಾ.ರಾಘವೇಂದ್ರ ವಿ. ಕುಲಕರ್ಣಿ, ಡಾ.ಆತ್ಮಾರಾಮ ಪವಾರ ಹಾಗೂ ಡಾ.ಅರವಿಂದಗೌಡ ಪಾಟೀಲ ಅವರ ತಂಡ ನಡೆಸಿದ 'ಸಿಂಥೆಸಿಸ್ ಅಂಡ್ ಸೈಟೋಟಾಕ್ಸಿಕ್ ಆಕ್ಟಿವಿಟಿ ಆಫ್ ಇಂಡೋಲ್ ಡೇರಿವೇಟಿವ್ಸ್ ಬಿಯರಿಂಗ್ ಟ್ರಯಾಜೋಲ್ ಸ್ಕ್ಯಾಫೋಲ್ಡ್' ಎಂಬ ಸಂಶೋಧನೆಗೆ ಕೇಂದ್ರ ಸರಕಾರದ ಪೇಟೆಂಟ್ ದೊರೆತಿದೆ.

ಕ್ಯಾನ್ಸರ್ ಚಿಕಿತ್ಸೆಗೆ ಹೊಸ ಔಷಧವನ್ನು ಕಂಡುಹಿಡಿಯುವ ಉದ್ದೇಶದಿಂದ ಕೈಗೊಳ್ಳಲಾದ ಜಂಟಿ ಸಂಶೋಧನೆಗೆ ಈ ಪೇಟೆಂಟ್ ಲಭಿಸಿದೆ. ಈಸಂಶೋಧನೆಯು ಔಷಧೀಯ ಕ್ಷೇತ್ರದಲ್ಲಿ ಕ್ಯಾನ್ಸರ್ ಚಿಕಿತ್ಸೆಗೆ ಹೊಸ ಚಿಕಿತ್ಸೆ ವಿಧಾನಗಳನ್ನು ಅಭಿವೃದ್ಧಿ ಪಡಿಸುವ ಪ್ರಯತ್ನವಾಗಿದ್ದು, ಆರೋಗ್ಯ ಕ್ಷೇತ್ರದ ಪ್ರಮುಖ ಸವಾಲುಗಳನ್ನು ಎದುರಿಸಲು ಎರಡೂ ವಿಶ್ವವಿದ್ಯಾಲಯಗಳು ಹೊಸ ಔಷಧಗಳ ಅನ್ವೇಷಣೆಗೆ ಮಹತ್ವದಕೊಡುಗೆ ನೀಡಲಿವೆ. ವಿಜ್ಞಾನಿಗಳ ಈ ಸಂಶೋಧನೆ ಪೇಟೆಂಟ್ ಲಭಿಸಿರುವುದಕ್ಕೆ ಬಿ.ಎಲ್.ಡಿ.ಈ ಸಂಸ್ಥೆಯ ಅಧ್ಯಕ್ಷ ಮತ್ತು ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ, ಡೀಮ್ಡ್ ವಿವಿ ಕುಲಾಧಿಪತಿ ಬಿ.ಎಂ.ಪಾಟೀಲ, ಸಮಕುಲಾಧಿಪತಿ ಪ್ರೊ.ವೈ.ಎಂ. ಜಯರಾಜ, ಕುಲಪತಿ ಡಾ.ಅರುಣ ಚಂ.ಇನಾಮದಾರ ಸಂತಸ ವ್ಯಕ್ತಪಡಿಸಿದ್ದು, ಸಂಶೋಧಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಕಡಲತೀರದಲ್ಲಿ ಮೂರ್ತಿ ಪತ್ತೆ



ಗೋಕರ್ಣ: ನದಿ, ಸಮುದ್ರಗಳಲ್ಲಿ ವಿಸರ್ಜಿಸಿದ ಭಿನ್ನವಾದ ದೇವರ ಮೂರ್ತಿ ಇಲ್ಲಿನ ಮುಖ್ಯ ಕಡಲತೀರದಲ್ಲಿ ಪತ್ತೆಯಾಗಿದ್ದು, ಎಲ್ಲರ ಗಮನ ಸೆಳೆಯುತ್ತಿದೆ.

ಮನೆ ಹಾಗೂ ದೇವಾಲಯ ಮತ್ತಿತರ ಕಡೆ ಪ್ರತಿಷ್ಠಾಪಿಸಿ ಪೂಜಿಸಿದ ಮೂರ್ತಿಗಳು ಸವಕಳಿ (ಭಿನ್ನ) ಆಗುತ್ತದೆ. ಇದನ್ನ ತೆಗೆದು ಹೊಸ ಮೂರ್ತಿ ಪ್ರತಿಷ್ಠಾಪಿಸಲಾಗುತ್ತದೆ. ನಂತರ ಹಳೆ ಮೂರ್ತಿಗಳನ್ನ ನೀರಿನಲ್ಲಿ ವಿಸರ್ಜಿಸುವುದು ವಾಡಿಕೆಯಾಗಿದ್ದು, ಮಳೆಗಾಲದಲ್ಲಿ ನದಿಯ ನೀರಿನ ಅಬ್ಬರಕ್ಕೆ ಸಮುದ್ರ ಸೇರಿದ ಮೂರ್ತಿಗಳು ಕಡಲ ಒಡಲು ಸೇರಿ ನಂತರ ತಟಕ್ಕೆ ಬರುತ್ತಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಕಾಳಿ ಬ್ರಿಗೇಡ್ ಅಧ್ಯಕ್ಷರಾಗಿ ಸತೀಶ್ ನಾಯ್ಕ್



ಜೋಯಿಡಾ: ಕಳೆದ ಸುಮಾರು ಒಂದು ದಶಕದಿಂದ ಅರಣ್ಯವಾಸಿಗಳ ಹಕ್ಕು ರಕ್ಷಣೆಗಾಗಿ ಅನೇಕ ಹೋರಾಟಗಳನ್ನು ಮಾಡಿ ಜನಮನ್ನಣೆ ಗಳಿಸಿದ ಸಂಘಟನೆ, ಕಾಳಿ ಬ್ರಿಗೇಡ್ ತನ್ನ ಮುಂದಿನ ಎರಡು ವರ್ಷಗಳಿಗಾಗಿ ಹೊಸ ಸಮಿತಿಯನ್ನು ರಚಿಸಿದೆ. ಮುಖ್ಯ ಸಮಿತಿಯ ಅಧ್ಯಕ್ಷರಾಗಿ ಸತೀಶ್ ಆನಂದು ನಾಯ್ಕ್, ಕಾರ್ಯದರ್ಶಿಗಳಾಗಿ ಉಮೇಶ್ ವೇಳಿಪ್ ಹಾಗು ಸಮೀರ ಮುಜಾವರ, ಮುಖ್ಯ ಸಮಿತಿಯ ಸದಸ್ಯರಾಗಿನಾರಾಯಣ ಹೆಬ್ಬಾರ್, ಕಿರಣ ನಾಯ್ಕ್, ದಿನೇಶ್ ದೇಸಾಯಿರವರನ್ನು ಆಯ್ಕೆ ಮಾಡಲಾಯಿತು. ಮುಖ್ಯ ಸಂಚಾಲಕರಾದ ಸುನೀಲ್ ದೇಸಾಯಿಯವರ ನೇತೃತ್ವದಲ್ಲಿ ಸಭೆಯ ಕಾರ್ಯಕಲಾಪ ನಡೆಯಿತು. ವಿಶೇಷ ಅವ್ಹಾನಿತರು ಹಾಗು ಸಲಹೆಗಾರರಾಗಿ ಆಗಮಿಸಿದ ರವಿ ರೇಡಕರ್ ರವರು ಸಂಘಟನೆಗೆ ಅಭಿನಂದಿಸಿದ್ದರು.

ದರೋಡೆ ಆರೋಪಿ ಬಂಧನ



ಸಿದ್ದಾಪುರ: ಮನೆಗೆ ನುಗ್ಗಿ ಮಹಿಳೆಯೊಬ್ಬರಿಗೆ ಕತ್ತಿ ತೋರಿಸಿ ಬೆದರಿಸಿ ಚಿನ್ನದ ಮಾಂಗಲ್ಯ ಸರ ದರೋಡೆ ಮಾಡಿದ್ದ ಆರೋಪಿಯನ್ನು ಸಿದ್ದಾಪುರ ಪೊಲೀಸರು ಪ್ರಕರಣ ದಾಖಲಾದ ಕೇವಲ 24 ಗಂಟೆಗಳ ಒಳಗಾಗಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜೂನ್ 22 ರಂದು ಸಂಜೆ ಸುಮಾರು 4.22 ಗಂಟೆಗೆ ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಹಾಳದಕಟ್ಟಾದ ಪದ್ಮರಾಜ ವಿಲ್ಲಾದಲ್ಲಿ ಈ ಘಟನೆ ನಡೆದಿತ್ತು. ಪೊಲೀಸ್ ತಂಡವು ಕ್ಷಿಪ್ರ ಕಾರ್ಯಾಚರಣೆ ನಡೆಸಿ ತಾಲೂಕಿನ ಕೊಂಡ್ಲಿ ನಿವಾಸಿ ಕೂಲಿ ಕೆಲಸ ಮಾಡುವ ಮಹೇಶ ತಂದೆ ಹನುಮಂತ ಮಡಿವಾಳ (23)ಎಂಬಾತನನ್ನು ಬಂಧಿಸಿದ್ದಾರೆ. ಬಂಧಿತ ಆರೋಪಿಯಿಂದ ಅಂದಾಜು 225000 ರೂ. ಮೌಲ್ಯದ 15.2 ಗ್ರಾಂ ತೂಕದ ಬಂಗಾರದ ಮಾಂಗಲ್ಯದ ತುಂಡು ಮತ್ತು ಅಂಕುಶ ಪವನ್ ಕೊಂಡಿ ಹಾಗೂ ಕೃತ್ಯಕ್ಕೆ ಬಳಸಿದ ಮೋಟರ್ ಸೈಕಲ್‌ನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಕರಣ ನಡೆದ 24 ಗಂಟೆಗಳಲ್ಲೇ ಆರೋಪಿತನನ್ನು ಪತ್ತೆ ಹಚ್ಚಿ ಅತ್ಯುತ್ತಮ ಕರ್ತವ್ಯ ನಿರ್ವಹಿಸಿದ ಸಿದ್ದಾಪುರ ಠಾಣೆಯ ಪೊಲೀಸ್ ನಿರೀಕ್ಷಕರು ಹಾಗೂ ಸಿಬ್ಬಂದಿ ತಂಡವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಪ್ರಶಂಸಿಸಿದ್ದಾರೆ.

ವ್ಹೀಲಿಂಗ್ ವಿಡಿಯೋ ಹರಿಬಿಟ್ಟ ಆರೋಪ: ದೂರು ದಾಖಲು

ಭಟ್ಕಳ: ಸಾರ್ವಜನಿಕ ರಸ್ತೆಯಲ್ಲಿ ಅಪಾಯಕಾರಿಯಾಗಿ ವ್ಹೀಲಿಂಗ್ ನಡೆಸಿದ ವಿಡಿಯೋವನ್ನು ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡಿ ಯುವಕರನ್ನು ಪ್ರಚೋದಿಸಿದ ಆರೋಪದಡಿ ಇಲ್ಲಿನ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.ಜೂನ್ 25ರಂದು ಸಾಮಾಜಿಕ ಜಾಲತಾಣಗಳ ಮೇಲ್ವಿಚಾರಣೆ ವೇಳೆ 'ಜ್ಯುಜಿಜಟಿರಿ ಟಜಿರಿಟಿಟ್ಟ' ಹೆಸರಿನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಭಟ್ಕಳದ ವಿವಿಧ ಸಾರ್ವಜನಿಕ ರಸ್ತೆಗಳಲ್ಲಿ ದ್ವಿಚಕ್ರ ವಾಹನದಲ್ಲಿ ಅಪಾಯಕಾರಿಯಾಗಿ ವ್ಹೀಲಿಂಗ್ ನಡೆಸಿದ ದೃಶ್ಯಗಳನ್ನು ಅಪ್‌ಲೋಡ್ ಮಾಡಿರುವುದು ಪತ್ತೆಯಾಗಿದೆ. ಸಾರ್ವಜನಿಕ ಜೀವಕ್ಕೆ ಅಪಾಯ ಉಂಟುಮಾಡುವ ರೀತಿಯಲ್ಲಿ ವಾಹನ ಚಲಾಯಿಸಿ, ಅದರ ವಿಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚುವ ಮೂಲಕ ಇತರ ಯುವಕರನ್ನು ಇಂತಹ ಅಪಾಯಕಾರಿ ಕೃತ್ಯಗಳಿಗೆ ಪ್ರೇರಣೆ ನೀಡಿದ ಆರೋಪದಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರಿದಿದೆ. ನಗರ ಠಾಣೆಯ ಸೋಷಿಯಲ್ ಮೀಡಿಯಾ ಮಾನಿಟರಿಂಗ್ ಸೆಲ್‌ನ ಪೊಲೀಸ್ ಕಾನ್‌ಸ್ಟೇಬಲ್ ಸಚಿನ್ ಯಶವಂತರಾವ್ ಪವಾರ್ ಈ ಕುರಿತು ದೂರು ದಾಖಲಿಸಿದ್ದಾರೆ.



ದಾಂಡೇಲಿ : ಸುವರ್ಣ ಮಹೋತ್ಸವದ ಸಂಭ್ರಮದಲ್ಲಿರುವ ದಾಂಡೇಲಿ ಸಿಟಿ ಲಯನ್ಸ್ ಕ್ಲಬ್ ಇದರ 2026-27ನೇ ಸಾಲಿನ ನೂತನ ಅಧ್ಯಕ್ಷರಾಗಿ ಉದ್ಯಮಿ ಹಾಗೂ ಸಮಾಜ ಸೇವಕರಾದ ಉದಯ ಶೆಟ್ಟಿ ಅವರು ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಪ್ರವಾಸೋದ್ಯಮಿ ಮುರಳೀಧರ ಜೆ.ನಾಯ್ಕ ಮತ್ತು ಖಜಾಂಚಿಯಾಗಿ ಗಣೇಶ ಡೆಕೋರ್ಸ್ ಮಾಲಕ ಗಣೇಶ ಎಂ.ಖಾನಪುರ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನೂತನ ಪದಾಧಿಕಾರಿಗಳಿಗೆ ನಗರದ ಗಣ್ಯರನೇಕರು ಅಭಿನಂದನೆ ಸಲ್ಲಿಸಿದ್ದಾರೆ.

ಸಮಾಜದ ಏಳಿಗೆಗೆ ಕೆಂಪೇಗೌಡರ ಕೊಡುಗೆ ಅಪಾರ

ಹೊನ್ನಾವರ: ತಾಲೂಕಾ ಒಕ್ಕಲಿಗರ ಸಂಘ ಹಾಗೂ ಭೈರವಿ ಮಹಿಳಾ ಸಹಕಾರಿ ಸಂಘದ ನೇತೃತ್ವದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತೋತ್ಸವ ಕಾರ್ಯ ಕೆಳಗಿನೂರಿನ ಒಕ್ಕಲಿಗರ ಸಮುದಾಯ ಭವನದಲ್ಲಿ ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಆದಿಚುಂಚನಗಿರಿ ಶಾಖಾ ಮಠ ಕುಮಟಾದ ನಿಶ್ಚಲಾನಂದನಾಥ ಸ್ವಾಮಿಜಿ ಆಶೀರ್ವಚನ ನೀಡಿ, ಕೆಂಪೇಗೌಡರು ಕೇವಲ ಒಕ್ಕಲಿಗ ಸಮಾಜಕ್ಕೆ ಸೀಮಿತವಾಗದೆ ಎಲ್ಲಾ ಸಮುದಾಯದ ಏಳಿಗೆಗೆ ಕೊಡುಗೆ ನೀಡಿದ ಕಾರಣ ಇಂದಿಗೂ ಸಮಾಜ ಅವರನ್ನು ಸ್ಮರಿಸುತ್ತಿದೆ ಎಂದರು.

ಮುಖ್ಯ ಅತಿಥಿಗಳಾಗಿ ನಿಕಟಪೂರ್ವ ಸಚಿವ ಭಟ್ಕಳ ಹೊನ್ನಾವರ ಶಾಸಕ ಮಂಕಾಳ ವೈದ್ಯ ಮಾತನಾಡಿದರು. ಕಳೆದ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ತಾಲೂಕಿನ 75 ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ಹಾಗೂ ಪ್ರಶಸ್ತಿಪತ್ರ ನೀಡಿದರು. ತಾಲೂಕಾ ಒಕ್ಕಲಿಗರ ಸಂಘದ ಅಧ್ಯಕ್ಷರಾದ ತಿಮ್ಮಪ್ಪ ಜೆ ಗೌಡ ಅಧ್ಯಕ್ಷತೆ ವಹಿಸಿದ್ದರು. ಕೆಂಪೇಗೌಡ ರ ಜೀವನ ಮತ್ತು ಸಾಧನೆಯ ಕುರಿತು ಖ್ಯಾತ ವಾಗ್ಮಿ ಶಿಕ್ಷಕರಾದ ವಿಷ್ಣು ಪಟಗಾರ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಗಣಪಯ್ಯ ಜ್ಞಾ ಗೌಡ ಮುಗಳಿ, ಕೃಷ್ಣ ಜಟ್ಟ ಗೌಡ ಮಾವಿನಸರ್ಕಲ್, ಅಣ್ಣಪ್ಪ ನಾಯ್ಕ ಮಂಕಿ, ಶಾಂತಿ ಮಾದೇವ ಗೌಡ ಹಳ್ಳೇರ್, ಮಹಾಬಲ ಗೌಡ ಕೆಳಗಿನೂರು, ತಿಮ್ಮಪ್ಪ ಮಂಜು ಗೌಡ ಹೊಸಕುಳಿ, ವೇದಿಕೆಯಲ್ಲಿ ಉಪಸ್ಥಿತರಿದ್ದರು.ಭೈರವಿ ಮಹಿಳಾ ಸಹಕಾರಿ ನಿರ್ದೇಶಕರು ಪ್ರಾರ್ಥಿಸಿದರು. ದಯಾನಂದ ಗೌಡ ಸ್ವಾಗತಿಸಿದರು. ಪ್ ಬಾಲಚಂದ್ರ ಗೌಡ ವಂದಿಸಿದರು. ಲಕ್ಷ್ಮೀಕಾಂತ ಗೌಡ ನಿರೂಪಿಸಿದರು.



ಹೊನ್ನಾವರ: ತಾಲೂಕಾ ಒಕ್ಕಲಿಗರ ಸಂಘ ಹಾಗೂ ಭೈರವಿ ಮಹಿಳಾ ಸಹಕಾರಿ ಸಂಘದ ನೇತೃತ್ವದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತೋತ್ಸವ ಕಾರ್ಯ ಕೆಳಗಿನೂರಿನ ಒಕ್ಕಲಿಗರ ಸಮುದಾಯ ಭವನದಲ್ಲಿ ಯಶಸ್ವಿಯಾಗಿ ನಡೆಯಿತು.

ಎಸ್‌ಪಿ ದೀಪನ್.ಎಂ.ಎನ್ ಹೇಳಿಕೆ

ಯುವ ಜನತೆ ಡ್ರಗ್ಸ್‌ನಿಂದ ದೂರವಿರಲಿ

ಕಾರವಾರ: ಮಾದಕ ಪದಾರ್ಥಗಳಿಗೆ ವ್ಯಸನಿಗಳು ಆಗುವುದರಿಂದ ಜೀವನದಲ್ಲಿ ಯಾವುದೇ ಸಾಧನೆ ಮಾಡಲು ಸಾಧ್ಯವಿಲ್ಲ. ಯುವಕ-ಯುವತಿಯರ ಯಶಸ್ಸಿಗೆ ಡ್ರಗ್ಸ್ ಅಡ್ಡಿಯಾಗುತ್ತದೆ ಆದ್ದರಿಂದ ಯುವ ಜನತೆಗೆ ಡ್ರಗ್ಸ್ ಬಳಕೆಯಿಂದ ದೂರವಿರಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್. ಎಂ.ಎನ್ ಹೇಳಿದರು.

ಅವರು ಶನಿವಾರ,ಮಯೂರ ವರ್ಮ ವೇದಿಕೆಯಲ್ಲಿ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಕಾರವಾರ ಉಪ ವಿಭಾಗ, ಕಾರವಾರ ಶಹರ ಪೊಲೀಸ್ ಠಾಣೆ ವತಿಯಿಂದ ಆಯೋಜಿಸಿದ್ದ, ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ಸಪ್ತಾಹ, ಮಾದಕ ವಸ್ತುಗಳ ಬಳಕೆ ಮತ್ತು ಪೂರೈಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಾಗೃತಿ ಮತ್ತು ಅರಿವು ಮೂಡಿಸುವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು

ಡ್ರಗ್ಸ್ ಕ್ಯಾನ್ಸರ್ ಇದ್ದಂತೆ. ಅದು ಸಮಾಜಕ್ಕೆ ಮಾರಕವಾಗಿ ಪರಿಣಿಮಿಸಿದೆ.

ಇದು ಸಮಾಜದಲ್ಲಿ ವ್ಯಾಪಕವಾಗಿ ಹರಡದಂತೆ ತಡೆಯಬೇಕು ಎಂದರು.



> **ಪೊಲೀಸ್ ಇಲಾಖೆಯಿಂದ ಜಿಲ್ಲೆಯ ಪ್ರತಿ ತಾಲೂಕಿನ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ಸನಿಂದ ಉಂಟಾಗುವ ದುಷ್ಪರಿಣಾಮದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಡ್ರಗ್ಸ್‌ಸೇವನೆ ಮತ್ತು ಮಾರಾಟ ಮಾಡುವವರ ಮೇಲೆ ಕಠಿಣ ಕಾನೂನ ಕ್ರಮ ಕೈಗೊಳ್ಳಲಾಗುತ್ತಿದೆ.**
> ■ ದೀಪನ್.ಎಂ.ಎನ್,ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಮಯೂರ ವರ್ಮ ವೇದಿಕೆಯಿಂದ ಡಿ.ಸಿ ಆಫೀಸ್ ವೃತ್ತ,ಪಿಕಳೆ ರಸ್ತೆ,ಗ್ರೀನ್ ಸ್ಟೀಟ್, ಸುಭಾಷ್ ಸರ್ಕಲ್,ಬಸ್ ನಿಲ್ದಾಣ ಸೇರಿದಂತೆ ವಿವಿಧ ಬೀದಿಗಳಲ್ಲಿ ಡ್ರಗ್ಸ್ ಕುರಿತು ಜಾಥಾ ಮೂಲಕ ಜಾಗೃತಿ ಮೂಡಿಸಲಾಯಿತು.

ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳು ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದರು.

ಹಲಸು ಆರ್ಥಿಕತೆ ಬಲಪಡಿಸುವ ಕಲ್ಪವೃಕ್ಷ

ಶಿರಸಿ: ಹಲಸು ಕೇವಲ ಒಂದು ಹಣ್ಣಲ್ಲ, ಅದು ರೈತರ ಆರ್ಥಿಕತೆಯನ್ನು ಬಲಪಡಿಸುವ ಕಲ್ಪವೃಕ್ಷ. ಅಡಿಕೆಗೆ ರೋಗ ಆವರಿಸಿ ರೈತರು ಕಂಗಾಲಾಗಿರುವ ಈ ಸಮಯದಲ್ಲಿ, ಬೆಟ್ಟದ ಜಾಗದಲ್ಲಿ ಹಲಸನ್ನು ಉಪಬೆಳೆಯಾಗಿ ಬೆಳೆದು ಆರ್ಥಿಕ ಸ್ಥಿತಿ ಸುಧಾರಿಸಿಕೊಳ್ಳಬಹುದು ಎಂದು ಶಾಸಕ ಭೀಮಣ್ಣ ನಾಯ್ಕ ಹೇಳಿದರು.

ಕದಂಬ ಮಾರ್ಕೆಟಿಂಗ್ ಆವರಣದಲ್ಲಿ ಶನಿವಾರ ಕದಂಬ ಸಂಸ್ಥೆ, ಉತ್ತರ ಕನ್ನಡ ಸಾವಯುವ ಒಕ್ಕೂಟ, ಎನ್‌ಆರ್‌ಎಲ್‌ಎಂ, ಜೀವ ವೈವಿಧ್ಯ ಮಂಡಳಿ, ತೋಟಗಾರಿಕೆ, ಕೃಷಿ ಹಾಗೂ ಅರಣ್ಯ ಇಲಾಖೆ ಮತ್ತು ವನಸ್ತ್ರೀ ಸಂಸ್ಥೆಯ ಆಶ್ರಯದಲ್ಲಿ ಆಯೋಜಿಸಿರುವ ಎರಡು ದಿನಗಳ 13ನೇ ಹಲಸಿನ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಲಸನ್ನು ಮೂಲ ಆಹಾರ ಧಾನ್ಯಗಳ ಸಾಲಿಗೆ ಸೇರಿಸುವುದು ಉತ್ತಮವಾಗಿದ್ದು, ಹಲಸಿನ ಮಂಡಳಿ ರಚನೆ ಕುರಿತು ಸರ್ಕಾರದ ಗಮನಕ್ಕೆ ತರಲಾಗುವುದು. ಇದೇ ವೇಳೆ, ಬೆಟ್ಟ ಭೂಮಿ ರೈತರ ಹಕ್ಕಾಗಿದ್ದು, ಅದನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಜೀವವೈವಿಧ್ಯ ಮಂಡಳಿ ನಿಕಟಪೂರ್ವ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಮಾತನಾಡಿ, ಜಿಲ್ಲೆಗೆ ಹಲಸಿನ ಮಂಡಳಿ ಅಗತ್ಯವಿದ್ದು, ಹಲಸಿನ ಅಭಿವೃದ್ಧಿಯಿಂದ ತೋಟಗಳಿಗೆ ಮಂಗಗಳ ಹಾವಳಿ ನಿಯಂತ್ರಣಕ್ಕೆ ಬರಲಿದೆ ಎಂದರು. ಕದಂಬ ಸಂಸ್ಥೆಯ ವಿಶ್ವೇಶ್ವರ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು. ನರೇಂದ್ರ ಹೆಗಡೆ ಹೊಂಡಗಾಶಿಗೆ ಕದಂಬ ಆನ್‌ಲೈನ್ ಮಾರ್ಕೆಟಿಂಗ್ ಬಗ್ಗೆ ವಿವರಿಸಿದರು.

ಕದಂಬ ಅಧ್ಯಕ್ಷ ಶಂಭುಲಿಂಗ ಹೆಗಡೆ ನಡಗೋಡ ಅಧ್ಯಕ್ಷತೆ ವಹಿಸಿದ್ದರು. ತೋಟಗಾರಿಕೆ ಜಂಟಿ ನಿರ್ದೇಶಕ ಡಾ. ಸತೀಶ ಬಿ.ಪಿ, ವನಸ್ತ್ರೀ ಟ್ರಸ್ಟಿ ಶೈಲಜಾ ಗೋರ್ನಮನೆ, ಷಣ್ಮುಖ ಸುಂದರಂ, ಡಾ. ಚಿದಾನಂದ ಜಿ.ವಿ, ಅರಣ್ಯ ಇಲಾಖೆಯ ವಿಶ್ವನಾಥ, ತೋಟಗಾರಿಕೆ ಮಹಾವಿದ್ಯಾಲಯದ ಡಾ. ಕಾಂತರಾಜು ಇದ್ದರು. ರಾಜೇಂದ್ರ ಜೋಶಿ ಸ್ವಾಗತಿಸಿದರು. ವಿಕಾಸ ಹೆಗಡೆ ನಿರ್ವಹಿಸಿದರು. ಭಾಗ್ಯ ಪ್ರಾರ್ಥಿಸಿದರು.

> **ಮೇಳದ ವಿಶೇಷತೆ**
> ಮೇಳದಲ್ಲಿ ಕದಂಬ ಆನ್‌ಲೈನ್ ಟ್ರೇಡಿಂಗ್ ಪ್ಲಾಟ್‌ಫಾರ್ಮ್ ಅನಾವರಣಗೊಂಡಿತು. ನೂರಕ್ಕೂ ಹೆಚ್ಚು ಹಲಸಿನ ಖಾದ್ಯಗಳು, ವೈವಿಧ್ಯಮಯ ತಳಿಗಳು, ಹೂವು-ಹಣ್ಣಿನ ಗಿಡಗಳು, ಮಲೆನಾಡಿನ ಪಾರಂಪರಿಕ ಬೀಜಗಳ ಪ್ರದರ್ಶನ ಹಾಗೂ ಮಾರಾಟ ಮೊದಲ ದಿನವೇ ಸಾರ್ವಜನಿಕರ ಕಣ್ಮನ ಸೆಳೆಯಿತು. ಮಹಿಳೆಯರಿಗಾಗಿ ಖಾದ್ಯ ಸ್ಪರ್ಧೆ, ವಿಚಾರಪೂರ್ಣ ಗೋಷ್ಠಿಗಳು, ರೈತರ ಅನುಭವ ಹಂಚಿಕೆ ಹಾಗೂ ಉಚಿತ ಹಲಸಿನ ಕಸಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೇಳವು ಭಾನುವಾರವೂ ಮುಂದುವರಿಯಲಿದೆ.



ಕರಿಯಾ ಗೊಯ್ದ ಗೊಂಡರಿಗೆ ಪ್ರಶಸ್ತಿ

ಭಟ್ಕಳ: ಶಿರಾಲಿಯ ಡಾ. ಆರ್.ವಿ. ಶರಾಫ್‌ರವರು ಅವರ ಬದುಕಿನ ಆದರ್ಶಗಳು, ಸಮಾಜ ಮತ್ತು ಸಾಹಿತ್ಯ ಸೇವೆಯನ್ನು ಪರಿಗಣಿಸಿ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡಲು ಡಾ.ಆರ್.ವಿ. ಶರಾಫ್ ಅಭಿಮಾನಿ ಬಳಗ ತೀರ್ಮಾನಿಸಿದ್ದು, ಪ್ರಸಕ್ತ ಸಾಲಿನ ಪ್ರಶಸ್ತಿಯನ್ನು ಕಟಗಾರಕೊಪ್ಪ ಹೆಗ್ಗದ್ದೆ ನಿವಾಸಿ ನಾಟಿ ವೈದ್ಯ ಕರಿಯಾ ಗೊಯ್ದ ಗೊಂಡರವರಿಗೆ ನೀಡಲಾಗುವುದು ಎಂದು ಅಭಿಮಾನಿ ಬಳಗದ ಅಧ್ಯಕ್ಷ ಪಿ. ಆರ್. ನಾಯ್ಕ ತಿಳಿಸಿದ್ದಾರೆ.

ಅಧ್ಯಕ್ಷತೆಯನ್ನು ಜಿಲ್ಲಾ ಕಸಾಪ ಅಧ್ಯಕ್ಷ ಬಿ ಎನ್.ವಾಸರೆ ವಹಿಸಲಿದ್ದರೆ, ಪ್ರಶಸ್ತಿ ಪ್ರದಾನವನ್ನು ಸಾಹಿತಿ ಮಾನಾಸುತ ಶಂಭು ಮಾಡಲಿದ್ದಾರೆ. ಮುಖ್ಯ ಅತಿಥಿಯಾಗಿ ಭಟ್ಕಳ ಪತ್ರಕರ್ತರ ಕ್ಷೇಮಾಭಿವದ್ದಿ ಸಂಘದ ಅಧ್ಯಕ್ಷ ರಾಘವೇಂದ್ರ ಹೆಬ್ಬಾರ, ತಾಲ್ಲೂಕು ಕಸಾಪ ಅಧ್ಯಕ್ಷ ಗಂಗಾಧರ ನಾಯ್ಕ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ಎನ್.ನಾಯ್ಕ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಉಮೇಶ ಕೆರೆಕಟ್ಟೆ, ವಿಠೋಬ ರಾಮದಾಸ ಸರಾಫ, ಸಾಹಿತಿ ರಾಮಾ ಗೊಂಡ ಪಾಲ್ಗೊಳ್ಳಲಿದ್ದಾರೆ ಎಂದು ಡಾ. ಆರ್ ವಿ. ಸರಾಫ ಅಭಿಮಾನಿ ಬಳಗದ ಅಧ್ಯಕ್ಷ ಪಿ. ಆರ್. ನಾಯ್ಕ, ಕಾರ್ಯದರ್ಶಿ ಶ್ರೀಧರ ಶೇಟ್ ಪ್ರಕಟಣೆಯಲ್ಲಿ ನೀಡಿದ್ದಾರೆ.

ಶಿಕ್ಷಣ ನಾಗರಿಕತೆಯ ಮೂಲ ಬುನಾದಿ: ಶ್ರೀಗಳು

ಸಿದ್ದಾಪುರ: ಪ್ರತಿಯೊಂದು ಸಮಾಜವನ್ನು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಅಭಿವೃದ್ಧಿಪಡಿಸುವುದೇ ಮಠ-ಮಂದಿರಗಳ ಮುಖ್ಯ ಉದ್ದೇಶವಾಗಿದೆ. ಕರ್ನಾಟಕದ ಮಟ್ಟಿಗೆ ಶಿಕ್ಷಣ ಮತ್ತು ವಿಚಾರ ಕ್ರಾಂತಿಯಲ್ಲಿ ಮಠಗಳು ಸರ್ಕಾರದ ಸಮನಾಂತರವಾಗಿ ಕೆಲಸ ಮಾಡಿದ ಇತಿಹಾಸ ಹೊಂದಿವೆ ಎಂದು ಶಿರಸಿ ರುದ್ರದೇವರ ಮಠದ ಶ್ರೀ ಮಲ್ಲಿಕಾರ್ಜುನ ಶ್ರೀಗಳು ಹೇಳಿದರು.

ಅವರು ಶನಿವಾರ ಬೆಂಗಳೂರಿನ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ, ಪ್ರತಿಭಾ ಪುರಸ್ಕಾರ ಹಾಗೂ ನೂತನವಾಗಿ ನಿರ್ಮಾಣಗೊಂಡ ಸಭಾಭವನ ಉದ್ಘಾಟನಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.ನೂತನ ಸಭಾಭವನವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಭೀಮಣ್ಣ ನಾಯ್ಕ, ಸನಾತನ ಧರ್ಮದ ರಕ್ಷಣೆ ಹಾಗೂ ಪ್ರತಿಯೊಂದು ಸಮಾಜದ ಶೈಕ್ಷಣಿಕ ಮತ್ತು ಸಾಮಾಜಿಕ ಏಳಿಗೆಯೇ ನಮ್ಮ ಧ್ಯೇಯವಾಗಿದೆ. ರಾಜಕೀಯವಾಗಿ 13 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷನಾಗಿ ಕೆಲಸ ಮಾಡಿದ ಅನುಭವ ಹೊಂದಿರುವ ನನಗೆ ಕ್ಷೇತ್ರವನ್ನು ಶಕ್ತಿ ಮೀರಿ ಅಭಿವೃದ್ಧಿಪಡಿಸುವ ಹಂಬಲವಿದೆ. ಈ ನಿಟ್ಟಿನಲ್ಲಿ ಸರ್ಕಾರಿ ಕಾಮಗಾರಿಗಳ ವಿಳಂಬದಿಂದಾಗಿ ಯುವಕರಲ್ಲಿ ಉತ್ಸಾಹ ಕುಗ್ಗದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ ಎಂದರು.

ಮಾಜಿ ಶಾಸಕ ಹಾಗೂ ಸಂಘಟನೆಯ ಉಕ ಜಿಲ್ಲಾ ಘಟಕದ ಅಧ್ಯಕ್ಷ ವಿ.ಎಸ್.ಪಾಟೀಲ್ ಮಾತನಾಡಿದರು.

ತಾಲೂಕು ಘಟಕದ ಅಧ್ಯಕ್ಷ ಸಿ.ಎಸ್. ಗೌಡರ್ ಹೆಗ್ಗೋಡಮನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.ಸಮಾರಂಭದಲ್ಲಿ ಅತಿಥಿಗಳಾಗಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ, ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವಲಿಂಗಯ್ಯ ಅಲ್ಲಯ್ಯನವರಮಠ, ಜಿಲ್ಲಾ ಘಟಕದ ಉಪಾಧ್ಯಕ್ಷೆ ತನುಜಾ ಪ್ರಕಾಶ ಪಾಟೀಲ, ರಾಜ್ಯ ಮಹಿಳಾ ಘಟಕದ ಉಪಾಧ್ಯಕ್ಷೆ ಜ್ಯೋತಿ ಮುಕ್ತೇಶ ಗೌಡ ಪಾಟೀಲ ಶಿರಸಿ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮೊಹಮ್ಮದ್ ಯಾಕೂಬ್ ಶೇಕ್, ಸಿದ್ದಾಪುರ ಬಸವೇಶ್ವರ ದೇವಸ್ಥಾನದ ಅಧ್ಯಕ್ಷ ನಾಗರಾಜ ಎಂ. ದೋಶೆಟ್ಟಿ ಉಪಸ್ಥಿತರಿದ್ದರು. ಸಭಾಭವನದ ಗುತ್ತಿಗೆದಾರರಾದ ಸತೀಶ ಗೌಡರ್, ವಸಂತ ನಾಯ್ಕ ಹಾಗೂ ಭರಮಣ್ಣ ಅವರನ್ನು ಸನ್ಮಾನಿಸಲಾಯಿತು. ಶಂಭುಲಿಂಗ ಸ್ವಾಮಿ ವೇದಘೋಷ ಮಾಡಿದರು. ಅರುಂಧತಿ ದೋಶೆಟ್ಟಿ ಪ್ರಾರ್ಥಿಸಿದರು. ಕುಮಾರ ಗೌಡರ್ ಕಾರ್ಯಕ್ರಮ ನಿರ್ವಹಿಸಿದರು.



ಕೌಶಲ್ಯಾಧಾರಿತ ಶಿಕ್ಷಣಕ್ಕೆ ಒತ್ತು ನೀಡಿ: ಶ್ರೀನಿವಾಸ್ ಜೀ

ಅಂಕೋಲಾ: ಮಕ್ಕಳ ಜೀವನ ರೂಪಿಸುವ ಜೊತೆಗೆ ಅವರು ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡುವಂತೆ ತಯಾರುಗೊಳಿಸುವಲ್ಲಿ ಪೋಷಕರ ಮತ್ತು ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಆಸಕ್ತಿ ಇಲ್ಲದ ಕಲಿಕೆಗೆ ಮಕ್ಕಳ ಮೇಲೆ ಒತ್ತಡ ಹೇರದೆ ಅವರಲ್ಲಿರುವ ಕೌಶಲ್ಯಗಳನ್ನು ಗುರುತಿಸಿ ಕೌಶಲ್ಯಾಧಾರಿತ ಶಿಕ್ಷಣಕ್ಕೆ

ಮಹತ್ವ ನೀಡಬೇಕು ಎಂದು ಹುಬ್ಬಳ್ಳಿಯ ಸಂಸ್ಕಾರ ಭಾರತಿ ಸಂಸ್ಥೆಯ ಸಂಘಟನಾ ಕಾರ್ಯದರ್ಶಿ ಶ್ರೀನಿವಾಸ್ ಜೀ ಹೇಳಿದರು.

ಶ್ರೀವೆಂಕಟರಮಣ ದೇವ ಶ್ರೀಧರ ಸ್ವಾಮಿ ಗ್ರಾಮೀಣ ಅಭಿವೃದ್ಧಿ ಟ್ರಸ್ಟಿನ ಪೂರ್ಣಪ್ರಜ್ಞ ವಿಜ್ಞಾನ ಮತ್ತು ವಾಣಿಜ್ಯ ಪಿ.ಯು ಕಾಲೇಜಿನಲ್ಲಿ ಪಿ.ಯು ಪ್ರಥಮ ವಿದ್ಯಾರ್ಥಿಗಳಿಗೆ ಸ್ವಾಗತಕೋರುವ ನವಯಾತ್ರಾ ಮತ್ತು ಪೋಷಕರ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಪ್ರತಿಯೊಬ್ಬ ಪಾಲಕರೂ ತಮ್ಮ ಮಕ್ಕಳು ವೈದ್ಯರಾಗಬೇಕು ಇಂಜಿನೀಯರ್ ಆಗಬೇಕು ಎಂದುಅಪೇಕ್ಷೆ ಪಟ್ಟು ಒತ್ತಡ ಹೇರುವ ಬದಲು ಅವರ ಆಸಕ್ತಿ ಗುರುತಿಸಿಮಕ್ಕಳಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕು ಇತರರಿಗಾಗಿ ಬದುಕುವುದು ಜೀವನ ಎನ್ನುವುದನ್ನು ಮನಗಂಡು ಮಕ್ಕಳಿಗೆ ಸಂಸ್ಕಾರ ಕಲಿಸುವ ಕೆಲಸ ಪ್ರತಿ ಮನೆಗಳಲ್ಲಿ ನಡೆಯಬೇಕು ಎಂದರು.

ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪ್ರಶಾಂತ ನಾಯಕ ಮಾತನಾಡಿ, ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಸಾಕಷ್ಟು ಸ್ಪರ್ಧೆಗಳಿದ್ದು ಕಾಲೇಜಿನಲ್ಲಿ ವಿಶೇಷ ಕಾರ್ಯಾಗಾರಗಳನ್ನು ನಡೆಸಲಾಗುತ್ತದೆ ಪಾಲಕರು ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಯ ಕುರಿತಂತೆ ಕಾಲೇಜಿನ ಜೊತೆ ಸಂಪರ್ಕದಲ್ಲಿರಬೇಕು ಎಂದರು.ಪ್ರಾಂಶುಪಾಲ ಜ್ಯೋತಿ ನಾಯ್ಕ ಮಾತನಾಡಿದರು. ಸಂಸ್ಥೆಯ ಕಾರ್ಯದರ್ಶಿ ಕೀರ್ತಿ ನಾಯಕ ಉಪಸ್ಥಿತರಿದ್ದರು. ಕಾಲೇಜಿನ ಬೋಧಕ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿ ಪಾಲಕರು ಉಪಸ್ಥಿತರಿದ್ದರು. ಪಿ.ಯು.ಸಿ ದ್ವಿತೀಯ ವರ್ಷದ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಹೊಸ ವಿದ್ಯಾರ್ಥಿಗಳಿಗೆ ಸ್ವಾಗತ ಕೋರಿದರು.



ಮಾದಕ ವ್ಯಸನ, ಕಳ್ಳಸಾಗಾಣಿಕೆ ವಿರೋಧಿ ದಿನಾಚರಣೆ

ಕುಮಟಾ: ಇಂದಿನ ಸಮಾಜದ ಮುಂದೆ ದೊಡ್ಡ ಸವಾಲಾಗಿ ಪರಿಣಮಿಸಿರುವ ಮಾದಕ ವ್ಯಸನ ಮತ್ತು ಕಳ್ಳಸಾಗಾಣಿಕೆ ವಿರುದ್ಧ ಯುವ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಕೊಂಕಣ ಎಜ್ಯುಕೇಶನ್ ಟ್ರಸ್ಟ್ ಕುಮಟಾದ ವಿಧಾತ್ರಿ ಅಕಾಡೆಮಿ ಹಾಗೂ ಬಿ.ಕೆ. ಭಂಡಾರಕರ್ಸ್ ಸರಸ್ವತಿ ಪದವಿಪೂರ್ವ ಕಾಲೇಜಿನಲ್ಲಿ ಆರಕ್ಷಕ ಇಲಾಖೆ ಕುಮಟಾ ಸಹಯೋಗದೊಂದಿಗೆ ಅಂತಾರಾಷ್ಟ್ರೀಯ ಮಾದಕ ವ್ಯಸನ ಮತ್ತು ಕಳ್ಳಸಾಗಾಣಿಕೆ ವಿರೋಧಿ ದಿನಾಚರಣೆಯನ್ನು ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಆರಕ್ಷಕ ನಿರೀಕ್ಷಕ ಭಾಷಾ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಯುವಕರು ವಿವಿಧ ಆಮಿಷಗಳಿಗೆ ಒಳಗಾಗಿ ಅಪರಾಧ ಚಟುವಟಿಕೆಗಳಲ್ಲಿ ತೊಡಗುತ್ತಿರುವುದು ಆತಂಕಾರಿ ಬೆಳವಣಿಗೆಯಾಗಿದೆ. ಮಾದಕ ವಸ್ತುಗಳ ಸೇವನೆ ವ್ಯಕ್ತಿಯ ಭವಿಷ್ಯವನ್ನಷ್ಟೇ ಅಲ್ಲ, ಕುಟುಂಬ ಹಾಗೂ ಸಮಾಜದ ನೆಮ್ಮದಿಯನ್ನೂ ಹಾಳು ಮಾಡುತ್ತದೆ. ವಿದ್ಯಾರ್ಥಿಗಳು ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜದ ಜವಾಬ್ದಾರಿಯುತ ನಾಗರಿಕರಾಗಿ ರೂಪುಗೊಳ್ಳಬೇಕು ಎಂದು ಸಲಹೆ ನೀಡಿದರು.ಆರೋಗ್ಯಾಧಿಕಾರಿ ಡಾ. ಆಜ್ಞಾ ನಾಯಕ ಅವರು ಮಾದಕ ದ್ರವ್ಯಗಳ ದುಷ್ಪರಿಣಾಮಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ವಿಧಾತ್ರಿ ಅಕಾಡೆಮಿಯ ಸಹ ಸಂಸ್ಥಾಪಕ ಗುರುರಾಜ ಶೆಟ್ಟಿ ಹಾಗೂ ಪ್ರಾಚಾರ್ಯ ಜಿ.ಎಸ್. ಹೆಗಡೆ ಕಣ್ಣಿ ಉಪಸ್ಥಿತರಿದ್ದು, ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಇಂತಹ ಕಾರ್ಯಕ್ರಮಗಳ ಮಹತ್ವವನ್ನು ಹೇಳಿದರು.ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ಭಾಷಣ ಸ್ಪರ್ಧೆಯನ್ನು ಆಯೋಜಿಸಲಾಗಿದ್ದು, ಭೂಮಿಕಾ ಪ್ರಥಮ, ವಿದ್ಯಾವಾಹಿನಿ ದ್ವಿತೀಯ ಹಾಗೂ ರಂಜನಾ ತೃತೀಯ ಸ್ಥಾನ ಪಡೆದರು. ಕನ್ನಡ ಉಪನ್ಯಾಸಕ ಕಾಗಾಲ ಚಿದಾನಂದ ಭಂಡಾರಿ ಕಾರ್ಯಕ್ರಮ ನಿರ್ವಹಿಸಿದರು. ಉಪನ್ಯಾಸಕರಾದ ಸೂರಜ್ ಹಾಗೂ ಡಾ. ಗೌರಿ ಹೆಗಡೆ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.



ಮರ ತೆರವಿಗೆ ಸಾರ್ವಜನಿಕರ ಆಗ್ರಹ



ಸಿದ್ದಾಪುರ: ತಾಲೂಕಿನ ಮೆಣಸಿ ಲಂಬಾಪುರ ರಸ್ತೆಯ ಅಳವಳ್ಳಿ ಬಳಿ ರಸ್ತೆಗೆ ಮರ ಉರುಳಿ ಬಿದ್ದು ಮೂರು ದಿನ ಕಳೆದರೂ ಸಂಬಂಧಪಟ್ಟ ಇಲಾಖೆ ತೆರವುಗೊಳಿಸದೆ ಇರುವುದರಿಂದ ವಾಹನ ಸವಾರರಿಗೆ ಸಂಚಾರಕ್ಕೆ ಅಡಚಣೆ ಉಂಟಾಗಿದ್ದು ಸಂಬಂಧಪಟ್ಟ ಇಲಾಖೆ ಮರ ತೆರವು ಮಾಡಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎನ್ನುವ ಒತ್ತಾಯ ಸಾರ್ವಜನಿಕರಿಂದ ಕೇಳಿಬಂದಿದೆ.

ಮರ ಬಿದ್ದ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಸಂಚಾರಕ್ಕೆ ಸ್ಥಳೀಯರೇ ಮರ ಅರ್ಧ ತೆರವು ಮಾಡಿ ಸಂಚಾರ ಪ್ರಾರಂಭಿಸಿದ್ದರು. ಇದೀಗ ಇಲಾಖೆಯ ನಿರ್ಲಕ್ಷ್ಯದಿಂದಾಗಿ ಅದೇ ಸ್ಥಿತಿಯಲ್ಲಿಯೇ ವಾಹನಗಳು ಸಂಚಾರಿಸುವಂತಾಗಿದೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.


ರಸ್ತೆಯ ಒಂದು ಬದಿಯಲ್ಲಿ ಸಂಚಾರ ನಡೆಯುತ್ತಿದ್ದು ಪಕ್ಕದಲ್ಲಿ ವಿದ್ಯುತ್ ತಂತಿ ಇರುವುದರಿಂದ ಅಪಾಯವಾಗುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿವೆ.ಪ್ರತಿನಿತ್ಯ ಸಾರಿಗೆ ಬಸ್ಸುಗಳು, ದ್ವಿಚಕ್ರ ವಾಹನಗಳು, ಇನ್ನಿತರ ಗೂಡ್ಸ್ ವಾಹನಗಳು ಸಂಚರಿಸುವುದರಿಂದ ಕೂಡಲೇ ರಸ್ತೆ ತೆರವು ಮಾಡಿ ಆಗುವ ಅನಾಹುತ ತಪ್ಪಿಸಬೇಕು ಮತ್ತು ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ವ್ಯಸನ ಮುಕ್ತ ಸಮಾಜ ನಿರ್ಮಾಣ ಪ್ರತಿಜ್ಞಾ ವಿಧಿ

ಹಳಿಯಾಳ: ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವಾಲಯವು ಹಮ್ಮಿಕೊಂಡಿದ್ದ ಮಾದಕ ವ್ಯಸನ ಮುಕ್ತ ಅಭಿಯಾನದಲ್ಲಿ ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದ್ದಾರೆ.

85 ಸಿಬ್ಬಂದಿ ಹಾಗೂ 843 ವಿದ್ಯಾರ್ಥಿಗಳು ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವಾಲಯವು ನೀಡಿದ್ದ ವ್ಯಸನ ಮುಕ್ತ ಸಮಾಜ ನಿರ್ಮಾಣ ಪ್ರತಿಜ್ಞಾ ವಿಧಿಯನ್ನು ತೆಗೆದುಕೊಂಡಿದ್ದಾರೆ.

ಸ್ವಾಸ್ಥ್ಯ ಸಮಾಜ ನಿರ್ಮಾಣ ಕಾರ್ಯದಲ್ಲಿ ವಿಡಿಐಟಿಯು ಕೈ ಜೋಡಿಸಿದೆ.ವ್ಯಸನ ಮುಕ್ತ ಸಮಾಜದ ನಿರ್ಮಾಣದ ಕುರಿತಾಗಿ ಜಾಗೃತಿಯನ್ನು ಮೂಡಿಸಲು ಮಹಾವಿದ್ಯಾಲಯ ಇತ್ತೀಚೆಗೆ ಉಪನ್ಯಾಸ ಕಾರ್ಯಕ್ರಮವನ್ನು ಕಾನೂನು ಸೇವಾ ಪ್ರಾಧಿಕಾರ ಮತ್ತು ಪೊಲೀಸ್ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿತ್ತು. ವಿದ್ಯಾರ್ಥಿಗಳಿಗೆ ಮಾದಕ ವ್ಯಸನದ ದುಷ್ಪರಿಣಾಮಗಳು ಹಾಗೂ ಭಾರತದ ಕಾನೂನು ವ್ಯವಸ್ಥೆಯಲ್ಲಿ ನಿಗದಿಪಡಿಸಿರುವ ಶಿಕ್ಷೆಗಳ ಕುರಿತಾಗಿ ವಿವರಣೆ ನೀಡಲಾಗಿತ್ತು. ವ್ಯಸನ ಮುಕ್ತ ಹಾಗೂ ಉತ್ತಮ ಸಮಾಜ ನಿರ್ಮಾಣದ ಕಾರ್ಯಕ್ಕೆ ಮಹಾವಿದ್ಯಾಲಯವು ಸದಾ ಕಟ್ಟಿಬದ್ಧವಾಗಿದೆ ಎಂದು ಪ್ರಾಚಾರ್ಯ ಡಾ. ವಿ.ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಂತಾರಾಷ್ಟ್ರೀಯ ಮಾದಕ ವ್ಯಸನ ದಿನಾಚರಣೆ

ಯಲ್ಲಾಪುರ: ಅಂತಾರಾಷ್ಟ್ರೀಯ ಮಾದಕ ಪದಾರ್ಥಗಳ ಬಳಕೆ ಮತ್ತು ಕಳ್ಳಸಾಗಾಣಿಕೆ ವಿರೋಧಿ ದಿನಾಚರಣೆಯ ಪ್ರಯುಕ್ತ ಯಲ್ಲಾಪುರ ಪೊಲೀಸ್ ಠಾಣೆ ವತಿಯಿಂದ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು.

ಮಾದಕ ದ್ರವ್ಯಗಳ ಸೇವನೆ ಹಾಗೂ ಸಾಗಾಣಿಕೆ ನಿಷೇಧ ಮತ್ತು ಬಳಿಕೆಯಿಂದ ಆಗುವ ದುಷ್ಪರಿಣಾಮಗಳ ಕುರಿತು ನಡೆದ ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ಅಶ್ವಿನಿ ಗಾಂವ್ಕರ್ ಪ್ರಥಮ, ಪ್ರಥಮ ಪಿಯುಸಿ ವಿಜ್ಞಾನ ವಿಭಾಗದ ಐಶ್ವರ್ಯ ನಾಯ್ಕ ಹಾಗೂ ಕಾವ್ಯಾ ಪಟಗಾರ ದ್ವಿತೀಯ ಮತ್ತು ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ಮಾನ್ಯ ಬಾಂದೇಕರ್ ತ್ರತೀಯ ಸ್ಥಾನ ಪಡೆದಿರುತ್ತಾರೆ. ನಂತರ ನಡೆದ ಕಾರ್ಯಕ್ರಮದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು ಹಾಗೂ ಮಾದಕ ದ್ರವ್ಯಗಳ ಸೇವನೆ ಹಾಗೂ ಸಾಗಾಣಿಕೆ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆಯ ಹಾಗೂ ಕಾಲೇಜಿನ ಸಿಬ್ಬಂದಿ ಉಪಸ್ಥಿತರಿದ್ದರು.



ಚಿನ್ನ, ನಗದು ಕದ್ದ ಆರೋಪಿ ಬಂಧನ

ಭಟ್ಕಳ: ಪಟ್ಟಣದ ಕಿದ್ವಾಯಿ ರಸ್ತೆಯಲ್ಲಿ ಮಹಿಳೆಯೊಬ್ಬರ ಮನೆಗೆ ನುಗ್ಗಿ ಚಿನ್ನಾಭರಣ ಮತ್ತು ಹಣ ಕಳುವು ಮಾಡಿದ ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸಿದ ನಗರ ಠಾಣೆಯ ಪೊಲೀಸರು ಆತನಿಂದ 4.50 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ 20 ಸಾವಿರ ನಗದು ಹಣ ವಶಪಡಿಸಿಕೊಂಡ ಘಟನೆ ನಡೆದಿದೆ.

ಮೇ 8ರಂದು ಕಿದ್ವಾಯಿ ರಸ್ತೆಯ 1ನೇ ಕ್ರಾಸ್ ನಿವಾಸಿ ನಾಹಿದ್ ಅಕ್ತರ್ ಅವರ ಮನೆಯಲ್ಲಿ ಕಳ್ಳತನ ನಡೆದಿತ್ತು. ದುಷ್ಕರ್ಮಿಗಳು ಮನೆಯ ಹಿಂಭಾಗದ ಕಿಟಕಿಯ ಗಾಜು ಒಡೆದು ಒಳನುಗ್ಗಿ 55 ಗ್ರಾಂ ತೂಕದ ಸುಮಾರು 5.50 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ 10 ಸಾವಿರ ನಗದು ಕಳುವು ಮಾಡಿದ್ದರು. ಈ ಕುರಿತು ಭಟ್ಕಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆ ಕೈಗೊಂಡ ಪೊಲೀಸರು ಭಟ್ಕಳದ ಬದ್ರಿಯಾ ಕಾಲೋನಿ ನಿವಾಸಿ 21 ವರ್ಷದ ಫೌಜಾನ್ ಅಹ್ಮದ್‌ನನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಕಳುವು ಮಾಡಿದ ಚಿನ್ನಾಭರಣವನ್ನು ಬೆಂಗಳೂರಿನ ಕೆ.ಆರ್.ರಸ್ತೆಯ ಮಣಪ್ಪುರಂ ಫೈನಾನ್ಸ್ ಶಾಖೆಯಲ್ಲಿ ಗಿರವಿ ಇಟ್ಟಿರುವುದು ಬೆಳಕಿಗೆ ಬಂದಿದೆ. ತಕ್ಷಣ ಕಾರ್ಯಾಚರಣೆ ನಡೆಸಿದ ಪೊಲೀಸರು 29.01 ಗ್ರಾಂ ತೂಕದ 4.50 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ 20 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ.

ಪ್ರಕರಣದ ತನಿಖೆ ಮುಂದುವರಿದಿದೆ. ಜಿಲ್ಲಾ ಪೊಲೀಸ್ ಅಧೀಕ್ಷಕ ದೀಪನ್ ಎಂ ಎನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಎಂ.ಕೃಷ್ಣಮೂರ್ತಿ ಮತ್ತು ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಜಗದೀಶ್ ಎಂ,ಡಿವೈಎಸ್ಪಿ ಗಿರೀಶ್ ಬಿ.ಅವರ ಮಾರ್ಗದರ್ಶನದಲ್ಲಿ,ಸಿಪಿಐ ದಿವಾಕರ ಪಿ.ಎಂ.ನೇತೃತ್ವದಲ್ಲಿ ಪಿಎಸ್‌ಐ ನವೀನ್ ಎಸ್.ನಾಯ್ಕ ಹಾಗೂ ಸಿಬ್ಬಂದಿ ದಿನೇಶ್ ನಾಯ್ಕ, ಸತೀಶ್ ಭಟ್ಟ, ರವಿ ಪಟಗಾರ, ಮಹಾಂತೇಶ ಹಿರೇಮಠ,ಕಾಶಿನಾಥ ಕೊಟಗುಣಶಿ ಸೇರಿದಂತೆ ಇತರರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಕಿರುಸುದ್ದಿ

ವಿವಿಧ ಯೋಜನೆಗಳ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಹಾವೇರಿ: ಜಿಲ್ಲೆಯಲ್ಲಿ 2026-27 ನೇ ಸಾಲಿಗೆ ಹಾವೇರಿ ಜಿಲ್ಲೆಯ ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಗಳ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಜಿಪಂ ಯೋಜನೆಗಳ ಅಡಿ ಮೀನುಗಾರಿಕೆ ಸಹಕಾರಿ ಸಂಘದ ಸದಸ್ಯರು ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆಗೆ ಸಹಾಯ ಮತ್ತು ಮತ್ಸ್ಯವಾಹಿನಿ ಸಹಾಯ, ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಡಡಿ ಯೋಜನೆಗಳಿಗೆ ಆಸಕ್ತ ಮೀನುಗಾರಿಕೆ ಸಹಕಾರಿ ಸಂಘದ ಸದಸ್ಯರಿಂದ, ಅರ್ಹ ಮೀನುಗಾರರಿಂದ ಯೋಜನೆಗಳ ನಿಯಮಾವಳಿ ಅನ್ವಯ ಅರ್ಜಿ ಆಹ್ವಾನಿಸಿದೆ. ಅರ್ಹ ಫಲಾನುಭವಿಗಳು ಜು.20 ರೊಳಗಾಗಿ ಸಂಬಂಧಿಸಿದ ತಾಲೂಕಿನ ನಿರ್ದೇಶಕರ ಕಚೇರಿಗಳಿಗೆ ಅರ್ಜಿ ಸಲ್ಲಿಸಬೇಕು ಎಂದು ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಿವು ವಿದ್ಯಾಭ್ಯಾಸ ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಹಾವೇರಿ: ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದಿಂದ ಪ್ರಸಕ್ತ 2026-27ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ, ನೀಟ್ ಅಥವಾ ಅಥವಾ ಜೆಇಇ ಮೂಲಕ ಸರ್ಕಾರಿ, ಖಾಸಗಿ ಹಾಗೂ ಮ್ಯಾನೇಜ್‌ಮೆಂಟ್ ಕೋಟಾದಡಿ ಆಯ್ಕೆಯಾದ ವೈದ್ಯಕೀಯ ಹಾಗೂ ವೃತ್ತಿಪರ ಕೋರ್ಸ್‌ಗಳ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರಿವು ವಿದ್ಯಾಭ್ಯಾಸ ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ವೆಬ್‌ಸೈಟ್ https://www.kccdclonline.karnataka.gov.inನಲ್ಲಿ ಅರ್ಜಿ ಸಲ್ಲಿಸಬೇಕು. ಆನ್‌ಲೈನ್‌ನಲ್ಲಿ ಸಲ್ಲಿಸಲಾದ ಅರ್ಜಿಗಳ ಹಾರ್ಡ್ ಪ್ರತಿಯನ್ನು ಜಿಲ್ಲಾ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಮೌಲಾನಾ ಆಜಾದ ಭವನ, ಶಿವಾಜಿನಗರ, 3ನೇ ಕ್ರಾಸ್ ಸಹಾಯವಾಣಿ ಸಂಪರ್ಕಿಸಬಹುದೆಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಗ್ಗಾವಿ ಜಿಟಿಟಿಸಿಯಲ್ಲಿ ಪ್ರವೇಶಾತಿ ಆಹ್ವಾನ

ಹಾವೇರಿ: ಶಿಗ್ಗಾವಿ ಸರ್ಕಾರ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ದಲ್ಲಿ ಬಾಕಿ ಉಳಿದ ವಿವಿಧ ಡಿಪ್ಲೊಮಾ ಕೋರ್ಸ್‌ಗಳಿಗೆ 10ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಬಹುದು ಎಂದು ಶಿಗ್ಗಾವಿ ಸರ್ಕಾರ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಚಾರ್ಯರು ತಿಳಿಸಿದ್ದಾರೆ. ಡಿಟಿಡಿಎಂ, ಡಿ.ಎಂ.ಸಿ.ಎಚ್, ಡಿಇಇಇ, ಹಾಗೂ ಡಿ.ಎ.ಐ.ಎಂ.ಎಲ್ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಲು ಆಸಕ್ತ ಅಭ್ಯರ್ಥಿಗಳು ಜಿಟಿಟಿಸಿ ಕೇಂದ್ರದಲ್ಲಿ ಜೂ.30 ರೊಳಗಾಗಿ ಅಥವಾ https://gttc.karnataka.gov.in ಭೇಟಿ ನೀಡಿ ಪ್ರವೇಶಾತಿ ಪಡೆಯಬಹುದು. ಪಿಯುಸಿ ವಿಜ್ಞಾನ, ಐಟಿಐ ಕೋರ್ಸ್ ಮಾಡಿರುವ ವಿದ್ಯಾರ್ಥಿಗಳು ಈ ಮೇಲಿನ ಕೋರ್ಸ್‌ಗಳಿಗೆ ಎರಡನೇ ವರ್ಷಕ್ಕೆ ಲ್ಯಾಟರಲ್ ಎಂಟ್ರಿ ಮೂಲಕ ನೇರವಾಗಿ ಪ್ರವೇಶವಿರುತ್ತದೆ. ತರಬೇತಿ ಕೇಂದ್ರವು ಅತ್ಯಾಧುನಿಕ ಹೈಟೆಕ್ ಲ್ಯಾಬ್, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹೈಟೆಕ್ ಹಾಸ್ಟೇಲ್ ಮತ್ತು ಮೆಸ್ ಸೌಲಭ್ಯವಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಪಾರ್ವತೆವ್ವ ಮಾಂಡೇಕರ



ತಡಸ: ಗ್ರಾಮದ ಶಿವಾಜಿನಗರ ಆರಿಗೇರಿ ಓಣಿಯ ಪಾರ್ವತೆವ್ವಾ ತಿ. ಮಾಂಡೇಕರ ಇವರು ತಮ್ಮ (78) ನಿಧನರಾದರು. ಮೃತರಿಗೆ ಮೂವರು ಪುತ್ರರು, ಓರ್ವ ಪುತ್ರಿ ಮತ್ತು ಅಪಾರ ಬಂಧು ಬಳಗವಿದೆ.

ಶಂಕ್ರಪ್ಪ ಭಜಂತ್ರಿ



ತಡಸ: ಗ್ರಾಮದ ಭಜಂತ್ರಿ ಸಮಾಜದ ಹಿರಿ ಮುಖಂಡರಾದ ಶಂಕ್ರಪ್ಪ ಹನುಮಂತಪ್ಪ ಭಜಂತ್ರಿ (70) ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗವಿದೆ.



ಕುಮಟಾ: ಣಿ ಭಾಷಿಕರಿಗಾಗಿ ಆಯೋಜಿಸಲಾದ ಎರಡು ದಿನಗಳ ರಂಗಾತರಂಗ ರಂಗತರಬೇತಿ ಕಾರ್ಯಾಗಾರಕ್ಕೆ ಶನಿವಾರ ಕುಮಟಾದ ಸಿ.ವಿ.ಎಸ್.ಕೆ. ಪ್ರೌಢಶಾಲೆಯ ಪ್ರಾರ್ಥನಾ ಮಂದಿರದಲ್ಲಿ ಅದ್ದೂರಿಯಾಗಿ ಚಾಲನೆ ನೀಡಲಾಯಿತು.

ಕಾರು ಅಡ್ಡಗಟ್ಟಿ 50 ಸಾವಿರ ರೂ. ಸುಲಿಗೆ

ಹಾವೇರಿ: ರಸ್ತೆ ಮಧ್ಯೆದಲ್ಲಿ ಕಾರನ್ನು ಅಡ್ಡಗಟ್ಟಿ ವಕೀಲರೊಬ್ಬರಿಂದ ಸುಮಾರು 50 ಸಾವಿರ ರೂ.ಹಣವನ್ನು ಸುಲಿಗೆ ಮಾಡಿರುವ ಘಟನೆ ಹಿರೇಕೆರೂರ ತಾಲೂಕು ಆಲದಗೇರಿ ಗ್ರಾಮದ ಹೊರವಲಯದಲ್ಲಿ ನಡೆದಿದೆ.

ಆಲದಗೇರಿ ಗ್ರಾಮದ ದಾನಪ್ಪ ಬಸಪ್ಪ ಮಾಸಣಗಿ, ಹೊಳಿಯಪ್ಪ ಬಸಪ್ಪ ಮಾಸಣಗಿ ಸೇರಿದಂತೆ ಇತರೆ ಐದು ಜನರ ವಿರುದ್ಧ ದೂರನ್ನು ದಾಖಲಿಸಲಾಗಿದೆ. ಆಲದಗೇರಿ ಗ್ರಾಮದ (ಹಾಲಿವಸ್ತಿ ಹಿರೇಕೆರೂರ) ವಕೀಲ ಗಣೇಶ ವಿಶ್ವನಾಥ ಕುಲಕರ್ಣಿ ಎಂಬುವವರೆ ಹಣವನ್ನು ಕಳೆದುಕೊಂಡವರು. ದೂರುದಾರ ವಕೀಲ ಗಣೇಶ ಅವರು ಹಾವೇರಿ ನ್ಯಾಯಾಲಯದಲ್ಲಿ ತಮ್ಮ ಕೆಲಸವನ್ನು ಪೂರ್ಣಗೊಳಿಸಿಕೊಂಡು, ಪುತ್ರ ಅಭಿಷೇಕ್ ನೊಂದಿಗೆ ಹಿರೇಕೆರೂರು ಕಡೆಗೆ ಹೋಗುವಾಗ ಘಟನೆ ನಡೆದಿದೆ.

ಆಲದಗೇರಿ ಬಳಿ ಎಮ್ಮೆ ಮೇಯಿಸುತ್ತಿದ್ದ ಶಂಕ್ರಪ್ಪ ಮಾಸಣಗಿ ಎಂಬುವವರ ಯೋಗಕ್ಷೇಮ ವಿಚಾರಿಸಿಕೊಂಡು ಹೋಗುತ್ತಿರುವಾಗ ಏಕಾಏಕಿ ಬಂದ ಆರೋಪಿ ದಾನಪ್ಪ ರಸ್ತೆಯಲ್ಲಿ ಕಾರು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಬಳಿಕ ಬೈಕ್ ನಲ್ಲಿ ಬಂದ ಆರೋಪಿಗಳು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೈದಿದ್ದು, ಪ್ಯಾಂಟಿನ ಕಿಸೆಯಲ್ಲಿದ್ದ 50 ಸಾವಿರ ಹಣವನ್ನು ಸುಲಿಗೆ ಮಾಡಿಕೊಂಡು ಹೋಗಿದ್ದಾರೆಂದು ಪೊಲೀಸರ ದೂರಿನಲ್ಲಿ ತಿಳಿಸಿದೆ. ಹಂಸಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕುಮಟಾ: ಕನ್ನಡ ಸಾಹಿತ್ಯ ಸೇವೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಅಸ್ಮಿತೆಯನ್ನು ತಮ್ಮ ಬರಹಗಳ ಮೂಲಕ ಸಮೃದ್ಧಗೊಳಿಸಿರುವ ಹಿರಿಯ ಸಾಹಿತಿ ವಿ.ಗ. ನಾಯಕ ಅವರನ್ನು ಉತ್ತರ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಪದಾಧಿಕಾರಿಗಳು ಅವರ ನಿವಾಸಕ್ಕೆ ತೆರಳಿ ಸನ್ಮಾನಿಸಿದರು.

ಮಗಳ ಮನೆತನವೇ ಮುಗಿದ್ಹೋಯ್ತು...!





ಹಾವೇರಿ: ಆರತಿಗೊಬ್ಬ ಮಗಳು, ಕೀರ್ತಿಗೊಬ್ಬ ಮಗ, ಚುರುಕಾದ ದಂಪತಿಗಳ ತುಂಬು ಸಂಸಾರ. ಸಾಲದ್ದಕ್ಕೆ ಸರ್ಕಾರಿ ನೌಕರಿಯಲ್ಲಿದ್ದುಕೊಂಡು ಸನ್ನಡತೆಯಿಂದ ಎಲ್ಲರ ಮನ ಗೆದ್ದಿದ್ದ ದಂಪತಿಗಳು ಮತ್ತು ಅವರ ಸಂಸ್ಕಾರಿ ಮಕ್ಕಳು. ಆದರೆ ಯಾವ ಕೆಟ್ಟಕಣ್ಣು ಬಿತ್ತೋ? ದೇವರ ದರ್ಶನಕ್ಕೆಂದು ಹೊರಟವರು ತಲುಪಿದ್ದು ದೇವರನ್ನೇ..

ಇದು ಶನಿವಾರ ಹಾವೇರಿ ನಗರದ ಸರ್ಕಾರಿ ಉದ್ಯೋಗಿಗಳ ವಸತಿ ನಿಲಯದಲ್ಲಿ ನೆರೆದವರು ಗಂಟಲುಬ್ಬಿಸಿಕೊಂಡು, ದುಃಖ ಹಿಡಿದು, ಹೃದಯ ತುಂಬಿಕೊಂಡು ಗದ್ಗದಿತರಾಗಿ ಹೇಳುತ್ತಿದ್ದ ಮಾತು ಎಂಥಹ ಕಠಿಣ ಹೃದಯವನ್ನೂ ಕರಗಿಸುವಂತಿತ್ತು.

ರಟ್ಟೀಹಳ್ಳಿ ತಾಲೂಕಿನ ಕಬ್ಬಾರ ಗ್ರಾಮದ ಪ್ರವೀಣ ಬಾಳೇಕಾಯಿ ಇದರ ಕೇಂದ್ರಬಿಂದು. ತಂದೆಯ ನಿಧನಾನಂತರ ಸರ್ಕಾರಿ ನೌಕರಿ ಪಡೆದು, ಅತ್ಯುತ್ತಮ ನಡೆ-ನುಡಿಯಿಂದ ತಮ್ಮ ಕಚೇರಿ ಮಾತ್ರವಲ್ಲ, ತಮ್ಮ ಸ್ವಗ್ರಾಮದಲ್ಲೂ, ಇತರೆ ಇಲಾಖೆಗಳ ಸಿಬ್ಬಂದಿಗಳಿಗೆ ಪ್ರೀತಿ ಪಾತ್ರರಾಗಿದ್ದವರು. ಆದರೆ ತಮ್ಮ ಸಂಬಂದಿಕರ ಕುಟುಂಬ ರಾಯರ ದರ್ಶನಕ್ಕೆಂದು ಸಿದ್ಧರಾಗಿ ಬಂದಾಗ, ಅವರೊಟ್ಟಿಗೆ ಹೋಗಿ ಬಂದರಾಯಿತೆಂದು ಹೋದವರು ವಾಪಸು ಬರಲೇ ಇಲ್ಲ.

ಕೊಪ್ಪಳದ ಬಳಿ ನಡೆದ ಅಪಘಾತದಲ್ಲಿ ಓಮ್ನಿ ವಾಹನದಲ್ಲಿ ತೆರಳಿದ್ದ ಒಂಬತ್ತು ಜನರ ಪೈಕಿ ಆರು ಜನರು ಇಲ್ಲವಾಗಿದ್ದಾರೆ. ಮೃತರನ್ನು ಲೋಕೋಪಯೋಗಿ ಇಲಾಖೆ ಸಿಬ್ಬಂದಿ ಪ್ರವೀಣ ಬಾಳೇಕಾಯಿ ಅವರ ಪತ್ನಿ ಹೇಮಾ (ಕೆಂಚಮ್ಮ) ಬಾಳಿಕಾಯಿ (36), ಪುತ್ರ ಚಿನ್ಮಯ (16), ಸಂಬಂಧಿಯಾದ ರಟ್ಟಿಹಳ್ಳಿ ತಾಲೂಕಿನ ಹಿರೇಕಬ್ಬಾರದ ಅಮೃತಾ ಕೋಟಿಹಾಳ (25) ಹಾಗೂ ಕಾರು ಚಾಲಕ ಹಾವೇರಿ ಶಿವಾಜಿನಗರದ ರಮೇಶ ಬಳ್ಳಾರಿ (45) ಎಂದು ಗುರುತಿಸಲಾಗಿದೆ. ಘಟನಾ ಸ್ಥಳದಲ್ಲೇ ಕ್ಯಾಂಟರ್ ರಭಸಕ್ಕೆ ಇವರೆಲ್ಲ ಸಾವನ್ನಪ್ಪಿದರೆ ಅಮೃತಾ ಅವರ ಪುತ್ರ ಪ್ರಣವ್ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್‌ಗೆ ದಾಖಲಿಸಿದ್ದು, ಚಿಕಿತ್ಸೆ ಫಲಿಸದೇ ಅವರೂ ಸಹ ಶನಿವಾರ ಸಂಜೆಯ ಹೊತ್ತಿಗೆ ಕಣ್ಮುಚ್ಚಿದರು.

ಅಪಘಾತದಲ್ಲಿ ಪ್ರವೀಣ-ಹೇಮಾ ದಂಪತಿಯ 12 ವರ್ಷದ ಪುತ್ರಿ ಸೋನಾಲಿಕಾ ಮತ್ತೊಂದು ಮಗು ಗಾಯಗೊಂಡಿದೆ. ಅಮೃತಾ ಅವರ ಪತಿ ಪ್ರವೀಣ ಕೋಟಿಹಾಳ ಗಂಭೀರವಾಗಿ ಗಾಯಗೊಂಡು, ಎರಡೂ ಕಾಲುಗಳು ಕತ್ತರಿಸಲ್ಪಟ್ಟಿವೆ ಎನ್ನಲಾಗಿದ್ದು, ಇದು ಅಪಘಾತದ ಭೀಕರತೆಗೆ ಹಿಡಿದ ಕನ್ನಡಿ ಎನ್ನಬಹುದು.

ಯಾರಿಗಾಗಿ ನಾನು ಬದುಕಲಿ?

ಅಪಘಾತದಲ್ಲಿ ಮೃತರಾದ ಪ್ರವೀಣ ಪತ್ನಿ ಹೇಮಾ ಅವರ ತಾಯಿ ಮನೆಯಲ್ಲೇ ಇದ್ದು, ಘಟನಾ ನಂತರ ಚಿಂತಾಕ್ರಾಂತರಾಗಿದ್ದಾರೆ. ನಾಲ್ಕು ಜನರು ತುಂಬು ಕುಟುಂಬದಲ್ಲಿ ಮೊಮ್ಮಗಳು ಮಾತ್ರವೇ ಉಳಿದಿದ್ದು, ಇದೀಗ ಮನೆಯ ಆಧಾರ ಸ್ಥಂಭಗಳೆ ಉರುಳಿ ಹೋಗಿವೆ, ನನ್ನ ಮಗಳ ಮನೆತನವೇ ಮುಗಿದುಹೋಯ್ತು, ಈಗ ನಾನು ಯಾರಿಗಾಗಿ ಬದುಕಲಿ? ಎಂದು ಕಣ್ಣೀರಿಡುತ್ತಿದ್ದ ದೃಶ್ಯ ಅಲ್ಲಿದ್ದ ಪ್ರತಿಯೊಬ್ಬರ ಕಣ್ಣಾಲಿಗಳನ್ನು ತೇವಗೊಳಿಸಿದವು. ಅವರ ಆಕ್ರಂದನ, ಎದೆಬಡಿದುಕೊಂಡು ರೋಧಿಸುತ್ತಿದ್ದ ಕ್ಷಣ ಎಂಥವರನ್ನೂ ಅಧೀರರನ್ನಾಗಿಸುವಂತಿತ್ತು. ಇಡೀ ಕುಟುಂಬವನ್ನೇ ಕಳೆದುಕೊಂಡು ಈ ತಾಯಿಗೆ ಬದುಕಿನುದ್ದಕ್ಕೂ ಯಾರಿಲ್ಲ ಎಂಬ ಸತ್ಯವೇ ಇದೀಗ ಅರಗಿಸಿಕೊಳ್ಳಲಾಗದ, ನಿತ್ಯ ಸತ್ಯವಾಗಿದೆ. ಸಂಜೆ ವೇಳೆಗೆ ಎಲ್ಲಾ ಮೂವರ ಅಂತ್ಯಕ್ರಿಯೆ ನಡೆದು, ಬಂದು-ಬಾಂದವರು, ಗೆಳೆಯರು ತಂತಮ್ಮ ಮನೆಗೆ ವಾಪಸಾಗಿದ್ದಾರೆ. ಒಂದೆಡೆ ಇದ್ದೊಬ್ಬ ಮೊಮ್ಮಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ ಅವರ ಕಾಳಜಿ ನೋಡುವವರಾರು ಎಂಬುದೂ ಇದೀಗ ಅಜ್ಜಿಯ ಚಿಂತೆಯಾಗಿದೆ.ಒಟ್ಟಾರೆ ಈ ಅಪಘಾತ ಮೂರು ಕುಟುಂಬಗಳ ಆರ್ತನಾದ, ಬದುಕುಳಿದವರ ಜೀವನದುದ್ದಕ್ಕೂ ಮಾಗದ ಗಾಯವಾಗಿದೆ?

ಒಪಿಎಸ್ ಜಾರಿಗಾಗಿ ಪೂರ್ವಭಾವಿ ಸಭೆ ಜು.4ರಿಂದ ಪ್ರತಿಭಟನೆಗೆ ತೀರ್ಮಾನ

ಹಾವೇರಿ: ಒ.ಪಿ.ಎಸ್. ಜಾರಿ ಮಾಡಲೇಬೇಕೆಂಬ ಹಕ್ಕೊತ್ತಾಯದ ಮೂಲಕ ಸರ್ಕಾರದ ಮೇಲೆ ಒತ್ತಡ ತರುವ ನಿರ್ಧಾರವನ್ನು ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ ಹಾಗೂ ವಿವಿಧ ಸಂಘಟನೆಗಳು ಕೈಗೊಂಡಿವೆ.

ನಗರದ ಜಿಲ್ಲಾ ಗುರುಭವನದಲ್ಲಿ ಶನಿವಾರ ಮಧ್ಯಾಹ್ನ ಕರೆಯಲಾಗಿದ್ದ ಪೂರ್ವಭಾವಿ ಸಭೆಯನ್ನು ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ನೇತೃತ್ವದಲ್ಲಿ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಕರೆಯಲಾಗಿತ್ತು. ಈ ಪೂರ್ವಭಾವಿ ಸಭೆಯಲ್ಲಿ ಪಿಂಚಣಿಗೋಸ್ಕರ ಪ್ರತಿಭಟನೆ ಹಮ್ಮಿಕೊಳ್ಳುವ ಬಗ್ಗೆ ಒಕ್ಕೊರಲಿನ ಅಭಿಪ್ರಾಯ ವ್ಯಕ್ತವಾಯಿತು. 2026 ಜು.4ರಿಂದ ತಾಲೂಕಾ ಹಂತದಲ್ಲಿ, ಜು.18ರಂದು ಜಿಲ್ಲಾ ಹಂತದಲ್ಲಿ ಹಾಗೂ ಆ.1ರಂದು ರಾಜ್ಯ ಮಟ್ಟದಲ್ಲಿ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಯಿತು. ಎಲ್ಲ ಹಂತದ ಪ್ರತಿಭಟನೆಗಳನ್ನು ಕೇಂದ್ರ ಸಮಿತಿಯ ನಿರ್ದೇಶನದಂತೆ ಯಶಸ್ವಿಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಆರ್.ಹೆಚ್. ಬೆಟ್ಟಳ್ಳೇರ, ಸಹ ಶಿಕ್ಷಕ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಶಾಂತಗಿರಿ, ಪ್ರೌಢ ಶಾಲಾ ಮಂಡಳಿಯ ಅಧ್ಯಕ್ಷ ಎಂ.ಎಸ್. ಕೆಂಚನಗೌಡ್ರ, ಪದವಿ ಪೂರ್ವ ಉಪನ್ಯಾಸಕ ಸಂಘದ ರಾಜ್ಯ ಉಪಾಧ್ಯಕ್ಷ ಸಂಗಾಪುರ ಮತ್ತು ಅನುದಾನಿತ ಪದವಿ ಪೂರ್ವ ಸಂಘದ ಜಿಲ್ಲಾಧ್ಯಕ್ಷ ಗಚ್ಚಿನ ಮತ್ತು ಪದವಿಪೂರ್ವ ಉಪನ್ಯಾಸಕಸಂಘದ ಅಧ್ಯಕ್ಷ ಎಸ್.ಎಸ್. ನಿಸ್ಸೀಮಗೌಡ್ರ, ಎಸ್.ಎಲ್. ಕಾಡದೇವರಮಠ, ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನಾಗರಾಜ, ಪಿಂಚಣಿ ವಂಚಿತ ನೌಕರರ ಸಂಘದ ಅಧ್ಯಕ್ಷ ಜಿ. ಹನುಮಂತಪ್ಪ, ದೈಹಿಕ ಶಿಕ್ಷಕ ಸಂಘದ ಜಿಲ್ಲಾಧ್ಯಕ್ಷಗ್ಯಾನಗೌಡ್ರ, ಹೊಸಗೌಡ್ರ, ಶಂಕರ್ ಸೇರಿದಂತೆ ತಾಲೂಕಾ ಹಂತಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಪದಾಧಿಕಾರಿಗಳು ಹಾಗೂ ಮುಖ್ಯೋಪಾಧ್ಯಾಯರುಗಳು ಪಾಲ್ಗೊಂಡಿದ್ದರು.

ಜಿಲ್ಲಾ ಕಾರ್ಯದರ್ಶಿ ಎಸ್.ಎಸ್. ಕುಂದೂರು ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮ ನಿರ್ವಹಿಸಿದರು. ಎಂ.ಬಿ. ರಮೇಶ ಸ್ವಾಗತಿಸಿದರು.



ಕೆಂಪೇಗೌಡರ ಜಯಂತಿ:ಪುಷ್ಪ ನಮನ

ರಾಣೇಬೆನ್ನೂರ: ಇಂದು ಬೆಂಗಳೂರು ವಿಶ್ವಮಟ್ಟದ ನಗರವಾಗಿ ಬೆಳೆದಿರುವುದಕ್ಕೆ ಕೆಂಪೇಗೌಡರ ದೂರದೃಷ್ಟಿ ಶಿಸ್ತು ಬದ್ಧ ಆಡಳಿತವೇಕಾರಣಎಂದು ಪ್ರಾಚಾರ್ಯರಾದ ಹಳದಪ್ಪ. ಕೆ ಹೇಳಿದರು.

ನಗರದ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಹೊಸಮನಿ ಸಿದ್ದಪ್ಪ ಪದವಿ ಪೂರ್ವ ಕಾಲೇಜಿನಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಅಧ್ಯಕ್ಷತೆ ವಹಿಸಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಕೆಂಪೇಗೌಡರು ಯುದ್ಧಪ್ರಿಯ ರಾಜರಾಗಿರಲಿಲ್ಲ ಧರ್ಮ ಪ್ರಭುವಾಗಿದ್ದರು ತಮ್ಮ ಸಾಮಾಜಿಕ ಸೇವೆಯಿಂದಲೇ ನಾಡಿನ ಮನೆಮಾತಾದ ಶ್ರೇಷ್ಠ ಸಾಧಕರು, ಉತ್ತಮ ರಾಜ ತಾಂತ್ರಿಕ ನಿಪುಣ, ಮುತ್ಸದ್ದಿಯಾಗಿದ್ದರು ಎಂದರು.

ಈ ರಾಜ್ಯಕ್ಕೆ ಕೆಂಪೇಗೌಡರು ಕೊಡುಗೆ ಪರವಾಗಿದ್ದು 500 ವರ್ಷಗಳ ಹಿಂದೆ ಕಟ್ಟಿದ ಬೆಂಗಳೂರು ಇಂದು ಜಗತ್ತಿನಲ್ಲೇ ಗಮನಸೆಳೆದಿದೆ, ಮತ್ತು ಬೆಂಗಳೂರಿನ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಎದುರಿಸಿದಂತೆ ನೋಡಿಕೊಳ್ಳಲು ಕೆರೆಕಟ್ಟೆಗಳನ್ನು ಕಟ್ಟಿಸಿದರು ನಾಲ್ಕು ದಿಕ್ಕುಗಳಲ್ಲಿ ಕೋಟೆಗಳನ್ನು ಕಟ್ಟಿ ರಕ್ಷಣೆಗೆ ಆದ್ಯತೆ ನೀಡಿದರು. ಇಂತಹ ಮಹಾನ್ ನಾಯಕರ ಸಾಧನೆ ಬಗ್ಗೆ ಯುವ ಜನರಿಗೆ ತಿಳಿಸಬೇಕು. ಈ ಶುಭ ಸಂದರ್ಭದಲ್ಲಿ ನಾವು ಕೆಂಪೇಗೌಡರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಸ್ವಚ್ಛ ಸುಂದರ ಮತ್ತು ಅಭಿವೃದ್ಧಿ ಹೊಂದಿದ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸೋಣ ಎಂದು ಸಂಕಲ್ಪ ಮಾಡೋಣ ಎಂದರು.

ಉಪನ್ಯಾಸಕ ಹೆಚ್ ಶಿವಾನಂದ ಮಾತನಾಡಿ, ನಾಡಪ್ರಭು ಕೆಂಪೇಗೌಡರ ಆಡಳಿತದ ಕಾಲ ಸುಂದರಮಯವಾಗಿತ್ತು ಬೆಂಗಳೂರನ್ನು ನವನಗರ ನಿರ್ಮಾಣ ಮಾಡಿದ ಆಧುನಿಕ ನಿರ್ಮಾಣ ಕರ್ತೃ ಆಗಿದ್ದಾರೆ ಪ್ರತಿಯೊಂದು ಸಮಾಜಕ್ಕೂ ಒಂದೊಂದು ಪೇಟೆಗಳನ್ನು ಕಟ್ಟಿ, ಉದ್ಯೋಗಕ್ಕೂ ಅವಕಾಶ ಕಲ್ಪಿಸಿಕೊಟ್ಟರು ಅವರ ಕಾಲಮಾನದ ಎಲ್ಲಾ ಕ್ಷೇತ್ರದ ಅತ್ಯುತ್ತಮ ಪ್ರತಿಭೆಗಳನ್ನು ಗುರುತಿಸಿ, ಆಶ್ರಯ ನೀಡಿದರು. ಕೆಂಪೇಗೌಡರು ಕಟ್ಟಿದ ಬೆಂಗಳೂರು ಈಗಲೂ ಉತ್ತರೋತ್ತರವಾಗಿ ಬೆಳೆಯುತ್ತಿರುವುದೇ ಸಾಕ್ಷಿಯಾಗಿದೆ ಅವರ ಕಾಲದಲ್ಲಿ ಮೂಲ ಸೌಕರ್ಯ, ನಗರಾಭಿವೃದ್ಧಿ, ಕೃಷಿ, ನೀರಾವರಿ ಕೆರೆಗಳ ಅಭಿವೃದ್ಧಿ ಸೇರಿದಂತೆ ಹಲವಾರು ಯೋಜನೆಗಳನ್ನು ಕೆಂಪೇಗೌಡರು ಜಾರಿಗೆ ತಂದಿದ್ದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರೇವಣ್ಣ ನಾಯಕ್, ಆಶಾ ಆರ್ ಎಸ್, ಡಾ ಓಂಕಾರ್ ನಾಯಕ್, ಪ್ರವೀಣ್ ಪಾಟೀಲ್, ಅಭಿರಾಜ್ ಪಾಟೀಲ್, ಆನಂದ ಕೆ.ಇ ಮತ್ತಿತರರು ಉಪಸ್ಥಿತರಿದ್ದರು.



ಜಿಲ್ಲೆಯಲ್ಲಿ ಭಾವೈಕ್ಯತೆಯ ಮೊಹರಂ ಆಚರಣೆ

ಹಾವೇರಿ: ಹಿಂದೂ ಮುಸ್ಲಿಂ ಬಾಂಧವರು ಭಾವೈಕ್ಯತೆಯಿಂದ ಆಚರಿಸುವ ಮೊಹರಂ ಹಬ್ಬವನ್ನು ಜಿಲ್ಲಾದ್ಯಂತ ಶುಕ್ರವಾರ ಆಚರಣೆ ಮಾಡಿದರೆ, ಹಾವೇರಿ ನಗರದಲ್ಲಿ ಶನಿವಾರ ಶ್ರದ್ಧಾ-ಭಕ್ತಿಯಿಂದ ಆಚರಣೆ ಮಾಡಲಾಯಿತು.

ಬೆಳಗ್ಗೆ 6 ಗಂಟೆಯಿಂದಲೇ ನಗರದ ವಿವಿದ ಭಾಗದ ದೇವರುಗಳು ಹಾಗೂ ಡೋಲಿ ಮೆರವಣಿಗೆ, ಅಗ್ನಿಕುಂಡ ಪ್ರವೇಶ ಸೇರಿದಂತೆ ಧಾರ್ಮಿಕ ಕಾರ್ಯಗಳು ಜರುಗಿದವು. ಸಂಜೆ ವೇಳೆ ಮೆಹಬೂಬ ಸೂಬಾನಿ ದರ್ಗಾ, ದಾವಲ್ ಮಲ್ಲಿಕ್ ದರ್ಗಾ,



ಅತ್ತಾರ್‌ಗಲ್ಲಿ, ಸುಭಾಸ್ ವೃತ್ತ, ಬೊರೆಶಾವಲ್ಲಿ ದರ್ಗಾ, ಕೊರವರ ಓಣಿ, ಸೂಲಮಟ್ಟಿ, ಟಿಪ್ಪು ನಗರ (ಮುಲ್ಲಾನಕೇರಿ), ಮನಿಯಾರ್ ಓಣಿ, ಗ್ಯಾರವಿ ದರ್ಗಾದ ಅಲೈ ದೇವರುಗಳು ನಗರದ ಪ್ರಮುಖ ರಸ್ತೆಗಳಲ್ಲಿ ಅದ್ದೂರಿ ಮೆರವಣಿಗೆ ನಡೆಸಿದರು.

ಮೆರವಣಿಗೆಯ ಸಂದರ್ಭದಲ್ಲಿ ಅಲೈ ದೇವರುಗಳಿಗೆ ಭಕ್ತರು ಸಕ್ಕರೆ, ಬೆಲ್ಲ, ಗೊಬ್ಬರಿ, ಸೇರಿದಂತೆ ನೈವೇದ್ಯ ಸಲ್ಲಿಸಿದರೆ ಇನ್ನೂ ಕೆಲವರು ಉತ್ತತ್ತಿ, ಬಾಳೆ ಹಣ್ಣು ಎಸೆಯುವ ಮೂಲಕ ತಮ್ಮ ಹರಕೆಯನ್ನು ತೀರಿಸಿದರು. ಭಕ್ತರು ತಮ್ಮ ಆರಾಧ್ಯ ದೇವರ ಮೆರವಣಿಗೆಯಲ್ಲಿ ಪಾಲ್ಗೊಂಡು ಆಶೀರ್ವಾದ ಪಡೆದುಕೊಂಡರು. ಶನಿವಾರ ಸಂಜೆ ಸುಭಾಸ್ ಸರ್ಕಲ್ ನಲ್ಲಿ ಒಂದೆ ಕಡೆ ಸೇರಿದ ಎಲ್ಲಾ ದೇವರುಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ದೇವರನ್ನು ಹೊಳೆಗೆ ಕಳುಹಿಸಲಾಯಿತು.

ಫಲಾನುಭವಿಗಳ ಪಟ್ಟಿಯಲ್ಲಿ ಉಳ್ಳವರೇ ಹೆಚ್ಚು: ಬಳ್ಳಾರಿ

ಬ್ಯಾಡಗಿ: ಪುರಸಭೆ ವ್ಯಾಪ್ತಿಯಲ್ಲಿ ಬರುವ ಆಶ್ರಯ ಮನೆ ಹಂಚಿಕೆಯು ತಾತ್ಕಾಲಿಕ ಪಟ್ಟಿಯಲ್ಲಿ ದೋಷರಹಿತವಾಗಿದ್ದು, ಬಡವರಿಗಿಂತ ಉಳ್ಳವರೆ ಪಟ್ಟಿಯಲ್ಲಿ ಹೆಚ್ಚಿದ್ದಾರೆ ಎಂದು ಮಾಜಿ ಶಾಸಕ ಹಾವೇರಿ ಜಿಲ್ಲಾಧ್ಯಕ್ಷರು ವಿರುಪಾಕ್ಷಪ್ಪ ಬಳ್ಳಾರಿ ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ಅಧಿಕಾರದಲ್ಲಿದ್ದಾಗ ಆಶ್ರಯ 500, ಮನೆಗಳನ್ನು ನೀರ್ಗತಿಕರಿಗೆ ಕಡುಬಡವರಿಗೆ ಹಂಚಲು ತೀರ್ಮಾನಿಸಲಾಗಿತ್ತು ಕಳೆದ ಬಾರಿ ನಿವೇಶನ ಹಂಚಿಕೆಯಲ್ಲಿ ಬಡವರಿಗಿಂತ ಉಳ್ಳವರಿಗೆ ಪ್ರತಿಭಟನೆ ಮಾಡಲಾಯಿತು. ನಿವೇಶನ ಹಂಚಿಕೆಯನ್ನು ಧಾತುಗೊಳಿಸಲಾಗಿತ್ತು ತದನಂತರ ಇದೀಗ ಮತ್ತೆ ಆಶ್ರಯ ನಿವೇಶನ ಹಂಚಿಕೆಯ ತಾತ್ಕಾಲಿಕ ಪಟ್ಟಿ ಬಿಡುಗಡೆ ಮಾಡಿದ್ದು, ಇದರಲ್ಲಿ ಇತ್ತೀಚೆಗೆ ಅರ್ಜಿಯಾಗಿದೆ. ಅರ್ಜಿದಾರರಿಗೆ ಹಾಗೂ ಜಮೀನಿನಂದು ಹೊಂದಿದವರಿಗೆ ಮತ್ತು ಐಟಿ ರಿಟರ್ನ್ ಮಾಡುವವರಿಗೆ ನಿವೇಶನದ ಪಟ್ಟಿಯಲ್ಲಿ ಹೆಸರು ಪ್ರಕಟವಾಗಿದೆ ಉಳ್ಳವರಿಗೆ ಮತ್ತೆ ಆಶ್ರಯ ಸಮಿತಿಯವರು ಮನೆ ಹಾಕಿದ್ದಾರೆ ಬಡವರಿಗೆ ಊರು ನೀಡಿಲ್ಲ ಕೂಡಲೇ ಸೂಕ್ತ



ತನಿಕಾ ತಂಡವನ್ನು ರಚಿಸಿ ಬಡವರಿಗೆ ನಿವೇಶನಕ್ಕೆ ದಾರಿಮ ಮಾಡಬೇಕು.

ಇಲ್ಲವಾದರೆ ರಾಜ್ಯಾಧ್ಯಕ್ಷರ ಸಮ್ಮುಖದಲ್ಲಿ ವಿಧಾನಸೌಧದ ಪಾಪದಲ್ಲಿ ಮಾನ್ಯ ವಸತಿ ಸಚಿವರಿಗೆ ಸಂಚಿಕೆಯಾದ ಬಗ್ಗೆ ವಿವರವನ್ನು ಕೇಳಲಾಗುತ್ತದೆ ಎಂದು ಎಚ್ಚರಿಸಿದರು. ತಾಲೂಕಾಧ್ಯಕ್ಷ ನಿಂಗಪ್ಪ ಬತ್ತಲ ಕಟ್ಟಿ ಮಾತನಾಡಿದರು. ಪಕ್ಷದ ಹಿರಿಯ ಮುಖಂಡ ಸುರೇಶ ಉದ್ಯೋಗಣ್ಣನವರ್, ಶಿವರಾಜ್ ಅಂಗಡಿ, ಜಿತೇಂದ್ರ, ಸುಣಗಾರ್, ಎಂಡಿ ಚಿಕ್ಕಣ್ಣನವರ್, ಶಿವ ರಾಯಪ್ಪ ಅಣ್ಣಪ್ಪನವರ್ ವಿಜಯಮಾಳ್ಗಿ ಶುಭಾಷ್ ಮಾಳಗಿ ಪರಶುರಾಮ್ ಉಜನಿ ಮೆಹಬೂಬ್ ಸಾಬ್ ಆಗಸನಹಳ್ಳಿ ಇದ್ದರು.

ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಹೇಳಿಕೆ ಕ್ರಮಕ್ಕೆ ಒತ್ತಾಯಿಸಿ ಮುಸ್ಲಿಂ ವಕೀಲರ ಸಮಿತಿ ಮನವಿ

ಹಾವೇರಿ: ಪ್ರವಾದಿ ಮಹ್ಮದ ಪೈಗಂಬರ ಹಾಗೂ ಆಯಿಷಾ ಸಿದ್ಧಿಕ್ ಅವರ ಕುರಿತು ಸಾಮಾಜಿಕ ಜಾಲ ತಾಣಗಳಲ್ಲಿ ಅವಹೇಳನಕಾರಿ ಹೇಳಿಕೆ ನೀಡುತ್ತಿರುವ ಕೊಲ್ಕತ್ತಾ ಮೂಲದ ಮಹಿಳೆಯ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಹಾವೇರಿ ಜಿಲ್ಲಾ ಮುಸ್ಲಿಂ ವಕೀಲರ ಹಿತರಕ್ಷಣಾ ಸಮಿತಿ ಮುಖಂಡರು ಶನಿವಾರ ನಗರದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಪಶ್ಚಿಮಬಂಗಾಳರಾಜ್ಯದಕೊಲ್ಕತ್ತಾ ಮೂಲದ ಮಹಿಳೆ ನಾಜಿಯಾ ಇಲಾಹಿಖಾನ್ ಎಂಬುವವರು ಪ್ರವಾದಿಗಳ ಹಾಗೂ ಮಾ. ಆಯಿಷಾ ಸಿದ್ದಿಕ್ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಹೇಳಿಕೆ ಕೊಡುತ್ತಿದ್ದಾರೆ. ಇವು ಮುಸ್ಲಿಂ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡುವ ರೀತಿಯಲ್ಲಿವೆ. ಇಂತಹ ಅಸಭ್ಯ ಮತ್ತು ಪ್ರಚೋದನಾಕಾರಿ ಹೇಳಿಕೆಗಳು ಮುಸ್ಲಿಂ ಸಮಾಜದಲ್ಲಿ ಸೌಹಾರ್ದತೆ, ಶಾಂತಿ ಭಂಗವನ್ನುಂಟು ಮಾಡುವ ದುರುದ್ದೇಶ ಹೊಂದಿವೆ ಎಂದು ಆರೋಪಿಸಿದ್ದಾರೆ.

ಭಾರತ ದೇಶದಲ್ಲಿರುವ ಎಲ್ಲ ಸಮಾಜವರ್ಗದವರುವಿವಿಧತೆಯಲ್ಲಿ ಏಕತೆಹೊಂದಿದ್ದು, ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ಕೆಡಿಸಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ಕೊಲ್ಕತ್ತಾ ಮೂಲದ ನಾಜಿಯಾ ಇಲಾಹಿಖಾನ್ ಎಂಬ ಮಹಿಳೆಯ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ವೇಳೆ ಜಿಲ್ಲಾ ಮುಸ್ಲಿಂ ವಕೀಲರ ಹಿತರಕ್ಷಣ ಸಮಿತಿ ಅಧ್ಯಕ್ಷ ನಿಜಾಮುದ್ದೀನ್ ಹುಬ್ಬಳ್ಳಿ, ಕಾರ್ಯದರ್ಶಿ ಎಂ.ಎಂ. ರಜಾಕನವರ, ವಕೀಲರಾದ ಉಮರ್ ರಜಾಕನವರ, ಗುಲಾಬ್ ನಾಗನೂರ, ಮರ್ದಾನ್‌ಅಲಿಶಾ ಹುಂಬಿಗೇರಿ, ಇಜಾಜ್‌ಅಹ್ಮದ ಅಮ್ಮಿನಬಾವಿ, ಸಲ್ಮಾನ್ ಯಾದವಾಡ, ಹಬೀಬ್ ಉಲ್ಲಾ ಬಾಸೂರ ಸೇರಿದಂತೆ ಹಲವರಿದ್ದರು.

ಸಂಸದ ಬೊಮ್ಮಾಯಿ ಸಂತಾಪ

ಹಾವೇರಿ: ಕೊಪ್ಪಳ ಜಿಲ್ಲೆಯ ಭಾನಾಪುರ ಬಳಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮಂತ್ರಾಲಯ ದರ್ಶನಕ್ಕೆ ತೆರಳುತ್ತಿದ್ದವರ ಸಾವು-ನೋವು ಸುದ್ದಿ ಅತ್ಯಂತ ನೋವುಂಟು ಮಾಡಿದೆ. ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲೂಕಿನ ಕೆಲವರು ಮೃತಪಟ್ಟು, ಹಲವರು ಗಾಯಗೊಂಡಿರುವ ಮಾಹಿತಿ ಇದೆ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಅವರ ಕುಟುಂಬದವರಿಗೆಈದುಃಖವನ್ನು ಭರಿಸುವಶಕ್ತಿಯನ್ನು ದೇವರು ಕರುಣಿಸಲಿ. ಗಾಯಗೊಂಡಿರುವ ಎಲ್ಲರೂ ಶೀಘ್ರ ಗುಣಮುಖರಾಗಲಿ ಎಂದು ಹಾರೈಸುತ್ತೇನೆ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಾಲು ಜಾರಿ ಬಿದ್ದು ಸಾವು

ಹಾವೇರಿ: ಕೆರೆಯಲ್ಲಿ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಅಡುಗೆ ಭಟ್ಟರೊಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಶಿಗ್ಗಾವಿ ಪಟ್ಟಣದ ಹಿರೇ ಕೆರೆಯಲ್ಲಿ ನಡೆದಿದೆ. ಶಿಗ್ಗಾವಿ ಕ್ರೀಡಾಂಗಣ ಬಳಿಯ ನಿವಾಸಿಯಾಗಿದ್ದ ಅಡುಗೆ ಭಟ್ಟ ಶೇಖಪ್ಪ ಬಸಪ್ಪ ಕುಂಬಾರ (63) ಎಂಬುವವರೆ ಮೃತಪಟ್ಟವರು. ಇವರು ಶಿಗ್ಗಾವಿಯ ಹಿರೇ ಕೆರೆಯಲ್ಲಿ ಮೂತ್ರ/ಮಲ ವಿಸರ್ಜನೆಗೆ ಹೋದಾಗ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು, ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ಮೃತರ ಪತ್ನಿ ಅನಸೂಯಾ ಕುಂಬಾರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಶಾರ್ಟ್ ಸರ್ಕ್ಯೂಟ್ :ಬಣವಿ ಭಸ್ಮ

ಹಾವೇರಿ: ವಿದ್ಯುತ್ ಲೈನ್ ಶಾರ್ಟ್‌ಸರ್ಕ್ಯೂಟ್‌ನಿಂದಾಗಿ ಕಣದಲ್ಲಿದ್ದ ಮೇವಿನ ಬಣವಿ ಸೇರಿದಂತೆ ಕೃಷಿ ಪರಿಕರಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿರುವ ಘಟನೆ ತಾಲೂಕಿನ ಹಾವನೂರು ಗ್ರಾಮದಲ್ಲಿ ನಡೆದಿದೆ.

ಹಾವನೂರಿನ ಹನುಮಂತಪ್ಪ ದೊಡ್ಡನಿಂಗಪ್ಪ ಹರಪನಹಳ್ಳಿ ಎಂಬುವವರಿಗೆ ಸೇರಿದ ಕಣದಲ್ಲಿ ಈ ಘಟನೆ ನಡೆದಿದೆ. ಘಟನೆಯಲ್ಲಿ ಕಣದಲ್ಲಿ ಒಟ್ಟಲಾಗಿದ್ದ ಶೇಂಗಾ ಹೊಟ್ಟು, ಅಲಸಂದಿ ಹೊಟ್ಟು, ಮೆಕ್ಕೆಜೋಳ ರವದಿ, ಭತ್ತದ ಹುಲ್ಲು ಹೀಗೆ ಸುಮಾರು 10 ಟ್ರ್ಯಾಕ್ಟರ್‌ನಷ್ಟು ಮೇವು ಸುಟ್ಟಿದೆ. ಅಲ್ಲದೇ ಕಣದಲ್ಲಿದ್ದ ರಂಟೆ, ಕುಂಟೆ, ಚಕ್ಕಡಿ ಸುಟ್ಟು ಹೋಗಿವೆ. ಸ್ಥಳಕ್ಕೆ ಅಗ್ನಿಶಾಮಕ ಠಾಣೆಯ ಸಿಬ್ಬಂದಿಗಳು ಬಂದು ಬೆಂಕಿಯನ್ನು ನಂದಿಸಿದರು. ಸುಮಾರು 90 ಸಾವಿರ ರೂ.ಗಳಷ್ಟು ಹಾನಿ ಸಂಭವಿಸಿದೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾವೇರಿ ಬಿಜೆಪಿ ಜಿಲ್ಲಾ ಎಸ್.ಸಿ. ಪದಾಧಿಕಾರಿಗಳಿಗೆ ಆದೇಶ ಪತ್ರ ವಿತರಣೆ



ಹಾವೇರಿ: ಬಿಜೆಪಿ ಜಿಲ್ಲಾ ಎಸ್.ಸಿ. ಪದಾಧಿಕಾರಿಗಳಿಗೆ ಶನಿವಾರ ಜಿಲ್ಲಾಧ್ಯಕ್ಷರಾದ ವಿರುಪಾಕ್ಷಪ್ಪ ಬಳ್ಳಾರಿ ಆದೇಶ ಪತ್ರವನ್ನು ನೀಡಿದರು. ಈ ವೇಳೆ ಎಸ್.ಸಿ ಮೋರ್ಚಾ ಜಿಲ್ಲಾಧ್ಯಕ್ಷರಾದ ಚಂದ್ರಪ್ಪ ಹರಿಜನ, ಗವಿಸಿದ್ದಪ್ಪ ದ್ಯಾಮಣ್ಣವರ, ಜಿಲ್ಲಾ ಉಪಾಧ್ಯಕ್ಷರಾದ ಡಿ.ಎಸ್. ಮಾಳಗಿ, ರಾಜ್ಯ ಕಾರ್ಯದರ್ಶಿ ಓಬಿಸಿ ಮೋರ್ಚಾ ಮಂಜುನಾಥ ಮಡಿವಾಳರ, ಜಿಲ್ಲಾ ಪ್ರಧಾನಕಾರ್ಯದರ್ಶಿಗಳಾದ ನೀಲಪ್ಪ ಚಾವಡಿ, ಸಂತೋಷ ಆಲದಕಟ್ಟಿ, ನಂಜುಂಡೇಶ ಕಳ್ಳೇರ, ಸಿದ್ದಪ್ಪ ಚಿಕ್ಕಬಿದರಿ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರಾದ ಕಿರಣ ಕೋಣನವರ ಹಾಗೂ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಕೃಷ್ಣ ಲಮಾಣಿ, ಶ್ರೀಕಾಂತ್ ವಡ್ಡರ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ನೂತನ ದೀಪಸ್ತಂಭ ಕಟ್ಟಡ ನಿರ್ಮಾಣಕ್ಕೆ ಚಾಲನೆ



ಯಮಕನಮರಡಿ: ಸಮೀಪದ ಹತ್ತರಗಿ ಗ್ರಾಮದ ಶ್ರೀ ಲಕ್ಷ್ಮೀದೇವಿ ಮಂದಿರದ ನೂತನ ದೀಪ ಸ್ತಂಭದ ನಿರ್ಮಾಣ ಪೂಜಾ ಸಮಾರಂಭಕ್ಕೆ ಶುಕ್ರವಾರ ವಿವಿಧ ಹೋಮ ಹವನ ಇತ್ಯಾದಿ ಕಾರ್ಯಕ್ರಮದೊಂದಿಗೆ ಚಾಲನೆ ನೀಡಲಾಯಿತು. ಸಾನ್ನಿಧ್ಯವನ್ನು ಸ್ಥಳೀಯ ಗುರು ಸಿದ್ದೇಶ್ವರ ದೇವಸ್ಥಾನದ ಗುರು ಸಿದ್ದೇಶ್ವರ ಸ್ವಾಮೀಜಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಲಕ್ಷ್ಮೀದೇವಿ ದೇವಸ್ಥಾನದ ಎಲ್ಲ ಸದಸ್ಯರು ಉಪಸ್ಥಿತರಿದ್ದರು.

ಮೊಹರಂ ಹಬ್ಬ ಆಚರಣೆ



ಐಗಳಿ: ಗ್ರಾಮದಲ್ಲಿ ಹಿಂದೂ-ಮುಸ್ಲಿಂ ಭಾವೈಕ್ಯದ ಸಂಕೇತವಾದ ಮೊಹರಂ ಹಬ್ಬವನ್ನು ಭಕ್ತಿಭಾವದಿಂದ ಆಚರಿಸಲಾಯಿತು.ಹಬ್ಬದ ಅಂಗವಾಗಿ ವಿವಿಧ ವಾದ್ಯಮೇಳಗಳೊಂದಿಗೆ ಮೆರವಣಿಗೆ ನಡೆಯಿತು. ಹಲಗೆಯ ಸದ್ದಿಗೆ ಗ್ರಾಮಸ್ಥರು ಉತ್ಸಾಹದಿಂದ ಹೆಜ್ಜೆ ಹಾಕಿದರು. ವಿಶೇಷವಾಗಿ ಹಲಗಿ ವಾದನ ಜನಮನ ಸೆಳೆಯಿತು. ಯುವಕರು ಸಂಗೀತ ಮತ್ತು ಡೊಳ್ಳಿನ ತಾಳಕ್ಕೆ ಕುಣಿದು ಕುಪ್ಪಳಿಸಿ ಹಬ್ಬದ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದರು.ಈ ಸಂದರ್ಭದಲ್ಲಿ ಹಿರಿಯರು ಕರಬಲ ಹಾಡುಗಳನ್ನು ಹಾಡಿ, ಮೊಹರಂ ಹಬ್ಬದ ಇತಿಹಾಸ ಹಾಗೂ ತ್ಯಾಗದ ಸಂದೇಶವನ್ನು ಸ್ಮರಿಸಿದರು. ಗ್ರಾಮದ ಹಿಂದೂ ಮತ್ತು ಮುಸ್ಲಿಂ ಸಮುದಾಯದ ಜನರು ಪರಸ್ಪರ ಸಹೋದರತ್ವ, ಸೌಹಾರ್ದತೆ ಮತ್ತು ಭಾವೈಕ್ಯತೆಯನ್ನು ಸಾರುವ ರೀತಿಯಲ್ಲಿ ಹಬ್ಬದಲ್ಲಿ ಭಾಗವಹಿಸಿ ಸಾಮರಸ್ಯದ ಸಂದೇಶ ನೀಡಿದರು.

ಜೂ.29ರಂದು ಪ್ರತಿಭಟನೆ

ಬೆಳಗಾವಿ: ಜಿಲ್ಲೆಯ ಖಾನಾಪುರ ತಾಲೂಕಿನ ಚಿಕ್ಕ ಅಂಗ್ರೊಳ್ಳಿ ಗ್ರಾಮದಲ್ಲಿ ದಲಿತ ಶಾಲಾ ಮಕ್ಕಳಿಗೆ ಮಹಾಪ್ರಸಾದ ವಿತರಣೆಯ ವೇಳೆ ಅಸ್ಪೃಶ್ಯತೆ ಆಚರಿಸಿ ದೂರದಿಂದ ಊಟ ನೀಡಿದ ಅಮಾನವೀಯ ಘಟನೆ ಖಂಡಿಸಿ, ಆರೋಪಿಗಳನ್ನು ಕೂಡಲೇ ಬಂಧಿಸುವಂತೆ ಆಗ್ರಹಿಸಿ ಜೂನ್ 29ರಂದು ಬೆಳಿಗ್ಗೆ ಬಿಡಿ ಹೋಬಳಿ ಸರ್ಕಲ್ನಲ್ಲಿ ತಾಲೂಕಿನ ವಿವಿಧ ದಲಿತ ಸಂಘಟನೆಗಳ ನೇತೃತ್ವದಲ್ಲಿ ಸಾವಿರಾರು ಕಾರ್ಯಕರ್ತರು ಭಾಗವಹಿಸುವ ಬೃಹತ್ ಪ್ರತಿಭಟನೆ ನಡೆಸಲಾಗುವುದಾಗಿ ದಲಿತ ಸಂಘಟನೆ ತಿಳಿಸಿದೆ.ಶನಿವಾರ ಖಾನಾಪುರ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಡಿಎಸ್ಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜಶೇಖರ ಹಿಂಡಲಗಿ ಅವರು, ಜೂನ್ 23ರಂದು ಈ ಪ್ರಕರಣ ಸಂಬಂಧ ನಂದಗಡ ಪೊಲೀಸ್ ಠಾಣೆಯಲ್ಲಿ ಜಾತಿ ನಿಂದನೆ ಹಾಗೂ ಅಸ್ಪೃಶ್ಯತೆ ಪ್ರಕರಣ ದಾಖಲಾಗಿದ್ದರೂ, ಇದುವರೆಗೆ ಆರೋಪಿಗಳನ್ನು ಬಂಧಿಸದಿರುವುದು ಖಂಡನೀಯ ಎಂದು ಆರೋಪಿಸಿದರು.ಶರದ್ ಹೊನ್ನನಾಯಕ, ರಾಯಪ್ಪ ಚಲವಾದಿ, ರಾಘವೇಂದ್ರ ಚಲವಾದಿ, ಈರಪ್ಪ ಮಾದರ, ಮಹಾಂತೇಶ ಪಾತ್ರದಾರ, ದುರ್ಗಪ್ಪ ಚಲವಾದಿ, ಬಸವರಾಜ ಮಾದರ, ನಾಗೇಶ್ ಕಾಂಬ್ಳೆ, ಶಶಿಧರ ನಾಯಕ್, ಕಲ್ಲಪ್ಪ ತಳವಾರ, ಪರಶುರಾಮ ಮಾದರ, ಕಾರ್ತಿಕ್ ತಳವಾರ, ದಯಾನಂದ ಹಾಗೂ ಮಾರುತಿ ಕಾಂಬಳೆ ಸೇರಿದಂತೆ ವಿವಿಧ ದಲಿತ ಸಂಘಟನೆಗಳ ಮುಖಂಡರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಿಧನ ಸುದ್ದಿ

ಪರಮೇಶ್ವರ ಕೌಜಲಗಿ

ಗೋಕಾಕ: ಇಲ್ಲಿನ ವಿವೇಕಾನಂದ ನಗರದ ನಿವಾಸಿ ಹಾಗೂ ನಿವೃತ್ತ ಪ್ರಾಂಶುಪಾಲರಾದ ಪರಮೇಶ್ವರ ಹಣಮಂತಪ್ಪ ಕೌಜಲಗಿ (66) ನಿಧನರಾಗಿದ್ದಾರೆ. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಸಂತಾಪ: ಶಿವಶರಣ ಹರಳಯ್ಯ ಸಮಾಜದ ಬಾಂಧವರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.



ಕಬ್ಬೂರ: ಸ್ಥಳೀಯ ಸರ್ಕಾರಿ ಪ್ರೌಢಶಾಲೆಯಲ್ಲಿ ಪಲ್ಸ್ ಪೋಲಿಯೋ ಜಾಗೃತಿ ಜಾಥಾ ಕಾರ್ಯಕ್ರಮ ಸಮುದಾಯ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಶನಿವಾರ ಜರುಗಿತು. ಮುಖ್ಯೋಪಾಧ್ಯಯ ಬಿ.ಕೆ.ಶಿರಗಾಂವಿ, ಎಸ್.ಎಲ್.ಬಬಲೇಶ್ವರ, ಸಮುದಾಯ ಆರೋಗ್ಯ ಕೇಂದ್ರದ ಸಂಗೀತಾ ಕಾಂಬಳೆ, ಬೋರಮ್ಮ ಬಾನಿ, ಅಮೃತಾ ಚೌಗಲಾ ಸೇರಿದಂತೆ ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು.

ಪಲ್ಸ್ ಪೋಲಿಯೋ: ಜಾಗೃತಿ ಪಥ ಸಂಚಲನ

ಸುರೇಬಾನ: ಸಮೀಪದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಅಂಗವಾಗಿ ಸಮೀಪದ ಶಿವಪೇಠ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ, ಶಿಕ್ಷಕಿಯರು, ವಿದ್ಯಾರ್ಥಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಶನಿವಾರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾಗೃತಿ ಪಥಸಂಚಲನ ನಡೆಸಿದರು.

ಪಥಸಂಚಲನದ ವೇಳೆ ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಿ, ಪೋಲಿಯೋ ಮುಕ್ತ ಭಾರತ ನಿರ್ಮಿಸೋಣ, ಎರಡು ಹನಿ ಜೀವದಾನ, ಪಲ್ಸ್ ಪೋಲಿಯೋ ಹಾಕಿಸಿ ವಿಕಲಚೇತನರಾಗುವುದನ್ನು ತಪ್ಪಿಸಿ ಎಂಬ ಘೋಷಣೆಗಳನ್ನು ಕೂಗುವ ಮೂಲಕ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಲಾಯಿತು.

ಸಮೀಪದ ಲಸಿಕಾ ಕೇಂದ್ರಕ್ಕೆ ತಮ್ಮ ಮಕ್ಕಳನ್ನು ಕರೆತಂದು ಪೋಲಿಯೋ ಲಸಿಕೆ ಹಾಕಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಮುಖ್ಯೋಪಾಧ್ಯಾಯರಾದ ವಸಂತ ವಾಘ್ಮೋಡೆ, ಶಿಕ್ಷಕರಾದ ಆತ್ಮಾನಂದ ಪಲ್ಲೇದ, ಕೊರೆ ಶಿಕ್ಷಕಿಯರಾದ ಟಿ.ವಾಯ್.ಜಟ್ಟೆನ್ನವರ, ಸಾವಿತ್ರಿ ಕಾಳಗಿ, ಆಶಾ ಕಾರ್ಯಕರ್ತೆಯರಾದ ಶಾರದಾ ಗುರುಬಸಣ್ಣವರ, ಗೀತಾ ಗಣಮುಖಿ, ಹಾಗೂ ಅಂಗನವಾಡಿ ಕಾರ್ಯಕರ್ತೆಯರಾದ ಗೀತಾ ಪಾಟೀಲ, ಶಿವಲೀಲಾ ಗಣಮುಖಿ, ಶಾಲಾ ವಿದ್ಯಾರ್ಥಿಗಳು ಭಾಗಿಯಾದ ಪಥಸಂಚಲನವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಾರ್ವಜನಿಕರಲ್ಲಿ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಮಹತ್ವದ ಕುರಿತು ಅರಿವು ಮೂಡಿಸಿತು.



ಸುರೇಬಾನ: ಸಮೀಪದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಅಂಗವಾಗಿ ಸಮೀಪದ ಶಿವಪೇಠ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ, ಶಿಕ್ಷಕಿಯರು, ವಿದ್ಯಾರ್ಥಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಶನಿವಾರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾಗೃತಿ ಪಥಸಂಚಲನ ನಡೆಸಿದರು.

ಸಚಿವ ಸತೀಶ ಜಾರಕಿಹೊಳಿ ಅಭಿಪ್ರಾಯ

ಒಂದೇ ಸೂರಿನಡಿ ಸಕಲ ಸೌಲಭ್ಯ

ಯರಗಟ್ಟಿ: ತಾಲೂಕಿನ ಸಾರ್ವಜನಿಕರ ಬಹುದಿನಗಳ ಕನಸಾಗಿದ್ದ ತಾಲೂಕು ಆಡಳಿತ ಕೇಂದ್ರ (ಪ್ರಜಾಸೌಧ) ನಿರ್ಮಾಣ ಕಾಮಗಾರಿಗೆ ಶನಿವಾರ ಭೂಮಿ ಪೂಜೆ ನೆರವೇರಿಸುವ ಮೂಲಕ ಅಧಿಕೃತ ಚಾಲನೆ ನೀಡಲಾಯಿತು.

ಸಚಿವ ಸತೀಶ ಜಾರಕಿಹೊಳಿ ಮಾತನಾಡಿ, ಸುಮಾರು 8.60 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಈ ಸುಸಜ್ಜಿತ ಕಟ್ಟಡದಿಂದ ತಾಲೂಕು ಮಟ್ಟದ ಆಡಳಿತ ಸೇವೆಗಳು ಒಂದೇ ಸೂರಿನಡಿ ಲಭ್ಯವಾಗಲಿದ್ದು, ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಯರಗಟ್ಟಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯೇ ಹೊಸ ತಾಲೂಕು ಪಂಚಾಯಿತಿಯಲ್ಲಿ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುವರು. ಆದಷ್ಟು ಬೇಗ ಅಧಿಕಾರಿಯನ್ನು ನೇಮಕ ಮಾಡಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಯರಗಟ್ಟಿ ತಾಲೂಕು ಪಂಚಾಯತ್ ಕಾರ್ಯಾಲಯವನ್ನು ಉದ್ಘಾಟಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಶಾಸಕ ವಿಶ್ವಾಸ ವಸಂತ ವೈದ್ಯ ಮಾತನಾಡಿ, ಹೊಸ ತಾಲೂಕಿನ ಗಡಿ ಭಾಗದೂ ಜನರಿಗೆ ಸರ್ಕಾರದ ಸವಲತ್ತು ಗಳು ಆದಷ್ಟು ಬೇಗ ಸಿಗಲೆಂಬ ಉದ್ದೇಶ, ತಾಲೂಕಿನ ಆಡಳಿತವನ್ನು ಸುಗಮವಾಗಿ ನಡೆಸಲು ಹಂತ ಹಂತವಾಗಿ ಕಚೇರಿಗಳನ್ನು ತೆರೆಯಲಾಗುತ್ತಿದೆ. ಸವದತ್ತಿ ವಿಧಾನಸಭಾ ಕ್ಷೇತ್ರದಲ್ಲಿ ಇರುವ ಅವಳಿ ತಾಲ್ಲೂಕುಗಳನ್ನು ಸಮಾನವಾಗಿ ಅಭಿವೃದ್ಧಿ ಪಡಿಸುವುದೇ ನನ್ನ ಉದ್ದೇಶ ಎಂದರು.



> ಈಗಾಗಲೇ ಪೂರ್ಣ ಪ್ರಮಾಣದಲ್ಲಿ ತಾಲೂಕು ತಹಸೀಲ್ದಾರ ಕಚೇರಿ, ಪೊಲೀಸ್ ಠಾಣೆ ಹಾಗೂ ಅಗ್ನಿ ಶಾಮಕ ಕಚೇರಿ ಶೀಘ್ರದಲ್ಲಿ ಕಾರ್ಯಾರಂಭ ಮಾಡಲಿವೆ. ತಾಲೂಕು ಕೋರ್ಟ್‌ಗೆ, ಪಟ್ಟಣ ಪಂಚಾಯತಿ ನೂತನ ಕಟ್ಟಡಕ್ಕೆ ಜಾಗ ಮಂಜೂರಾಗಿದ್ದು, ಶೀಘ್ರದಲ್ಲಿ ಕಟ್ಟಡ ನಿರ್ಮಾಣಕ್ಕೆ ಪೂಜೆ ನೆರವೇರಿಸಲಾಗುತ್ತಿದೆ. ಈ ಭಾಗದ ಸಮಗ್ರ ಅಭಿವೃದ್ಧಿ ಬದ್ಧರಾಗಿ ಕೆಲಸ ಮಾಡುತ್ತಿದ್ದೇನೆ.
> ■ ವಿಶ್ವಾಸ ವೈದ್ಯ, ಶಾಸಕರು ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರ

ಈ ವೇಳೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳ್ಳಿ, ಯರಗಟ್ಟಿ ತಹಶೀಲ್ದಾರ ಎಂ. ವ್ಹಿ. ಗುಂಡಪ್ಪಗೋಳ, ಸವದತ್ತಿ ಮಲ್ಲಿಕಾರ್ಜುನ ಹೆಗ್ಗಣ್ಣವರ, ತಾ. ಪಂ. ಇಓ ಆನಂದ ಬಡಕುಂದ್ರಿ, ಪಿಡಬ್ಲ್ಯೂಡಿ ಎಇಇ ವಿಜಯ ಸಂಗಪ್ಪನ್ನವರ, ಪಿ.ಆರ್.ಇ.ಡಿ. ಎಇಇ ಬಸವರಾಜ ಅಯ್ಯನಗೌಡರ, ಪ. ಪಂ. ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಸಿಪಿಐ ಐ. ಎಂ. ಮಠಪತಿ, ಬೆಮುಲ್ ನಿರ್ದೇಶಕ ಶಂಕರ ಇಟ್ನಾಳ, ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸನವರ, ಮಾಜಿ ತಾಪಂ ಸದಸ್ಯ ವಿಠ್ಠಲಗೌಡ ದೇವರಡ್ಡಿ, ಜಿಪಂ ಮಾಜಿ ಸದಸ್ಯ ಫಕ್ಕೀರಪ್ಪ ಹದ್ದನ್ನವರ, ಟಿಎಪಿಎಂಸಿ ಅಧ್ಯಕ್ಷ ರವೀಂದ್ರ ಯಲಿಗಾರ, ಮಾಜಿ ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಕಲ್ಪನಾ ಜೋಶಿ, ಪ್ರಕಾಶ ವಾಲಿ, ನಿಖಿಲ ಪಾಟೀಲ, ಶಿವಾನಂದ ಪಟ್ಟಣಶೆಟ್ಟಿ, ಸಲೀಮಬೇಗ ಜಮಾದಾರ, ಹನಮಂತ ಹಾರುಗೊಪ್ಪ, ಬಾಸ್ಕರ ಹಿರೇಮೆತ್ರಿ, ಸಂತೋಷ ಚನ್ನಮೇತ್ರಿ, ಬಸವರಾಜ ಚನ್ನಮೇತ್ರಿ, ಸುರೇಶ ಭಜಂತ್ರಿ, ಪುಂಡಲೀಕ ಮೇಟಿ, ಗೌಡಪ್ಪ ಉದಪುಡಿ, ಮಲಿಕಸಾಬ ಬಾಗವಾನ, ಬಸವರಾಜ ಪೂಜೇರ, ಬಂಗಾರೆಪ್ಪ ಹರಳಿ, ಫಕ್ಕೀರಪ್ಪ ಕಿಲಾರಿ, ಮಂಜುನಾಥ ತಡಸಲೂರ, ಸೇರಿದಂತೆ ಇತರರಿದ್ದರು.

ಗುಡ್ಡಾಪುರ ದಾನಮ್ಮ ದೇವಿ ಸನ್ನಿಧಿಯಲ್ಲಿ ನೂತನ ಶರಣ ಚರಿತೆಯ ಬರಹಕ್ಕೆ ಚಾಲನೆ

ತೆಲಸಂಗ: ಅನ್ನ-ದಾಸೋಹದ ಮೂಲಕ ಲಕ್ಷಾಂತರ ಭಕ್ತರ ಆರಾಧ್ಯ ದೈವವಾಗಿ ನೆಲೆಸಿರುವ ಶರಣೆ ದಾನಮ್ಮ ದೇವಿಯ ಕ್ಷೇತ್ರ ಅತ್ಯಂತ ಪವಿತ್ರವಾಗಿದ್ದು, ಶರಣರ ನಡೆ-ನುಡಿಗಳು ನಮ್ಮ ಬದುಕಿಗೆ ದಾರಿದೀಪವಾಗಬೇಕು ಎಂದು ಅಥಣಿ ಮೋಟಗಿಮಠದ ಪ್ರಭು ಚೆನ್ನಬಸವ ಸ್ವಾಮೀಜಿ ಹೇಳಿದರು.

ಸಮೀಪದ ಪ್ರಸಿದ್ಧ ಪುಣ್ಯಕ್ಷೇತ್ರ 12ನೇ ಶತಮಾನದ ಶರಣೆ ಗುಡ್ಡಾಪುರ ದಾನಮ್ಮ ದೇವಿಯ ದೇವಸ್ಥಾನದಲ್ಲಿ ತಾವು ಬರೆಯಲಿರುವ ನೂತನ ಶರಣ ಚರಿತೆ ಗ್ರಂಥದ ಬರಹಕ್ಕೆ ಮಹಾತಾಯಿಯ ಸನ್ನಿಧಿಯಲ್ಲಿಯೇ ಮುನ್ನುಡಿ ಬರೆಯುವ ಮೂಲಕ ಚಾಲನೆ ನೀಡಿ ಬಳಿಕ ಮಾತನಾಡಿದರು.

12ನೇ ಶತಮಾನದ ಶರಣರ ಜೀವನ ದರ್ಶನ ಇಂದು ನಮಗೆಲ್ಲರಿಗೂ ಅತ್ಯಂತ ದೊಡ್ಡ ಮಾದರಿಯಾಗಿದೆ. ನಾವು ಕೇವಲ ದೇವಸ್ಥಾನಗಳಿಗೆ ಬಂದು ದೇವರ ದರ್ಶನ ಪಡೆದರೆ ಮಾತ್ರ ಸಾಲದು. ಅದಕ್ಕಿಂತ ಮಿಗಿಲಾಗಿ ಶರಣರ ದಿವ್ಯ ಚಿಂತನೆಗಳನ್ನು ಮತ್ತು ಮೌಲ್ಯಗಳನ್ನು ನಮ್ಮ ದೈನಂದಿನ ನಡೆ-ನುಡಿಯಲ್ಲಿ ತರಬೇಕಾಗಿದೆ ಎಂದರು.



ದಾನಮ್ಮ ದೇವಿ ದೇವಸ್ಥಾನಕ್ಕೆ ಅಥಣಿ ಮೋಟಗಿಮಠದ ಚನ್ನಬಸವ ಶ್ರೀಗಳ ಭೇಟಿ

> ಶರಣರ ಇತಿಹಾಸ ಮತ್ತು ತತ್ವಗಳು ಮುಂದಿನ ಪೀಳಿಗೆಗೆ ತಲುಪಬೇಕಿದೆ. ಈ ನಿಟ್ಟಿನಲ್ಲಿ ಮೂಡಿಬರುತ್ತಿರುವ ಶರಣ ಚರಿತೆಯ ಬರಹಕ್ಕೆ ಸಕಲ ಜೀವಾತ್ಮರಿಗೆ ಅನ್ನ-ಜ್ಞಾನ ನೀಡಿದ ದಾನಮ್ಮ ಮಹಾತಾಯಿಯ ಸನ್ನಿಧಾನದಲ್ಲೇ ಮುನ್ನುಡಿ ಬರೆದು ಸಂಕಲ್ಪ ಮಾಡಿರುವುದು ಅತ್ಯಂತ ಸೌಭಾಗ್ಯದ ಸಂಗತಿ.
> ■ ಪ್ರಭು ಚೆನ್ನಬಸವ ಸ್ವಾಮೀಜಿ, ಮೋಟಗಿಮಠ ಅಥಣಿ.

ಜನರ ವಿಶ್ವಾಸ ಗಳಿಸಿದ ಕೆಎಂಎಫ್: ಶಾಸಕ ಪಾಟೀಲ

ನೇಸರಗಿ: ದೇಶದಲ್ಲಿ ನಮ್ಮ ರಾಜ್ಯದ ಹೆಮ್ಮೆಯ ಕರ್ನಾಟಕ ರಾಜ್ಯ ಹಾಲು ಒಕ್ಕೂಟದ (ಕೆ ಎಂ ಎಫ್) ವತಿಯಿಂದ ತಯಾರಾಗುವ ಹಾಲು ಮತ್ತು ಹಾಲಿನ ಅನೇಕ ಉತ್ಪನ್ನಗಳು ದೇಶದ ಎಲ್ಲರಿಗೂ ಪ್ರಿಯವಾಗಿದ್ದು, ದೇಶದ ಜನತೆ ವಿಶ್ವಾಸದಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಬಳಕೆ ಮಾಡುತ್ತಿದ್ದು, ಜನರ ಪ್ರೀತಿ ವಿಶ್ವಾಸ ಗಳಿಸಿದೆ ಎಂದು ಚನ್ನಮ್ಮನ ಕಿತ್ತೂರು ಶಾಸಕರಾದ ಬಾಬಾಸಾಹೇಬ ಪಾಟೀಲ ಹೇಳಿದರು.

ಅವರು ಶನಿವಾರದಂದು ಗ್ರಾಮದ ಪೊಲೀಸ್ ಠಾಣೆ ಎದುರಿಗೆ ನೂತನವಾಗಿ ನಿರ್ಮಾಣಗೊಂಡಿರುವ ನ್ಯೂ ಹೈಟೆಕ್ ಮಿಲ್ಕ್ ಪಾರ್ಲರ ಕೆಎಂಎಫ್ ಮಳಿಗೆ ಉದ್ಘಾಟನೆ ನೆರವೇರಿಸಿ ಮಾತನಾಡಿ, ಈ ನೂತನ ಮಳಿಗೆಯ ಸದುಪಯೋಗವನ್ನು ನೇಸರಗಿ ಮತ್ತು ಸುತ್ತಮುತ್ತಲಿನ ಗ್ರಾಮಗಳ ಜನತೆ ಪಡೆಯಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಬಾಬಾಸಾಹೇಬ ಪಾಟೀಲ ಹಾಗೂ ಕೆಎಂಎಫ್ ಅಧಿಕಾರಿಗಳನ್ನು ಸತ್ಕರಿಸಲಾಯಿತು. ಸಾನ್ನಿಧ್ಯವನ್ನು ಹಣಬರಹಟ್ಟಿ ಗ್ರಾಮದ ಹಿರೇಮಠದ ಷ ಬ್ರ ಬಸವಲಿಂಗ ಶಿವಾಚಾರ್ಯರು ವಹಿಸಿದ್ದರು.

ಈ ವೇಳೆ ಅಥಣಿಯ ಭಾರತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಕೆ ಎಂ ಎಫ್ ನಿರ್ದೇಶಕರಾದ ಬಾಬುರಾವ ವಾಘಮೋಡೆ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾದ ಶಂಕರಗೌಡಪಾಟೀಲ, ಕ್ಷೇತ್ರಧಿಕಾರಿ ಉಮೇಶ ನಾಯ್ಕ, ಮಾಜಿ ಎ ಪಿ ಎಂ ಸಿ ಅಧ್ಯಕ್ಷ ಬರಮಣ್ಣ ಸತ್ತೇನ್ನವರ, ಮಾಜಿ ಗ್ರಾ ಪಂ ಅಧ್ಯಕ್ಷ ವೀರಭದ್ರ ಚೋಭಾರಿ, ಸುಜಾತ ಪಾಟೀಲ, ಸುರೇಶ ಕಂಡ್ರಿ, ಬಸವರಾಜ ಚಿಕ್ಕನಗೌಡ್ರ, ಸುರೇಶ ಅಗಸಿಮನಿ, ರವಿ ಸಿದ್ದಮ್ಮನವರ, ಡಿ ಎಸ್ ಎಸ್ ಅಧ್ಯಕ್ಷರಾದ ಸುರೇಶ ರಾಯಪ್ಪಗೋಳ, ರಮೇಶ ರಾಯಪ್ಪಗೋಳ, ಶಿವನಪ್ಪ ಮದೇನ್ನವರ,ಸಿ ಆರ್ ಹೊಂಡಪ್ಪಣ್ಣವರ, ಅಜಿತ್ ಗಸ್ತಿ, ಮಾಲೀಕರಾದ ಶ್ರೀಕಾಂತ ಉಳವಿ, ಶಿವಲೀಲಾ ಉಳವಿ, ಶ್ರೀಧರ ಉಳವಿ ಸೇರಿದಂತೆ ನೇಸರಗಿ ಮತ್ತು ಸುತ್ತಮುತ್ತಲಿನ ಗ್ರಾಮಗಳ ಹಿರಿಯರು, ಗ್ರಾಮಸ್ಥರು,ಕೆ ಎಂ ಎಫ್ ಹಾಲಿನ ವ್ಯಾಪಾರಿಗಳು ಇದ್ದರು.



ನಾಡ ಪ್ರಭು ಕೆಂಪೇಗೌಡ ಜಯಂತಿ



ಯರಗಟ್ಟಿ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ನಾಡ ಪ್ರಭು ಕೆಂಪೇಗೌಡ ಜಯಂತಿಯನ್ನು ಆಚರಿಸಲಾಯಿತು.

ತಹಶೀಲ್ದಾರ್ ಎಂ. ವ್ಹಿ. ಗುಂಡಪ್ಪಗೋಳ ನಾಡ ಪ್ರಭು ಕೆಂಪೇಗೌಡ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು. ಈ ವೇಳೆ ತಾಪಂ ಇಓ ಆನಂದ ಬಡಕುಂದ್ರಿ, ಪಿಡಬ್ಲ್ಯೂಡಿ ಎಇಇ ವಿಜಯ ಸಂಗಪ್ಪನವರ, ಪಿ.ಆರ್ .ಇ.ಡಿ. ಎಇಇ ಬಸವರಾಜ ಅಯ್ಯನಗೌಡರ, ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸನವರ, ಪ್ರಕಾಶ ವಾಲಿ ಸೇರಿದಂತೆ ಅನೇಕರು ಇದ್ದರು.



ಬೆಳಗಾವಿ : ಜಿಲ್ಲೆಯ ಯರಗಟ್ಟಿ ಪಟ್ಟಣದ ಸಿದ್ನಾಳ್ ಗ್ರಾಮದ ಹಿರಿಯ ಮುಖಂಡರಾದ ಪರುತಗೌಡ ಪಾಟೀಲ ಅವರು ಇತ್ತೀಚೆಗೆ ನಿಧನರಾದ ಹಿನ್ನೆಲೆಯಲ್ಲಿ ಶನಿವಾರ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಯರಗಟ್ಟಿಯಲ್ಲಿರುವ ಅವರ ನಿವಾಸಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಅಂಗನವಾಡಿ ಕಾರ್ಯಕರ್ತೆಯರ ಹಿತ ಕಾಪಾಡಿ

ರಾಯಬಾಗ: 6 ವರ್ಷದ ಮಕ್ಕಳ, ಗರ್ಭಿಣಿ, ಬಾಣಂತಿಯರ ಅಪೌಷ್ಟಿಕತೆಯನ್ನು ಹೋಗಲಾಡಿಸಿ ಆರೋಗ್ಯ ರಕ್ಷಣೆ ಮಾಡಲು ಗೌರವ ಧನದಲ್ಲಿನಿಸ್ವಾರ್ಥಸೇವೆಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ನೆಲೆ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ ಎಂದು ಅಂಗನವಾಡಿ ನೌಕರರ ಸಂಘದ ತಾಲೂಕಾ ಅಧ್ಯಕ್ಷೆ ಚನ್ನಮ್ಮ ಗಡಕರಿ ಕಳವಳ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ರಾಣುಬಾಯಿ ದೇವಸ್ಥಾನದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, 2018 ರಿಂದ ಒಂದು ಪೈಸೆ ಕೂಡಾ ಗೌರವ ಧನ ಹೆಚ್ಚಳ ಮಾಡಿಲ್ಲ, ಅಂಗನವಾಡಿ ಸೇವೆಗೆ ನಿಯೋಜನಗೊಂಡ ಕಾರ್ಯಕರ್ತೆಯರು ಅಂಗನವಾಡಿ ಸೇವೆಗೆ ಮಾತ್ರ ಸೀಮಿತವಾಗಿಲ್ಲ, ಭಾಗ್ಯಲಕ್ಷ್ಮೀ, ಗೃಹಲಕ್ಷ್ಮೀ, ಮಾತೃವಂದನಾ, ಪೋಷಣ ಟ್ರ್ಯಾಕರ್, ಫೇಸ್ ಕ್ಯಾಪ್ಚರ್, ಅಬಾ, ಅಪಾರ ಐಡಿ, ಪೋಷಣ ಅಭಿಯಾನ ಜೊತೆಗೆ ಬಿಎಲ್‌ಒ ಹೀಗೆ ಹತ್ತು ಹಲವಾರು ಯೋಜನೆಗಳ ಜೊತೆಗೆ ಇಲಾಖೇತರ ಸಮೀಕ್ಷೆಗಳನ್ನೂ ಕೂಡಾ ಮಾಡುವುದರಿಂದ ಮಕ್ಕಳಿಗೆ ಪಾಠ ಮಾಡಲು ಸಮಯ ಸಾಲದೇ ಅಂಗನವಾಡಿಗಳ ಗುಣಮಟ್ಟ ಕುಸಿಯುತ್ತಿದೆ ಎಂದರು.

1975 ರಿಂದ 6 ವರ್ಷದ ಒಳಗಿನ ಮಕ್ಕಳಿಗೆ ಆಹಾರ, ಆರೋಗ್ಯ, ಶಿಕ್ಷಣ ಕೊಡಲು ಅಂಗನವಾಡಿ ಕೇಂದ್ರಗಳಿರುವಾಗ ಖಾಸಗಿ ಸಂಸ್ಥೆಗಳಿಗೆ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ನಡೆಸಲು ಸರ್ಕಾರ ಅನುಮತಿ ಕೊಡಬಾರದು. ಕಾರ್ಯಕರ್ತೆಯರಿಗೆ ಐಸಿಡಿಎಸ್ ಯೋಜನೆಯ ಮೂಲ ಉದ್ದೇಶ ಮತ್ತು 6 ಸೇವೆಗಳನ್ನೊಳಗೊಂಡ ಕೆಲಸಗಳನ್ನು ಮಾಡಲು ಮಾತ್ರ ಅವಕಾಶ ನೀಡಬೇಕು. ಹೆಚ್ಚುವರಿ ಕೆಲಸ ಮಾಡಿಸಬಾರದು. ಅಂಗನವಾಡಿ ಕೇಂದ್ರಗಳಿಗೆ ಗುಣಮಟ್ಟದ ಆಹಾರದ ಜೊತೆಗೆ ಸೌಲಭ್ಯಗಳನ್ನು ನೀಡಿ ಮತ್ತಷ್ಟು ಉನ್ನತೀಕರಿಸಿ ದೇಶದ ಲಕ್ಷಾಂತರ ಬಡ ಅಂಗನವಾಡಿ ಮಹಿಳೆಯರು ಬೀದಿಗೆ ಬರುತ್ತಾರೆ ಎಂದು ತಿಳಿಸಿದ್ದಾರೆ.



ವೃತ್ತಿ ಗೌರವಿಸಿ ಕಾರ್ಯಪ್ರವೃತ್ತರಾಗಿರಿ



ಗೋಕಾಕ: ವಿದ್ಯಾರ್ಥಿಗಳು ತಾವು ಕಲಿತ ಜ್ಞಾನದ ಸದುಪಯೋಗದಿಂದ ವೃತ್ತಿಯನ್ನು ಗೌರವಿಸಿ ಕಾರ್ಯಪ್ರವೃತ್ತರಾದರೆ ಯಶಸ್ವಿಯಾಗುತ್ತಿರೆಂದು ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶ ಮಹಾದೇವ ಖಾನಟ್ಟಿ ಹೇಳಿದರು.

ಶನಿವಾರದಂದು ನಗರದ ಶ್ರೀ ಲಕ್ಷ್ಮಣರಾವ ಜಾರಕಿಹೊಳಿ ಕಾನೂನು ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಕಾನೂನು ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗವಕಾಶ ಮಾರ್ಗಗಳಿವೆ. ಅವಕಾಶಗಳ ಸದುಪಯೋಗಪಡಿಸಿಕೊಳ್ಳಿ. ಹಿರಿಯ ನ್ಯಾಯವಾದಿಗಳ ಮಾರ್ಗದರ್ಶನದಲ್ಲಿ ನಿರಂತರ ಅಧ್ಯಯನಶೀಲರಾಗಿರಿ. ಸಮಯಪ್ರಜ್ಞೆ, ಪ್ರಾಮಾಣಿಕತೆ ಪ್ರಯತ್ನಶೀಲರಾಗಿ ತಮ್ಮ ವೃತ್ತಿಯಲ್ಲಿ ಯಶಸ್ವಿಯಾಗಿರೆಂದು ಹಾರೈಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ನ್ಯಾಯವಾದಿ ಸನತ ಜಾರಕಿಹೊಳಿ ವಹಿಸಿದ್ದರು. ವೇದಿಕೆಯ ಮೇಲೆ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಸುಭಾಸ ಬಿರಾದಾರಪಾಟೀಲ, ಪ್ರಾಚಾರ್ಯ ಡಾ.ಜಿ.ಆರ್. ನಿಡೋಣಿ, ಉಪನ್ಯಾಸಕರಾದ ಎಸ್.ಸಿ. ಘಟವಾಳಮಠ, ಪಿ.ಬಿ. ನಿಂಬಾಳಕರ, ಪಿ.ಡಿ. ಕುಲಕರ್ಣಿ, ಎಮ್.ಆರ್. ಥವನ, ಎಸ್.ಎಮ್. ಮುಲ್ಲಾ, ಗುರು ಪೂಜೇರಿ, ಸೂರ್ಯಕಾಂತ ಪಾಟೀಲ, ಎಸ್.ಎಸ್. ತೇರದಾಳ ಇದ್ದರು.

ಉಚಿತ ಆರೋಗ್ಯ ತಪಾಸಣೆ ಶಿಬಿರ

ಯಮಕನಮರಡಿ: ಮಹಿಳಾ ಕಲ್ಯಾಣ ಸಂಸ್ಥೆ, ಬೆಳಗಾವಿ, ಪ್ರೋಸ್ಪೈಟ್ ಫೌಂಡೇಶನ್ ಹಾಗೂ ಐಐಟಿ ನವದೆಹಲಿ ಸಂಯುಕ್ತ ಆಶ್ರಯದಲ್ಲಿ ಹುಕ್ಕೇರಿ ತಾಲೂಕಿನ ಹಳೆಗುಡಗನಟ್ಟಿ ಗ್ರಾಮದ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಯಶಸ್ವಿಯಾಗಿ ನಡೆಯಿತು.

ಶಿಬಿರದಲ್ಲಿ ಗ್ರಾಮಸ್ಥರಿಗೆ ಸಾಮಾನ್ಯ ಆರೋಗ್ಯ ತಪಾಸಣೆ, ಕಣ್ಣಿನ ತಪಾಸಣೆ, ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ನೋಂದಣಿ ಹಾಗೂ ಇ-ಶ್ರಮ ಕಾರ್ಡ್ ನೋಂದಣಿ ಸೌಲಭ್ಯಗಳನ್ನು ಒದಗಿಸಲಾಯಿತು. ಶಿಬಿರದಲ್ಲಿ 105 ಫಲಾನುಭವಿಗಳು ಆಯುಷ್ಮಾನ್ ಭಾರತ್ ಹಾಗೂ ಇ-ಶ್ರಮ ಕಾರ್ಡ್‌ಗಳನ್ನು ಮಾಡಿಸಿಕೊಂಡು ಸರ್ಕಾರದ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ ಪ್ರಯೋಜನ ಪಡೆಯುವ ಅವಕಾಶವನ್ನು ಪಡೆದರು.

ಈ ಸಂದರ್ಭದಲ್ಲಿ ವೈದ್ಯಾಧಿಕಾರಿ ಯತಿರಾಜ್ ದೇಶಪಾಂಡೆ ಜೀವನಶೈಲಿ, ನಿಯಮಿತ ಆರೋಗ್ಯ ತಪಾಸಣೆಯ ಮಹತ್ವ ಹಾಗೂ ವಿವಿಧ ಆರೋಗ್ಯ ಸಮಸ್ಯೆಗಳ ತಡೆಗಟ್ಟುವಿಕೆ ಕುರಿತು ಗ್ರಾಮಸ್ಥರಿಗೆ ಮಾಹಿತಿ ನೀಡಿ ಅಗತ್ಯ ಆರೋಗ್ಯ ಸಲಹೆಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಮಹಿಳಾ ಕಲ್ಯಾಣ ಸಂಸ್ಥೆಯ ಯೋಜನಾ ಸಂಯೋಜಕರಾದ ಸುರೇಖಾ ಪಾಟೀಲ ಮಾತನಾಡಿದರು.



ಮನಸ್ಸಿನ ಹತೋಟಿಗೆ ಧ್ಯಾನ, ವ್ಯಾಯಾಮ ಅವಶ್ಯ: ಡಾ. ಸುಮಿತಾ

ಹಿರೇಬಾಗೇವಾಡಿ: ಎಲ್ಲಾ ಕಾಯಿಲೆಗಳಿಗೂ ನಮ್ಮ ಮನಸ್ಥಿತಿಯೇ ಕಾರಣವಾಗುವುದ ರಿಂದ ಮನಸ್ಸನ್ನು ಹತೋಟಿಯಲ್ಲಿ ಡಲು ಧ್ಯಾನ ಮತ್ತು ವ್ಯಾಯಾಮ ಮಾಡುವುದು ಅವಶ್ಯಕವಾಗಿದೆ ಎಂದು ಬೆಳಗಾವಿ ವಿಜಯಾ ಆರ್ಥೋ ಮತ್ತು ಟ್ರೋಮಾ ಸೇಂಟರ್‌ನ ವೈದ್ಯಾಧಿಕಾರಿ ಡಾ. ಸುಮಿತಾ ರತನ್‌ಜಿ ಹೇಳಿದರು.

ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಹಿರೇಬಾಗೇವಾಡಿ ಇದರ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿ ಶನಿವಾರ ಇಲ್ಲಿಯ ಶಿವಬಸವ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾದ ಆಧುನಿಕ ಜೀವನ ಶೈಲಿಯಲ್ಲಿ ಆರೋಗ್ಯ ಮತ್ತು ಒತ್ತಡ ನಿರ್ವಹಣೆ ಕಾರ್ಯಕ್ರಮದ ವಿಚಾರಗೋಷ್ಠಿಯಲ್ಲಿ ಮಾತನಾಡಿದರು.

ಮಹಿಳೆಯರು ಪ್ರತಿನಿತ್ಯ ಸುಮಾರು 20 ಗಂಟೆ ಕೆಲಸ ಮಾಡುವುದರಿಂದ ಅವರು ಮಾನಸಿಕವಾಗಿ ಜರ್ಜರಿತ ರಾಗಿರುತ್ತಾರೆ. ಹೀಗಾಗಿ ಅವರು ರಕ್ತದೊತ್ತಡ, ಸಕ್ಕರೆ ಕಾಯಿಲೆ, ಹೃದಯ ಸಂಬಂದಿ ಕಾಯಿಲೆ, ಪಾರ್ಶ್ವವಾಯು ಇತ್ಯಾದಿಗಳಿಗೆ ಬಲಿಯಾಗುತ್ತಾರೆ. ಅದರಿಂದ ಹೊರಬರಲು ಅವರ ಮಾನಸಿಕ ಸ್ಥಿತಿ ಸ್ಥಿರವಾಗಿರಬೇಕಾದ ಅವಶ್ಯಕತೆ ಇದೆ. ನಿತ್ಯ ಕೆಲ ಹೊತ್ತು ಧ್ಯಾನ, ವ್ಯಾಯಾಮ ಮಾಡುವುದುರಿಂದ ಕಾಯಿಲೆಗಳಿಂದ ದೂರವಿರಬಹು ದಾಗಿದೆ ಎಂದರು.



ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಧಾರವಾಡ ಪ್ರಾದೇಶಿಕ ನಿರ್ದೇಶಕಿ ದಯಾಶೀಲ, ವೀರೇಂದ್ರ ಹೆಗ್ಗಡೆಯವರು ಮಹಿಳಾ ಸಬಲೀಕರಣಕ್ಕೆ ಆದ್ಯತೆ ನಿಡುವ ನಿಟ್ಟಿನಲ್ಲಿ ಮತ್ತು ಅಸಹಾಯಕ ದುರ್ಬಲ ಮಹಿಳೆಯರಿಗಾಗಿ 32 ವರ್ಷಗಳ ಹಿಂದೆ ಹುಟ್ಟು ಹಾಕಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಹಿಳೆಯರ ಆರ್ಥಿಕ ಬಲವರ್ಧನೆಗೆ ಊರುಗೋಲಾಗಿದೆ. ಅದರಿಂದ ಸಾವಿರಾರು ಮಹಿಳೆಯರು ಬದುಕು ಕಟ್ಟಿಕೊಂಡು ಸಾರ್ಥಕ ಜೀವನ ನಡೆಸುತಿದ್ದಾರೆ ಎಂದರು.

ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕಿ ಪೂರ್ಣಿಮಾ ಮಠಪತಿ ಮಾತನಾಡಿ, ಮಹಿಳೆಯರು ತಮ್ಮಲ್ಲಿರುವ ಸೂಕ್ತ ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು ಗುರುತಿಸಿ ಆರ್ಥಿಕವಾಗಿ ಸಬಲರಾಗಬೇಕೆಂದರು.

ದೈವಜ್ಞ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕಿ ಅಂಜನಾ ರಾಯ್ಕರ, ಸಮಾಜದಿಂದ ಶೋಷಣೆಗೊಳಗಾದ ಮಹಿಳೆಯರ ಸಹಾಯಕ್ಕಾಗಿ ಗೆಳತಿ ಸಮಿತಿ ಇದ್ದು ಅಲ್ಲಿ ಮಹಿಳೆಯರಿಗೆ ನ್ಯಾಯ ದೊರಕಿಸಿ ಕೊಡುವ ಕಾರ್ಯ ಮಾಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಮನರಂಜನೆ ಕಾರ್ಯಕ್ರಮಗಳು, ಸಂವಾದ, ಆರೋಗ್ಯ ತಪಾಸಣೆ, ನೇತ್ರ ತಪಾಸಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಶಿವಬಸವೇಶ್ವರ ಸೌಹಾರ್ದ ಸಂಘದ ನಿರ್ದೇಶಕಿ ಶಶಿಕಲಾ ಇಟಗಿ ಅಧ್ಯಕ್ಷತೆ ವಹಿಸಿದ್ದರು. ಪ್ರಾದೇಶಿಕ ನಿರ್ದೇಶಕಿ ದಯಾಶೀಲ, ಜಿಲ್ಲಾ ನಿರ್ದೇಶಕ ಸತೀಶ ನಾಯ್ಕ, ಉಪನ್ಯಾಸಕಿ ಪೂರ್ಣಿಮಾ ಮಠಪತಿ, ಅಂಜನಾ ರಾಯ್ಕರ, ಕೆಪಿಸಿಸಿ ಸದಸ್ಯ ಸುರೇಶ ಇಟಗಿ, ಸಂಜಯ ರಾಯ್ಕರ, ಯೋಜನಾಧಿಕಾರಿ ಯೋಗೀಶ ಕೆ, ಪ್ರಮಿಳಾ, ಗಂಗಾ ಪಾಟೀಲ, ಮಹಾದೇವಿ ಇಂಚಲ, ಸೇವಾ ಪ್ರತಿನಿಧಿಗಳು, ಇತರರು ಇದ್ದರು.

ಕಿರುಸುದ್ದಿ

ಹೂಡಿಕೆದಾರರ ರಕ್ಷಣೆಗೆ ಸರ್ಕಾರ ಕ್ರಮ ಕೈಗೊಳ್ಳಲಿ

ಗೋಕಾಕ: ಇತ್ತೀಚಿನ ದಿನಗಳಲ್ಲಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಹಣ ಸಂಪಾದಿಸುವ ಪ್ರವೃತ್ತಿ ಸಮಾಜದಲ್ಲಿ ಹೆಚ್ಚಾಗುತ್ತಿದ್ದು, ಇದರ ಪರಿಣಾಮವಾಗಿ ವಿವಿಧ ಹಣಕಾಸು ಸಂಸ್ಥೆಗಳ ಮೂಲಕ ಸಾರ್ವಜನಿಕರ ಆರ್ಥಿಕ ಶೋಷಣೆ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಈ ವಿಷಯದಲ್ಲಿ ಹೂಡಿಕೆದಾರರ ಹಿತದೃಷ್ಟಿಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಸ್ಥೆಗಳ ಮಹಾಮಂಡಳದ ನಿರ್ದೇಶಕ ಡಾ. ಸಂಜಯ ಹೊಸಮಠ ಸಲಹೆ ನೀಡಿದ್ದಾರೆ.



ವಿಶೇಷವಾಗಿ ಸಾಮಾನ್ಯ ಜನರ ಆರ್ಥಿಕ ಬೆನ್ನೆಲುಬಾಗಿರುವ ಸಹಕಾರ ಕ್ಷೇತ್ರದಲ್ಲಿ ನಡೆಯುತ್ತಿರುವ ಕೆಲವು ಆರ್ಥಿಕ ಅಕ್ರಮಗಳು ಸಾವಿರಾರು ಹೂಡಿಕೆದಾರರ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಅಂಚೆ ಇಲಾಖೆ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಾವಳಿಗಳ ಅಡಿಯಲ್ಲಿ ಕಾರ್ಯನಿರ್ವಹಿಸುವ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಹೂಡಿಕೆಗಳಿಗೆ ಹೆಚ್ಚಿನ ಭದ್ರತೆ ಇದ್ದರೂ, ಕಡಿಮೆ ಬಡ್ಡಿದರದ ಕಾರಣ ಹೆಚ್ಚಿನ ಆದಾಯದ ನಿರೀಕ್ಷೆಯಲ್ಲಿ ಅನೇಕರು ವಿವಿಧ ಸಹಕಾರಿ ಪತ್ತಿನ ಸಂಸ್ಥೆಗಳು ಮತ್ತು ಅರ್ಬನ್ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಹಣ ಹೂಡಿಕೆ ಮಾಡುತ್ತಿದ್ದಾರೆ. ಆದರೆ ಕೆಲವು ಸಂಸ್ಥೆಗಳಲ್ಲಿ ಕಂಡುಬಂದಿರುವ ದುರಾಡಳಿತ ಮತ್ತು ಆರ್ಥಿಕ ಅಕ್ರಮಗಳಿಂದ ಹೂಡಿಕೆದಾರರು ಭಾರೀ ನಷ್ಟ ಅನುಭವಿಸುತ್ತಿದ್ದಾರೆ.ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಹೆಚ್ಚಿಸಲು ರಾಜ್ಯದ ಎಲ್ಲಾ ಸಹಕಾರಿ ಸಂಸ್ಥೆಗಳನ್ನು ಏಕೀಕೃತ "ಕಾಮನ್ ಅಪ್ಲಿಕೇಶನ್ ಸಾಫ್ಟ್‌ವೇರ್" ವ್ಯವಸ್ಥೆಗೆ ಸಂಪರ್ಕಿಸುವ ಅಗತ್ಯವಿದೆ. ಇದರಿಂದ ಹಣಕಾಸಿನ ವ್ಯವಹಾರಗಳ ಮೇಲೆ ನಿರಂತರ ನಿಗಾ ಇಡಲು ಸಾಧ್ಯವಾಗುವುದರ ಜೊತೆಗೆ, ನಿಯಮಬಾಹಿರ ಸಾಲ ವಿತರಣೆ ಹಾಗೂ ಹಣ ದುರ್ಬಳಕೆ ಅಕ್ರಮಗಳನ್ನು ತಡೆಗಟ್ಟಲು ನೆರವಾಗಲಿದೆ ಎಂದು ಡಾ. ಹೊಸಮಠ ಹೇಳಿದ್ದಾರೆ.



ಯಮಕನಮರಡಿ : ಸಮೀಪದ ಹತ್ತರಗಿ ಗ್ರಾಮದಲ್ಲಿ ಮೊಹರಂ ಹಬ್ಬ ಆಚರಣೆ ಮಾಡಲಾಯಿತು.


ವ್ಹೀಲಿಂಗ್ ವಿಡಿಯೋ ಹರಿಬಿಟ್ಟ ಆರೋಪ: ದೂರು ದಾಖಲು

ಭಟ್ಕಳ: ಸಾರ್ವಜನಿಕ ರಸ್ತೆಯಲ್ಲಿ ಅಪಾಯಕಾರಿಯಾಗಿ ವ್ಹೀಲಿಂಗ್ ನಡೆಸಿದ ವಿಡಿಯೋವನ್ನು ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡಿ ಯುವಕರನ್ನು ಪ್ರಚೋದಿಸಿದ ಆರೋಪದಡಿ ಇಲ್ಲಿನ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.ಜೂನ್ 25ರಂದು ಸಾಮಾಜಿಕ ಜಾಲತಾಣಗಳ ಮೇಲ್ವಿಚಾರಣೆ ವೇಳೆ 'ಚ್ಟುಜಿಜಿಟರಿಟಜಿರಿಟ್ಟ' ಹೆಸರಿನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಭಟ್ಕಳದ ವಿವಿಧ ಸಾರ್ವಜನಿಕ ರಸ್ತೆಗಳಲ್ಲಿ ದ್ವಿಚಕ್ರ ವಾಹನದಲ್ಲಿ ಅಪಾಯಕಾರಿಯಾಗಿ ವ್ಹೀಲಿಂಗ್ ನಡೆಸಿದ ದೃಶ್ಯಗಳನ್ನು ಅಪ್‌ಲೋಡ್ ಮಾಡಿರುವುದು ಪತ್ತೆಯಾಗಿದೆ. ಸಾರ್ವಜನಿಕರ ಜೀವಕ್ಕೆ ಅಪಾಯ ಉಂಟುಮಾಡುವ ರೀತಿಯಲ್ಲಿ ವಾಹನ ಚಲಾಯಿಸಿ, ಅದರ ವಿಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚುವ ಮೂಲಕ ಇತರ ಯುವಕರಿಗೂ ಇಂತಹ ಅಪಾಯಕಾರಿ ಕೃತ್ಯಗಳಿಗೆ ಪ್ರೇರಣೆ ನೀಡಿದ ಆರೋಪದಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರಿದಿದೆ. ನಗರ ಠಾಣೆಯ ಸೋಷಿಯಲ್ ಮೀಡಿಯಾ ಮಾನಿಟರಿಂಗ್ ಸೆಲ್‌ನ ಪೊಲೀಸ್ ಕಾನ್‌ಸ್ಟೇಬಲ್ ಸಚಿನ್ ಯಶವಂತರಾವ್ ಪವಾರ್ ಈ ಕುರಿತು ದೂರು ದಾಖಲಿಸಿದ್ದಾರೆ.

ನಿಧನ ಸುದ್ದಿ

ವೀರಭದ್ರಪ್ಪ ಪಾಟೀಲ

ಮುರಗೋಡ: ಕಸಬಾ ಓಣಿಯ ಹಿರಿಯರಾದ ವೀರಭದ್ರಪ್ಪ ಬ. ಪಾಟೀಲ(86) ಅವರು ಶುಕ್ರವಾರ ನಿಧನರಾಗಿದ್ದಾರೆ. ಮೃತರಿಗೆ ಓರ್ವ ಪುತ್ರಿ, ಓರ್ವ ಪುತ್ರ, ಹಾಗೂ ಅಪಾರ ಬಂಧುಬಳಗ ಇದ್ದಾರೆ.





ಯಮಕನಮರಡಿ: ಸಮೀಪದ ಹತ್ತರಗಿ ಮಾಜಿ ಗ್ರಾಮಪಂ ಅಧ್ಯಕ್ಷ ಹಾಗೂ ಆನಂದಪುರ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಮಹಾದೇವ ಪಟೋಳಿ ಅವರು ತಮ್ಮ 62ನೇ ಹುಟ್ಟುಹಬ್ಬವನ್ನು ಯಮಕನಮರಡಿ ಹತ್ತರಗಿ ಹರಿ ಮಂದಿರದಲ್ಲಿ ಪೂಜ್ಯರಾದ ಡಾ ಆನಂದ ಮಹಾರಾಜ ಗೋಸಾವಿ ಅವರ ಸನ್ನಿಧಾನದಲ್ಲಿ ಜೂ.26ರಂದು ತಮ್ಮ ಬಳಗದೊಂದಿಗೆ ಸಂಭ್ರಮದಿಂದ ಆಚರಿಸಿಕೊಂಡರು.

ಅಭಿವೃದ್ಧಿ ಪಥದತ್ತ ಖಾನಾಪುರ ಹೈನುಗಾರಿಕೆ ಕ್ಷೇತ್ರ

ಖಾನಾಪುರ: ತಾಲೂಕಿನಲ್ಲಿ ಹೈನುಗಾರಿಕೆ ಕ್ಷೇತ್ರ ವರ್ಷದಿಂದ ವರ್ಷಕ್ಕೆ ಪ್ರಗತಿ ಪಥದತ್ತ ಸಾಗುತ್ತಿದೆ. ತಾಲೂಕಿನ 75 ಹಾಲು ಉತ್ಪಾದಕರ ಸಂಘಗಳಿಂದ ದಿನವಹಿ 18 ಸಾವಿರ ಲೀಟರ್ ಹಾಲು ಸಂಗ್ರಹಗೊಂಡು ಬೆಳಗಾವಿ ಜಿಲ್ಲಾ ಒಕ್ಕೂಟಕ್ಕೆ ಸಾಗಾಟವಾಗುತ್ತಿದೆ ಎಂದು ಬೆಳಗಾವಿ ಹಾಲು ಒಕ್ಕೂಟದ ನಿರ್ದೇಶಕ ಪ್ರಕಾಶ ಅಂಬೋಜಿ ಮಾಹಿತಿ ನೀಡಿದರು.

ಪಟ್ಟಣದಲ್ಲಿ ಜರುಗಿದ ಹಾಲು ಉತ್ಪಾದಕರ ಸಂಘದ ಪದಾಧಿಕಾರಿಗಳ ವಾರ್ಷಿಕ ಪ್ರಾದೇಶಿಕಸಭೆಉದ್ದೇಶಿಸಿಮಾತನಾಡಿದಅವರು,ತಾಲೂಕಿನಲ್ಲಿ1500 ಜಾನುವಾರುಗಳಿಗೆ ವಿಮೆ ಸೌಲಭ್ಯ ಚಾಲನೆಯಲ್ಲಿದ್ದು, 15 ಲಕ್ಷ ರೂಗಳು ಪರಿಹಾರ ಮೊತ್ತ ದೊರೆತಿದೆ. ಮರಣ ಹೊಂದಿದ ವಾರಸುದಾರರಿಗೆ 19.5 ಲಕ್ಷ ರೂ.ರೈತ ಕಲ್ಯಾಣ ಪರಿಹಾರ ಮೊತ್ತ ಮತ್ತು ಸಂಘಗಳ ನೂತನ ಕಟ್ಟಡ ನಿರ್ಮಾಣಕ್ಕೆ 19 ಲಕ್ಷ ರೂಗಳ ಅನುದಾನ ಮಂಜೂರಾಗಿದೆ. ಹಾಲು ಉತ್ಪಾದಕರಿಗೆ ರಬ್ಬರ್ ಮ್ಯಾಟುಗಳು, ಹಾಲು ಕರೆಯುವ ಯಂತ್ರ ಮತ್ತು ಮೇವು ಕತರಿಸುವ ಯಂತ್ರಗಳನ್ನು ಶೇ.60 ಸಹಾಯಧನದಲ್ಲಿ ನೀಡಲಾಗುತ್ತಿದೆ ಎಂದು ವಿವರಿಸಿದರು.ಸಭೆಯಲ್ಲಿ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಡಾ. ಶ್ರೀಕಾಂತ್ ವಿ ಎನ್, ಉಪ ವ್ಯವಸ್ಥಾಪಕರಾದ ಡಾ. ರಾಕೇಶ್, ಡಾ. ರಮೇಶ ಕಂಕನವಾಡಿ, ಸಹಾಯಕ ವ್ಯಸ್ಥಾಪಕ ಡಾ. ಶ್ರೀನಿವಾಸ ಜಾಧವ ಮತ್ತು ವಿಸ್ತರಣಾಧಿಕಾರಿ ಮಧು ಬಾಂಡೇಗೆ, ಶ್ರೀ ಆಕಾಶ್ ಕಾಂಬಳೆ ಮತ್ತು ಮಂಜುನಾಥ್ ಗುರವ ಸೇರಿದಂತೆ ಹಾಲು ಉತ್ಪಾದಕರ ಸಂಘಗಳ ಪದಾಧಿಕಾರಿಗಳು, ಒಕ್ಕೂಟದ ಅಧಿಕಾರಿಗಳು ಉಪಸ್ತಿತರಿದ್ದರು.



ಖಾನಾಪುರ: ಪಟ್ಟಣದಲ್ಲಿ ಜರುಗಿದ ಹಾಲು ಉತ್ಪಾದಕರ ಸಂಘದ ಪದಾಧಿಕಾರಿಗಳ ವಾರ್ಷಿಕ ಪ್ರಾದೇಶಿಕ ಸಭೆ ನಡೆಯಿತು. ಬೆಳಗಾವಿ ಹಾಲು ಒಕ್ಕೂಟದ ನಿರ್ದೇಶಕ ಪ್ರಕಾಶ ಅಂಬೋಜಿ,ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಡಾ. ಶ್ರೀಕಾಂತ್ ವಿ ಎನ್, ಉಪ ವ್ಯವಸ್ಥಾಪಕರಾದ ಡಾ. ರಾಕೇಶ್, ಡಾ. ರಮೇಶ ಕಂಕಣವಾಡಿ, ಸಹಾಯಕ ವ್ಯಸ್ಥಾಪಕ ಡಾ. ಶ್ರೀನಿವಾಸ ಜಾಧವ ಮತ್ತು ವಿಸ್ತರಣಾಧಿಕಾರಿ ಮಧು ಬಾಂಡೇಗೆ, ಶ್ರೀ ಆಕಾಶ್ ಕಾಂಬಳೆ ಮತ್ತು ಮಂಜುನಾಥ್ ಗುರವ ಸೇರಿದಂತೆ ಹಾಲು ಉತ್ಪಾದಕರ ಸಂಘಗಳ ಪದಾಧಿಕಾರಿಗಳು, ಒಕ್ಕೂಟದ ಅಧಿಕಾರಿಗಳು ಉಪಸ್ತಿತರಿದ್ದರು.

2071ನೇ ಮದ್ಯವರ್ಜನ ಶಿಬಿರದ ಸಮಾರೋಪ

ಸಂಸ್ಕಾರ, ಸಂಸ್ಕೃತಿ ವೃದ್ಧಿಗೆ ಶ್ರಮಿಸಿ

ಬೆಳಗಾವಿ: ಸಮಾಜದ ಅಭಿವೃದ್ಧಿ ಹಾಗೂ ಹಳ್ಳಿಗಳ ಸುಧಾರಣೆಗೆ ಶ್ರಮಿಸುತ್ತಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯ ಶ್ಲಾಘನೀಯವಾಗಿದ್ದು, ಭಾರತೀಯ ಸಂಸ್ಕೃತಿ, ಸಂಸ್ಕಾರ ಮತ್ತು ಮೌಲ್ಯಗಳನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಶಿವಮೂರ್ತಿ ಸ್ವಾಮೀಜಿ ಹೇಳಿದರು.

ಶನಿವಾರ ಬೆಳಗಾವಿ ತಾಲೂಕಿನ ಸುಳೇಭಾವಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ 2071ನೇ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಾಡಿನ ಸಮಗ್ರ ಪ್ರಗತಿಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಲವು ವರ್ಷಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿದೆ ಎಂದರು.

ಇದೆ ವೇಳೆ ಧಾರವಾಡ ಪ್ರಾದೇಶಿಕ ವಿಭಾಗದ ಪ್ರಾದೇಶಿಕ ನಿರ್ದೇಶಕ ದಯಾಶೀಲ ಮಾತನಾಡಿ, ಉತ್ತಮ ಸಮಾಜ ನಿರ್ಮಾಣ ಹಾಗೂ ವ್ಯಕ್ತಿಯ ಬದುಕಿನ ಪರಿವರ್ತನೆಗಾಗಿ ಯೋಜನೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಅಸಹಾಯಕ ಕುಟುಂಬಗಳ ಏಳ್ಗೆ ಹಾಗೂ ದುಶ್ಚಟಗಳಿಂದ ಮುಕ್ತರಾಗಿ ಉತ್ತಮ ಜೀವನ ಕಟ್ಟಿಕೊಳ್ಳಲು ಯೋಜನೆಯ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮದ್ಯವರ್ಜನ ಶಿಬಿರ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸಚಿನ ಸುರೇಶ



- ಶಿವಮೂರ್ತಿ ಸ್ವಾಮೀಜಿ ಹೇಳಿಕೆ
- ಸುಳೇಭಾವಿಯಲ್ಲಿ ನಡೆದ 2071ನೇ ಮದ್ಯವರ್ಜನ ಶಿಬಿರ ಯಶಸ್ವಿಯಾಗಿ ಪೂರ್ಣಗೊಂಡಿದ್ದು, 55 ಶಿಬಿರಾರ್ಥಿಗಳು ಪಾನಮುಕ್ತ ಜೀವನ ನಡೆಸುವ ಸಂಕಲ್ಪ ಮಾಡಿದರು.

ಸಹಕಾರ ಅಗತ್ಯ

ಸಮಾಜದಲ್ಲಿ ಉತ್ತಮ ಕಾರ್ಯಗಳು ಯಶಸ್ವಿಯಾಗಬೇಕಾದರೆ ಎಲ್ಲರ ಸಹಕಾರ ಅಗತ್ಯ. ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಸಮಾಜಮುಖಿ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಬೆಂಬಲ ನೀಡಬೇಕು ಎಂದು ಶಿವಮೂರ್ತಿ ಸ್ವಾಮೀಜಿ ಹೇಳಿದರು.

ಮಂಡು ಮಾತನಾಡಿದರು.

ಸುಳೇಭಾವಿಯಲ್ಲಿನಡೆದ2071ನೇಮದ್ಯವರ್ಜನ ಶಿಬಿರ ಯಶಸ್ವಿಯಾಗಿ ಪೂರ್ಣಗೊಂಡಿದ್ದು, 55 ಶಿಬಿರಾರ್ಥಿಗಳು ಪಾನಮುಕ್ತ ಜೀವನ ನಡೆಸುವ ಸಂಕಲ್ಪ ಮಾಡಿದರು.

ಈ ವೇಳೆ ಜಿಲ್ಲಾ ನಿರ್ದೇಶಕ ಸತೀಶ ನಾಯ್ಕ, ಗೋಪಾಲ ಪಿಟಗಿ, ಆನಂದ ಶೆಟ್ಟಿ, ಪಕಿರವ್ವ ಅಮರಾಪುರ, ಗಿರಿಜಾ ಪಾಟೀಲ, ಬಸವರಾಜ ಮಾದಮ್ಮನವರ, ವೀರಭದ್ರ ನೇಸರಗಿ, ಶ್ರೀಧರ ಕರೇಮನಿ, ಬಾಬು ವಾಗೇರಿ, ಬಸವರಾಜ ಇಂಗಳೆ, ಶಿಬಿರದ ಯೋಜನಾಧಿಕಾರಿ ಭಾಸ್ಕರ, ಶಿಬಿರಾಧಿಕಾರಿ ದಿವಾಕರ ಪೂಜಾರಿ, ಆರೋಗ್ಯ ಸಹಾಯಕಿ ಕುಮಾರಿ ತುಷಾರ ಖಾಸಭಾಗ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ತಾಲೂಕು ಯೋಜನಾಧಿಕಾರಿ ಸುಭಾಷ್ ಪಿ.ಸಿ. ಸ್ವಾಗತಿಸಿ, ವಲಯದ ಮೇಲ್ವಿಚಾರಕ ದಯಾನಂದ ವಂದಿಸಿದರು.

ವಿದ್ಯಾರ್ಥಿಗಳಲ್ಲಿ ಕಾನೂನಿನ ಅರಿವು ಮುಖ್ಯ

ಚನ್ನಮ್ಮನ ಕಿತ್ತೂರು: ದೇಶದ ನಾಳಿನ ಭವಿಷ್ಯವಾಗಿರುವ ವಿದ್ಯಾರ್ಥಿಗಳು ಕಾನೂನಿನ ಅರಿವು ಹೊಂದುವುದು ಮುಖ್ಯವಾಗಿದೆ ಎಂದು ಜೆ ಎಂ ಎಫ್ ಸಿ ನ್ಯಾಯಾಧೀಶ ಮಹೊಮ್ಮದ್ ಅಲಿ ನಾಯ್ಕ ಹೇಳಿದರು.

ಸ್ಥಳೀಯ ರೋಟರಿ ಶಾಲೆಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕಾಡಳಿತ, ವಕೀಲರ ಸಂಘ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ ಮತ್ತು ಪೋಲಿಸ್ ಠಾಣೆ ಸಹಯೋಗದಲ್ಲಿ ನಡೆದ ಮಾದಕವಸ್ತುಗಳ ಮತ್ತು ಮಾದಕದ್ರವ್ಯಗಳ ಜಾಗೃತಿ ಹಾಗೂ ಕಾನೂನು ಅರಿವು ಹಾಗೂ ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಕಾನೂನು ಅರಿವನ್ನು ಹೊಂದಿ ಸಮಾಜದಲ್ಲಿ ಕಾನೂನು ಉಲ್ಲಂಘನೆ, ಅಶಾಂತಿ ವಾತಾವರಣ ಉಂಟಾದಾಗ ಕಾನೂನು ಪಾಲಿಸಿ ಸಾಮಾಜಿಕ ಬದಲಾವಣೆಗೆ ಕಾರಣರಾಗಬೇಕು ಎಂದು ಸಲಹೆ ನೀಡಿದರು

ತಹಶೀಲ್ದಾರ್ ಕಲಗೌಡ ಪಾಟೀಲ ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಮೊಬೈಲ್ ಹಾಗೂ ಇತರೆ ಅನವಶ್ಯಕ ಕಾರ್ಯಗಳನ್ನು ಮಾಡದೇ ಶಿಕ್ಷಣದತ್ತ ಗಮನ ಹರಿಸಿ ಶೈಕ್ಷಣಿಕ ಪ್ರಗತಿ ಹೊಂದುವದರ ಜೊತೆಗೆ ಕಾನೂನುಗಳ ಬಗ್ಗೆ ತಿಳಿದುಕೊಂಡಾಗ ಉತ್ತಮ ಪ್ರಜೆಗಳಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಿಪಿಐ ಶಿವಾನಂದ ಗುಡಗನಟ್ಟಿ, ನ್ಯಾಯವಾದಿಗಳಾದ ಎಸ್.ಡಿ. ಬೋಗೂರ, ಡಿ.ಆಯ್. ಹವಾಲ್ದಾರ ಇವರು ವಿದ್ಯಾರ್ಥಿಗಳಿಗೆ ಕಾನೂನು ಕುರಿತು ಪೋಕ್ಸೊ ಕಾಯ್ದೆ, ಬಾಲಕ ಮತ್ತು ಬಾಲಕಿಯರ ರಕ್ಷಣೆ, ಮಾದಕ ವಸ್ತುಗಳು ಮತ್ತು ಮಾದಕ ದ್ರವ್ಯಗಳು ಮುಂತಾದವುಗಳ ಬಗ್ಗೆ ತಿಳುವಳಿಕೆ ನೀಡಿದರು. ನ್ಯಾಯವಾದಿಗಳಾದ ವಿಶ್ವನಾಥ ಬಿಕ್ಕಣ್ಣವರ, ಬಿ.ಬಿ. ಹಿರೇಮಠ, ಪಿಎಸ್‌ಆಯ್ ಭರತ ಎಸ್, ಶಿಕ್ಷಕ ಮಂಜುನಾಥ ಅಳ್ನಾವರ ಮುಂತಾದವರು ಉಪಸ್ಥಿತರಿದ್ದರು.



ಅಪ್ಪಯ್ಯ ಸ್ವಾಮಿ ಶತಮಾನೋತ್ಸವ: ದೇಣಿಗೆ ಸಂಗ್ರಹ

ಐಗಳಿ: ಅಥಣಿ ತಾಲೂಕಿನ ಐಗಳಿ ಗ್ರಾಮದ ಶ್ರೀ ಅಪ್ಪಯ್ಯ ಸ್ವಾಮಿ ಶತಮಾನೋತ್ಸವದ ಅಂಗವಾಗಿ ಕಳೆದ ಒಂದು ತಿಂಗಳಿನಿಂದ ಗ್ರಾಮದಲ್ಲಿ ಮನೆ ಮನೆಗೆ ತೆರಳಿ ದೇಣಿಗೆ ಸಂಗ್ರಹ ಕಾರ್ಯ ನಡೆಯುತ್ತಿದೆ. ಈ ಕಾರ್ಯದಲ್ಲಿ ಯಾವುದೇ ಜಾತಿ, ಧರ್ಮ ಅಥವಾ ವರ್ಗದ ಭೇದಭಾವವಿಲ್ಲದೆ ಎಲ್ಲರ ಮನೆಗಳಿಗೆ ಭೇಟಿ ನೀಡಿ ಶ್ರೀ ಅಪ್ಪಯ್ಯ ಸ್ವಾಮಿಗಳ ಭಾವಚಿತ್ರ ಹಾಗೂ ವಿಭೂತಿ ಉಂಡಿ ನೀಡಲಾಗುತ್ತಿದೆ. ಗ್ರಾಮದ ಎಲ್ಲಾ ಸಮುದಾಯದ ಜನರು ಭಕ್ತಿಭಾವದಿಂದ ದೇಣಿಗೆ ನೀಡಿ ಸಹಕರಿಸುತ್ತಿದ್ದಾರೆ ಎಂದು ಅಪ್ಪಯ್ಯ ಸ್ವಾಮಿ ಸೇವಾ ಸಮಿತಿ ಅವರು ತಿಳಿಸಿದ್ದಾರೆ.

ಗ್ರಾಮದ ಅಪ್ಪಸಾಬ ಹಣಮಂತ ಮಾದರ ಇವರ ಮನೆಗೆ ಮನೆಗಳಿಗೆ ತೆರಳಿ ಶ್ರೀ ಅಪ್ಪಯ್ಯ ಸ್ವಾಮಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಅವರ ಮನೆಯಲ್ಲಿ ಉಪಹಾರ ಸ್ವೀಕರಿಸುವ ಮೂಲಕ ನಿಜವಾದ ಸಮಾನತೆಯ ಸಂದೇಶವನ್ನು ಸಾರಲಾಗಿದೆ. ಈ ಕಾರ್ಯವು ''ಎಲ್ಲರೂ ದೇವರ ಮುಂದೆ ಸಮಾನರು'' ಎಂಬ ಶ್ರೀ ಅಪ್ಪಯ್ಯ ಸ್ವಾಮಿ ಅವರ ಆದರ್ಶವನ್ನು ಪ್ರತಿಬಿಂಬಿಸುತ್ತದೆ. ಸಮಾಜದಲ್ಲಿ ಪ್ರೀತಿ, ವಿಶ್ವಾಸ,ಸೌಹಾರ್ದತೆಮತ್ತುಸಹೋದರತ್ವವನ್ನು ಬೆಳೆಸುವ ಈ ಕಾರ್ಯ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಜಾತಿ-ಧರ್ಮದ ಭೇದವನ್ನು ಮೀರಿ ಮಾನವೀಯತೆಯೇ ಶ್ರೇಷ್ಠ ಎಂಬ ಸಂದೇಶವನ್ನು ಶತಮಾನೋತ್ಸವದ ಮೂಲಕ ಗ್ರಾಮಕ್ಕೆ ತಲುಪಿಸಲಾಗುತ್ತಿದೆ. ಜು. 5ರಿಂದ ಗ್ರಾಮದಲ್ಲಿ ಡಾ ಅಲ್ಲಮಪ್ರಭು ಮಹಾಸ್ವಾಮಿಗಳ ನೇತೃತ್ವದಲ್ಲಿ ಪ್ರವಚನ ಮೂಲಕ ಶತಮಾತೋತ್ಸವದ ಪ್ರಥಮ ವರ್ಷಾಚಾರಣೆ ಆರಂಭವಾಗುತ್ತಿದೆ ಎಂದು ಅಪ್ಪಯ್ಯ ಸ್ವಾಮಿ ಸೇವಾ ಸಮಿತಿ ಅವರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಅಡವಯ್ಯ ಹೀರೇಮಠ ಶಿವಾನಂದ ಸಿಂಧೂರ ರವೀಂದ್ರ ಹಾಲಳ್ಳಿ ಅಪ್ಪು ಮಾಳಿ ಅಪ್ಪಸಾಬ ತೆಲಸಂಗ ಕಾಂತುಗೌಡ ಪಾಟೀಲ ಬಸವರಾಜ ನೇಮಗೌಡ ಹಣಮಂತ ಮಿರ್ಜಿ ಬಸವರಾಜ ತೆಲಸಂಗ ಅಪ್ಪು ಮದಬಾವಿ ಸೇರಿದಂತೆ ಅನೇಕರು ಉಪಸ್ಥಿತಿ ಇದ್ದರು.



ಪೋಲಿಯೋ ಜಾಗೃತಿಗಾಗಿ ಮಕ್ಕಳಿಂದ ಜಾಥಾ

ನೇರಲಿ: ಎರಡು ಹನಿ ಪೋಲಿಯೋ ಲಸಿಕೆಯ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ತಾಲೂಕಿನ ನೇರಲಿ ಗ್ರಾಮದ ಸರ್ಕಾರಿ ಪ್ರೌಢ ಮತ್ತು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಂದ ಶನಿವಾರ ಪಲ್ಸ್ ಪೋಲಿಯೋ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಯಿತು.

ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಎಸ್.ಎಸ್. ಹಿರೇಮಠ ಚಾಲನೆ ನೀಡಿದರು. ವಿದ್ಯಾರ್ಥಿಗಳು ಎರಡು ಹನಿ ಜೀವದಾಣಿ, ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಪೋಲಿಯೋ ಲಸಿಕೆ ಹಾಕಿಸಿ ಪೋಲಿಯೋ ಮುಕ್ತ ಭಾರತ ನಿರ್ಮಿಸೋಣ ಎಂಬ ಘೋಷಣೆಗಳನ್ನು ಕೂಗುತ್ತ, ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಹಾಗೂ ಶಾಲೆಯ ಶಿಕ್ಷಕರು ಪೋಲಿಯೋ ಲಸಿಕೆಯ ಅಗತ್ಯತೆ ಮತ್ತು ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ತಪ್ಪದೆ ಲಸಿಕೆ ಹಾಕಿಸಬೇಕೆಂದು ಮನವಿ ಮಾಡಿದರು.



ಜಾತಾ ಕಾರ್ಯಕ್ರಮದಲ್ಲಿ ಪ್ರೌಢ ಶಾಲೆ ಶಿಕ್ಷಕರಾದ ಕೆ.ಎ. ಬಡಿಗೇರ, ಅಶ್ವಿನಿ ಪಾಟೀಲ, ಕೆಬಿಎಸ್ ಪ್ರಧಾನ ಶಿಕ್ಷಕಿ ಎಸ್.ಬಿ. ವಂಟಮುತ್ತೆ, ಕೆ ಜಿ ಎಸ್ ಪ್ರಧಾನ ಶಿಕ್ಷಕಿ ಜಿ.ಜಿ. ಗುಡಸಿ, ಉರ್ದು ಶಾಲೆಯ ಶಿಕ್ಷಕಿ ಎ.ಜಿ. ಜಮಾದಾರ ಸೇರಿದಂತೆ ಆರೋಗ್ಯ ಇಲಾಖೆ ಸಿಬ್ಬಂದಿ, ಗ್ರಾಮದ ಅಂಗನವಾಡಿ ಕಾರ್ಯ ಕರ್ತೆಯರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಲಿತ ಸಂಘಟನೆಗಳಿಂದ ಬೀಡಿ ಗ್ರಾಮದಲ್ಲಿ ಪ್ರತಿಭಟನೆ

ಖಾನಾಪುರ: ತಾಲೂಕಿನ ಚಿಕ್ಕ ಅಂಗ್ರೊಳ್ಳಿ ಗ್ರಾಮದಲ್ಲಿ ಈಚೆಗೆ ದಲಿತ ವಿದ್ಯಾರ್ಥಿಗಳಿಗೆ ಊಟ ನೀಡುವ ಸಂದರ್ಭದಲ್ಲಿ ನಡೆದ ಅಸ್ಪೃಶ್ಯತೆ ಘಟನೆಗೆ ಸಂಬಂಧಿಸಿದಂತೆ ಇದುವರೆಗೂ ಆರೋಪಗಳನ್ನು ಬಂಧಿಸದಿರುವ ನಂದಗಡ ಪೊಲೀಸರ ವರ್ತನೆಯನ್ನು ಖಂಡಿಸಿ ಬೀಡಿ ಗ್ರಾಮದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ವಿವಿಧ ದಲಿತ ಸಂಘಟನೆಗಳು ಪ್ರತಿಭಟನೆಯನ್ನು ಹಮ್ಮಿಕೊಂಡಿವೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಸಂಯೋಜಕ) ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜಶೇಖರ ಹಿಂಡಲಗಿ ಮಾಹಿತಿ ನೀಡಿದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ತಾಲೂಕಿನ ವಿವಿಧ ದಲಿತ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ''ಸೋಮವಾರ ಜೂ. 29 ರಂದು ಬೆಳಗ್ಗೆ ಬೀಡಿಯಲ್ಲಿ ವಿವಿಧ ದಲಿತ ಸಂಘಟನೆಗಳ ಸಾವಿರಾರು ಕಾರ್ಯಕರ್ತರ ಜೊತೆ ಸೇರಿ ಬೃಹತ್ ಪ್ರತಿಭಟನೆಗೆ ಕರೆ ನೀಡಲಾಗಿದೆ. ಚಿಕ್ಕ ಅಂಗ್ರೊಳ್ಳಿಯ ಕೆಲವರು ಸಾರ್ವಜನಿಕ ಸ್ಥಳಗಳಲ್ಲಿ ಅಸ್ಪೃಶ್ಯತೆ ಆಚರಣೆ ಮಾಡಿದ್ದಾರೆ. ದಲಿತ ಮಕ್ಕಳಿಗೆ ದೂರದಿಂದ ಊಟ ನೀಡಿ ಅಮಾನವೀಯ ಕೃತ್ಯ ಎಸಗಿದ್ದಾರೆ. ಈ ಕುರಿತು ನಂದಗಡ ಪೊಲೀಸ್ ಠಾಣೆಯಲ್ಲಿ ಜೂ.23 ರಂದು ಜಾತಿ ನಿಂದನೆ ಪ್ರಕರಣ ದಾಖಲಾಗಿದೆ. ಆದರೆ ಇದುವರೆಗೂ ಕೃತ್ಯ ಎಸಗಿರುವ ಆರೋಪಿಗಳನ್ನು ಬಂಧಿಸಿಲ್ಲ, ಹೀಗಾಗಿ ಈ ಪ್ರತಿಭಟನೆ ಆಯೋಜಿಸಿದ್ದು, ಆರೋಪಗಳನ್ನು ಬಂಧಿಸುವವರೆಗೆ ಪ್ರತಿಭಟನೆ ಮುಂದುವರೆಸಲಾಗುತ್ತದೆ'' ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಶರದ ಹೊನ್ನಾಯಕ, ರಾಯಪ್ಪ ಚಲವಾದಿ, ರಾಘವೇಂದ್ರ ಚಲವಾದಿ, ಈರಪ್ಪ ಮಾದರ, ಮಹಾಂತೇಶ ಪಾತರದಾರ, ದುರ್ಗಪ್ಪ ಚಲವಾದಿ, ಬಸವರಾಜ ಮಾದರ, ನಾಗೇಶ ಕಾಂಬಳೆ, ಶಶಿಧರ ನಾಯಕ, ಕಲ್ಲಪ್ಪ ತಳವಾರ, ಪರಶುರಾಮ ಮಾದರ ಮತ್ತಿತರರು ಇದ್ದರು.

ವಿಘ್ನೇಶ್ವರನಿಗೆ 101 ಈಡುಗಾಯಿ ಸೇವೆ!

- ಬೆಳಗಾವಿ ಪಾಲಿಕೆಯಲ್ಲಿ ಕರ್ನಾಟಕ ಪರ ಗೊತ್ತುವಳಿಗೆ ಆಗ್ರಹ
- ಕನ್ನಡ ಸಂಘಟನೆಗಳ ಹೋರಾಟಕ್ಕೆ 100 ದಿನದ ಸಂಭ್ರಮ

ಬೆಳಗಾವಿ: ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ಪರವಾದ ಗೊತ್ತುವಳಿಯನ್ನು ಅಂಗೀಕರಿಸುವಂತೆ ಆಗ್ರಹಿಸಿ ಕನ್ನಡಪರ ಸಂಘಟನೆಗಳು ನಡೆಸುತ್ತಿರುವ ನಿರಂತರ ಹೋರಾಟವು ಯಶಸ್ವಿಯಾಗಿ ನೂರು ದಿನಗಳನ್ನು ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ಕನ್ನಡ ಸಂಘಟನೆಗಳ ಮುಖಂಡರು ಶುಕ್ರವಾರ ಬೆಳಗ್ಗೆ ನಗರದ ಐತಿಹಾಸಿಕ ಕಿತ್ತೂರು ಚೆನ್ನಮ್ಮ ವೃತ್ತದಲ್ಲಿರುವ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಬೆಳಗಾವಿ ಪಾಲಿಕೆಯ ಮಹಾಪೌರರು ಮತ್ತು ಉಪ ಮಹಾಪೌರರಿಗೆ ಸದ್ಬುದ್ಧಿ ನೀಡಲಿ ಎಂದು ಪ್ರಾರ್ಥಿಸಿದ ಹೋರಾಟಗಾರರು, ದೇವಸ್ಥಾನದ ಮುಂಭಾಗದಲ್ಲಿ 101 ಈಡುಗಾಯಿಗಳನ್ನು ಒಡೆಯುವ ಮೂಲಕ ತಮ್ಮ ಆಕ್ರೋಶ ಹಾಗೂ ಸಂಕಲ್ಪವನ್ನು ಪ್ರದರ್ಶಿಸಿದರು.

ಕನ್ನಡಪರ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಮಾತನಾಡಿ, ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ. ಗಡಿ ವಿವಾದ ಪರಿಹಾರಕ್ಕೆ ಮಹಾಜನ ವರದಿಯೇ ಅಂತಿಮ ಎಂಬ ಅಧಿಕೃತ ಗೊತ್ತುವಳಿಯನ್ನು ಪಾಲಿಕೆಯಲ್ಲಿ ಅಂಗೀಕರಿಸುವವರೆಗೂ ಕನ್ನಡ ಸಂಘಟನೆಗಳ ಈ ಹೋರಾಟ ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ. ಈಗಲಾದರೂ ಬಿಜೆಪಿ ನಾಯಕರು ಗಡಿಭಾಗದ ಹಾಗೂ ಇಡೀ ನಾಡಿನ ಕನ್ನಡಿಗರ ಭಾವನೆಗಳನ್ನು ಗೌರವಿಸಿ, ಪಾಲಿಕೆಯಲ್ಲಿ ತಕ್ಷಣವೇ ಗೊತ್ತುವಳಿ ಅಂಗೀಕರಿಸಬೇಕು, ಎಂದು ಆಗ್ರಹಿಸಿದರು. ಈ ವೇಳೆ ವಾಜಿದ್ ಹಿರೆಕೋಡಿ, ಬಲರಾಮ ಮಾಸೇನಟ್ಟಿ, ಶ್ರೀನಿವಾಸ ತಾಳುಕರ, ಮೈನು ಮಕಾನದಾರ, ಮಹೇಶ ಶೀಗಿಹಳ್ಳಿ, ಬಾಳಪ್ಪ ಗುಡಗೇನಟ್ಟಿ, ಮಲ್ಲಪ್ಪ ಗುಡಗೇನಟ್ಟಿ, ಸಿದ್ಲಿಂಗಪ್ಪ ಸುಣಕುಪ್ಪಿ, ಶರೀಫ್ ಸನದಿ, ಸಂತೋಷ ತಳ್ಳಿಮನಿ, ಶಿವಾಜಿ ಗುರವ, ಸಂತೋಷ ಮಾಸೇನಟ್ಟಿ, ಆನಂದ ಬಿಲಾವರ, ರಾಜು ಕೋಲಾ ಹಾಗೂ ಸರ್ವಮಂಗಳ ಅರಳಿಮಟ್ಟಿ ಸೇರಿದಂತೆ ನೂರಾರು ಕನ್ನಡಪರ ಸಂಘಟನೆಯ ಕಾರ್ಯಕರ್ತರು ಇದ್ದರು.



ಹೋರಾಟದ ಎಚ್ಚರಿಕೆ

ಪಾಲಿಕೆ ಆಡಳಿತ ಮಂಡಳಿ ಕನ್ನಡಿಗರ ತಾಳ್ಮೆಯನ್ನು ಪರೀಕ್ಷಿಸಬಾರದು. ಒಂದು ವೇಳೆ ಶೀಘ್ರದಲ್ಲೇ ಗೊತ್ತುವಳಿ ಪಾಸ್ ಮಾಡದಿದ್ದರೆ, ಮುಂದಿನ ದಿನಗಳಲ್ಲಿ ಕನ್ನಡ ಸಂಘಟನೆಗಳ ಹೋರಾಟ ಯಾವ ಸ್ವರೂಪ ಪಡೆದುಕೊಳ್ಳಲಿದೆ ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ ಎಂದು ಕಿತ್ತೂರು ಕರ್ನಾಟಕ ಸೇನೆಯ ರಾಜ್ಯಾಧ್ಯಕ್ಷ ಮಹಾದೇವ ತಳವಾರ ಎಚ್ಚರಿಕೆ ನೀಡಿದರು.

ಕುಡಿಯುವ ನೀರಿನ ಬಿಕ್ಕಟ್ಟಿನ ಭೀತಿ

- ಮಳೆ ಕೊರತೆಯಿಂದ ಕಂಗಾಲಾದ ರೈತರು
- ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದಿ ರುವುದು ರೈತರ ಚಿಂತೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಯಮಕನಮರಡಿ: ಈ ಬಾರಿ ಮುಂಗಾರು ಮಳೆ ಕೈಕೊಟ್ಟಿರುವ ಪರಿಣಾಮ ಯಮಕನಮರಡಿ ಹೋಬಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈಗಾಗಲೇ ಬಿತ್ತನೆ ಮಾಡಿರುವ ಬೆಳೆಗಳು ಮಳೆಯ ಕೊರತೆಯಿಂದ ಒಣಗುವ ಸ್ಥಿತಿಯಲ್ಲಿದ್ದು, ರೈತರು ಆತಂಕದಿಂದ ಮಳೆರಾಯನ ನಿರೀಕ್ಷೆಯಲ್ಲಿ ದಿನ ಕಳೆಯುತ್ತಿದ್ದಾರೆ.

ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದಿರುವುದು ರೈತರ ಚಿಂತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಕೃಷಿಯನ್ನೇ ಜೀವನಾಧಾರವಾಗಿಸಿಕೊಂಡಿರುವ ಈ ಭಾಗದ ಜನರು ಉತ್ತಮ ಮಳೆಯ ನಿರೀಕ್ಷೆಯಲ್ಲಿದ್ದರೂ, ಮಳೆ ವಿಳಂಬವಾಗಿರುವುದು ಕೃಷಿ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮ ಬೀರಿದೆ.

ಯಮಕನಮರಡಿ ಭಾಗದ ಪಶ್ಚಿಮ ಪ್ರದೇಶದಲ್ಲಿ ಕೆರೆ, ಕಟ್ಟೆ ಸೇರಿದಂತೆ ಮಳೆನೀರು ಸಂಗ್ರಹಿಸುವ ಶಾಶ್ವತ ವ್ಯವಸ್ಥೆಗಳ ಕೊರತೆ ಇದೆ. ಪರಿಣಾಮ ಪಶ್ಚಿಮ ಭಾಗದಷ್ಟೇ ಅಲ್ಲದೆ ಪೂರ್ವ ಭಾಗದ ರೈತರೂ ಬರಗಾಲದ ಭೀತಿಯನ್ನು ಎದುರಿಸುತ್ತಿದ್ದಾರೆ. ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವಿನ ಕೊರತೆಯೂ ಉಂಟಾಗುವ ಸಾಧ್ಯತೆ ಇದ್ದು, ಇದರಿಂದ ರೈತರ ಜೀವನೋಪಾಯದ ಮೇಲೆ ತೀವ್ರ ಪರಿಣಾಮ ಬೀಳಲಿದೆ ಎಂದು ರೈತರು ಹೇಳುತ್ತಿದ್ದಾರೆ.

ಗಡಿ ಭಾಗದ ರೈತರಿಗೆ ಅನುಕೂಲವಾಗುವ ನೀರಾವರಿ ಯೋಜನೆಗಳನ್ನು ಸರ್ಕಾರ ಇನ್ನೂ ಜಾರಿಗೊಳಿಸಿಲ್ಲ ಎಂಬ ಆರೋಪವೂ ಕೇಳಿಬಂದಿದೆ. ಹಲವು ಬಾರಿ ರೈತ ಸಂಘಟನೆಗಳು, ಜನಪ್ರತಿನಿಧಿಗಳು ಹಾಗೂ ವಿವಿಧ ಸಂಘಟನೆಗಳು ಮನವಿ, ಪ್ರತಿಭಟನೆ ಮತ್ತು ಸತ್ಯಾಗ್ರಹ ನಡೆಸಿದರೂ ಯಾವುದೇ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರಸ್ತುತ ಹಿಡಕಲ್ ಜಲಾಶಯದಲ್ಲಿರುವ ನೀರಿನ ಸಂಗ್ರಹ ಇನ್ನೂ ಸುಮಾರು ಎರಡು ತಿಂಗಳ ಅವಶ್ಯಕತೆಯನ್ನು ಮಾತ್ರ ಪೂರೈಸುವಷ್ಟು ಇದೆ ಎನ್ನಲಾಗುತ್ತಿದೆ. ಈ ಅವಧಿಯಲ್ಲಿ ಸಮರ್ಪಕ ಮಳೆಯಾಗದಿದ್ದರೆ ಸರ್ಕಾರ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಪೂರೈಸಬೇಕಾದ ಪರಿಸ್ಥಿತಿ ಎದುರಾಗಬಹುದು ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.

ರೈತರು, ಜಾನುವಾರುಗಳು ಹಾಗೂ ಗ್ರಾಮೀಣ ಜನರ ಹಿತದೃಷ್ಟಿಯಿಂದ ಸರ್ಕಾರ ತಕ್ಷಣವೇ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಜತೆಗೆ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಿ, ಸಾಮಾಜಿಕ ಭದ್ರತಾ ಯೋಜನೆಗಳ ಅನುಷ್ಠಾನಕ್ಕೂ ವೇಗ ನೀಡಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.

ನೀರಿನ ಮಟ್ಟ ಕುಸಿತ

ಹಿಡಕಲ್ ಜಲಾಶಯದಿಂದ ಹುಕ್ಕೇರಿ ತಾಲೂಕಿನ 18ಕ್ಕೂ ಹೆಚ್ಚು ಪಟ್ಟಣ ಹಾಗೂ ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಆದರೆ ಜಲಾಶಯದಲ್ಲಿನ ನೀರಿನ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದ್ದು, ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಬಿಕ್ಕಟ್ಟು ಎದುರಾಗುವ ಸಾಧ್ಯತೆ ಇದೆ ಎಂಬ ಆತಂಕ ವ್ಯಕ್ತವಾಗಿದೆ.

ಕಿರುಸುದ್ದಿ

ಇಂದು ವಿವಿಧ ಕಾರ್ಯಕ್ರಮ: ಶಾಸಕ ಚಿಮ್ಮನಕಟ್ಟಿ ಭಾಗಿ

ಬಾದಾಮಿ: ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಜೂ.28ರಂದು ಭಾನುವಾರ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಬೆಳಗ್ಗೆ 10 ಗಂಟೆಗೆ ಸರಕಾರಿ ತಾಲೂಕಾ ಆಸ್ಪತ್ರೆಯಲ್ಲಿ ಐದು ವರ್ಷದ ಮಕ್ಕಳಿಗೆ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪೋಲಿಯೋ ಹನಿ ಹಾಕಲಿದ್ದಾರೆ. ನಂತರ 10.15 ಗಂಟೆಗೆ ಪುರಸಭೆ ವತಯಿಂದ ಖರೀದಿಸಿದ ನೂತನ ವಾಹನಗಳಿಗೆ ಲೋಕಾರ್ಪಣೆ ಮಾಡಲಿದ್ದಾರೆ. ನಂತರ 11 ಗಂಟೆಗೆ ಬೀರಲಿಂಗೇಶ್ವರ ಸಮುದಾಯ ಭವನದಲ್ಲಿ ನಡೆಯಲಿರುವ ಹಾಲುಮತ ಸಮಾಜದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಶಾಸಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ಇಂದು ಪ್ರತಿಭಾ ಪುರಸ್ಕಾರ

ಬಾದಾಮಿ: ಹಾಲುಮತ ನೌಕರರ ಸಂಘ, ಕರ್ನಾಟಕ ಪ್ರದೇಶ ಕುರುಬರ ಸಂಘ, ಬೀರಲಿಂಗೇಶ್ವರ ಸೇವಾ ಸಮಿತಿ, ನಿವೃತ್ತ ನೌಕರರ ಸಂಘ ಹಾಗೂ ಸಮಾಜದ ಎಲ್ಲ ಸಂಘಟನೆಗಳ ಸಹಯೋಗದಲ್ಲಿ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜೂ.28ರಂದು ಭಾನುವಾರ, ಬೆಳಗ್ಗೆ 10.30ಕ್ಕೆ ಬೀರಲಿಂಗೇಶ್ವರ ಸಮುದಾಯ ಭವನ ಹಾಗೂ ಶಿವಯೋಗ ಮಂದಿರ ಶಾಖಾಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿರೂರ ಕನಕ ಬ್ರಹ್ಮ ವಿದ್ಯಾಶ್ರಮದ ಚಿನ್ಮಯಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮಾಜಿ ಸಚಿವ ಬಿ.ಬಿ.ಚಿಮ್ಮನಕಟ್ಟಿ ಘನ ಉಪಸ್ಥಿತರಿರುವರು. ಶಾಸಕ ಭೀಮಸೇನ ಬಿ.ಚಿಮ್ಮನಕಟ್ಟಿ ಅಧ್ಯಕ್ಷತೆ ವಹಿಸುವರು. ರಾಜ್ಯ ಚುನಾವಣಾ ಆಯುಕ್ತ ಡಾ.ಜಿ.ಎಸ್.ಸಂಗ್ರೇಶಿ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಬಾಗಲಕೋಟೆ ಶಾಸಕ ಉಮೇಶ ಎಚ್.ಮೇಟಿ ಆಗಮಿಸುವರು. ಧಾರವಾಡ ಜೆನಿಯಸ್ ಅಕಾಡಮಿಯ ಸಿದ್ದಣ್ಣ ದಳವಾಯಿ ಉಪನ್ಯಾಸ ನೀಡಲಿದ್ದಾರೆ. ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕರು, ಹಾಲುಮತ ನೌಕರರ ಸಂಘದ, ಬೀರಲಿಂಗೇಶ್ವರ ಸೇವಾ ಸಮಿತಿ ಹಾಗೂ ನಿವೃತ್ತ ನೌಕರರ ಸಂಘದ ಅಧ್ಯಕ್ಷರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ತರಬೇತಿ ಶಿಬಿರ

ಬೀಳಗಿ: ಚುನಾವಣಾ ಆಯೋಗದ ನಿರ್ದೇಶನದಂತೆ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಅಂಗವಾಗಿ ತರಬೇತಿ ಕಾರ್ಯಗಾರ ಜೂ.28ರಂದು ಬೆಳಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಕೊರ್ತಿ ಸಮುದಾಯ ಭವನದಲ್ಲಿ ನಡೆಯಲಿದೆ. ಭಾರತ ಚುನಾವಣಾ ಆಯೋಗವು ಉಲ್ಲೇಖಿತ (1) ಪತ್ರದಲ್ಲಿ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆಗೆ ವೇಳಾಪಟ್ಟಿ ಪ್ರಕಟಿಸಿದೆ. ಈ ಹಿನ್ನಲೆಯಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್ಐಆರ್)ಗೆ ಸಂಬಂಧಿಸಿದಂತೆ ಈ ಮೇಲ್ಕಾಣಿಸಿದ ಸ್ಥಳದಲ್ಲಿ ಸರಿಯಾದ ಸಮಯದಲ್ಲಿ 22-ಬೀಳಗಿ ವಿಧಾನಸಭಾ ಎಲ್ಲ ಮತಗಟ್ಟೆ ಮಟ್ಟದ ಏಜೆಂಟ್‌ರರು (ಬಿಎಲ್ಎ) ಹಾಗೂ ಮತಗಟ್ಟೆ ಮಟ್ಟದ ಅಧಿಕಾರಿಗಳ ತರಬೇತಿ ಏರ್ಪಡಿಸಲಾಗಿದ್ದು, ಸರಿಯಾದ ಸಮಯಕ್ಕೆ ಆಗಮಿಸಬೇಕು ಎಂದು ತಹಶೀಲ್ದಾರ ವಿನೋದ ಹತ್ತಳ್ಳಿ ತಿಳಿಸಿದ್ದಾರೆ.

ಇಂದು ಉಪನ್ಯಾಸ

ಬೀಳಗಿ: ಪಟ್ಟಣದ ವಿಶ್ವಮಾನವ ಧ್ಯಾನ ಹಾಗೂ ಸಾಂಸ್ಕೃತಿಕ ಕೇಂದ್ರದಲ್ಲಿ ಜೂ.28ರಂದು ಸಂಜೆ 6.45 ಗಂಟೆಗೆ ಉಪನ್ಯಸ ಮತ್ತು ಸಂವಾದ ಕಾರ್ಯಕ್ರಮ ನಡೆಯಲಿದೆ. ಆದರ್ಶ ವಿದ್ಯಾಲಯದ ಶಿಕ್ಷಕ ಲಾಲಸಾಬ ಮೇಲಿನಮನಿ ಸೌಹಾರ್ದ ಭಾರತ ವಿಷಯದ ಕುರಿತು ಉಪನ್ಯಾಸ ನೀಡುವರು. ವಿಶ್ರಾಂತ ಪ್ರಾಚಾರ್ಯ ಎಚ್.ಬಿ.ಧರ್ಮಣ್ಣವರ ದಿಕ್ಸೂಚಿ ನುಡಿ ಹೇಳುವರೆಂದು ವಿಶ್ವಮಾನವ ಧ್ಯಾನ ಹಾಗೂ ಸಾಂಸ್ಕೃತಿಕ ಕೇಂದ್ರದ ಸಂಸ್ಥಾಪಕ ಎಸ್.ಪಿ.ಆನಂದಬಾಬು ತಿಳಿಸಿದ್ದಾರೆ.

ಜಾನಪದ ಸಂಭ್ರಮ ಇಂದು

ಕಲಾದಗಿ: ಗ್ರಾಮದ ಸಾಯಿಬಾಬಾ ಮಂದಿರದ ಸಭಾಭವನದಲ್ಲಿ ಡಾ.ಬಾಬು ಜಗಜೀವನರಾಮ ಜಾನಪದ ಮತ್ತು ಸಾಂಸ್ಕೃತಿಕ ಕಲಾ ಸಂಘ(ರಿ) ಅಂಕಲಗಿ ಇವರ ವತಿಯಿಂದ ಜೂ.28 ಭಾನುವಾರ ಬೆಳಗ್ಗೆ 10ಗಂಟೆಗೆ ಸುಗಮ ಸಂಗೀತ ಜಾನಪದ ಸಂಭ್ರಮ ಕಾರ್ಯಕ್ರಮ ಜರುಗಲಿದ್ದು, ಈ ಕಾರ್ಯಕ್ರಮಕ್ಕೆ ನಾಡಿನ ಅನೇಕ ಪ್ರಸಿದ್ಧ ಕಲಾ ತಂಡಗಳು ಹಾಗೂ ಕಲಾವಿದರು ತಮ್ಮ ಕಲಾ ಪ್ರದರ್ಶನ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೀಳಗಿ ಶಾಸಕ ಜೆ.ಟಿ.ಪಾಟೀಲ, ಎಪಿಎಂಸಿ ಮಾಜಿ ಅಧ್ಯಕ್ಷ ನಿಂಗಪ್ಪ ಅರಕೇರಿ, ಕೆ.ಎಲ್.ಬಿಲಕೇರಿ, ಸಂಗಣ್ಣ ಮುಧೋಳ, ಬಸವರಾಜ ಸಂಶಿ, ಟಿ.ಆರ್.ಪರಚನಗೌಡರ, ಲಕ್ಷ್ಮಣಗೌಡ ಗೌಡರ, ಪ್ರವೀಣ ಅರಕೇರಿ, ಹನಮಂತಗೌಡ ಪಾಟೀಲ, ಬಸವರಾಜ ಪುಂಡಿಕಟಗಿ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಸಂಘಟಕರು ತಿಳಿಸಿದ್ದಾರೆ.



ಕಲಾದಗಿ: ಗ್ರಾಮದ ಹೊಸುರ ಚೌಕನಲ್ಲಿ ಹಿಂದೂ ಮುಸ್ಲಿಂ ಬಾಂದವರು ಅಲಾಯಿ ದೇವರುಗಳಿಗೆ ಹಾಗೂ ಡೋಲಿಗಳಿಗೆ ಸಕ್ಕರೆ ಊದು ಸಮರ್ಪಿಸಿದರು. ದೀನ ಹಾಕುವುದು, ರಿವಾಯತ ಪದ ಹಾಡುವುದು ಮತ್ತು ಹಲಗೆ ಬಾರಿಸುತ್ತಾ ನಡೆದ ಹೆಜ್ಜೆ ಕುಣಿತ ಜನರ ಮನಸೆಳೆಯಿತು. ಸಂಜೆ ಗ್ರಾಮದ ಎಲ್ಲ ಅಲಾಯಿ ದೇವರುಗಳು ಕೊಬ್ರಿ ಕ್ರಾಸನಲ್ಲಿ ನೆರೆದಿದ್ದ ಭಾರಿ ಜನಸ್ತೋಮದ ಮಧ್ಯ ಒಟ್ಟಾಗಿ ನದಿಗೆ ಹೋಗಿ ಪೂಜೆ ಸಲ್ಲಿಸಿ ವಿಸರ್ಜನೆಗೊಂಡು ಶ್ರದ್ಧಾ ಭಕ್ತಿಯಿಂದ ಮೊಹರಂ ಸಂಪನ್ನಗೊಂಡಿತು.

ಇಂದು ಸಂಗೀತ ಸಂಭ್ರಮ ಕಾರ್ಯಕ್ರಮ

ಗುಳೇದಗುಡ್ಡ: ವಿಶ್ವಯೋಗ ಹಾಗೂ ವಿಶ್ವಸಂಗೀತ ದಿನಾಚರಣೆ ಅಂಗವಾಗಿ ಗಾನಯೋಗಿ ಪಂ.ಪಂಚಾಕ್ಷರಿ ಗವಾಯಿಗಳ ಪ್ರತಿಷ್ಠಾನ ಸಮಿತಿ, ಬಾಗಲಕೋಟೆ ವತಿಯಿಂದ ಸಂಗೀತ ಸಂಭ್ರಮ ಕಾರ್ಯಕ್ರಮ ಜೂ.28ರಂದು ಸಂಜೆ 4.30ಗಂಟೆಗೆ ಪಟ್ಟಣದ ಸಾಲೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸ್ಥಳೀಯ ಮುರುಘಾಮಠದ ಕಾಶಿನಾಥ ಸ್ವಾಮಿಗಳು ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಶಾಸಕ ಭೀಮಸೇನ ಚಿಮ್ಮನಕಟ್ಟಿ ಕಾರ್ಯಕ್ರಮ ಉದ್ಘಾಟಿಸುವರು. ಪ್ರತಿಷ್ಠಾನದ ಅಧ್ಯಕ್ಷ ಶ್ರೀಶೈಲ ಕರಿಶಂಕರಿ ಅಧ್ಯಕ್ಷತೆ ವಹಿಸುವರು. ಜೆಡಿಎಸ್ ಜಿಲ್ಲಾಧ್ಯಕ್ಷ ಹನುಮಂತ ಮಾವಿನಮರದ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ವಿಶ್ರಾಂತ ಉಪನ್ಯಾಸಕ ಶಾಂತಗೌಡ ಎಲ್.ಪಾಟೀಲ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ವಿಶ್ವಸಂಗೀತ ದಿನಾಚರಣೆ ಕುರಿತು ಡಾ. ವೆಂಕಟೇಶ ಪೂಜಾರ ಉಪನ್ಯಾಸ ನೀಡುವರು. ಬಸವರಾಜ ಭಜಂತ್ರಿ ಹಾಗೂ ಡಾ.ಪುಟ್ಟರಾಜ ಭಜಂತ್ರಿ ಅವರಿಂದ ಮಂಗಲವಾದ್ಯ, ಡಾ.ಸಿದ್ರಾಮಯ್ಯ ಮಠಪತಿ ಅವರಿಂದ ಹಿಂದೂಸ್ಥಾನಿ ಸಂಗೀತ, ಜಯತೀರ್ಥ ತಾಸಗಾಂವ ಅವರಿಂದ ಗಾಯನ, ವೈಷ್ಣವಿ ಗೂಳಿ, ರೇಖಾ ಮಡಿವಾಳ ಅವರಿಂದ ಸುಗಮ ಸಂಗೀತ, ಪವಿತ್ರಾ ಜಕ್ಕಪ್ಪನವರ ತಂಡದಿಂದ ಜಾನಪದ ಸಂಗೀತ, ಚಿದಾನಂದಸಾ ಕಾಟವಾ ಅವರಿಂದ ತತ್ವಪದ, ಯಲ್ಲಪ್ಪ ಪೂಜಾರ ಸಂಗಡಿಗರಿಂದ ದಾಸವಾಣಿ, ಕೃಷ್ಣಪ್ಪ ಬೇನೂರ ಅವರಿಂದ ವಚನ ಸಂಗೀತ, ಬನಶ್ರೀ ತಂಡದಿಂದ ಕೋಲಾಟ ಕಾರ್ಯಕ್ರಮ ನಡೆಯಲಿದ್ದು, ಹಾರ್ಮೋನಿಯಂ ಕಲಾವಿದರಾಗಿ ದೇವೇಂದ್ರಪ್ಪ ಮಾಸ್ತರ ಬಡಿಗೇರ, ಸದಾಶಿವ ಬೆಣಗಿ, ಶ್ರೀಧರ ವಂದಾಲ, ಭೀಮಪ್ಪ ಹಳ್ಳೇಗೋಳ, ತಬಲಾ ಕಲಾವಿದರಾಗಿ ಕಿರಣ ಏರಪಲ್, ವಿನಯ ಕುಲಕರ್ಣಿ, ಗಗನ ಗಡ್ಡದ, ವಿಜಯ ಹಿರೇಮಠ ಭಾಗವಹಿಸಲಿದ್ದು, ಗುಂಡಣ್ಣ ಬೋರಣ್ಣವರ ನಿರೂಪಿಸಲಿದ್ದಾರೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಶಂಕರ ಲಮಾಣಿ, ಬಸವರಾಜ ಸಿಂದಗಿಮಠ ತಿಳಿಸಿದ್ದಾರೆ.



ನಾಲತವಾಡ: ಪಟ್ಟಣ ಪಂಚಾಯತಿಯಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಿಸಲಾಯಿತು. ವೀರೇಶ ದೊಡಮನಿ, ವೀರೇಶ ತಂಗಡಗಿ, ತಾಳಿಕೋಟೆ, ರಂಗನಾಥ ಜಾಲಹಳ್ಳಿ ಅಲ್ತಾಫ್ ಮೂಲಿಮನಿ, ಮುತ್ತು ಇದ್ದರು.

ಗೃಹಲಕ್ಷ್ಮೀ ಯೋಜನೆಯಡಿ ಮೃತಪಟ್ಟವರ ಹೆಸರು ಕೈ ಬಿಡಲು ಸೂಚನೆ

ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲು ಕ್ರಮ

ಬಾಗಲಕೋಟೆ: ಗೃಹಲಕ್ಷ್ಮೀ ಯೋಜನೆಯಡಿ ಮೃತಪಟ್ಟಿರುವ 472 ಫಲಾನುಭವಿಗಳ ಹೆಸರುಗಳನ್ನು ಫಲಾನುಭವಿಗಳ ಪಟ್ಟಿಯಿಂದ ಕೈಬಿಡುವ ಪ್ರಕ್ರಿಯೆ ತ್ವರಿತವಾಗಿ ಮಾಡುವಂತೆ ಬಾಗಲಕೋಟೆ ಶಾಸಕ ಉಮೇಶ ಮೇಟಿ ಅನುಷ್ಠಾನ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾಲೂಕು ಪಂಚಾಯತ ಸಭಾಭವನದಲ್ಲಿ ನಡೆದ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಫಲಾನುಭವಿಗಳ ಮಾಹಿತಿಯನ್ನು ಕಾಲಕಾಲಕ್ಕೆ ನವೀಕರಿಸುವ ಮೂಲಕ ಯೋಜನೆಯ ಸೌಲಭ್ಯ ನಿಜವಾದ ಅರ್ಹರಿಗೆ ತಲುಪುವಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು. ಯೋಜನೆ ಅನುಷ್ಠಾನದಲ್ಲಿ ಪಾರದರ್ಶಕತೆ ಹಾಗೂ ಇಲಾಖೆಗಳ ನಡುವಿನ ಸಮನ್ವಯಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎಂದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಸದಸ್ಯರು ಗೃಹಲಕ್ಷ್ಮೀ ಯೋಜನೆಯಡಿ ಮೃತಪಟ್ಟವರ ಹೆಸರು ತೆಗೆದು ಹಾಕುವದರ ಜೊತೆಗೆ ಆ ಕುಟುಂಬದ ನಂತರ ಮನೆಯೊಡತಿಗೆ ಈ ಯೋಜನೆ ಲಾಭ ಪಡೆಯಲು ಮಾಡಬೇಕಾದ ಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಮನೆಯೊಡತಿ ಮೃತಪಟ್ಟರೆ ಆ ಕುಟುಂಬದ ನಂತರ ಮನೆಯೊಡತಿಯ ಹೆಸರನ್ನು ರೇಷನ್ ಕಾರ್ಡನಲ್ಲಿ



ಸೇರಿಸಿ, ಹೊಸದಾಗಿ ಅರ್ಜಿ ಸಲ್ಲಿಸಬೇಕು. ಅಂದಾಗ ಮಾತ್ರ ಯೋಜನೆ ಲಾಭ ಪಡೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಲಾಯಿತು.

ರೇಷನ್ ಕಾರ್ಡ್ ತಿದ್ದುಪಡಿ ಹಾಗೂ ಹೊಸ ರೇಷನ್ ಕಾರ್ಡ್‌ಗೆ ಅರ್ಜಿ ಹಾಕಲು ಲಾಗಿನ್ ಸಮಸ್ಯೆ ಇದೆ. ಹಾಕಿದ ಅರ್ಜಿಗಳು ಇಪ್ಲಿಮೆಂಟ್ ಆಗುತ್ತಿಲ್ಲ, ನೀರಲಕೇರಿ, ಶಿಗಿಕೇರಿ ಗ್ರಾಮದಲ್ಲಿ ನಡೆದ ಕುಂದು ಕೊರತೆ ಸಭೆಯಲ್ಲಿ ರೇಷನ್ ಕಾರ್ಡ ಬಗ್ಗೆ ಚರ್ಚೆ ನಡೆದಿದೆ. ರೇಷನ್ ಕಾರ್ಡ ಸರಿಪಡಿಸದ ಹಿನ್ನಲೆಯಲ್ಲಿ ಗ್ರಹಲಕ್ಷ್ಮೀ ಯೋಜನೆಗೆ ಹೊಸದಾಗಿ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಇದನ್ನು ಸರಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಹಾಜರಾಗದೇ ಇರುವುದು ವಿಷಾಧನಿಯ ಸಂಗತಿಯಾಗಿದೆ. ಸಂಬಂಧಿಸಿದ ಅಧಿಕಾರಿಗಳು ಸಭೆಗೆ ಬರದೇ ಇದ್ದರೆ ಹೇಗೆ ಎಂದು ಶಾಸಕರು ಪ್ರಶ್ನಿಸಿದರು. ಮುಂದಿನ ಸಭೆಯಲ್ಲಿ ಅಧಿಕಾರಿಗಳು ಹಾಜರಾಗಲು ಕ್ರಮವಹಿಸಲು ಸೂಚನೆ ನೀಡಿದರು.

ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಹಾಗೂ ಯುವನಿಧಿ ಯೋಜನೆ ಸೇರಿದಂತೆ ಇತರೆ ಯೋಜನೆಗಳ ಪ್ರಗತಿಯನ್ನ ಪರಿಶೀಲಿಸಲಾಯಿತು. ಬಾಕಿ ಉಳಿದಿರುವ ಅರ್ಜಿಗಳ ವಿಲೇವಾರಿ ಹಾಗೂ ತಾಂತ್ರಿಕ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಗ್ರಾಮೀಣ ಭಾಗದಲ್ಲಿ ಯುವನಿಧಿ ಯೋಜನೆ ಬಗ್ಗೆ ಜಾಗೃತಿ ಮೂಡಿಸಲು ಅಧಿಕಾರಿಗಳು ಮುಂದಾಗಬೇಕು. ಮಾಹಿತಿವುಳ್ಳ ಪೋಸ್ಟರಗಳನ್ನು ಗ್ರಾ.ಪಂ ವ್ಯಾಪ್ತಿಯಲ್ಲಿ ಅಂಟಿಸಲು ಕ್ರಮಕ್ಕೈಗೊಳ್ಳಲು ತಿಳಿಸಿದರು. ಯೋಜನೆ ದುರುಪಯೋಗವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಅಧಿಕಾರಿಗಳದ್ದಾಗಿದೆ ಎಂದರು.

ಸಭೆಯಲ್ಲಿ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಸ್.ಎಂ.ರಾಂಪೂರ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಸಂಪಗಾವಿ ಉಪಸ್ಥಿತರಿದ್ದರು.

ಯೋಜನೆ ಅನುಷ್ಠಾದಲ್ಲಿ ವಿಳಂಬ ಸಲ್ಲ

ಬಾಗಲಕೋಟೆ: ಪ್ರತಿಯೊಂದು ಯೋಜನೆ ಅನುಷ್ಠಾನದಲ್ಲಿ ವಿಳಂಬವಾಗದಂತೆ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತಿ ನೂತನ ಸಭಾಭವನದಲ್ಲಿ ತಾಲ್ಲೂಕು ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೊಂದಿಗೆ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಗ್ರಾಮ ಪಂಚಾಯತ್ ಮಟ್ಟದಲ್ಲಿ ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು, ಸಾರ್ವಜನಿಕರಿಗೆ ಗುಣಮಟ್ಟದ ಸೇವೆ ಒದಗಿಸುವುದು ಹಾಗೂ ನಿಗದಿತ ಗುರಿಗಳನ್ನು ಸಮಯಕ್ಕೆ ಸರಿಯಾಗಿ ಸಾಧಿಸುವುದು ಅಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ, ತೆರಿಗೆ ಸಂಗ್ರಹಣೆ, ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತಾ ಕಾರ್ಯಗಳು, ಮಹಾತ್ಮ ಗಾಂಧಿ ನರೇಗಾ ಯೋಜನೆ, ಗ್ರಾಮ ಪಂಚಾಯತ್ ಆಡಳಿತ ಹಾಗೂ ಇತರೆ ಪ್ರಮುಖ ಕಾರ್ಯಕ್ರಮಗಳ ಪ್ರಗತಿ ಪರಿಶೀಲಿಸಿದ ಅವರು, ಯಾವುದೇ ರೀತಿಯ ನಿರ್ಲಕ್ಷ್ಯ ಅಥವಾ ವಿಳಂಬವನ್ನು ಸಹಿಸಲಾಗುವುದಿಲ್ಲ ಎಂದು ಕಟ್ಟುನಿಟ್ಟಾಗಿ ಸೂಚಿಸಿದರು.

ಗ್ರಾಮ ಪಂಚಾಯತ ತೆರಿಗೆ ಪ್ರಮಾಣವು ಕೇವಲ ಶೇ.15 ರಷ್ಟು ಮಾತ್ರ ವಸೂಲಾತಿ ಆಗಿದ್ದು, ಇಲ್ಲಿಯವರೆಗೆ ಶೇ.25 ರಷ್ಟಾದರೂ ವಸೂಲಾಗಬೇಕಿತ್ತು.

ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ



ಇ-ತಂತ್ರಾಂಶದಡಿ 11ಎ ಮತ್ತು 11ಬಿ ರಡಿ ಬಾಕಿ ಇರುವ ಎಲ್ಲ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಲು ಸೂಚಿಸಿದರು. 15ನೇ ಹಣಕಾಸಿನಡಿ ಕೆಲವೊಂದು ಗ್ರಾ.ಪಂಗಳಲ್ಲಿ ಅನುದಾನ ಖರ್ಚಾಗದೇ ಹಾಗೆ ಉಳಿಸಿ ಕೊಂಡಿದ್ದು, ಆಗಸ್ಟ 15 ರೊಳಗಾಗಿ ನಿಯಮಾನುಸಾರ ಖರ್ಚು ಭರಿಸತಕ್ಕದ್ದು. ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿಯು ವಾಸಸ್ಥಳದ ದೃಢೀಕರಣ ಪತ್ರ ನೀಡಲು ತಿಳಿಸಿದರು.

ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಎಲ್ಲ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ, ನಿಗದಿತ ಗುರಿಗಳನ್ನು ಶೇ.100 ರಷ್ಟು ಸಾಧಿಸಲು ಶ್ರಮಿಸಬೇಕು ಎಂದರು.

ಜಿಪಂ ಉಪ ಕಾರ್ಯದರ್ಶಿ ಎನ್.ವೈ. ಬಸರಿಗಿಡದ, ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು ಸೇರಿದಂತೆ ಆಯಾ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಪುಸ್ತಕಾವಲೋಕನ

ತೇರದಾಳ: ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ, ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ ತೇರದಾಳ ವತಿಯಿಂದ ನಾಲ್ಕನೆಯ ಪುಸ್ತಕಾವಲೋಕನ ಕಾರ್ಯಕ್ರಮವು ಜೆವಿಎಂ ಪದವಿ ಪೂರ್ವ ಕಾಲೇಜು, ಜೀನಸೇನಾಚಾರ್ಯ ಗುರುಕುಲ ಆವರಣದಲ್ಲಿ ಜೂ.28ರಂದು ಭಾನುವಾರ ಸಂಜೆ 6 ಗಂಟೆಗೆ ಜರುಗುವುದು. ಕೃತಿಕಾರ, ಹಿರಿಯ ನ್ಯಾಯವಾದಿ ಡಾ.ತಾತಾಸಾಹೇಬ ಬಾಂಗಿ ಇವರ ಕೃತಿ ನಿಸರ್ಗೋಪಚಾರ ಏನು? ಏಕೆ? ಹೇಗೆ? ಎಂಬ ಕೃತಿಯನ್ನು ಡಾ.ಪರಶುರಾಮ ರಾವಳ, ಮುಖ್ಯಸ್ಥರು, ಸುಶೀಲಾದೇವಿ ನ್ಯಾಚ್ಯುರೋಪತಿ ಮತ್ತು ಯೋಗಿಕ ಸೈನ್ಸ ಮೆಡಿಕಲ್ ಕಾಲೇಜ ಮತ್ತು ರಿಸರ್ಚ ಸೆಂಟರ, ಜಗದಾಳ ಅವಲೋಕಿಸುವರು. ವೈದ್ಯ ಡಾ.ಪಿ.ಆರ್. ಶೇಡಬಾಳ ಅಧ್ಯಕ್ಷತೆ ವಹಿಸುವರು. ಮುಖ್ಯಅತಿಥಿಗಳಾಗಿ ಊರಧಣಿ ಪ್ರವೀಣ ನಾಡಗೌಡ, ಪ್ರಾಚಾರ್ಯ ಸಂತೋಷ ಕುಳ್ಳಿ, ಮುಖ್ಯೋಪಾಧ್ಯಾಯನಿ ಸುನೀತಾ ಅಳಗೊಂಡ, ಮುಖ್ಯೋಪಾಧ್ಯಾಯ ಡಿ.ಬಿ.ಪಾಟೀಲ, ಕಸಾಪ ರಬಕವಿಬನಹಟ್ಟಿ ತಾಲೂಕು ಅಧ್ಯಕ್ಷ ಮ.ಕೃ.ಮೇಗಾಡಿ, ಕಸಾಪ ತೇರದಾಳ ತಾಲೂಕು ಅಧ್ಯಕ್ಷ ಗಂಗಾಧರ ಮೋಪಗಾರ ಉಪಸ್ಥಿತರಿರುವರು. ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಲಕ್ಷ್ಮೀ ಗಾಡಿವಡ್ಡರ, ಆದಿತ್ಯ ಕಾಂಬಳೆ ಅವರನ್ನು ಸನ್ಮಾನಿಸಲಾಗುವುದು ಎಂದು ಕಸಾಪ ತಾಲೂಕು ಘಟಕ ತೇರದಾಳ ತಿಳಿಸಿದ್ದಾರೆ.

ಭಾವೈಕ್ಯತೆ ಸಾರುವ ಮೊಹರಂ

ಬೀಳಗಿ: ಹಿಂದೂ-ಮುಸ್ಲಿಂ ಭಾವೈಕ್ಯತೆ ಸಾರುವ ಮೊಹರಂ ಹಬ್ಬವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಬೀಳಗಿ ಪಟ್ಟಣದಲ್ಲಿ ತೇರಿನಂಥ ರಚನೆಗೆ ಹಿಲಾಲುಗಳನ್ನು ಸಿಕ್ಕಿಸಿ ಉರಿವ ವೃಕ್ಷ(ಬೆಂಕಿ ಗಿಡ)ವನ್ನೇ ಸೃಷ್ಟಿಸಿದ್ದರು. ಅಲಾಯಿ ಹೊಂಡದ ಸುತ್ತ ಪ್ರದಕ್ಷಿಣೆ ಹಾಕುವ ಬೆಂಕಿ ಗಿಡವನ್ನು ನೋಡಲು ದೂರದ ನಗರ, ಪಟ್ಟಣ, ಗ್ರಾಮಗಳಿಂದ ಜನರು ಆಗಮಿಸಿದ್ದರು. ಪವಿತ್ರ ಮೊಹರಂ ಹಬ್ಬವನ್ನು ಬೀಳಗಿ



ಪಟ್ಟಣದಲ್ಲಿ ಸಾವಿರಾರು ಜನ ಸೇರಿ ಹಬ್ಬ ಆಚರಣೆ ಮಾಡಿದರು. ಹುಲಿವೇಷ, ಹೆಜ್ಜೆ, ಲೇಜಿಮ್, ಹಲಿಗೆ ಮೇಳದ ಸಡಗರದಲ್ಲಿ ಪಾಲ್ಗೊಂಡಿದ್ದರು. ಅಲಾಯಿ ದೇವರು ಹರಕೆ ಹೊತ್ತ ಭಕ್ತರ ಮನೆ ಮನೆಗೆ ತೆರಳುತ್ತದೆ. ಭಕ್ತರು ಶ್ರದ್ಧಾಭಕ್ತಿಯಿಂದ ಲೋಬಾನ್ ಹಾಕಿ ಧೀನ್ ಹಾಕುವರು, ಸಕ್ಕರೆ, ಬೆಲ್ಲ ವಿತರಿಸಿದರು. ಸಂಜೆ ದೇವರು ಹೊಳೆಗೆ ಹೋಗುವ ಮೂಲಕ ಮೊಹರಂ ಹಬ್ಬ ಸಂಪನ್ನಗೊಂಡಿತು.

ಗ್ರಾಮೀಣ ಸೊಗಡು ಬಿಂಬಿಸಿದ ಜಾನಪದ ಉತ್ಸವ: ಪಚ್ಚನ್ನವರ

ಲೋಕಾಪುರ: ನಮ್ಮ ನಾಡು ಶರಣರ, ಸಂತರ, ಸೂಫಿಗಳ ನಾಡುವ ಈ ನೆಲದ ಸಂಸ್ಕೃತಿ ಮತ್ತು ಪರಂಪರೆ ಉಳಿಸಿ, ಬೆಳೆಸಿಕೊಂಡು ಬರುವ ಅಗತ್ಯವಿದೆ ಎಂದು ಪ್ರಗತಿ ಪರ ರೈತರಾದ ವೆಂಕಪ್ಪ ಪಚ್ಚನ್ನವರ ಹೇಳಿದರು.

ಸಮೀಪದ ಭಂಟನೂರ ಗ್ರಾಮದ ಪಾಂಡುರಂಗ ದೇವಸ್ಥಾನದಲ್ಲಿ ಮಾರುತೇಶ್ವರ ಗ್ರಾಮೀಣ ಹಾಗೂ ಸಾಂಸ್ಕೃತಿಕ ಕಲಾ ಅಭಿವೃದ್ಧಿ ಸಂಘ (ರಿ) ಆಶ್ರಯದಲ್ಲಿ ಹಮ್ಮಿಕೊಂಡ ಜಾನಪದ ಉತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನಪದ ಇಲ್ಲದ ಜೀವನವಿಲ್ಲ, ಇದೊಂದು ಸಡಗರದ ಹಬ್ಬ ಜನಪದ ನಮ್ಮ ಸಂಸ್ಕೃತಿ, ತತ್ವ ಮತ್ತು ಸಿದ್ಧಾಂತದ ಮೂಲವಾಗಿದೆ, ಕೃತಿಕ ಬುದ್ಧಿಮತ್ತೆ, ಡಿಜಿಟಲ್ ಯುಗದಲ್ಲೂ ನಾವು ನಮ್ಮತನ, ನಮ್ಮ ಸಂಸ್ಕೃತಿ ಮರೆಯಬಾರದು ಎಂದರು.

ಶಿಕ್ಷಕ ಕೆ.ಪಿ.ಯಾದವಾಡ ಮಾತನಾಡಿ, ಅಳಿವಿನ ಅಂಚಿನಲ್ಲಿರುವ ಗ್ರಾಮೀಣ ಸಂಸ್ಕೃತಿ ಮತ್ತು ಕಲೆಗಳನ್ನು ಉಳಿಸಿ ಬೆಳೆಸಬೇಕಿದೆ, ಜನಪದ ಸಾಹಿತ್ಯದ ಅರಿವು ಮೂಡಿಸುವ ಕೆಲಸ ನಿರಂತರವಾಗಿ ನಡೆಯಬೇಕು, ಜಾನಪದವು ಮನುಷ್ಯನ ಜೀವನ ಮತ್ತು ಪರಿಸರದ ಸೊಗಡನ್ನು ಪ್ರತಿಬಿಂಬಿಸುವ ಮೂಲಕ ನಮ್ಮ ಸಂಸ್ಕೃತಿಯನ್ನು ಉಳಿಸುವ ಕೆಲಸ ಮಾಡುತ್ತದೆ, ಹೀಗಾಗಿ ಇಂತಹ



ಅಪರೂಪದ ಜಾನಪದದ ಸೊಗಡು ಸಾರುವ ಜಾನಪದ ಉತ್ಸವ ನೋಡುಗರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ ಎಂದರು.

ಪ್ರಗತಿಪರ ರೈತರಾದ ಗಿರಿಯಪ್ಪ ಹುಡೇದ, ಲಕ್ಷ್ಮಣ ಸೊನ್ನದ, ಲಕ್ಷ್ಮಣ ಬಸುನಾಯ್ಕ, ಯಲ್ಲಪ್ಪ ಬಸುನಾಯ್ಕ, ಸದಪ್ಪ ರಂಗನ್ನವರ, ವಿಠ್ಠಲ ರಂಗನ್ನವರ, ರಂಗಪ್ಪ ಬಸುನಾಯ್ಕ, ಪಾಂಡು ಬಿದರಿ, ಯಲ್ಲಪ್ಪ ಕವಳಿ, ಕಲಾವಿದ ಕೃಷ್ಣಾ ಭಜಂತ್ರಿ, ಸಂಘದ ಅಧ್ಯಕ್ಷ ಶಿವಪುತ್ರಪ್ಪ ರಂಗಣ್ಣವರ, ಸುಭಾಸ ಈರಗಾರ, ಹಣಮಂತ ನಾಯ್ಕಪ್ಪನವರ ಹಣಮಂತ ಬಿದರಿ ಹಾಗೂ ಜಾನಪದ ಕಲಾವಿದರು ಇದ್ದರು.

ತುರ್ತು ಪರಿಸ್ಥಿತಿಯಿಂದ ಪ್ರಜಾಪ್ರಭುತ್ವದ ಕಗ್ಗೊಲೆ: ನಿರಾಣಿ

ಬೀಳಗಿ: ಅಧಿಕಾರದ ದಾಹಕ್ಕಾಗಿ ಇಂದಿರಾ ಗಾಂಧಿ ನೇತೃತ್ವದ ಅಂದಿನ ಸರ್ಕಾರ ಸಂವಿಧಾನವನ್ನು ದಮನಿಸಿ, ದೇಶದಲ್ಲಿ ತುರ್ತು ಪರಿಸ್ಥಿತಿ ಹೇರುವ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿತು ಎಂದು ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ ಹೇಳಿದರು.

ಬೀಳಗಿ ಕ್ರಾಸ್ ಹತ್ತಿರವಿರುವ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ತುರ್ತು ಪರಿಸ್ಥಿತಿಯ ಕರಾಳ ದಿನದ ಆಚರಣೆಯಲ್ಲಿ ಪಾಲ್ಗೊಂಡು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಪರಸ್ಪರ ಒತ್ತಡವಿಲ್ಲದೆ ಕಾರ್ಯನಿರ್ವಹಿಸಬೇಕು ಎಂಬ ಆಶಯದೊಂದಿಗೆ ಸಂವಿಧಾನ ರಚಿಸಿದ್ದರು. ಆದರೆ, ಇಂದಿರಾ ಗಾಂಧಿ ಅವರು ತಮ್ಮ ಅಧಿಕಾರ ಉಳಿಸಿಕೊಳ್ಳಲು ಸಂವಿಧಾನದ ಮೂಲ ತತ್ವಗಳಿಗೆ ವಿರುದ್ಧವಾಗಿ ವರ್ತಿಸಿದರು ಎಂದರು.

ಬಿಜೆಪಿ ಬೀಳಗಿ ಮಂಡಲ ಅಧ್ಯಕ್ಷ ಹೊಳಬಸು ಬಾಳಶೆಟ್ಟಿ ಮಾತನಾಡಿ, 1975 ರ ಪರಿಸ್ಥಿತಿ ಯಾರಿಂದಲೂ ಮರೆಮಾಚಾಲು ಸಾಧ್ಯವಿಲ್ಲ ಕಾಂಗ್ರೆಸ್ ಪಕ್ಷದ ಧೋರಣೆ ಜನರಿಗೆ ತಲುಪಿಸಬೇಕಿದೆ. ಇಂದಿರಾ ಗಾಂಧಿ ಸ್ವಾರ್ಥ ರಾಜಕಾರಣ ಮತ್ತು ಸರ್ವಾಧಿಕಾರಿ ಧೋರಣೆ ಮಾಡಿ ಸಂವಿಧಾನದ ಹತ್ಯೆ ಮಾಡಿದ್ದಾರೆ.



ದೇಶ ದ್ರೋಹಿಗಳನ್ನು ಹೊರ ಹಾಕಬೇಕಿದೆ. ಜನಸಾಮಾನ್ಯರಿಗೆ ಪರಿಕಲ್ಪನೆ ಮೂಡಿಸುವ ಕೆಲಸ ಆಗಬೇಕಿದೆ ಎಂದರು.

ಈರಣ್ಣ ತೋಟದ, ಮಲ್ಲಪ್ಪ ಶಂಭೋಜಿ ಮಾತನಾಡಿ, ಅಂದಿನ ಹೋರಾಟಗಾರರ ತ್ಯಾಗವನ್ನು ಸ್ಮರಿಸಿದರು. ತುರ್ತು ಪರಿಸ್ಥಿತಿ ಅವಧಿಯಲ್ಲಿ ಸೆರೆವಾಸ ಅನುಭವಿಸಿದ ಹಿರಿಯರಾದ ಶಿವಪ್ಪ ಮಸೂತಿ, ಮುತ್ತಣ್ಣ ಬಗಲಿ, ರಾಚಪ್ಪ ಸೊನ್ನದ, ಶಂಕ್ರಪ್ಪ ಸೊನ್ನದ ಹಾಗೂ ಹೊಸದಾಗಿ ಆಯ್ಕೆಯಾದ ಮಂಡಲದ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು. ಗಂಗಾಧರ ಬಿಂಗಿ, ವಿಠ್ಠಲ ಯತ್ನಟ್ಟಿ, ಮಿಥುನ ನಾಯಕ, ಸಿದ್ದಪ್ಪ ಕಡಪಟ್ಟಿ, ತಿಪ್ಪಣ್ಣ ಸಂಜೀವಪ್ಪಗೋಳ, ಎಂ.ವೈ.ವಡವಾನಿ, ಬಸವರಾಜ ಛಬ್ಬಿ, ದ್ರಾಕ್ಷಾಯಣಿ ಜಂಬಗಿ ಇದ್ದರು.

ಪಾಲಕರು ಮಕ್ಕಳಿಗೆ ಸಂಸ್ಕಾರ ನೀಡಲಿ: ದಾನಿಗೊಂಡ

ತೇರದಾಳ: ಸಂಸ್ಕಾರವಿಲ್ಲದಿದ್ದರೆ ಸಂಬಂಧಗಳು ಕಣ್ಮರೆಯಾಗುತ್ತವೆ. ಪಾಲಕರಾದ ನಾವುಗಳು ಅಂಕಗಳ ರೇಸಿನಲ್ಲಿ ಸಂಸ್ಕಾರವನ್ನು ಮರೆಯುತ್ತಿದ್ದೇವೆ. ಮಕ್ಕಳಿಗೆ ಸಂಸ್ಕಾರ ನೀಡದಿದ್ದರೆ ಖಂಡಿತವಾಗಿ ಮಕ್ಕಳು ನಮ್ಮಿಂದ ದೂರವಾಗಿ ಹೋಗುತ್ತಾರೆ ಎಂದು ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ನಾವು ತುಂಬಾ ನಷ್ಟ ಅನುಭವಿಸಬೇಕಾಗುತ್ತದೆ ಎಂದು ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯ ಚೇರಮನ್ ಡಾ.ಎಂ.ಎಸ್.ದಾನಿಗೊಂಡ ಹೇಳಿದರು.

ಡಿ.ಜಿ.ಐ ಸಂಸ್ಥೆಯಲ್ಲಿ ಡಾ.ಸಿದ್ಧಾಂತ ದಾನಿಗೊಂಡ ಸೆಂಟ್ರಲ್ ಶಾಲೆಯಲ್ಲಿ ನರ್ಸರಿಯಲ್ಲಿ ಒಂದನೇ ತರಗತಿ ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಈ ಕಾರಣಕ್ಕಾಗಿಯೇ ನಮ್ಮ ಸಂಸ್ಥೆಯಲ್ಲಿ ಶಿಕ್ಷಣದೊಂದಿಗೆ ಧಾರ್ಮಿಕ, ಆಧ್ಯಾತ್ಮಿಕ, ಯೋಗ, ಸಾಂಸ್ಕೃತಿಕ ಚಟುವಟಿಯಂತಹ ಮುಂತಾದ



ಕಾರ್ಯಕ್ರಮಗಳ ಹಮ್ಮಿಕೊಂಡು ನಮ್ಮ ದೇಶದ ಶ್ರೇಷ್ಠವಾದ ಸಂಸ್ಕೃತಿ, ಸಂಸ್ಕಾರದ ಮಹತ್ವವನ್ನು ಮಕ್ಕಳಿಗೆ ತಿಳಿಸಿಕೊಡಲಾಗುತ್ತಲಿದೆ ಎಂದರು.

ಮನೆಯೇ ಮೊದಲ ಪಾಠಶಾಲೆ ಎನ್ನುವಂತೆ ಸಂಸ್ಕಾರ ಮನೆಯಿಂದಲೇ ಪ್ರಾರಂಭವಾಗಬೇಕು. ನಿಮ್ಮನ್ನು ನೋಡಿ ಮಕ್ಕಳು ಕಲಿಯುತ್ತಾರೆ. ಪ್ರಸ್ತುತ ಮಕ್ಕಳು ಟಿವಿ, ಮೊಬೈಲಗಳಿಗೆ ಅಂಟಿಕೊಳ್ಳುತ್ತಿದ್ದಾರೆ ಕಾರಣ ನಾವೇ ಅವುಗಳನ್ನು ದೂರವಿಟ್ಟರೆ ಮಕ್ಕಳಿಗೆ ಉತ್ತಮ ಭವಿಷ್ಯ ನಿರ್ಮಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆ? ನಾವೇ ದಾರಿ ತಪ್ಪಿ ಮಕ್ಕಳು ದಾರಿತಪ್ಪುತ್ತಿದ್ದಾರೆ ಎಂದು ಮಕ್ಕಳ ಮೇಲೆ ಆರೋಪ ಮಾಡುವುದು ಎಷ್ಟು ಸರಿ? ನಮ್ಮನ್ನು ನಾವು ಅವಲೋಕನ ಮಾಡಿಕೊಳ್ಳಬೇಕಾಗಿದೆ. ಮಕ್ಕಳು ಸುಸಂಸ್ಕೃತರಾಗಬೇಕಾದರೆ ನಾವು ಬದಲಾಗಬೇಕು.

ಸರಸ್ವತಿ ಪೂಜೆಯೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ನಾಗಸಂಪಿಗೆ ಸಂಸ್ಕೃತ ಆಚಾರ್ಯ ಬಿಂದು ಮಾಧವಾಚಾರ್ಯ ಹಾಗೂ ಬಾಗಲಕೋಟೆಯ ಜಿ.ಡಿ.ರಾಮರಾವ್ ಅಕ್ಷರಾಭ್ಯಾಸದ ವಿಧಿ ವಿಧಾನಗಳನ್ನು ಬೋಧಿಸಿದರು. ಪ್ರಾಚಾರ್ಯ ಸಂದೀಪ ಸೋಮಸೋಲೆ ಪೂಜಾ ಗುಪ್ತಾ, ಸಿದ್ದು ಹಾವೋಜಿ, ಶ್ರೀಧರ ಬೆಳಗಲಿ, ಆಕಾಶ ವನಮೋರೆ, ಗಿರೀಶ ಮಠಪತಿ ಸೇರಿದಂತೆ ಶಿಕ್ಷಕರು, ಸಿಬ್ಬಂದಿ, ಮಕ್ಕಳು ಹಾಗೂ ಪಾಲಕರು

ಕಾಶಪ್ಪನವರಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಇಳಕಲ್: ಶಾಸಕ ವಿಜಯಾನಂದ ಕಾಶಪ್ಪನವರಿಗೆ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂದು ನಗರದಲ್ಲಿ ಕುರುಹಿನಶೆಟ್ಟಿ ಸಮಾಜ ಬಾಂಧವರು ಆಗ್ರಹಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಕಾಶಪ್ಪನವರಿಗೆ ಸಚಿವ ಸ್ಥಾನ ನೀಡಲು ಒತ್ತಾಯಿಸಿದರು. ಇಲಕಲ್ ಕುರುಹಿನಶೆಟ್ಟಿ ಸಮಾಜದ ಅಧ್ಯಕ್ಷ ನೀಲಕಂಠಪ್ಪ ಗೋಟೂರ, ಉಪಾಧ್ಯಕ್ಷ ಶಿವಪ್ಪ ಜೇರಿಗೆ, ಕಾರ್ಯದರ್ಶಿ ಸಿದ್ದರಾಮಪ್ಪ ಮನ್ನಾಪುರ ಹಾಗೂ ಸಮಾಜದ ಮುಖಂಡರಾದ ನಾರಾಯಣಪ್ಪ ಗೋಟೂರ, ಅಂಬರೀಶ ಕುರಿ, ಸುರೇಶ್ ರೊಡ್ಡಾ, ಚಂದ್ರಶೇಖರ ಹೊಸೂರ, ನೀಲಕಂಠ ಶ್ಯಾವಿ, ವಿಜಯಲಕ್ಷ್ಮಿ ಪೋಚಗುಂಡಿ, ವಿದ್ಯಾದರ ಗೋಟೂರ, ನಾರಾಯಣಪ್ಪ ಚೇಗೂರ, ಸುರೇಶ ಗೋಟೂರ, ಮಲ್ಲಣ್ಣ ಕಂಬಳಿ, ವಾಸುದೇವಪ್ಪ ಬುಟ್ಟಾ, ತಿಪ್ಪಣ್ಣ ಚೇಗೂರ, ಮರಿಯಪ್ಪ ರೊಡ್ಡಾ, ಯಮನೂರಪ್ಪ ಬಂಡಿ, ವೆಂಕಟೇಶ ಚೇಗೂರ, ಚನ್ನಪ್ಪ ಗೋಟೂರ ಉಪಸ್ಥಿತರಿದ್ದರು.



ಆಂತರಿಕ ಅಪಾಯಗಳ ಜಾಗೃತಿ ಕಾರ್ಯ ಶ್ಲಾಘನೀಯ

ಮಹಾಲಿಂಗಪುರ: ವಿದ್ಯಾರ್ಥಿ ಜೀವನ ಬಂಗಾರವಿದ್ದ ಹಾಗೆ ಆದರೆ ಎಷ್ಟೋ ವಿದ್ಯಾರ್ಥಿಗಳು ವಿದ್ಯಾರ್ಥಿ ಜೀವನದಲ್ಲಿಯೇ ಡ್ರಗ್ ಚಟಕ್ಕೆ ಬಿದ್ದು ತಮ್ಮ ಅಮೂಲ್ಯ ಜೀವನ ಹಾಳು ಮಾಡಿಕೊಂಡು ಹೆತ್ತವರು, ಸಮಾಜ ಮತ್ತು ದೇಶಕ್ಕೆ ಕಂಟಕವಾಗುತ್ತಾರೆ ಎಂದು ಹೆಡ್ ಕಾನ್ಸಟೇಬಲ್ ಗಚ್ಚಣ್ಣವರ ಹೇಳಿದರು.

ಸ್ಥಳೀಯ ಜೆಸಿ ಶಾಲೆಯಲ್ಲಿ ಸರ್ಕಾರ ಮತ್ತು ಪೊಲೀಸ್ ಇಲಾಖೆಯ ಆಶ್ರಯದಲ್ಲಿ ನಡೆದ ಮಾದಕ ವ್ಯಸನ ಜಾಗೃತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಡ್ರಗ್ ಎಂಬುದು ಕೆಲವೊಮ್ಮೆ ನೇರವಾಗಿ ಇನ್ನು ಕೆಲವೊಮ್ಮೆ ನಮಗೆ ಅರಿವಿಲ್ಲದೆಯೇ ಮಕ್ಕಳ ಕೈಗೆ ಸಿಗಬಹುದು ಉದಾಹರಣೆಗೆ ಮಕ್ಕಳು ಉಪಯೋಗಿಸುವ ಸೀಸದ ಕಡ್ಡಿ, ವೈಟ್ನರ್ ಮುಂತಾದ ವಸ್ತುಗಳಲ್ಲಿ ಡ್ರಗ್ ಅಂಶವಿದ್ದು ಮಕ್ಕಳು ಮಾದಕ ವ್ಯಸನಕ್ಕೆ ಬಲಿಯಾಗುವ ಸಂದರ್ಭವಿರುತ್ತದೆ. ಮಕ್ಕಳು



ತಂಬಾಕು, ಗುಟ್ಕಾ, ಮುಂತಾದ ಮಾದಕ ವ್ಯಸನಗಳಿಂದ ದೂರವಿರಿ ಎಂದರು.

ಹೆಡ್ ಕಾನ್ಸಟೇಬಲ್ ಸುರೇಖಾ ನಾವಿ ಮಾತನಾಡಿ, ನೂರು ಜನ ಸದೃಢ ಯುವಕರನ್ನು ಕೊಟ್ಟರೆ ಸ್ವಾತಂತ್ರ್ಯ ಕೊಡಿಸುತ್ತೇನೆ ಎಂಬ ಮಾತಿನಂತೆ ವ್ಯಸನ ಮುಕ್ತ ಸದೃಢ ಯುವಕರೇ ಈ ದೇಶದ ಆಸ್ತಿ ಎಂದರು.

ಸಂಸ್ಥೆಯ ಉಪಾಧ್ಯಕ್ಷ ಶಿವಾನಂದ ತಿಪ್ಪಾ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಬ್ದವೇಧಿ ಸಿನಿಮಾದಲ್ಲಿ ಡಾ.ರಾಜಕುಮಾರ್ ಅವರು ಡ್ರಗ್ ವಿರುದ್ಧ ಹೋರಾಡುತ್ತಾ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸುವ ಸಂದರ್ಭದಲ್ಲಿಯೇ ಅವರ ಸ್ವಂತ ಮಗ ಡ್ರಗ್ ಬಲೆಗೆ ಬಿದ್ದ ಪ್ರಸಂಗ ವಿವರಿಸಿ, ಡ್ರಗ್ ಯಾರ ಮನೆಯನ್ನು ಯಾವಾಗ ಹೇಗೆ ಪ್ರವೇಶಿಸುತ್ತದೆಯೋ ಗೊತ್ತಿಲ್ಲ ಎಚ್ಚರವಾಗಿರಿ, ಬಾಹ್ಯ ಭದ್ರತೆಯಲ್ಲದೇ ಇಂತಹ ಆಂತರಿಕ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಪೊಲೀಸ್ ಇಲಾಖೆ ಕಾರ್ಯ ಶ್ಲಾಘನೀಯ ಎಂದರು.

ವಿದ್ಯಾರ್ಥಿಗಳೇ ಇಲಾಖೆಯ ಸ್ಕ್ಯಾನರನ್ನು ಸೂಚನಾ ಫಲಕಕ್ಕೆ ಅಳವಡಿಸಿದರು. ನಿರ್ದೇಶಕ ರಮೇಶ ಮುಳವಾಡ, ಮುಖ್ಯೋಪಾಧ್ಯಾಯ ಎಸ್.ಜೆ.ಕೌಜಲಗಿ ಇದ್ದರು.

ಕಿರುಸುದ್ದಿ

ಇಂದಿನಿಂದ ಪಲ್ಸ್ ಪೋಲಿಯೋ ಅಭಿಯಾನ

• **ಸಿಂದಗಿ:** ವಿಜಯಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಿಂದಗಿ ತಾಲೂಕು ಆರೋಗ್ಯ ಇಲಾಖೆ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ ಕಾರ್ಯಕ್ರಮವನ್ನು ಜೂ.28ರಂದು ಬೆಳಗ್ಗೆ 9 ಗಂಟೆಗೆ ಸಿಂದಗಿ ನಗರದ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಶಾಸಕ ಅಶೋಕ ಮನಗೂಳಿ ಅವರು ಚಾಲನೆ ನೀಡಲಿದ್ದು, ತಾಲೂಕು ಆರೋಗ್ಯ ಇಲಾಖೆ ಅಧಿಕಾರಿ ಎ.ಎ.ಮಾಗಿ, ವೈದ್ಯರು, ಸಿಬ್ಬಂದಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಆರೋಗ್ಯ ಇಲಾಖೆಯು 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ಹಾಕಿಸಿ, ಅಭಿಯಾನ ಯಶಸ್ವಿಗೊಳಿಸುವಂತೆ ಪೋಷಕರು ಹಾಗೂ ಸಾರ್ವಜನಿಕರಲ್ಲಿ ಮನವಿ ಮಾಡಿದೆ ಎಂದು ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಹರಿ ಕುಲಕರ್ಣಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

• **ಸಿಂದಗಿ:** ಕನ್ನಡ ಸಾಹಿತ್ಯ ಗೆಳೆಯರ ಬಳಗ ವತಿಯಿಂದ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಶೇ.85 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಅಂಕಪಟ್ಟಿ, ಆಧಾರ್ ಕಾರ್ಡ್ ಮತ್ತು ಇತ್ತೀಚಿನ ಫೋಟೋದೊಂದಿಗೆ ಅಗತ್ಯ ದಾಖಲೆಗಳೊಂದಿಗೆ ಸಿಂದಗಿಯ ಅಂಬೇಡ್ಕರ್ ಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸಾರ್ವಜನಿಕ ಗ್ರಂಥಾಲಯ, ಅಥವಾ ಜ್ಯೋತಿ ನಗರದಲ್ಲಿರುವ ಲಿಟಲ್ ವಿಂಗ್ಸ್ ಪ್ರಿ ಸ್ಕೂಲ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಜು.5ರೊಳಗಾಗಿ ಅರ್ಜಿ ಸಲ್ಲಿಸಬೇಕು. ಮಾಹಿತಿಗಾಗಿ 8277186757ಗೆ ಸಂಪರ್ಕಿಸಬಹುದು ಎಂದು ಕನ್ನಡ ಸಾಹಿತ್ಯ ಗೆಳೆಯರ ಬಳಗದ ಅಧ್ಯಕ್ಷ ರಾಜಶೇಖರ ಕೂಚಬಾಳ ತಿಳಿಸಿದ್ದಾರೆ.

ನಾಳೆ ಗಾಣದೇವತಾ ಉತ್ಸವ

• **ವಿಜಯಪುರ:** ಗಾಣದೇವತಾ ಉತ್ಸವ ಸಮಿತಿ ಹಾಗೂ ವಿಜಯಪುರ ಜಿಲ್ಲಾ ಗಾಣಿಗ ಸಮಾಜದ ಸಂಯುಕ್ತ ಆಶ್ರಯದಲ್ಲಿ ನಗರದ ವನಶ್ರೀ ಮಠದ ಆವರಣದಲ್ಲಿ ಜೂ.29ರಂದು ಗಾಣದೇವತಾ ಉತ್ಸವ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 7 ಗಂಟೆಗೆ ಶಿವಣಗಿಯ ಗುರುದೇವಾಶ್ರಮದ ಶಿವಲಿಂಗ ಸ್ವಾಮಿಗಳ ಧರ್ಮ ಧ್ವಜಾರೋಹಣ ನೆರವೇರಿಸುವರು. ನಂತರ ಪಂಚಾಕ್ಷರಿ ಮಂತ್ರ ಪಠಣ ಸಹಿತ ಬಿಲ್ವಾರ್ಚನೆ ಕಾರ್ಯಕ್ರಮ ಜರುಗುವುದು. ಅಂದು ಬೆಳಗ್ಗೆ 9 ಗಂಟೆಗೆ ಗವಿಶಿವಲಿಂಗೇಶ್ವರ ದೇವಸ್ಥಾನ ಜಿಲ್ಲಾ ಪಂಚಾಯತ ಎದುರಿಗೆ ಇರುವ ವನಶ್ರೀ ವೃತ್ತದಿಂದ ಕಾರ್ಯಕ್ರಮದ ವೇದಿಕೆಯವರೆಗೆ ಗಾಣದೇವತೆ ಮೆರವಣಿಗೆ ನಡೆಯುವುದು. ಕಾರ್ಯಕ್ರಮದ ವೇದಿಕೆಯಲ್ಲಿ ಗಾಣ ದೇವತೆಗೆ ಪುಷ್ಪ ಮಾಡಿಸಿ ಪಂಚ ಸಿರಿಧಾನ್ಯದಿಂದ ಉಡಿತುಂಬಿ ಕಳಸ ಬೆಳಗುವ ಕಾರ್ಯಕ್ರಮ ಜರುಗುವುದು ಜೊತೆಗೆ ಇದೇ ಸಂದರ್ಭದಲ್ಲಿ ಮೊದಲು 5 ಜನ ಜಂಗಮ ಮುತ್ತೈದೆಯರಿಂದ ಉಡಿ ತುಂಬಿ, ನಂತರ ಅವರಿಂದ 101 ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗುವುದು. ಶಿವಲಿಂಗ ಶ್ರೀಗಳ ನೇತೃತ್ವ ವಹಿಸಿ ಆಶೀರ್ವಚನ ನೀಡಲಿದ್ದಾರೆ ಎಂದು ಕಾರ್ಯಕ್ರಮ ಸಂಚಾಲಕ ನ್ಯಾಯವಾದಿ ಶ್ರೀಶೈಲ ಸಜ್ಜನ ತಿಳಿಸಿದ್ದಾರೆ.

ಮೊಹರಂ ಆಚರಣೆ

• **ಝಳಕಿ:** ಸಮೀಪದ ಅರ್ಜುಣಗಿ ಗ್ರಾಮದಲ್ಲಿ ಹಿಂದೂ-ಮುಸ್ಲಿಂ ಸಮುದಾಯದ ಬಾವೈಕ್ಯತೆಯ ಮೊಹರಂ ಹಬ್ಬವನ್ನು ಭಕ್ತಿಯಿಂದ ಆಚರಿಸಿದರು. ನಸುಕಿನ ಜಾವ 5 ಗಂಟೆಗೆ ಜಾವಿನಲ್ಲಿ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ವಾದ್ಯ ವೈಭವಗಳೊಂದಿಗೆ ಮೆರವಣಿಗೆ ಸಂಚರಿಸಿ ನಂತರ ದರ್ಗಾಗೆ ತಲಿಪಿತು. ಎರಡು ಅಲಾಯಿ ದೇವರಗಳಾದ ಡೋಲಿ ಹಾಗೂ ಪಂಜಿಗಳ ಬೇಟಿಯಾದವು. ಗ್ರಾಮಸ್ಥರು ಉಪಸ್ಥಿತರಿದ್ದರು.




ಮುದ್ದೇಬಿಹಾಳ: ತಾಲೂಕಿನ ಅಖಿಲ ಕರ್ನಾಟಕ ಅಹಿಂದ ರಕ್ಷಣಾ ವೇದಿಕೆ ತಾಲೂಕು ಘಟಕ ಅಧ್ಯಕ್ಷ ಹಣಮಂತ ಭೀ.ಬೆಳಗಲ್ಲ ಹಾಗೂ ಸಮಾಜ ಸೇವಕರಾದ ಬಿ.ಎಸ್.ಮೇಟಿ, ಯೂಸೂಪ್ ಸಾತಿಹಾಳ, ಅಮೀನಸಾಬ ಮುಲ್ಲಾ ಅವರಿಂದ ಆಲಮಟ್ಟಿ ಯಾದಗಿರಿ ರೈಲು ನಿರ್ಮಾಣ ಪ್ರಾರಂಭವಾಗಬೇಕು ಎಂದು ಅಂಚೆ ಪತ್ರದ ಮೂಲಕ ನಡೆಸುತ್ತಿರುವ ಚಳುವಳಿ ಭಾಗವಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮನವಿ ಪತ್ರ ಕಳಿಸಲಾಯಿತು.



ಮುದ್ದೇಬಿಹಾಳ: ತಾಲೂಕಿನ ಕವಡಿಮಟ್ಟಿ ಗ್ರಾಮದಲ್ಲಿ ಜೂ.28ರಂದು ಭಾನುವಾರ ನಡೆಯುವ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ಕವಡಿಮಟ್ಟಿ ಗ್ರಾಮದಲ್ಲಿ ಮಕ್ಕಳಿಂದ ನಡೆದ ಜಾಗೃತಿ ಜಾಥಾಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ಮೇಲ್ವಿಚಾರಕ ಎಂ.ಎಸ್.ಗೌಡರ ಚಾಲನೆ ನೀಡಿದರು. ಸಮುದಾಯ ಆರೋಗ್ಯ ಅಧಿಕಾರಿ ಸದಾಶಿವ ಹಿರೇಮಠ, ಮುಖ್ಯಗುರು ಎನ್.ಡಿ.ನಾವದಗಿ, ಸಹ ಶಿಕ್ಷಕರಾದ ಎಸ್.ಪಿ.ಗುಡ್ಡದ, ಎಸ್.ಎನ್.ಕೋರಿ, ಬಿ.ಎಂ.ನದಾಫ, ಬಿ.ಎಂ.ಚಿತ್ರಗಿ, ಜಿ.ಎಸ್.ಸೋಮನಾಳ, ಭಾರತಿ ಮುರಾಳ, ಸವಿತಾ ಹೊಕ್ರಾಣಿ ಆಶಾ ಕಾರ್ಯಕರ್ತೆಯರು ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ

• **ವಿಜಯಪುರ:** ಅಕ್ಷರ ದಾಸೋಹ ಯೋಜನೆಯ ಶಾಲೆಗಳಲ್ಲಿ ಮಧ್ಯಾಹ್ನ ಬಿಸಿ ಊಟಕ್ಕೆ ಮಕ್ಕಳಿಗೆ ಎಣ್ಣೆ ತೂಗಡಿಬೇಳೆ ವಿತರಿಸಬೇಕು. ಮೊಟ್ಟೆಗಳ ಖರೀದಿ ಮೊತ್ತ ಹೆಚ್ಚುವರಿ ಹಿನ್ನೆಲೆಯಲ್ಲಿ ಮೊಟ್ಟೆ ದರವನ್ನು ಪರಿಷ್ಕರಣೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಿಜಯಪುರ ಜಿಲ್ಲಾ ಶಿಕ್ಷಕರ ಸಂಘದ ಪದಾಧಿಕಾರಿಗಳ ನಿಯೋಗ ಸಿಇಒ ರಿಷಿ ಆನಂದ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು. ನೇತೃತ್ವ ವಹಿಸಿದ್ದ ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷ ಅರ್ಜುನ ಲಮಾಣಿ ಮಾತನಾಡಿ, ಶೈಕ್ಷಣಿಕ ವರ್ಷ ಆರಂಭವಾಗಿ ಜೂನ ತಿಂಗಳು ಮುಗಿಯುತ್ತಾ ಬಂದರೂ ಶಾಲೆಗಳಿಗೆ ಬೇಳೆ ಹಾಗೂ ಎಣ್ಣೆ ಪೂರೈಕೆಯಾಗಿಲ್ಲ, ಮುಖ್ಯಗುರುಗಳು ಬೇಳೆ ಹಾಗೂ ಎಣ್ಣೆ ಸಹ ಅಂಗಡಿ ಮೂಲಕ ಖರೀದಿಸುತ್ತಾ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಕೆಜಿ ಎಣ್ಣೆಗೆ 180ರೂ. ಕೆಜಿ ಬೇಳೆಗೆ 120ರೂ. ರಂತೆ ಮುಖ್ಯಗುರುಗಳು ಖರೀದಿಸುತ್ತಿದ್ದಾರೆ. ಅದರ ಪ್ರಸ್ತುತ ಒಂದು ಮೊಟ್ಟೆಯ ಬೆಲೆ 8ರೂ ಇದೆ. ಸರ್ಕಾರ ಪ್ರತಿ ಮೊಟ್ಟೆಗೆ 6ರೂ. ಮಾತ್ರ ಅನುದಾನ ಮಾತ್ರ ನೀಡುತ್ತಿದೆ. ಇದರಿಂದ ಪ್ರತಿ ಮೊಟ್ಟೆಗೆ ಸುಮಾರು 2ರೂ. ಹೆಚ್ಚುವರಿ ವೆಚ್ಚವಾಗುತ್ತಿದ್ದು, ಈ ಹೆಚ್ಚುವರಿ ವೆಚ್ಚವನ್ನು ಶಾಲಾ ಮುಖ್ಯೋಪಾಧ್ಯಾಯರು ತಮ್ಮ ಸ್ವಂತ ಜೇಬಿನಿಂದ ಭರಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಬಿಸಿ ಊಟ ಯೋಜನೆಯ ಸಮರ್ಪಕ ನಿರ್ವಹಣೆ ಕಷ್ಟವಾಗುತ್ತಿದೆ. ಪ್ರಸ್ತುತ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಅನುದಾನ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಸಲ್ಲಿಸಿದರು.



ವಿಜಯಪುರ: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಿಜಯಪುರ ಜಿಲ್ಲಾ ಶಿಕ್ಷಕರ ಸಂಘದ ಪದಾಧಿಕಾರಿಗಳ ನಿಯೋಗ ಸಿಇಒ ರಿಷಿ ಆನಂದ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು. ಜಿಲ್ಲಾ ಶಿಕ್ಷಕ ಸಂಘದ ಪ್ರಧಾನ ಕಾರ್ಯದರ್ಶಿ ಹಣಮಂತ ಕೊಣದಿ, ನಗರವಲಯ ಶಿಕ್ಷಕರ ಸಂಘದ ಅಧ್ಯಕ್ಷ ಜುಬೇರ ಕೆರೂರ ಸೇರಿದಂತೆ ವಿವಿಧ ಸಂಘಟನೆಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಎಸ್‌ಐಆರ್‌ನಲ್ಲಿ ಯಾವ ಅಕ್ರಮಗಳಿಗೂ ಆಸ್ಪದ ನೀಡದಂತೆ ಸೂಚನೆ

ಬೂತ್ ಮಟ್ಟದ ಏಜೆಂಟರು ನಿಗಾ ವಹಿಸಿ

• **ವಿಜಯಪುರ:** ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಮುಖಾಂತರ 90 ಲಕ್ಷ ಮತದಾರರ ಹೆಸರನ್ನು ತೆಗೆದು ಹಾಕಲಾಗಿದೆ, ಅಲ್ಲಿಯ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಂಡು ಎಸ್‌ಐಆರ್‌ನಲ್ಲಿ ಯಾವ ಅಕ್ರಮಗಳಿಗೂ ಆಸ್ಪದ ನೀಡದಂತೆ ಕಾಂಗ್ರೆಸ್ ಕಾರ್ಯಕರ್ತರು ಅದರಲ್ಲೂ ಬೂತ ಮಟ್ಟದ ಏಜೆಂಟರು ನಿಗಾ ವಹಿಸಬೇಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಹೇಳಿದರು.

ವಿಜಯಪುರದ ಕಿತ್ತೂರ ರಾಣಿ ಚನ್ನಮ್ಮ ಮಂಗಲ ಕಾರ್ಯಾಲಯದಲ್ಲಿ ಕಾಂಗ್ರೆಸ್ ಪಕ್ಷದ ಬಿಎಲ್‌ಎಗಳಿಗಾಗಿ ಆಯೋಜಿಸಲಾಗಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಿಎಲ್‌ಎಗಳಿಗೆ ಚೆನ್ನಾಗಿ ಮಾರ್ಗದರ್ಶನ ಮಾಡಬೇಕು. ಬಿ.ಎಲ್.ಎ ಗಳು ಪ್ರಾಮಾಣಿಕವಾಗಿ ಪಕ್ಷಕ್ಕಾಗಿ ನಿಷ್ಠೆಯಿಂದ ಬಿಎಲ್‌ಗಳ ಜೊತೆ ಕೂಡಿಕೊಂಡು ಪ್ರತಿಯೊಂದು ಮನೆ ಮನೆಗೆ ಹೋಗಬೇಕು, ಯಾವುದೇ ರೀತಿಯಲ್ಲಿ ತಪ್ಪದ ಹಾಗೆ ನೋಡಿಕೊಳ್ಳಬೇಕು, ವಲಸೆ ಹೋದ ಜನರ ಮಾಹಿತಿ ಪಡೆದುಕೊಂಡು ಅವರ ಹೆಸರನ್ನು ಸೇರುವ ಹಾಗೆ ಮಾಡಬೇಕು. ಅದಕ್ಕೆ ಸ್ಥಳೀಯ ನಾಯಕರು ಹೆಚ್ಚಿನ ಮುತವರ್ಜಿ ವಹಿಸಿ ಸಹಕಾರ ಮಾಡಬೇಕೆಂದು ಕರೆ ನೀಡಿದರು.

ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಮಾತನಾಡಿ, ಭೂತ ಮಟ್ಟದಲ್ಲಿ ಎಸ್‌ಐಆರ್ ಪ್ರಕ್ರಿಯೆ ನಿರ್ವಹಣೆಯಲ್ಲಿ ಯಾವ ರೀತಿ ಪಾತ್ರ ವಹಿಸಬೇಕು ಎಂಬುದರ ಬಗ್ಗೆ ಏಜೆಂಟರಿಗೆ ಸಂಪೂರ್ಣವಾಗಿ ಮಾಹಿತಿ



▸▸ ವಲಸೆ ಹೋದ ಜನರ ಮಾಹಿತಿ ಪಡೆದುಕೊಂಡು ಅವರ ಹೆಸರನ್ನು ಸೇರುವ ಹಾಗೆ ಮಾಡಬೇಕು.

▸▸ ಸ್ಥಳೀಯ ನಾಯಕರು ಹೆಚ್ಚಿನ ಮುತವರ್ಜಿ ವಹಿಸಿ ಸಹಕಾರ ನೀಡಿ

▸▸ ಬಿಎಲ್‌ಎಗಳು ಪ್ರಾಮಾಣಿಕವಾಗಿ ಪಕ್ಷಕ್ಕಾಗಿ ನಿಷ್ಠೆಯಿಂದ ಪ್ರತಿಯೊಂದು ಮನೆ ಮನೆಗೆ ಹೋಗಬೇಕು ಮಾಹಿತಿ ಸಂಗ್ರಹಿಸಿ

ನೀಡಿದರು.

ವಿಧಾನ ಪರಿಷತ್ ಸದಸ್ಯ ಸುನೀಲ್ ಗೌಡ ಪಾಟೀಲ ಮಾತನಾಡಿದರು. ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ, ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ, ಮಾಜಿ ಶಾಸಕ ರಾಜು ಆಲಗೂರ, ಮಹ್ಮದರಫೀಕ ಟಪಾಲ, ಎಸ್. ಎಂ.ಪಾಟೀಲ (ಗಣಿಯಾರ), ವೈಜನಾಥ ಕರ್ಪೂರಮಠ, ಚಾಂದಸಾಬ ಗಡಗಲಾವ, ಎಂ.ಎಂ.ಮುಲ್ಲಾ, ಜಾಕೀಹುಸೇನ ಮುಲ್ಲಾ, ವಸಂತ ಹೊನಮೋಡೆ, ದೇಸು ಚವ್ಹಾಣ, ಈರನಗೌಡ ಬಿರಾದಾರ, ಸಿದ್ದಣ್ಣ ಗೌಡಣ್ಣವರ, ಜಮೀರ ಬಕ್ಷಿ, ಆರತಿ ಶಾಹಪೂರ, ಶಾಹಜಾನ ಮುಲ್ಲಾ, ಆರ್.ಡಿ.ಹಕ್ಕೆ, ಬಿ.ಸಿ.ಸಾವುಕಾರ, ಶಿವಯೋಗಪ್ಪ ಚನಗೊಂಡ, ಶ್ರೀಕಾಂತ ಕಡಿಗಾನೂರ, ಬಶೀರ ಶೇಠ, ಬಾಳಾಸಾಹೇಬಗೌಡ ಪಾಟೀಲ, ಸುರೇಶ ಹಾರಿವಾಳ, ರಮೇಜಾ ನದಾಫ, ಶಕೀಲ ಬಾಗಮಾರೆ, ಮಹಾದೇವಿ ಗೋಕಾಕ, ಭಾರತಿ ನಾವಿ, ಹಮೀದಾ ಪಟೇಲ, ಪ್ರಿಯಾಂಕಾ ತೋರವಿ ನಿರ್ಮಲಾ ತಳಕೇರಿ, ಶೈಲಜಾ ಜಾಧವ, ಸವಿತಾ ಧನರಾಜ, ಸಿದ್ದಮ್ಮ, ನಾಗಮ್ಮ, ಪ್ರೇಮಾ ಗಾಯಕವಾಡ, ಭಾರತಿ ಹೊಸಮನಿ, ಜಯಶ್ರೀ ಮರಾಠೆ, ಮಂಜುಳಾ ಗಾಯಕವಾಡ ಉಪಸ್ಥಿತರಿದ್ದರು.

ಕಾರ್ಯಕರ್ತರ ಜೊತೆ ಸದಾ ಇರುವೆ: ಚವ್ಹಾಣ

• **ವಿಜಯಪುರ:** ಕಾರ್ಯಕರ್ತರ ಜೊತೆ ನಾನು ಸದಾ ಇರುವೆ. ಕಾರ್ಯಕರ್ತರು ಸಹ ನನ್ನ ಜೊತೆ ಬೆನ್ನುಲುಬಾಗಿ ಇರಬೇಕು ಎಂದು ನಾಗಠಾಣ ಮಾಜಿ ಶಾಸಕ ಡಾ.ದೇವಾನಂದ ಚವ್ಹಾಣ ಹೇಳಿದರು.

ವಿಜಯಪುರ ನಗರದ ರಾಮಚಂದ್ರ ಆಲಕುಂಟೆ ಮಂಗಲ ಕಾರ್ಯಾಲಯದಲ್ಲಿ ನಾಗಠಾಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಸ್.ಐ.ಆರ್ ಕುರಿತು ಬಿಎಲ್‌ಎ-2 ಗಳಿಗಾಗಿ ಆಯೋಜಿಸಲಾಗಿದ್ದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಕಾರ್ಯಕರ್ತರೇ ನನ್ನ ಬಲ, ಅವರು ನನ್ನ ಹಿಂದೆ ಇದ್ದರೆ ಮಾತ್ರ ಎಲ್ಲವನ್ನೂ ಸಾಧಿಸಲು ಸಾಧ್ಯ ಎಂದರು. ಮತ ಪಟ್ಟಿ ಪರಿಷ್ಕರಣೆ ಒಂದು ಮಹತ್ವದ ಕಾರ್ಯವಾಗಿದ್ದು, ಸಮಗ್ರ ಅರಿವು ಮೂಡಿಸಲು ಈ ವಿಶೇಷ ಕಾರ್ಯಾಗಾರ ಆಯೋಜಿಸಲಾಗುತ್ತದೆ ಎಂದರು.

ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ನಿಂಗನಗೌಡ ಪಾಟೀಲ ಮಾತನಾಡಿ, ನಾಗಠಾಣ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿ ಆದರಲ್ಲೂ ಡಾ.ದೇವಾನಂದ ಚವ್ಹಾಣ ಅವರಿಗೆ ಟಿಕೇಟ್ ನೀಡಲೇಬೇಕು ಎಂಬ ಹಕ್ಕೊತ್ತಾಯ ಮಂಡಿಸಿದರು. ಕೆಲವು ಪಟ್ಟ ಭದ್ರ ಹಿತಾಸಕ್ತಿಗಳನ್ನು ಡಾ.ದೇವಾನಂದ ಚವ್ಹಾಣ ಅವರು ಮುಂದಿನ ಚುನಾವಣೆಯಲ್ಲಿ ಜಯ ಸಾಧಿಸಬಾರದು ಎಂಬ ಕುತಂತ್ರ ಹಣೆಯುತ್ತಿದ್ದಾರೆ, ಈ ಭಾಗದಲ್ಲಿ ಜೆಡಿಎಸ್ ಬಲವರ್ಧನೆಗೆ ತಮ್ಮದೇ ಆದ ಕೊಡುಗೆ ನೀಡಿದ ಡಾ.ದೇವಾನಂದ ಅವರ ಕೈ ಬಲಪಡಿಸಬೇಕು ಎಂದರು.

ನ್ಯಾಯವಾದಿ ಶಿವಶಂಕರ ಮಾತನಾಡಿ, ಭೋಗಸ್ ಮತಪಟ್ಟಿ ನಿರ್ಮಾತೃಗಳೇ ಕಾಂಗ್ರೆಸ್ ಪಕ್ಷದವರು, ನಕಲಿ ಮತದಾರರನ್ನು ಮತಪಟ್ಟಿಯಿಂದ ತೆಗೆದು ಹಾಕುವುದು ತಪ್ಪೇ ಎಂದು ಖಾರವಾಗಿ ಪ್ರಶ್ನಿಸಿದರು. ಮತ ಪಟ್ಟಿ ಪರಿಷ್ಕರಣೆ ಅನೇಕ ವರುಷಗಳಿಂದ ನಡೆದಿರಲಿಲ್ಲ, ಈಗ ಅದನ್ನು ಬೆಂಬಲಿಸುವುದನ್ನು ಬಿಟ್ಟು ವಿರೋಧಿಸುವುದರಲ್ಲಿ ಯಾವ ಅರ್ಥವಿಲ್ಲ, ಈ ಕಾರ್ಯದ ಬಗ್ಗೆ ನಿಮಗೆ ಆತಂಕವಿದ್ದರೆ ಬಿ.ಎಲ್.ಎ-2 ನಿಯೋಜಿಸಿ ಕಾನೂನಿನ ಪರಿಧಿಯಲ್ಲಿ ಈ ಕಾರ್ಯಕ್ಕೆ ಸಾಥ್ ನೀಡಿ ವಿರೋಧಿಸಬೇಡಿ ಎಂದರು.

ಜಿಪಂ ಮಾಜಿ ಸದಸ್ಯ ಪಂಚಪ್ಪ ಕಲಬುರ್ಗಿ, ಪೀರಪಾಷಾ ಗಚ್ಚಿನಮಹಲ್, ಸಂಜೀವ ದೊಡಮನಿ ಉಪಸ್ಥಿತರಿದ್ದರು.



ಸಾಧನೆಗೆ ನಮ್ಮ ಸಮಸ್ಯೆಗಳು ಮಾರಕವಾಗದಿರಲಿ

• **ವಿಜಯಪುರ:** ದೇವರು ನನಗೆ ದೃಷ್ಟಿ ಕೊಟ್ಟಿದ್ದರೆ ಬಹುಶಃ ಇಂತಹ ಸಾಧನೆ ಮಾಡುವ ಧೈರ್ಯ ಮಾಡುತ್ತಿರಲಿಲ್ಲ. ನಮ್ಮಲ್ಲಿರುವ ಸಮಸ್ಯೆಗಳು ನಮ್ಮ ಸಾಧನೆಗೆ ಪೂರಕವಾಗಬೇಕೆ ಹೊರತು ಮಾರಕವಾಗಬಾರದು. ಸಾಧನೆ ಮಾಡುವ ಮನಸಿದ್ದರೆ ಸರ್ವ ಸಿದ್ಧಿಯಾಗುತ್ತದೆ ಎಂದು ಮಾನವ ಕಂಪ್ಯೂಟರ್ ಖ್ಯಾತಿಯ ಬಸವರಾಜ ಉಮರಾಣಿ ಹೇಳಿದರು.

ನಗರದ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಒಂದು ದಿನದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು. ಗಣಿತ ಎನ್ನುವುದು ಹಲವರಿಗೆ ಕಬ್ಬಿಣದ ಕಡಲೆಯಾದರೆ ಕೆಲವರಿಗೆ ಅದು ಎಲ್ಲದಕ್ಕಿಂತಲೂ ಸಾಮಾನ್ಯವಾದ ವಿಷಯವಾಗಿ ಕಾಣುತ್ತದೆ. ಅದಕ್ಕೆ ಕಾರಣ ಆ ವಿಷಯದ ಮೇಲಿರುವ ಅಕ್ಕರೆ. ಯಾವುದನ್ನು ನಾವು ಇಷ್ಟಪಟ್ಟು ಮಾಡುತ್ತೇವೆಯೋ ಅದು ಎಂದಿಗೂ ನಮಗೆ ಬೇಸರ ಮೂಡಿಸುವುದಿಲ್ಲ ಎಂದರು.

ಬದುಕಿನಲ್ಲಿ ಯಾವುದನ್ನು ಕೊರತೆ ಎಂದು ತಿಳಿದು ಕೊಳ್ಳುತ್ತೇವೆಯೋ ಅದು ಎಂದಿಗೂ ನಮಗೆ ನೆಮ್ಮದಿ ನೀಡುವುದಿಲ್ಲ, ಅದರ ಬದಲಿಗೆ ಕೊರತೆಯನ್ನೇ ಬದುಕಿನ ಒರತೆಯನ್ನಾಗಿ ಮಾಡಿಕೊಂಡು ಹೆಜ್ಜೆ ಹಾಕಿದ್ದೇ ಆದಲ್ಲಿ ಬಾಳು ಹಸಿರಾಗುತ್ತದೆ. ನಾವಿಲ್ಲಿ ಬಂದಿದ್ದು ಸಾಧನೆ ಮಾಡುವುದಕ್ಕಾಗಿಯೇ ಹೊರತು ಸಂಕಟ ಪಟ್ಟುಕೊಳ್ಳುವುದಕ್ಕಲ್ಲ. ಸವಾಲು ಹಾಕುವ ಜನಗಳ ಎದುರಿಗೆ ಜವಾಬು ನೀಡುತ್ತಲೇ ಬದುಕುವುದನ್ನು ಕಲಿತಾಗ ಮಾತ್ರ ಬದುಕಿನಲ್ಲಿ ಏನಾದರು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪ್ರಾಂಶುಪಾಲ ಮಂಜುನಾಥ ಮ. ಜುನಗೊಂಡ ಮಾತನಾಡಿ, ಆದರ್ಶವಿಲ್ಲದೆ ಬದುಕಿದರೆ ಬದುಕಿಗೆ ಅವಮಾನ, ಸಾಧನೆ ಇಲ್ಲದೆ ಸತ್ತರೆ ಸಾವಿಗೆ ಅವಮಾನ ಎಂದು ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ಹೇಳಿದ ಮಾತು ಅಕ್ಷರಶಃ ಯುವ ಜನತೆ ಎದೆಯಲ್ಲಿ ಅಚ್ಚು ಹಾಕಿಸಿಕೊಳ್ಳಬೇಕು. ನಾನೇನು ಮಾಡಬಲ್ಲೆ ಎಂದುಕೊಂಡು ಅಳುತ್ತ ಕುಳಿತುಕೊಳ್ಳಬಾರದು. ಎಲ್ಲಿ ನೋವಿದೆಯೋ ಅಲ್ಲಿಯೇ ಗೆಲುವಿದೆ ಎನ್ನುವುದನ್ನು ಎಂದಿಗೂ ಮರೆಯಬಾರದು ಎಂದು ಹೇಳಿದರು.

ಶೈಕ್ಷಣಿಕ ಸಂಯೋಜಕ ಮಂಜುನಾಥ ತುಮ್ಮರಮಟ್ಟಿ ಸೇರಿದಂತೆ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿ ನಿಲಯದ ಮುಖ್ಯಸ್ಥರು, ನಿಲಯಪಾಲಕರು ಉಪಸ್ಥಿತರಿದ್ದರು. ಆಂಗ್ಲ ಉಪನ್ಯಾಸಕ ಮುಸ್ತಾಕ ಮಲಘಾಣ ನಿರೂಪಿಸಿದರು.



ಮಹಿಳಾ ಸಬಲೀಕರಣಕ್ಕೆ ಕೆಎಸ್‌ಎಡಬ್ಲ್ಯುಯು-ಸೆಲ್ಕೊ ಸೋಲಾರ್ ಒಪ್ಪಂದ

• **ವಿಜಯಪುರ:** ನಗರ ಹಾಗೂ ಗ್ರಾಮೀಣ ಮಹಿಳೆಯರ ಸುಸ್ಥಿರ ಅಭಿವೃದ್ಧಿ ಮತ್ತು ಸಬಲೀಕರಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ಹಾಗೂ ಸೆಲ್ಕೊ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಸಂಸ್ಥೆಗಳ ನಡುವೆ ಇತ್ತೀಚಿಗೆ ಪರಸ್ಪರ ಸಹಕಾರ ಒಪ್ಪಂದಕ್ಕೆ ಸಹಿ ಮಾಡಲಾಯಿತು.

ಅಹಲ್ಯಾಬಾಯಿ ಮಹಿಳಾ ಅಧ್ಯಯನ ಕೇಂದ್ರವು ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳ ಮೂಲಕ ಮಹಿಳಾ ಸಬಲೀಕರಣಕ್ಕಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು, ವಿವಿಧ ಸಂಘ-ಸಂಸ್ಥೆಗಳೊಂದಿಗೆ ಸಹಭಾಗಿತ್ವದ ಮೂಲಕ ಮಹಿಳೆಯರ ಜೀವನಮಟ್ಟ ಸುಧಾರಣೆಗೆ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ. ಸೆಲ್ಕೊ ಸೋಲಾರ್‌ಲೈಟ್ ಪ್ರೈವೇಟ್ ಲಿಮಿಟೆಡ್‌ನೊಂದಿಗೆ ಮಾಡಿಕೊಂಡಿರುವ ಒಪ್ಪಂದ ಮಹತ್ವದ ಹೆಜ್ಜೆಯಾಗಿದೆ.

ಈ ಒಪ್ಪಂದದಡಿ ನಗರ ಮತ್ತು ಗ್ರಾಮೀಣ ಮಹಿಳೆಯರಲ್ಲಿ ಪರ್ಯಾಯ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳು, ಹಾಗೂ ಮಹಿಳಾ ಸಬಲೀಕರಣಕ್ಕೆ ಪೂರಕವಾದ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗುವುದು. ಮಹಿಳೆಯರ ಆರ್ಥಿಕ ಸ್ವಾವಲಂಬನೆ, ಪರಿಸರ ಸ್ನೇಹಿ ಜೀವನಶೈಲಿ ಹಾಗೂ



ಸುಸ್ಥಿರ ಅಭಿವೃದ್ಧಿಗೆ ಈ ಸಹಯೋಗವು ನೆರವಾಗಲಿದೆ.

ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕಿ ಪ್ರೊ.ಲಕ್ಷ್ಮಿದೇವಿ ವೈ, ಸೆಲ್ಕೊ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್‌ನ ಪ್ರಾದೇಶಿಕ ಉಪ ವ್ಯವಸ್ಥಾಪಕ ಪ್ರಸನ್ನ ಹೆಗಡೆ, ಸಂಹಿತಾ ಮುಜುಂದಾರ, ಮಹಿಳಾ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕಿ ಡಾ.ಭಾಗ್ಯಶ್ರೀ ದೊಡಮನಿ, ಸಹ ಸಂಶೋಧಕರಾದ ಡಾ.ಸರೋಜಾ ಸಂತಿ, ಡಾ. ರಜಿಯಾಬೇಗಂ ನದಾಫ್, ಅಂಬಿಕಾ ಮಾಲಗಾರ, ಸೆಲ್ಕೊ ವಿಜಯಪುರ ಘಟಕದ ವ್ಯವಸ್ಥಾಪಕ ಬಸನಗೌಡ ಬಿರಾದಾರ ಹಾಗೂ ಮಾರಾಟ ಪ್ರತಿನಿಧಿ ಸಂತೋಷ ಪಾಟೀಲ ಉಪಸ್ಥಿತರಿದ್ದರು.

ಸ್ಕೇಟಿಂಗ್ ಸ್ಪರ್ಧೆ: ವಿದ್ಯಾರ್ಥಿಗಳ ಸಾಧನೆ

• **ಮುದ್ದೇಬಿಹಾಳ:** ಮಹಾರಾಷ್ಟ್ರ ರಾಜ್ಯದ ಸೋಲ್ಲಾಪುರದಲ್ಲಿ ರೋಲರ್ಸ್ ಸ್ಕೇಟಿಂಗ್ ಸ್ಪೋರ್ಟ್ಸ್ ಫೇಡರೇಷನ್ ಆಫ್ ಇಂಡಿಯಾ ವತಿಯಿಂದ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಸ್ಕೇಟಿಂಗ್ ಮೈದಾನದಲ್ಲಿ ನಡೆದ 8ನೇ ರಾಷ್ಟ್ರಮಟ್ಟದ ಪಂದ್ಯಾವಳಿ ತಾಲೂಕಿನ ಏಕಲವ್ಯ ರೋಲರ್ಸ್ ಸ್ಕೇಟಿಂಗ್ ಅಕಾಡೆಮಿ ಕ್ರೀಡಾಪಟುಗಳು ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಹಾಗೂ ರಾಜ್ಯಕ್ಕೆ ತೃತೀಯ ಸ್ಥಾನ ಹೆಚ್ಚು ಅಂಕ ಪಡೆಯುವ ಮೂಲಕ ಸಾಧನೆಗೈದಿದ್ದಾರೆ.

ಅಕಾಡೆಮಿ ಸಂಸ್ಥಾಪಕ ಶಿವಕುಮಾರ ಶಾರದಳ್ಳಿ ಮಾತನಾಡಿ, ನಮ್ಮ ತಾಲೂಕಿನಿಂದ ಒಟ್ಟೂ 12 ವಿದ್ಯಾರ್ಥಿಗಳು ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದು ಎಲ್ಲ ವಿದ್ಯಾರ್ಥಿಗಳೂ ವಯಕ್ತಿವಾಗಿ ಹಾಗೂ ರಾಜ್ಯದಿಂದ ಹೆಚ್ಚು ಅಂಕಗಳನ್ನು ಪಡೆದು ಪಂದ್ಯಾವಳಿಯಲ್ಲಿ ಪಂದ್ಯ ಶ್ರೇಷ್ಠವಾಗಿ ತೃತೀಯ ಸ್ಥಾನದ ಟ್ರೋಪಿ ಪಡೆದುಕೊಂಡು ತಾಲೂಕಿನ ಹಿರಿಮೆ ಹೆಚ್ಚಿಸಿದ್ದಾರೆ ಎಂದು ತಿಳಿಸಿದ್ದಾರೆ.

ಸಂಘಟನೆ ಅಧ್ಯಕ್ಷ ರಮೇಶ ಸಿಂಗ್, ಪ್ರಧಾನ ಕಾರ್ಯದರ್ಶಿ ಸಂಜಯ ಕಾಂಬಳೆ ಹಾಗೂ ಮಹಾರಾಷ್ಟ್ರದ ರಾಜ್ಯಾಧ್ಯಕ್ಷ ರಾಜಥನ್ ರಾಕ್, ಪ್ರ. ಕಾರ್ಯದರ್ಶಿ ಅಭಿಜೀತ ರಾಕ್ ಮತ್ತು ಉಪ ಕಾರ್ಯದರ್ಶಿ ಖೇದರ್ ಬದಾಮಿಕರ್ ವಿಜೇತರಿಗೆ ಮಕ್ಕಳಿಗೆ ಪದಕಗಳನ್ನು ಹಾಗೂ ರಾಜ್ಯಕ್ಕೆ ತೃತೀಯ ಸ್ಥಾನದ ಟ್ರೋಪಿ ನೀಡಿ ಅಭಿನಂದಿಸಿದರು.



ವಿಶ್ರಾಂತ ಶಾರದಳ್ಳಿ ಚಿನ್ನದ ಪದಕ, ವೈಭವ ಬಿರಾದಾರ ಬೆಳ್ಳಿ, ಅಖಿಲ ಅಸ್ಕಿ ಕಂಚು ಪದಕ ಪಡೆದಿದ್ದಾರೆ. ಶಂಕುತಲಾ ಶಾರದಳ್ಳಿ ಬೆಳ್ಳಿ ಪದಕ ಹೃದಯಾನಂದ ಕೊಪ್ಪ, ಯುಸುಫ್ ಚಿಮ್ಮಲಗಿ, ಶಾಹೀದಾ ಅಕ್ಕಲಕೋಟ, ಮಹ್ಮದಸಾಹೀಲ್ ಅಕ್ಕಲಕೋಟ, ನಾಗಶ್ರುತನ ಇಲ್ಲೂರ, ಅಭಯ ದೇವಾಡಗಿ ವಿಜೇತರಾದವರು. ಪಾಲಕರಾದ ನಂದು ಅಸ್ಕಿ, ರಾಚೋಟಿ ಬಳಿಗಾರ, ಮಹ್ಮದಶಫೀಕ್ ಅಕ್ಕಲಕೋಟ, ಉಮಾಕಾಂತ ರುದ್ರವಾರ, ಮೋಸೀನ್ ಚಿಮ್ಮಲಗಿ ಪ್ರೋತ್ಸಾಹಿಸಿದರು.

ಇಂದಿನಿಂದ ವಿವಿಧೆಡೆ ಪಲ್ಸ್ ಪೋಲಿಯೋ ಕಾರ್ಯಕ್ರಮ

• **ಇಂಡಿ:** ಪೋಲಿಯೋ ನಿರ್ಮೂಲನೆ ಪ್ರತಿಯೊಬ್ಬರ ಜವಾಬ್ದಾರಿ. ಲಸಿಕೆ, ಜಾಗೃತಿ ಮತ್ತು ಸ್ವಚ್ಛತೆಯ ಮೂಲಕ ನಾವು ಆರೋಗ್ಯಕರ ಸಮಾಜ ನಿರ್ಮಿಸಬೇಕು ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ತಾಲೂಕಿನ ಹಿರೇರೂಗಿ ಗ್ರಾಮದ ಕೆಬಿಎಸ್, ಕೆಜಿಎಸ್, ಯುಬಿಎಸ್ ಶಾಲೆಯ ಸಹಯೋಗದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಹಮ್ಮಿಕೊಂಡ ಪಲ್ಸ್ ಪೋಲಿಯೋ ಲಸಿಕೆಯ ಜಾಗೃತಿ ಜಾಥಾದಲ್ಲಿ ಮಾತನಾಡಿ, ಕೇವಲ ಎರಡು ಹನಿ ಪೋಲಿಯೋ ಲಸಿಕೆ ಮಗುವಿಗೆ ಜೀವಮಾನದ ರಕ್ಷಣೆ ನೀಡುತ್ತದೆ. ಭಾರತವನ್ನು ಪೋಲಿಯೊ ಮುಕ್ತ ರಾಷ್ಟ್ರವಾಗಿ ಕಾಪಾಡಿಕೊಳ್ಳಲು ನಿಯಮಿತವಾಗಿ ಲಸಿಕೆ ಹಾಕಿಸುವುದು ಪೋಷಕರ ಜವಾಬ್ದಾರಿ ಎಂದು ಹೇಳಿದರು.

ಶಿಕ್ಷಕ ಶ್ರೀಧರ ಹಿಪ್ಪರಗಿ ಮಾತನಾಡಿ, ಪಲ್ಸ್ ಪೋಲಿಯೋ ಲಸಿಕೆಯು 5 ವರ್ಷದೊಳಗಿನ ಪ್ರತಿ ಮಗುವಿಗೂ ಅತ್ಯಗತ್ಯವಾಗಿದೆ. ಪೋಲಿಯೊ ವೈರಸ್ ನರಮಂಡಲದ ಮೇಲೆ ದಾಳಿ ಮಾಡಿ ಶಾಶ್ವತ ಅಂಗವೈಕಲ್ಯಕ್ಕೆ ಕಾರಣವಾಗಬಹುದು. ಆದ್ದರಿಂದ ಲಸಿಕೆ ನೀಡುವುದೊಂದೇ ಇದನ್ನು ತಡೆಯುವ ಏಕೈಕ ಮಾರ್ಗವಾಗಿದೆ ಎಂದರು. ಮುಖ್ಯ ಶಿಕ್ಷಕ ಎಸ್.ಬಿ.ಕೋಳಿ, ಕೆ.ಐ.ಮಕಾನದಾರ, ಹಾಗೂ ಶಿಕ್ಷಕರು, ತಾಂಬಾ ಎಎನ್‌ಎಂ ಎಸ್ ಹೊನ್ನಮೊರೆ, ಆಶಾ ಕಾರ್ಯಕರ್ತೆಯರಾದ ಸುಜಾತಾ ಚಾಂದಕವಟೆ ಇಂದುಮತಿ ಹಳ್ಳದಮನಿ, ಎಸ್. ಎನ್.ಬೇನೂರ, ಎಸ್.ಆರ್.ಹರವಾಳ ಇದ್ದರು.



• **ಬಸವನಬಾಗೇವಾಡಿ:** 2026ನೇ ಸಾಲಿನ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಜೂ.28ರಂದು ಚಾಲನೆ ದೊರೆಯಲಿದ್ದು, ಪಟ್ಟಣದಲ್ಲಿ ಶಾಲಾ ಮಕ್ಕಳು ಪ್ರತಿಯೊಂದು ಹುಟ್ಟಿದ ಮಗುವಿನಿಂದ ಹಿಡಿದು 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೆ ಪೋಲಿಯೋ ಹಾಕಿಸಬೇಕೆಂದು ಜಾಗೃತಿ ಜಾಥಾ ನಡೆಸಿ ಜಾಗೃತಿ ಮೂಡಿಸಿದರು. ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಅಣ್ಣಪ್ಪ ಬಿದ್ನಾಳ, ಚಂದ್ರಶೇಖರ ಹದಿಮೂರ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಎಂ.ಬಿ.ಬೇವನೂರ, ಎಸ್.ಎಸ್.ಕಿಶೇರಿ, ಆಶಾ ಕಾರ್ಯಕರ್ತೆ ಭಾರತಿ ಮ್ಯಾಗೇರಿ, ಬಸವೇಶ್ವರ ದೇವಸ್ಥಾನದ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ವೈ.ಎನ್.ಮಿಣಜಗಿ, ಶಿಕ್ಷಕರಾದ ಬಸವರಾಜ ನಂದಿಹಾಳ, ಸುಭಾಸ ಹಡಪದ ಇದ್ದರು.



ಧರ್ಮಸ್ಥಳ ಸಂಘದ ಕಾರ್ಯ ಶ್ಲಾಘನೀಯ

• **ಸಿಂದಗಿ:** ಧರ್ಮಸ್ಥಳ ಸಂಘವು ಕೇವಲ ಸಾಲ ನೀಡದೇ ವಿದ್ಯಾರ್ಥಿ ವೇತನ, ಮಾಶಾಸನ, ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಅನುದಾನ ಸೇರಿದಂತೆ ಅನೇಕ ಯೋಜನೆಗಳನ್ನು ಜಾರಿಗೆ ತಂದು ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡುತ್ತಿದೆ. ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು ಎಂದು ಮೇಲ್ವಿಚಾರಕ ಹಣಮಂತ ಹೇಳಿದರು.

ನಗರದ ಮಲ್ಲಿಕಾರ್ಜುನ ನಗರದ ವಜ್ರ ಹನುಮಾನ ದೇವಸ್ಥಾನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನಾ ಕೇಂದ್ರದ ವತಿಯಿಂದ ಹಮ್ಮಿಕೊಂಡ ಶಿಕ್ಷಣದ ಮಹತ್ವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶಿಕ್ಷಣವು ವ್ಯಕ್ತಿಯ ಯಶಸ್ಸಿಗೆ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಇದು ಒಬ್ಬರ ಜೀವನವನ್ನು ಸರಿಯಾದ ದಿಕ್ಕಿನಲ್ಲಿ ರೂಪಿಸುವ ಸಾಮರ್ಥ್ಯವನ್ನು ಹೊಂದಿದೆ. ಜೀವನದಲ್ಲಿ ಶಿಕ್ಷಣದ ಮಹತ್ವ ಅಪಾರ ಎಂದರು.

ಒಕ್ಕೂಟದ ಅಧ್ಯಕ್ಷೆ ಬೋರಮ್ಮ ಕರ್ಪೂರಮಠ ಮಾತನಾಡಿ, ಜ್ಞಾನ, ನಂಬಿಕೆ, ಕೌಶಲ್ಯ, ಮೌಲ್ಯಗಳು ಮತ್ತು ನೈತಿಕ ಅಭ್ಯಾಸಗಳನ್ನು ಮೈಗೂಡಿಸಿಕೊಳ್ಳುತ್ತದೆ. ಇದು ಜೀವನ ವಿಧಾನವನ್ನು ಸುಧಾರಿಸುತ್ತದೆ ಮತ್ತು ವ್ಯಕ್ತಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುತ್ತದೆ. ಶಿಕ್ಷಣವು ಜೀವನವನ್ನು ಉತ್ತಮ ಮತ್ತು



ಹೆಚ್ಚು ಶಾಂತಿಯುತವಾಗಿಸುತ್ತದೆ. ಇದು ವ್ಯಕ್ತಿಗಳ ವ್ಯಕ್ತಿತ್ವವನ್ನು ಪರಿವರ್ತಿಸುತ್ತದೆ ಮತ್ತು ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತದೆ ಎಂದರು.

ಪದ್ಮರಾಜ ಮಹಿಳಾ ಕಾಲೇಜಿನ ಉಪನ್ಯಾಸಕ, ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾಧ್ಯಕ್ಷ ಮಹಾಂತೇಶ ನೂಲಾನವರ ಮಾತನಾಡಿದರು. ಸೇವಾ ಪ್ರತಿನಿಧಿ ನೀಲಮ್ಮ ತಳ್ಳೊಳ್ಳಿ, ಲಕ್ಷ್ಮೀ ಬಿರಾದಾರ, ಸರೋಜಾದೇವಿ, ವಿಜಯಲಕ್ಷ್ಮೀ, ಸುನಂದಾ, ಗೀತಾ, ಅರುಣಾದೇವಿ, ಪ್ರೀಯಾಂಕಾ, ಜಯಶ್ರೀ, ಮಹಾದೇವಿ, ಅಕ್ಕಮಹಾದೇವಿ, ಶರಣಮ್ಮ, ಗಂಗಾಬಾಯಿ, ಮಲ್ಲಮ್ಮ, ಬಸಮ್ಮ, ಮಾಂತಮ್ಮ ಸೇರಿದಂತೆ ಅನೇಕರು ಇದ್ದರು.

ಕೆಂಪೇಗೌಡರ ಕೊಡುಗೆ ಅಜರಾಮರ

• **ಬಸವನಬಾಗೇವಾಡಿ:** ಬೆಂಗಳೂರು ಮಹಾನಗರದ ನಿರ್ಮಾತೃ, ದೂರದರ್ಶಿ ಆಡಳಿತಗಾರ ಹಾಗೂ ಜನಪರ ನಾಯಕ ನಾಡಪ್ರಭು ಕೆಂಪೇಗೌಡರ ಕೊಡುಗೆ ಇತಿಹಾಸದಲ್ಲಿ ಅಜರಾಮರವಾಗಿದೆ ಎಂದು ರಾಷ್ಟ್ರೀಯ ಬಸವಸೈನ್ಯದ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ಹೇಳಿದರು.

ಸ್ಥಳೀಯ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲೂಕಾಡಳಿತದಿಂದ ಹಮ್ಮಿಕೊಂಡ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂದಿನ ಕಾಲದಲ್ಲಿಯೇ ಪರಿಸರ ಸಂರಕ್ಷಣೆ, ಕೆರೆಗಳ ನಿರ್ಮಾಣ, ರಸ್ತೆ ಹಾಗೂ ಸುಸಜ್ಜಿತ ಮಾರುಕಟ್ಟೆಗಳ ಅಭಿವೃದ್ಧಿಗೆ ಅವರು ನೀಡಿದ ಆದ್ಯತೆ ಇಂದಿನ ಆಡಳಿತ ವ್ಯವಸ್ಥೆಗೂ ಮಾದರಿಯಾಗಿದೆ. ಅವರ ಆದರ್ಶಗಳು ಹಾಗೂ ಜನಪರ ಚಿಂತನೆಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಸುರೇಶಗೌಡ ಪಾಟೀಲ, ಮನ್ನಾನ ಶಾಬಾದಿ, ಜಟ್ಟಿಂಗರಾಯ ಮಾಲಗಾರ, ಪ್ರಶಾಂತ ಮುಂಜಾನೆ, ಆನಂದ ವಣರೊಟ್ಟಿ, ಭೂ ಮಾಪನ ಇಲಾಖೆಯ ಇಶಾಕ ಕಲಾದಗಿ, ಬಸವರಾಜ ದಾನಿ ಇದ್ದರು.



ಕಿರುಸುದ್ದಿ

ಸಮನ್ವಯದ ಕೊರತೆಯಿಂದ ಹಣ ಜಮೆ: ರೇವಣ್ಣ

ರಾಯಚೂರು: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಜನನ ಮತ್ತು ಮರಣ ಇಲಾಖೆಯಗಳ ಅಂಕಿ ಸಂಖ್ಯೆ ವಿನಿಮಯ ಸಮನ್ವಯದ ಕೊರತೆಯಿಂದಾಗಿ ಗೃಹಲಕ್ಷ್ಮಿ ಫಲಾನುಭವಿಗಳಾದವರಲ್ಲಿ ಮೃತಪಟ್ಟವರ ಮಾಹಿತಿ ಸಮಯಕ್ಕೆ ಸರಿಯಾಗಿ ಲಭ್ಯವಾಗದ ಹಿನ್ನೆಲೆಯಲ್ಲಿ ಮೃತ ಫಲಾನುಭವಿಗಳ ಖಾತೆಗಳಿಗೆ ಹಣ ಜಮೆ ಆಗುತ್ತಿರುವುದಕ್ಕೆ ಒಂದು ಕಾರಣವಾಗಿದೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗೃಹಲಕ್ಷ್ಮಿ ಫಲಾನುಭವಿ ಮೃತಪಟ್ಟರೆ ಆಯಾ ಕುಟುಂಬದ ಸದಸ್ಯರು ಸಂಬಂಧಿಸಿದ ಇಲಾಖೆಗೆ ಮಾಹಿತಿ ನೀಡುವುದಿಲ್ಲ, ಆಯಾ ಕುಟುಂಬದ ಆಸ್ತಿ ಮತ್ತಿತರ ದಾಖಲಾತಿ ಸರಿಪಡಿಸುವ ಸಂದರ್ಭದಲ್ಲಿ ಫಲಾನುಭವಿ ಮೃತ ಪಟ್ಟಿದ್ದಾರೆ ಎನ್ನುವ ನಿಧನ ಪ್ರಮಾಣಪತ್ರ ಪಡೆಯುವುದಕ್ಕೆ ಮುಂದಾದಾಗ ಮಾತ್ರ ಮೃತಪಟ್ಟಿರುವುದು ತಿಳಿಯುತ್ತದೆ ಎಂದರು. ಪಂಚ ಗ್ಯಾರಂಟಿ ಜಿಲ್ಲಾ ಉಪಾಧ್ಯಕ್ಷ ನಾಗೇಂದ್ರಪ್ಪ, ಹನುಮಂತಪ್ಪ ಜಾಲಿಬೆಂಚಿ, ನಾಗವೇಣಿ, ಮಲ್ಲಯ್ಯ ಕಮತಗಿ ಸೇರಿದಂತೆ ಇತರರಿದ್ದರು.

ಕೆಂಪೇಗೌಡ ಜಯಂತಿ: ಪುಷ್ಪ ನಮನ ಸಲ್ಲಿಕೆ

ಕೊಪ್ಪಳ: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಾಡ ಪ್ರಭು ಕೆಂಪೇಗೌಡ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಆಚರಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕರ್ಣಕುಮಾರ ಅವರು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ವಾರ್ತಾ ಇಲಾಖೆಯ ಭರತಕುಮಾರ, ಎಂ.ಪಾಂಡುರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುತ್ತಣ್ಣ ಸೇರಿದಂತೆ ಇತರೆ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು. ವಾರ್ತಾ ಇಲಾಖೆಯಲ್ಲಿ ಕೆಂಪೇಗೌಡ ಜಯಂತಿ: ನಾಡ ಪ್ರಭು ಕೆಂಪೇಗೌಡ ಜಯಂತಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿಯಲ್ಲಿಯೂ ಆಚರಿಸಲಾಯಿತು.

ಮಕ್ಕಳಿಗೆ ತಪ್ಪದೇ ಪೋಲಿಯೋ ಹಾಕಿಸಿ

ಕುಕನೂರು: ಪ್ರತಿಯೊಬ್ಬ ಪಾಲಕರು ತಮ್ಮ ಐದು ವರ್ಷದ ಒಳಗಿನ ಪ್ರತಿಯೊಬ್ಬ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಿ ಪೋಲಿಯೋ ಮುಕ್ತ ಭಾರತ ನಿರ್ಮಾಣಕ್ಕೆ ಸಹಕರಿಸಿ ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪರಶುರಾಮ ನಾಯಕ ಹೇಳಿದರು. ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ತಾಲೂಕಿನ ಕುದುರಿಮೋತಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಪರಶುರಾಮ ನಾಯಕ ಮಾತನಾಡುತ್ತಾ ಕರ್ನಾಟಕ ಸರ್ಕಾರದ ಆದೇಶದಂತೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲೂಕ ಆರೋಗ್ಯ ಇಲಾಖೆ, ತಾಲೂಕ ಆಡಳಿತ ಹಾಗೂ ಪಟ್ಟಣ ಪಂಚಾಯಿತಿ ಸಹಯೋಗದಲ್ಲಿ ಇದೇ ಜೂನ್ 28ರ ಭಾನುವಾರ ಆರೋಗ್ಯ ಇಲಾಖೆ ಸೂಚಿಸುವ ಸ್ಥಳಗಳಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಪ್ರತಿ ಗ್ರಾಮಗಳಲ್ಲೂ ಸಹ ಪೋಲಿಯೋ ಬೂತ್ ಗಳನ್ನು ತೆರೆಯಲಾಗಿದ್ದು, ಪ್ರತಿ ಬೂತ್‌ಗಳಲ್ಲೂ ಸಹ ಆರೋಗ್ಯ ಇಲಾಖೆಯ ಹಾಗೂ ಪಂಚಾಯತಿಯ ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದು ಪ್ರತಿಯೊಬ್ಬ ಪಾಲಕರು ನಿಗಾ ವಹಿಸಿ ತಮ್ಮ ಐದು ವರ್ಷದ ಒಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸುವುದರೊಂದಿಗೆ ಸರ್ಕಾರದ ಕಾರ್ಯಕ್ರಮವಾದ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು 100% ಯಶಸ್ವಿಗೊಳಿಸುವುದರೊಂದಿಗೆ ದೇಶವನ್ನು ಪೋಲಿಯೋ ಮುಕ್ತ ಭಾರತವನ್ನಾಗಿಸುವಲ್ಲಿ ಪಾಲಕರು ಸಹಕರಿಸಬೇಕೆಂದು ತಿಳಿಸಿರುತ್ತಾರೆ.

ಮೊಹರಂ ಹಬ್ಬ ಆಚರಣೆ

ಮಸ್ಕಿ: ಪಟ್ಟಣದಲ್ಲಿ ಮೊಹರಂ ಹಬ್ಬವು ಹಿಂದೂ-ಮುಸ್ಲಿಂ ಬಾಂಧವರ ಭಾವೈಕ್ಯತೆಯ ಸಂಕೇತವಾಗಿ ಅತ್ಯಂತ ಶಾಂತಿಯುತ ಹಾಗೂ ಅರ್ಥಪೂರ್ಣವಾಗಿ ಜರುಗಿತು. ಹಬ್ಬದ ಅಂಗವಾಗಿ, ಪಟ್ಟಣದ ವಿವಿಧ ಮೊಹರಂ ಚಾವಡಿಗಳಲ್ಲಿ ಆಲಂಗಳನ್ನು (ದೇವರು) ಪ್ರತಿಷ್ಠಾಪಿಸಿ ವಿಶೇಷ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲಾಯಿತು. ಭಕ್ತರು ದೇವರಿಗೆ ಸಕ್ಕರೆ, ನೈವೇದ್ಯ ಅರ್ಪಿಸಿ ಹರಕೆ ತೀರಿಸಿದರು. ಯುವಕರು ಸಾಂಪ್ರದಾಯಿಕ ಮೊಹರಂ ಪದಗಳನ್ನು ಹಾಡುತ್ತಾ ಹೆಜ್ಜೆ ಮೇಳ ಪ್ರದರ್ಶಿಸಿದ್ದು ಹಬ್ಬದ ಪ್ರಮುಖ ಆಕರ್ಷಣೆಯಾಗಿತ್ತು. ಹಬ್ಬದ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯು ಪಟ್ಟಣದಲ್ಲಿ ಬಿಗಿ ಬಂದೋಬಸ್ತ್ ಕೈಗೊಂಡಿತ್ತು. ಯಾವುದೇ ಅಹಿತಕರ ಘಟನೆಯಿಲ್ಲದೆ ತಾಲೂಕಿನ ವಿವಿಧೆಡೆ ಹಬ್ಬವು ಅತ್ಯಂತ ಶಿಸ್ತುಬದ್ಧವಾಗಿ ಸಂಪನ್ನಗೊಂಡಿತು.



ಕೊಪ್ಪಳ: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಾಡ ಪ್ರಭು ಕೆಂಪೇಗೌಡ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಆಚರಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕರ್ಣಕುಮಾರ ಅವರು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

ಹಿಂದೂ ಸಾಮ್ರಾಜ್ಯ ದಿವಸ್ ಆಚರಣೆ

ಕಲಬುರಗಿ: ನಗರದ ಶರಣ ಶಿರಸಗಿಯಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಶುಕ್ರವಾರ ಹಿಂದೂ ಸಾಮ್ರಾಜ್ಯ ದಿವಸ್‌ನ್ನು ಸಂಭ್ರಮದಿಂದ ಆಚರಿಸಲಾಯಿತು.

ಶಾಲೆಯ ಶಿಕ್ಷಕ ಸಂಜೀವ ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರು ಹಿಂದವೀ ಸಾಮ್ರಾಜ್ಯದ ಸ್ಥಾಪಕರಾಗಿದ್ದು, ತಮ್ಮ ಯುದ್ಧ ತಂತ್ರ, ಆಡಳಿತ ಕೌಶಲ್ಯ ಹಾಗೂ ಧರ್ಮನಿಷ್ಠೆಗೆ ಹೆಸರುವಾಸಿಯಾಗಿದ್ದರು ಎಂದು ಹೇಳಿದರು.

ಮಾತೆ ಜೀಜಾಬಾಯಿಯವರು ಶಿವಾಜಿ ಮಹಾರಾಜರಿಗೆ ರಾಮನ ಆದರ್ಶ ಹಾಗೂ ಕೃಷ್ಣನ ಕೌಶಲ್ಯದ ಕಥೆಗಳ ಮೂಲಕ ಸಾಹಸ ಮತ್ತು ನಾಯಕತ್ವದ ಪಾಠಗಳನ್ನು ಕಲಿಸಿದರೆ, ಗುರುಗಳಾದ ದಾದಾಜಿ ಕೊಂಡದೇವ ಅವರು ಆಡಳಿತ ಮತ್ತು ಯುದ್ಧ ಕಲೆಗಳಲ್ಲಿ ತರಬೇತಿ ನೀಡಿದ್ದರು ಎಂದು ವಿವರಿಸಿದರು.

1674ರಲ್ಲಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕ ನಡೆದ ಸಂದರ್ಭದಲ್ಲಿ ಅವರಿಗೆ 'ಛತ್ರಪತಿ' ಎಂಬ ಬಿರುದು ನೀಡಲಾಯಿತು. ತುಳಜಾ ಭವಾನಿಯ ಪರಮಭಕ್ತರಾಗಿದ್ದ ಅವರು ಹಲವಾರು ಮೊಘಲ್ ಆಡಳಿತಗಾರರ ವಿರುದ್ಧ ಯುದ್ಧ ಮಾಡಿ ಅನೇಕ ಕೋಟೆಗಳನ್ನು ವಶಪಡಿಸಿಕೊಂಡಿದ್ದರು ಎಂದು ತಿಳಿಸಿದರು.

ಶಾಲೆಯ ಶಿಕ್ಷಕಿ ರಾಧಾ ಸ್ವಾಗತಿಸಿದರು. ರೇಣುಕಾ ವಂದಿಸಿದರು. ಶಾಲೆಯ ಪ್ರಧಾನಾಚಾರ್ಯ ಲಾಲ್ ದೀಪ್ ಶ್ರೀನಿವಾಸನ್, ಆಡಳಿತಾಧಿಕಾರಿ ಶ್ರೀಕಾಂತ ಪಾಟೀಲ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಕಲಬುರಗಿ: ನಗರದ ಶರಣ ಶಿರಸಗಿಯಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಶುಕ್ರವಾರ ಹಿಂದೂ ಸಾಮ್ರಾಜ್ಯ ದಿವಸ್‌ನ್ನು ಸಂಭ್ರಮದಿಂದ ಆಚರಿಸಲಾಯಿತು.

ಗುಲಬರ್ಗಾ ವಿವಿಯ ವಿಶ್ರಾಂತ ಕುಲಪತಿ ಪ್ರೊ.ದಯಾನಂದ ಅಭಿಮತ

ಭವಿಷ್ಯದ ದೂರದೃಷ್ಟಿ ಚಿಂತನೆಗೆ ಸಮ್ಮೇಳನ ಪ್ರೋತ್ಸಾಹದಾಯಕ

ಕಲಬುರಗಿ: ಯುವ ಜನಾಂಗದ ಶೈಕ್ಷಣಿಕ ಕಲಿಕೆ ಮತ್ತು ಭವಿಷ್ಯದ ದೂರದೃಷ್ಟಿ ಚಿಂತನೆಗೆ ಸಮ್ಮೇಳನ ಪ್ರೋತ್ಸಾಹದಾಯಕವಾಗಿದ್ದು, ಹಳೆಯ ವಿದ್ಯಾರ್ಥಿಗಳ ಸಹಕಾರದ ಮೂಲಕ ವೈಜ್ಞಾನಿಕ ಚಿಂತನ-ಮಂಥನದೊಂದಿಗೆ ಯಶಸ್ವಿಯಾಗಿದೆ ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ದಯಾನಂದ ಆಗಸರ ಪ್ರಶಂಸೆ ವ್ಯಕ್ತಪಡಿಸಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಸೂಕ್ಷ್ಮ ಜೀವಶಾಸ್ತ್ರ ವಿಭಾಗ ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಆಯೋಜಿಸಿದ ಸುವರ್ಣ ಮಹೋತ್ಸವ ವರ್ಷಾಚರಣೆ ಮತ್ತು 'ಸೂಕ್ಷ್ಮಜೀವಿಗಳ ವ್ಯಾಪ್ತಿ' ಉತ್ತಮ ನಾಳೆಗಾಗಿ ತಂತ್ರಜ್ಞಾನ' ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಹೊಸತನದ ಆಲೋಚನೆ ಮತ್ತು ದೂರದೃಷ್ಟಿ ಮೂಲಕ ನಾವೆಲ್ಲರೂ ವಿಭಾಗದ ಏಳಿಗೆಗೆ ಶ್ರಮಿಸಿ ಮುಂದಿನ 75 ವರ್ಷಗಳ ಸಂಭ್ರಮಾಚರಣೆಗೆ ನಾಂದಿಯಾಡಬೇಕಿದೆ. ಹಳೆಯ ವಿದ್ಯಾರ್ಥಿಗಳ ಸಾಧನೆ ಇಂದಿನ ಯುವಜನತೆಗೆ ಪ್ರೇರಣೆಯಾಗುವಂತಿರಲಿ ಎಂದ ಅವರು ವಿದ್ಯಾರ್ಥಿಗಳ ಸಂಘಕ್ಕೆ ನೇಮಕಗೊಂಡಿರುವ ನೂತನ ಪದಾಧಿಕಾರಿಗಳಿಗೆ ಅಭಿನಂದನೆ ತಿಳಿಸಿದರು.

ಸಂಘದ ಅಧ್ಯಕ್ಷ ಪ್ರೊ.ಕೆ.ಲಿಂಗಪ್ಪ ಮಾತನಾಡಿದರು.



ನಿವೃತ್ತ ಪ್ರಾಧ್ಯಾಪಕಿ ಪ್ರೊ.ಅನ್ನಪೂರ್ಣ ನಿಂಬರಗಿ

> **ವಿದ್ಯಾರ್ಥಿಗಳಿಗೆ ಇಂತಹ ಸಮ್ಮೇಳನ, ಕಾರ್ಯಾಗಾರ, ಸಂಕಿರಣ, ಉಪನ್ಯಾಸಗಳಿಂದ ಅತ್ಯಂತ ಮಹತ್ವದ ವಿಷಯಗಳ ಇತ್ತೀಚಿನ ಬೆಳವಣಿಗೆ ಕುರಿತು ಚರ್ಚಿಸಲು ವೇದಿಕೆಗಳಾಗುತ್ತವೆ. ಗ್ರಹಿಕೆ, ಕಲಿಕೆ. ಚಿಂತನ-ಮಂಥನ ಮೂಲಕ ಅತ್ಯುತಮ ಅನುಭವಗಳು ಸಿಗುತ್ತವೆ. ಜ್ಞಾನ ಗಳಿಕೆಗೆ ಯಾವುದೇ ಮಿತಿಯಿಲ್ಲ. ಜ್ಞಾನದ ಮೂಲಕ ವ್ಯಕ್ತಿತ್ವ ಕುಶಲತೆ, ಕೌಶಲ್ಯ ಅನುಭವದಿಂದ ಜಾಗತಿಕ ಮಟ್ಟದಲ್ಲಿ ಉತ್ತಮ ಅವಕಾಶಗಳನ್ನು ಪಡೆಯಬಹುದು.**
>
> ■ **ಪ್ರೊ.ಎಸ್.ಎ.ಪಾಟೀಲ, ಬೆಂಗಳೂರು ನಿಮಾನ್ಸ್ ನಿವೃತ್ತ ಪ್ರಾಧ್ಯಾಪಕ**

ವಿಭಾಗದಲ್ಲಿ ಕಲಿತ ಅನುಭವಗಳನ್ನು ಭಾವನಾತ್ಮಕ ನುಡಿಗಳಲ್ಲಿ ಹಂಚಿಕೊಂಡರು. ಮುಖ್ಯಸ್ಥೆ ಹಾಗೂ ಸಂಯೋಜಕಿ ಪ್ರೊ.ಎಂ.ಬಿ.ಸುಲೋಚನಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರೊ.ಚಂದ್ರಕಾಂತ್ ಕೆಳಮನಿ ಉಪಸ್ಥಿತರಿದ್ದರು.

ಸಮ್ಮೇಳನದಲ್ಲಿ ಅತ್ಯುತ್ತಮವಾಗಿ ವಿಷಯ ಮಂಡಿಸಿದ ಸಂಶೋಧಕರಿಗೆ ಬೆಸ್ಟ್ ಓರಲ್ ಪ್ರಸಂಟೇಷನ್ ಮತ್ತು ಬೆಸ್ಟ್ ಪೋಸ್ಟರ್ ಪ್ರಸಂಟೇಷನ್ ಅವಾರ್ಡ್ ಪ್ರಮಾಣಪತ್ರಗಳನ್ನು ನೀಡಲಾಯಿತು.

ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಹಳೆಯ ವಿದ್ಯಾರ್ಥಿ ಬಳಗ, ದೇಶದ ವಿವಿಧ ಶೈಕ್ಷಣಿಕ ಸಂಸ್ಥೆ, ವೈದ್ಯಕೀಯ ಸಂಸ್ಥೆ, ಕೈಗಾರಿಕೆ, ಪ್ರಯೋಗಾಲಯದ ವಿಜ್ಞಾನಿಗಳು, ತಜ್ಞರು, ಹಾಗೂ ಜೀವವಿಜ್ಞಾನ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಅತಿಥಿ ಉಪನ್ಯಾಸಕರು, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು.

ಕುಡಿಯುವ ನೀರಿನ ಸಮಸ್ಯೆ: ಆಕ್ರೋಶ

ರಾಯಚೂರು: ಜಿಲ್ಲೆಯ ಹಟ್ಟಿ ಪಟ್ಟಣದ ಕಾಕಾ ನಗರ ವಾರ್ಡ್‌ನಲ್ಲಿ ಕುಡಿಯುವ ಹಾಗೂ ಬಳಕೆಯ ನೀರಿನ ತೀವ್ರ ಸಮಸ್ಯೆ ಎದುರಾಗಿ ಕಳೆದ ಎರಡು ವಾರಗಳಿಂದ ನೀರು ಸರಬರಾಜು ಮಾಡುವ ಮೋಟಾರ್ ಕೆಟ್ಟು ಹೋಗಿದ್ದರೂ ಇದುವರೆಗೆ ದುರಸ್ತಿ ಮಾಡದಿರುವುದಕ್ಕೆ ನಿವಾಸಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕುಡಿಯುವ ನೀರು ತಿಂಗಳಿಗೊಮ್ಮೆ ಮಾತ್ರ ಸರಬರಾಜು ಮಾಡಲಾಗುತ್ತಿದೆ. ನದಿ ನೀರನ್ನು ವಾರಕ್ಕೆ ಒಮ್ಮೆಯಾದರೂ ಬಿಡುವಂತೆ ಹಲವು ಬಾರಿ ಪಪಂ ಆಡಳಿತದ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದರು.

ದಶಕಗಳಿಂದ ಇಲ್ಲಿನ ನೀರಿನ ಸಮಸ್ಯೆಯನ್ನು ಪರಿಹರಿಸುವದಾಗಿ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಶಾಸಕರು ಭರವಸೆ ನೀಡುತ್ತಲೇ ಬಂದಿದ್ದಾರೆ ಆದರೆ ಯಾವುದೇ ಪರಿಹಾರವಾಗಿಲ್ಲ, ವಾರ್ಡ್‌ನ ಅಭಿವೃದ್ಧಿಗೆ ಅಗತ್ಯವಾದ ಯಾವುದೇ ಮೂಲಸೌಕರ್ಯ ಕಲ್ಪಿಸಿಲ್ಲ ಎಂದು ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದರು.

ಕುಡಿಯುವ ನೀರು, ಬಳಕೆಯ ನೀರು, ಚರಂಡಿ, ರಸ್ತೆ, ಸಾರ್ವಜನಿಕ ಶೌಚಾಲಯ ಹಾಗೂ ನೈರ್ಮಲ್ಯ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ವಾರ್ಡ್ ದುರ್ವಾಸನೆಯಿಂದ ಕೂಡಿದೆ ಎಂದು ದೂರಿದರು.

ಈ ಹಿನ್ನೆಲೆಯಲ್ಲಿ ಸಿಪಿಐಎಂ ಹಾಗೂ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಸಮಸ್ಯೆಗಳಿಗೆ ತಕ್ಷಣ ಪರಿಹಾರ ಒದಗಿಸುವಂತೆ ಒತ್ತಾಯಿಸಿ ಸೋಮವಾರ ಪಪಂ ಕಚೇರಿಗೆ ಮುತ್ತಿಗೆ ಹಾಕಲು ತೀರ್ಮಾನಿಸಲಾಯಿತು.

ಸಿಪಿಐಎಂ ತಾಲೂಕು ಕಾರ್ಯದರ್ಶಿ ರಮೇಶ ವೀರಾಪೂರು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ತಾಲೂಕು ಅಧ್ಯಕ್ಷೆ ವನಜಾಕ್ಷಿ, ಉಪಾಧ್ಯಕ್ಷೆ ಶಾಂತಕುಮಾರಿ, ಅಂಬಮ್ಮ, ಲಕ್ಷ್ಮೀ, ಚಾಂದಬೀ ಮದರಕಲ್, ಮಹಾದೇವಿ, ನೂರ್ಜಾ, ಮಾಬೂಬಿ, ಗೌಸಿಯಾ ಬೇಗಂ, ಹನೀಸ್ ಬೇಗಂ, ಗಾಯತ್ರಿ, ಹನುಮಂತಿ, ಬಸಮ್ಮ, ಹುಲಿಗೆಮ್ಮ, ದುರುಗಮ್ಮ, ದೀದಿ ಬೇಗಂ, ನಾಜಿಯಾ ಬೇಗಂ, ಭವಾನಿ, ಅನಂತ್, ಸುರೇಶ್, ಪೆಂಚಲಯ್ಯ, ವೆಂಕಟೇಶ ಗೋರ್‌ಕಲ್, ಫಕ್ರುದ್ದೀನ್, ಮಹಾಂತೇಶ, ಚಾಂದ್ ಪಾಷಾ, ನಾಗರಾಜ್, ಧನರಾಜ್, ವೀರೇಶ್, ಮೌನೇಶ ಸೇರಿದಂತೆ ವಾರ್ಡ್‌ನ ಅನೇಕ ನಿವಾಸಿಗಳಿದ್ದರು.



ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ

ಕುಷ್ಟಗಿ: ಪಟ್ಟಣದ ಕೊಪ್ಪಳ ರಸ್ತೆಯಲ್ಲಿರುವ ಎನ್‌ಸಿಬಿಚ್ ಕಲ್ಯಾಣ ಮಂಟಪದಲ್ಲಿ ತಾಲೂಕು ಬಣಜಿಗ ಸಮಾಜ ಹಾಗೂ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಸಮಾರಂಭ ಶನಿವಾರ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಮಾತನಾಡಿ, ಬಣಜಿಗ ಸಮಾಜದವರು ವ್ಯಾಪಾರದಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡಿದ್ದಾರೆ. ಸರ್ವ ಸಮಾಜದವರನ್ನು ಗೌರವಿಸುತ್ತಾರೆ, ಪ್ರೀತಿಸುತ್ತಾರೆ. ಹಲವಾರು ಶಿಕ್ಷಣ ಸಂಸ್ಥೆಗಳನ್ನು ತೆಗೆದು ಶಿಕ್ಷಣ ಕ್ರಾಂತಿಯನ್ನು ಮಾಡಿದ್ದಾರೆ ರಾಜಕೀಯ ಕ್ಷೇತ್ರದಲ್ಲಿ ಮುಂದುವರೆದಿದ್ದಾರೆ. ಬಣಜಿಗ ಸಮಾಜದವರ ಮೇಲೆ ನನ್ನ ಬೆಂಬಲವಿದೆ ತಮ್ಮ ಬೇಡಿಕೆಗಳನ್ನು ಈಡೇರಿಸುತ್ತೇನೆ ಎಂದರು. ನಂತರ ಬೈಲಹೊಂಗಲ ಶಾಸಕ ಮಹಾಂತೇಶ ಕೌಜಲಗಿ ಮಾತನಾಡಿ, ಸಾಧನೆ ಮಾಡಿದವರನ್ನು ಗೌರವಿಸುವುದು ಭಾರತೀಯ ಸಂಸ್ಕೃತಿಯ ಶ್ರೇಷ್ಠ ಪರಂಪರೆ ಎಂದು ಹೇಳಿದರು.

ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪುರ ಮಾತನಾಡಿ, ಸಮಾಜದ ಬೆಳವಣಿಗೆಗೆ ಎಲ್ಲರೂ ಕೈಜೋಡಿಸಬೇಕು. ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವುದರ ಜೊತೆಗೆ ಬಡವರನ್ನು ಆರ್ಥಿಕ ಹಾಗೂ ಸಾಮಾಜಿಕವಾಗಿ ಮೇಲೆತ್ತುವ ಕೆಲಸ ಆಗಬೇಕು ಎಂದು ಹೇಳಿದರು. ಮಾಜಿ ಶಾಸಕ ಅಪ್ಪು ಪಟ್ಟಣಶೆಟ್ಟಿ, ಮಾಜಿ ಸಂಸದ ರಮೇಶ್ ಕತ್ತಿ ಮಾತನಾಡಿದರು. ಲೀಲಾವತಿ ಶೆಟ್ಟರ್ ಉಪನ್ಯಾಸ ನೀಡಿದರು.

ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ, ಕೆ.ಮಹೇಶ್, ಅಕ್ಕಮಹಾದೇವಿ ಪಟ್ಟಣಶೆಟ್ಟಿ, ಬಸವರಾಜ್ ಪಡಿ ಸೋಮಶೇಖರ ವೈಜಾಪುರ ಲಾಡ್ಲೆ ಮಶಾಕ್ ದೋಟಿಹಾಳ, ಶಶಿಧರ ಕವಲಿ ಪಕೀರಪ್ಪ ಹೊಸವಕ್ಕಲ, ಈರಣ್ಣ ಕಲಕಬಂಡಿ, ವೀರೇಶ ಬೊಳ್ಳೊಳ್ಳಿ, ಜಯದೇವಿ ಉಪ್ಪಿನ್, ಅಂದಪ್ಪ ಜವಳಿ, ವಿಶ್ವನಾಥ ಮಳಗಿ, ರವೀಂದ್ರನಾಥ ಪಾಟೀಲ, ವೀರೇಶ ಬಂಗಾರಶೆಟ್ಟರ್, ಬಸಟ್ಟೆಪ್ಪ ಕುಂಬಳವತಿ, ಉಮಾಪತಿ ಅಕ್ಕಿ, ಸಿದ್ಧಲಿಂಗಪ್ಪ ಕಲಕಬಂಡಿ, ಬಸವರಾಜ ಕುದುರಿಮೋತಿ ಇತರರಿದ್ದರು. ಕರಿಬಸವೇಶ್ವರ ಮಹಾಸ್ವಾಮಿಗಳು ಮದ್ದಾನೇಶ್ವರಮಠ ಕುಷ್ಟಗಿ ಅವರು ಆಶೀರ್ವಚನ ನೀಡಿದರು.



ಸರ್ಕಾರಿ ಶಾಲಾ ಮಕ್ಕಳಿಗೆ ಪಯೋನಿಧಿ ಗೋಧಾಮ ಟ್ರಸ್ಟ್‌ನಿಂದ ಸಾಮಗ್ರಿ ವಿತರಣೆ

ಕಲಬುರಗಿ: ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಪಯೋನಿಧಿ ಗೋಧಾಮ ಟ್ರಸ್ಟ್ ವತಿಯಿಂದ ಕಲಬುರಗಿ ತಾಲೂಕಿನ ಜಂಬಗಾ(ಬಿ) ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ನೋಟ್ ಬುಕ್, ಪೆನ್, ಪೆನ್ಸಿಲ್, ಸ್ಕೇಲ್ ಹಾಗೂ ರಬ್ಬರ್ ಸೇರಿದಂತೆ ವಿವಿಧ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಲಾಯಿತು.

ಪಯೋನಿಧಿ ಗೋಧಾಮ ಟ್ರಸ್ಟ್‌ನ ಮುಖ್ಯಸ್ಥ, ಶಿಕ್ಷಣ ಪ್ರೇಮಿ ಹಾಗೂ ಗೋಪ್ರೇಮಿ ಕೃಷ್ಣ ಕೆಂಬಾವಿ ಅವರು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿ, ಉತ್ತಮ ಶಿಕ್ಷಣವೇ ಮಕ್ಕಳ ಭವಿಷ್ಯ ರೂಪಿಸುವ ಶಕ್ತಿಯಾಗಿದೆ. ವಿದ್ಯಾರ್ಥಿಗಳು ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ ಜೀವನದಲ್ಲಿ ಉನ್ನತ ಸಾಧನೆ ಮಾಡಬೇಕು ಎಂದು ಶುಭ ಹಾರೈಸಿದರು.

ಪಯೋನಿಧಿ ಗೋಧಾಮ ಟ್ರಸ್ಟ್‌ನ ಮುಖ್ಯಸ್ಥ ಕೃಷ್ಣ ಕೆಂಬಾವಿ, ಸದಸ್ಯರಾದ ಪ್ರತೀಕ್ ಕುಲಕರ್ಣಿ ಹಾಗೂ ಗೋಕುಲ ಕುಲಕರ್ಣಿ ಸೇರಿದಂತೆ ಗಣ್ಯರನ್ನು ಶಾಲಾ ಆಡಳಿತ ಮಂಡಳಿ ಹಾಗೂ ಎಸ್‌ಡಿಎಂಸಿ ವತಿಯಿಂದ ಸನ್ಮಾನಿಸಲಾಯಿತು.

ಬಳಿಕ ಎಸ್‌ಡಿಎಂಸಿ ಅಧ್ಯಕ್ಷ ಅಶೋಕ್ ವಿ.ಹತಗುಂದಿ ಮಾತನಾಡಿ, ಪಯೋನಿಧಿ ಗೋಧಾಮ ಟ್ರಸ್ಟ್‌ನ ಸಮಾಜಮುಖಿ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ಶ್ಲಾಘಿಸಿ, ಇಂತಹ ಸೇವಾ ಕಾರ್ಯಗಳು ಮುಂದುವರಿದು ಇನ್ನಷ್ಟು ಮಕ್ಕಳಿಗೆ ಅನುಕೂಲವಾಗಲಿ ಎಂದು ಆಶಿಸಿದರು ಹಾಗೂ ಟ್ರಸ್ಟ್‌ಗೆ ಧನ್ಯವಾದಗಳನ್ನು ಸಲ್ಲಿಸಿದರು.

ಮುಖ್ಯ ಶಿಕ್ಷಕ ಚಂದ್ರಕಾಂತ ಎಸ್.ಭಾಗನ್, ಎಸ್‌ಡಿಎಂಸಿ ಅಧ್ಯಕ್ಷ ಅಶೋಕ್ ವಿ.ಹತಗುಂದಿ, ಎಸ್‌ಡಿಎಂಸಿ ಸದಸ್ಯ ಲಕ್ಷ್ಮೀಪುತ್ರ ಬಮನಳ್ಳಿ, ಶಿಕ್ಷಕರಾದ ಈರಣ್ಣ, ಜಯಶ್ರೀ, ರೂಪಾ, ಗಂಗೂಬಾಯಿ, ಸೀಮಾ, ಶಿವಬಸಮ್ಮ, ಅತಿಥಿ ಶಿಕ್ಷಕರಾದ ನಾಗವೇಣಿ ಹಾಗೂ ಶಿಲ್ಪಾ, ಪಶುವೈದ್ಯ ಡಾ.ಮೃತ್ಯುಂಜಯ ಮಂತಾಳ, ಶಾಲೆಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಎ.ವಸಂತಕುಮಾರ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ

ಸಿಂಧನೂರು: ರಾಜ್ಯ ಸಚಿವ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ಕಾಂಗ್ರೆಸ್‌ನ ಹಿರಿಯ ಮುಖಂಡ, ಕೆಪಿಸಿಸಿ ರಾಜ್ಯ ಕಾರ್ಯಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಭೀಮ್ ಆರ್ಮಿ ತಾಲೂಕು ಅಧ್ಯಕ್ಷ ಪ್ರವೀಣ್‌ಕುಮಾರ ದುಮತಿ ಆಗ್ರಹಿಸಿದರು.

ಶುಕ್ರವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿ ನಡೆಸಿ ಮಾತನಾಡಿದರು. ಎ.ವಸಂತಕುಮಾರ್ ಅವರು ಸುದೀರ್ಘ ಕಾಲದಿಂದ ಕಾಂಗ್ರೆಸ್ ಸಂಘಟನೆಗಾಗಿ ಶ್ರಮಿಸುತ್ತಾ ಬಂದಿರುವ ಹಿರಿಯ ನಾಯಕರಾಗಿದ್ದಾರೆ. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ರಾಯಚೂರು ಸೇರಿದಂತೆ ಒಟ್ಟಾರೆ ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ಕಲ್ಪಿಸಬೇಕು ಎಂದು ಒತ್ತಾಯಿಸಲಾಯಿತು.

ನಂತರ ಮಾದರ ಮಹಾಸಭಾದ ತಾಲೂಕು ಅಧ್ಯಕ್ಷ ವೆಂಕಟೇಶ ಗಿರಿಜಾಲಿ ಮಾತನಾಡಿ, ವಸಂತಕುಮಾರ್ ಅವರು ಕಾಂಗ್ರೆಸ್ ಪಕ್ಷದಲ್ಲಿ ಕೆಳ ಹಂತದಿಂದ ಪಕ್ಷವನ್ನು ಕಟ್ಟುವ ಮೂಲಕ ಕಾಂಗ್ರೆಸ್ ಪಕ್ಷದ ಕಟ್ಟಾಳು ಆಗಿ ರಾಯಚೂರು ಭಾಗದಲ್ಲಿ ಕೆಲಸ ಮಾಡಿದ್ದಾರೆ. ಈಗಾಗಲೇ ಕೆ.ಎಚ್.ಮುನಿಯಪ್ಪರನ್ನು ಸಚಿವರನ್ನಾಗಿ ಮಾಡಿದ್ದು, ಆರ್.ಬಿ.ತಿಮ್ಮಾಪುರ, ಎ.ವಸಂತಕುಮಾರ ಸೇರಿ ಮೂರು ಜನರಿಗೆ ಸಚಿವ ಸ್ಥಾನ ಕೊಡಬೇಕು ಎಂದು ಒತ್ತಾಯಿಸಿದರು.

ಸತೀಶ ಜವಳಗೇರಾ, ಅರುಣ ಕುಮಾರ ಜವಳಗೇರಾ, ಹುಲ್ಲೇಶ ಮುದಗಲ್, ಬಾಲಸ್ವಾಮಿ ದುಮತಿ ಉಪಸ್ಥಿತರಿದ್ದರು.



ಮುಧೋಳದಲ್ಲಿ ಭಾವೈಕ್ಯತೆ ಸಾರುವ ಮೊಹರಂ

ಯಲಬುರ್ಗಾ: ಪ್ರತಿ ವರ್ಷ ನಡೆಯುವ ಮೊಹರಂ ಹಬ್ಬ ಹಿಂದೂ ಮುಸ್ಲಿಂರ ಭಾವೈಕ್ಯತೆ ಸಾರುವ ಮೊಹರಂ ಸಂಭ್ರಮಾಚರಣೆ ಎಂದು ಹಿಂದು-ಮುಸ್ಲಿಂ ಒಂದೇ ಎಂದು ಇಲ್ಲಿ ಅಲ್ಲಾನು ಒಂದೇ ಅಲ್ಲಮರು ಒಂದೇ ಎಂದು ಸಾರಿರುವ ಗ್ರಾಮದಲ್ಲಿ ಐತಿಹಾಸಿಕ ಮೊಹರಂ ಹಬ್ಬ ಇದು ಉತ್ತರ ಕರ್ನಾಟಕ ಭಾಗದಲ್ಲಿ ಐತಿಹಾಸಿಕವಾಗಿ ಭಾವೈಕ್ಯತೆಯಿಂದ ಆಚರಿಸುತ್ತಾರೆ.

ತಾಲೂಕಿನ ಮುಧೋಳ ಗ್ರಾಮದಲ್ಲಿ ಮೊಹರಂನ ಮೊದಲ ದಿನದಿಂದ ಪ್ರಾರಂಭಗೊಂಡು ಮೊಹರಂ ಕೊನೆಯ ದಿನದ ವರೆಗೂ ಸಡಗರ ಸಂಭ್ರಮದಿಂದ ಆಚರಿಸುತ್ತಾರೆ.

ಮೊಹರಂ ಇಲ್ಲಿ ಕೇವಲ ಹಬ್ಬವಾಗದೇ ಐತಿಹಾಸಿಕ ಭಾವೈಕ್ಯತೆಯ ಸೇತುವೆಯಾಗಿದೆ. ಇಲ್ಲಿ ಪ್ರತಿಯೊಬ್ಬರು ಮೊಹರಂ (ಅಲೆ ಹಬ್ಬ) ಬಂತೆಂದರೆ ಸಾಕು ಹತ್ತು ದಿನಗಳ ಕಾಲ ಎಲ್ಲಿಲ್ಲದ ಸಡಗರ ಸಂಭ್ರಮ ದಿಂದ ಯಾವುದೇ ಜಾತಿ ಧರ್ಮ ಬೇಧವಿಲ್ಲದೆ ಆಚರಿಸುತ್ತಾರೆ.

ಈ ಗ್ರಾಮದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಭಕ್ತರು ಆಗಮಿಸಿ, ಹಸೇನ್ ಹುಸೇನ್ ದೇವರ ದರ್ಶನ ಪಡೆದರು.

ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಹಜರತ್ ಸಯ್ಯದ್ ಶಾಹ ವಲಿ ಅಂಜುಮನ್ ಕಮಿಟಿಯ ಗುರು ಹಿರಿಯರು ಇದ್ದರು. ಹಾಗೂ ಯುವಕರ ಹಜರತ್ ಸಯ್ಯದ್ ಶಾಹ ವಲಿ ಅಂಜುಮನ್ ಕಮಿಟಿಯ, ಹೆಜ್ಜೆ



ಕುಣಿತ ಮತ್ತು ಲಂಬಾಣಿ ವೇಷಗಾರರ ಕುಣಿತ ಗ್ರಾಮದ ಎಲ್ಲರ ಗಮನ ಸೆಳೆದವು. ತದ ನಂತರ ದೊಡ್ಡ ಮಸೂತಿ ಯಿಂದ ಚೌಡಿ ಮಸೂತಿ ವರೆಗೂ ಜನಸಾಗರದ ನಡುವೆ ಹಸೇನ್ ಹುಸೇನ್ ರ ಮೆರವಣಿಗೆ ಅದ್ದೂರಿಯಾಗಿ ನಡೆಯಿತು,

ಯಲಬುರ್ಗಾ ಪೊಲೀಸ್ ಠಾಣೆಯ ಪಿ ಎಸ್ ಐ ವಿಜೇಯ್ ಪ್ರತಾಪ್ ಮತ್ತು ಠಾಣಾ ಸಿಂಬದಿಗಳು ಆಗಮಿಸಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಹಜರತ್ ಸಯ್ಯದ್ ಶಾಹ ವಲಿ ಅಂಜುಮನ್ ಕಮಿಟಿಯ ಗುರು ಹಿರಿಯರು ಇದ್ದರು. ಯುವಕರ ಹಜರತ್ ಸೈಯದ್ ಶಾಹ ವಲಿ ಅಂಜುಮನ್ ಕಮಿಟಿ ಗ್ರಾಮದ ಸಾರ್ವಜನಿಕ ಹಿರಿಯ ಮುಖಂಡರು ಮತ್ತು ಮಹಿಳೆಯರು, ಪುಟಾಣಿ ಮಕ್ಕಳು ಎಲ್ಲರೂ ಮೆರವಣಿಗೆಯಲ್ಲಿ ಭಾಗವಹಿಸಿ ಸಂಭ್ರಮದಿಂದ ಮೊಹರಂ ಕೊನೆಯ ದಿನದ ಆಚರಣೆ ಸಡಗರ ಸಂಭ್ರಮದಿಂದ ಆಚರಣೆ ಮಾಡಿದರು.

ವಕ್ಕಂದುರ್ಗಾದ ಭಾವೈಕ್ಯತೆಯ ಮೊಹರಂ

ಕುಷ್ಟಗಿ: ಪ್ರತಿ ವರ್ಷ ನಡೆಯುವ ಮೊಹರಂ ಹಬ್ಬ ಹಿಂದೂ ಮುಸ್ಲಿಂರ ಭಾವೈಕ್ಯತೆ ಸಾರುವ ಮೊಹರಂ ಸಂಭ್ರಮವಾಗಿದೆ. ಹಿಂದೂ-ಮುಸ್ಲಿಂ ಒಂದೇ ಎಂದು ಸಾರುವ ಐತಿಹಾಸಿಕ ಮೊಹರಂ ಹಬ್ಬ ಇದು ಉತ್ತರ ಕರ್ನಾಟಕ ಭಾಗದಲ್ಲಿ ಐತಿಹಾಸಿಕವಾಗಿ ಭಾವೈಕ್ಯತೆಯಿಂದ ಆಚರಿಸುತ್ತಾರೆ.

ತಾಲೂಕಿನ ವಕ್ಕಂದುರ್ಗಾ ಗ್ರಾಮದಲ್ಲಿ ಮೊಹರಂನ ಮೊದಲ ದಿನದಿಂದ ಪ್ರಾರಂಭಗೊಂಡು ಕೊನೆಯ ದಿನದವರೆಗೂ ಸಡಗರ ಸಂಭ್ರಮದಿಂದ ಗ್ರಾಮಸ್ಥರು ಆಚರಿಸಿದರು. ಮೊಹರಂ ಇಲ್ಲಿ ಕೇವಲ ಹಬ್ಬವಾಗದೇ ಐತಿಹಾಸಿಕ ಭಾವೈಕ್ಯತೆಯ ಸೇತುವೆಯಾಗಿದೆ. ಇಲ್ಲಿ ಪ್ರತಿಯೊಬ್ಬರು ಮೊಹರಂ (ಅಲೆ ಹಬ್ಬ) ಬಂತೆಂದರೆ ಸಾಕು ಮೂರು ದಿನಗಳ ಕಾಲ ಎಲ್ಲಿಲ್ಲದ ಸಡಗರ ಸಂಭ್ರಮದಿಂದ ಯಾವುದೇ ಜಾತಿ ಧರ್ಮ ಬೇಧವಿಲ್ಲದೆ ಆಚರಿಸುತ್ತಾರೆ. ಈ ಗ್ರಾಮದಲ್ಲಿ ಸಾವಿರಾರು ಭಕ್ತರು ಆಗಮಿಸಿ, ಹಸೇನ್ ಹುಸೇನ್ ದೇವರ ದರ್ಶನ ಪಡೆದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಗ್ರಾಮದ ಗುರು ಹಿರಿಯರು ಯುವಕರು, ಮಹಿಳೆಯರು ಮಕ್ಕಳು ಸೇರಿದಂತೆ ಅನೇಕರು ಭಾಗವಹಿಸಿದರು. ಹೆಜ್ಜೆ ಕುಣಿತ ಗ್ರಾಮದ ಎಲ್ಲರ ಗಮನ ಸೆಳೆದವು. ಗ್ರಾಮದ ಹಿರಿಯರು, ಮಹಿಳೆಯರು, ಪುಟಾಣಿ ಮಕ್ಕಳು ಸೇರಿದಂತೆ ಎಲ್ಲರೂ ಮೆರವಣಿಗೆಯಲ್ಲಿ ಭಾಗವಹಿಸಿ ಮೊಹರಂ ಕೊನೆಯ ದಿನದ ಸಡಗರ ಸಂಭ್ರಮದಿಂದ ಆಚರಿಸಿದರು.



ನಾಡಿನ ಪ್ರಗತಿಗೆ ಕೆಂಪೇಗೌಡರ ಕೊಡುಗೆ ಅನನ್ಯ

ಕಲಬುರಗಿ: ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಮೈಸೂರು ಮತ್ತು ಬೆಂಗಳೂರಿನ ಅಭಿವೃದ್ಧಿಗೆ ಕೆಂಪೇಗೌಡರ ಪಾತ್ರ ದೊಡ್ಡದಾಗಿದೆ. ಬೆಂಗಳೂರು ಎಂದ ತಕ್ಷಣ ಕೆಂಪೇಗೌಡರ ಹೆಸರು ನೆನಪಿಗೆ ಬರುತ್ತದೆ ಎಂದು ಶಾಸಕ ಅಲ್ಲಂಪ್ರಭು ಪಾಟೀಲ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಸಂಯುಕ್ತ ಆಶ್ರಯದಲ್ಲಿ ಇಲ್ಲಿನ ರಂಗಮಂದಿರದಲ್ಲಿ ಆಯೋಜಿಸಲಾದ ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಸುಮಾರು 500 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ನೀರಿನ ಸೌಕರ್ಯಕ್ಕಾಗಿ ಅನೇಕ ಕೆರೆ-ಕಟ್ಟೆಗಳನ್ನು ನಿರ್ಮಿಸಿ, ಸಮಾಜ ಸೇವೆ ಮತ್ತು ಬಡ ಜನರ ಏಳಿಗೆಗಾಗಿ ಶ್ರಮಿಸಿದರು. ಶ್ರೀರಂಗಪಟ್ಟಣ ಮತ್ತು ಮೈಸೂರಿನಿಂದ ಹಿಡಿದು ಬೆಂಗಳೂರಿನ ಸುತ್ತಮುತ್ತಲಿನ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಕೆಂಪೇಗೌಡರು ಅಪಾರ ಕೊಡುಗೆ ನೀಡಿದ್ದಾರೆ ಎಂದು ಶ್ಲಾಘಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಹಾಯಕರಾದ ಶಿವಪ್ರಭು ಹಿರೇಮಠ್ ಅವರು ಮಾತನಾಡಿ,ಬುದ್ಧ, ಬಸವಣ್ಣ, ವಾಲ್ಮೀಕಿ ಮೊದಲಾದ ಯುಗ ಪುರುಷರು ಸಮಾಜಕ್ಕೆ ಹೊಸ ದಾರಿ ತೋರಿಸಿದ್ದಾರೆ. ಯಾವುದೇ ಜಾತಿ ಅಥವಾ ಧರ್ಮದಲ್ಲಿ ಹುಟ್ಟಿದರೂ,ಅವರ ಮಾನವೀಯ ಮೌಲ್ಯಗಳನ್ನು ಜನರ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಸಮಾಜ ಮುಖಂಡರಾದ ಅಣ್ಣಾರಾವ್ ದುಗೊಂಡ ಅವರು ಕೆಂಪೇಗೌಡರ ಇತಿಹಾಸ ಹಾಗೂ ಅವರ ವಂಶಸ್ಥರ ಸಾಧನೆಗಳನ್ನು ಅರ್ಥಮಾಡಿಕೊಳ್ಳಲು ಶಾಸನಗಳು ಮತ್ತು ತಾಳೆಗರಿಗಳ ಆಳವಾದ ಅಧ್ಯಯನ ಅಗತ್ಯ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕಿ ಜಗದೀಶ್ವರಿ ನಾಶಿ ಸ್ವಾಗತಿಸಿದರು.ಇದೇ ಸಂದರ್ಭದಲ್ಲಿ ಮಹಾನಗರಪಾಲಿಕೆ ಮಹಾಪೌರ ವರ್ಷಾ ರಾಜೀವ ಜಾನೆ, ಜಿಲ್ಲಾ ಅಧ್ಯಕ್ಷರಾದ ಶಿವಯೋಗಪ್ಪ ಬಿ. ಚಿತ್ತಾಪುರ ಗುಂಡಗುರ್ತಿ, ಶ್ರೀಕುಡು ಒಕ್ಕಲಿಗ ಅಭಿವೃದ್ಧಿ ಸೇವಾ ಸಂಘ, ಬೆಂಗಳೂರು ರಾಜ್ಯಾಧ್ಯಕ್ಷರು ಶಿವರಾಜ್ ಪಾಟೀಲ್, ಸಮಾಜದ ಮುಖಂಡರು ಹಾಗೂ ಅನೇಕರು ಭಾಗವಹಿಸಿದ್ದರು.



ಕಿರುಸುದ್ದಿ

ಶಾರ್ಟ್ ಸರ್ಕ್ಯೂಟ್: ನಾಲ್ಕು ಬಣವೆ ಬೆಂಕಿಗಾಹುತಿ



• **ಹಗರಿಬೊಮ್ಮನಹಳ್ಳಿ:** ತಾಲೂಕಿನ ತಂಬ್ರಹಳ್ಳಿ ಗ್ರಾಮದ ಬಸವರಾಜಪ್ಪ ಎಂಬುವರಿಗೆ ಸೇರಿದ ಸ. ಸು 60 ಸಾವಿರ ರೂ. ಮೌಲ್ಯದ ಒಂದು ಹೊಟ್ಟಿನ ಬಣವೆ ಮೂರು ಹುಲ್ಲಿನ ಬಣವೆಗಳು ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿಗೆ ಆಹುತಿ ಆದ ಘಟನೆ ಶನಿವಾರ ಮಧ್ಯಾಹ್ನ ನಡೆದಿದೆ. ಈ ವೇಳೆ ಶಿಗೇನಹಳ್ಳಿ ಗ್ರಾಮದ ರಸ್ತೆಯ ಭೂಮಿ ಪೂಜೆ ಮುಗಿಸಿಕೊಂಡು ಪಟ್ಟಣಕ್ಕೆ ಬರುವಾಗ ಶಾಸಕ ಕೆ.ನೇಮಿರಾಜ್ ನಾಯ್ಕ್ ಬಣವೆಗಳಿಗೆ ಬೆಂಕಿ ಬಿದ್ದಿರುವುದನ್ನು ನೋಡಿ ತಕ್ಷಣವೇ ಕಾರಿನಿಂದ ಇಳಿದು ಅಗ್ನಿಶಾಮಕ ಸಿಬ್ಬಂದಿಗಳಿಗೆ ಕರೆ ಮಾಡಿ ತುರ್ತಾಗಿ ಬಂದು ಬೆಂಕಿ ನಂದಿಸಲು ತಿಳಿಸಿದರು. ಶಾಸಕರ ಈ ಜನಪರ ಕಾರ್ಯಕ್ಕೆ ಅಲ್ಲಿದ್ದ ಜನರಿಂದ ಮೆಚ್ಚುಗೆ ವ್ಯಕ್ತವಾಯಿತು.

ಮೊಹರಂ: ಶೋಕಾಚರಣೆ



• **ವಿಜಯನಗರ:** ಕರ್ಬಲಾ ಕದನದಲ್ಲಿ ತಮ್ಮ ಪ್ರಾಣವನ್ನೇ ಬಲಿದಾನ ನೀಡಿದ ಇಮಾಮ್ ಹುಸೇನ್‌ರ ತ್ಯಾಗ ಸ್ಮರಿಸಿ ಹೊಸಪೇಟೆಯ ಚಿತ್ತವಾಡಗಿಯಲ್ಲಿ ಇರಾನಿ ಮುಸ್ಲಿಮರು ಶೋಕಾಚರಣೆ ನಡೆಸಿದರು. ಇರಾನಿ ಮುಸ್ಲಿಮರು ನಡೆಸಿದ ಸಂತಾಪ ಮೆರವಣಿಯೆಗಲ್ಲಿ ಭಾರತದ ತ್ರಿವರ್ಣ ಹಿಡಿದು ಸಾಗಿದ್ದು ಗಮನ ಸೆಳೆಯಿತು. ಮೊಹರಂ ಹಬ್ಬದ ಪ್ರಯುಕ್ತ ಎಲ್ಲೆಡೆ ಶ್ರದ್ಧೆ ಹಾಗೂ ಭಕ್ತಿಯಿಂದ ಪಂಜೆಗಳ ಮೆರವಣಿಗೆ ನಡೆದರೆ, ಇಲ್ಲಿನ ಇರಾನಿ ಮುಸ್ಲಿಂರು ಶೋಕಗೀತೆಗಳೊಂದಿಗೆ ದೇವರ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಖಾಜಾ ನಗರದಿಂದ ಚಿತ್ತವಾಡಗಿಯಪ್ಪ ದೇವಸ್ಥಾನ ಸಮೀಪದ ಎಲ್‌ಎಲ್‌ಸಿ ಕಾಲುವೆ ವರೆಗೆ ಸಾಗಿದ ಮೆರವಣಿಗೆಯಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಮುಸ್ಲಿಂ ಮಹಿಳೆಯರು ದಾರಿಯುದ್ದಕ್ಕೂ ಶೋಕ ಗೀತೆಗಳನ್ನು ಹಾಡುತ್ತಾ, ಕಣ್ಣೀರು ಸುರಿಸಿದರು. ಶೋಕ ಗೀತೆಗಳಿಗೆ ಭಕ್ತಿ ಪರವಶರಾದ ಯುವಕರು ಯಾ ಹುಸೇನ್, ಯಾ ಹುಸೇನ್ ಎಂಬ ಜಯಘೋಷದೊಂದಿಗೆ ಕೈಯಲ್ಲಿ ಹರಿತವಾದ ವಸ್ತುಗಳನ್ನು ಹಿಡಿದುಕೊಂಡು ತಮ್ಮ ಎದೆ ಹಾಗೂ ಬೆನ್ನಿನ ಭಾಗಕ್ಕೆ ಹೊಡೆದುಕೊಂಡು ದೇಹ ದಂಡಿಸಿದರು. ಮೆರವಣಿಗೆ ಸಾಗುವ ಮಾರ್ಗದುದ್ದಕ್ಕೂ ನೆರೆದಿದ್ದ ಜನರು ಇರಾನಿ ಯುವಕರ ಭಕ್ತಿಯನ್ನು ಪರಾಕಾಷ್ಠೆಯನ್ನು ಕಂಡು ಮೂಕವಿಸ್ಮಿತರಾದರು.

ಈಡಿಗರ ಕಾಳಮ್ಮ ನಿಧನ



• **ವಿಜಯನಗರ:** ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿಯ ಸಾಂಪ್ರದಾಯಿಕ ಪದಗಳ ಹಾಗೂ ಆಕಾಶವಾಣಿ ಹಾಡುಗಾರ್ತಿ ಮತ್ತು ಶ್ರೀಮಾರಿಕಾಂಬ ಕಲಾ ಸಂಘದ ಅಧ್ಯಕ್ಷೆ ಈಡಿಗರ ಕಾಳಮ್ಮ(83) ನಿಧನರಾದರು. ಮೃತರು ಹಲವು ವರ್ಷಗಳಿಂದ ಸಾಂಪ್ರದಾಯಿಕ ಹಾಡುಗಳಾದ ಜೋಗುಳ ಪದ, ಸೋಬಾನೆ ಪದ, ಜಾನಪದ, ದೇವರನಾಮ ಹಾಡುಗಳ ಗಾಯನ ಸೇರಿದಂತೆ ಇತರೆ ಹಾಡುಗಳನ್ನು ಆಕಾಶವಾಣಿ, ಸರ್ಕಾರಿ ಕಾರ್ಯಕ್ರಮಗಳಲ್ಲಿ, ದೇವಸ್ಥಾನ, ಸಂಘ- ಸಂಸ್ಥೆಗಳ ವೇದಿಕೆಗಳಲ್ಲಿ ತಮ್ಮ ಹಾಡುಗಳ ಗಾಯನ ಮಾಡಿ ಜನರಿಂದ ಮೆಚ್ಚುಗೆ ಪಡೆದಿದ್ದರು. ಇವರ ಕಲಾ ಸೇವೆಗೆ ಸ್ಥಳೀಯ ಪತ್ರಕರ್ತರ ಸಂಘದಿಂದ ಮವಿನಾ ಪ್ರಶಸ್ತಿ ಸೇರಿದಂತೆ ವಿವಿಧ ಸಂಘ, ಸಂಸ್ಥೆಗಳ ಗೌರವ ಸನ್ಮಾನ ಸಂದಿವೆ. ಕೆಲ ವರ್ಷಗಳ ಕಾಲ ಮರಿಮ್ಮನಹಳ್ಳಿಯಲ್ಲಿ ಎಲ್ಲ ಕನ್ನಡ ದಿನ ಪತ್ರಿಕೆ ಮಾರಾಟ ಮಾಡಿ ಪತ್ರಿಕಾ ಸೇವೆ ಸಲ್ಲಿಸಿದ್ದರು. ಮೃತರು ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದಾರೆ. ಮರಿಯಮನಹಳ್ಳಿಯ ಸಾರ್ವಜನಿಕ ರುಧ್ರಭೂಮಿಯಲ್ಲಿ ಭಾನುವಾರ ಬೆಳಗ್ಗೆ 10 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಳ್ಳಾರಿ: ಜಿಲ್ಲೆಯ ವಿವಿಧ ಠಾಣೆಗಳಲ್ಲಿ ವಿವಿಧ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ 6,68,655 ಮೌಲ್ಯದ 15.740 ಕೆಜಿ ಗಾಂಜಾವನ್ನು ನಗರದ ಹೊರ ವಲಯದ ಹರಗಿನದೋಣಿ ಜೈವಿಕ ವೈದ್ಯಕೀಯ ವಿಲೇವಾರಿ ಘಟಕದಲ್ಲಿ ಶನಿವಾರ ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಅವರ ನೇತೃತ್ವದಲ್ಲಿ ನಾಶ ಪಡಿಸಲಾಯಿತು. ಜಿಲ್ಲಾ ಮಾದಕ ವಸ್ತುಗಳ ವಿಲೇವಾರಿ ಸಮಿತಿಯ ಅಧ್ಯಕ್ಷ, ಎಎಸ್ಪಿ, ಎಎನ್‌ಟಿಎಫ್ ನೋಡಲ್ ಅಧಿಕಾರಿ ನವೀನ್ ಕುಮಾರ್, ಡಿಎಸ್ಪಿ ಗೋವಿಂದ ರಾಜಲು ಇತರರಿದ್ದರು.

ಗುರುವಂದನಾ, ಸ್ನೇಹ ಸಮ್ಮೇಳನ ಕಾರ್ಯಕ್ರಮ

• **ಕಾನಹೊಸಹಳ್ಳಿ:** ಕಾನಾಮಡುಗು ಇಲ್ಲಿನ ಮಣ್ಣಿನ ಕಣ ಕಣದಲ್ಲಿ ಶಿಕ್ಷಣ ತುಂಬಿದೆ. ಕಲ್ಯಾಣ ಕರ್ನಾಟಕದ ಹೆಬ್ಬಾಗಿಲಿನಲ್ಲಿರುವ ಕಾನಾಮಡುಗುನಲ್ಲಿ ಸಾವಿರಾರು ವಿದ್ಯಾರ್ಥಿಗಳು ಇಂದು ದೇಶ-ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನಿವೃತ್ತ ಶಿಕ್ಷಕ ಮಾಧವ ರೆಡ್ಡಿ ಹೇಳಿದರು.

ಸಮೀಪದ ಕಾನಾಮಡುಗು ಶರಣಬಸವೇಶ್ವರ ಪ್ರೌಢಶಾಲಾ ಆವರಣದಲ್ಲಿ 2003-04ನೇ ಬ್ಯಾಚ್‌ನ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮೇಳನದಲ್ಲಿ ಮಾತನಾಡಿ, ಕಾನಾಮಡುಗುನಲ್ಲಿ ಇರುವ ಶರಣಬಸವೇಶ್ವರ ದಾಸೋಹ ಮಠದಲ್ಲಿ ಸೇವೆ ಸಲ್ಲಿಸಿ ಓದಿ ಇಂದು ಅತ್ಯುನ್ನತ ಹುದ್ದೆಯಲ್ಲಿ ಸಾಕಷ್ಟು ಜನರಿದ್ದಾರೆ ಎಂದರು. ಪ್ರಾಸ್ತಾವಿಕವಾಗಿ ಹಳೆಯ ವಿದ್ಯಾರ್ಥಿ ಶೈಲಜಾ ಮಾತನಾಡಿದರು.

ಈ ವೇಳೆ ಶರಣಬಸವೇಶ್ವರ ದಾಸೋಹ ಮಠದ ಐಮಡಿ ಶರಣಾರ್ಯರು ಸಾನ್ನಿಧ್ಯ ವಹಿಸಿದ್ದರು. ನಿವೃತ್ತ ಶಿಕ್ಷಕರಾದ ಚಂದ್ರಪ್ಪ, ಹನುಮಂತಪ್ಪ, ಬಸವರಾಜ, ವಿರೂಪಾಕ್ಷಪ್ಪ, ಮುಖ್ಯ ಶಿಕ್ಷಕ ಬೊಮ್ಮಣ್ಣ, ಸಹ ಶಿಕ್ಷಕರು ಆನಂದ, ಭದ್ರಪ್ಪ, ಶರತ್, ಸಂತೋಷ, ಮಂಜುನಾಥ, ಅನುಪಮ, ವಿರೇಂದ್ರ, ಶರಣಪ್ಪ, ಕಾನಾಮಡುಗು ಸಂತೋಷ, ದಿನೇಶ ಸೇರಿದಂತೆ ಹಳೆ ವಿದ್ಯಾರ್ಥಿಗಳಾದ ಗುರುರಾಜ, ಪ್ರವೀಣ, ನವೀನ, ವಿನಾಯಬಾಬು, ಸಂತೋಷ, ಶಿವು ಪೂಜಾರ, ಜಯಕುಮಾರ, ವಿರೇಶ, ಸೈಲಜಾ, ಸುಜಾತ, ಓಬಳೇಶ, ಹನುಮಂತು ಸೇರಿದಂತೆ ಇತರರಿದ್ದರು.



ಕಾನಹೊಸಹಳ್ಳಿ: ಸಮೀಪದ ಕಾನಾಮಡುಗು ಶರಣಬಸವೇಶ್ವರ ಪ್ರೌಢಶಾಲಾ ಆವರಣದಲ್ಲಿ 2003-04ನೇ ಬ್ಯಾಚ್‌ನ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮೇಳನ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಇಲಾಖೆ ಪ್ರಗತಿ ಪರಿಶೀಲನಾ ಸಭೆ | ಅಧ್ಯಕ್ಷ ರಾಮಪ್ಪ ಸೂಚನೆ

ಅರ್ಹರಿಗೆ ಸಕಾಲಕ್ಕೆ ಸೌಲಭ್ಯ ತಲುಪಿಸಿ

• **ಯಾದಗಿರಿ:** ಭೋವಿ ಜನಾಂಗದ ಅನುಕೂಲಕ್ಕಾಗಿ ಇರುವ ಸರ್ಕಾರದ ಯೋಜನೆಗಳ ಲಾಭ ಸಕಾಲಕ್ಕೆ ದೊರಕಿಸುವಂತೆ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಎಂ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಭೋವಿ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿ, ಅತ್ಯಂತ ಕಡು ಬಡ, ಕಷ್ಟದಲ್ಲಿ ದುಡಿಯುವ ಸಮಾಜ ಇದಾಗಿದೆ. ನೇರ ಸಾಲ, ಗಂಗಾ ಕಲ್ಯಾಣ, ಉದ್ಯಮಶೀಲತಾ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆಗಳಡಿಯ ಸೌಲಭ್ಯ ಸಕಾಲಕ್ಕೆ ತಲುಪಿಸುವ ಕಾರ್ಯ ಸಂಬಂಧಿಸಿದ ಅಧಿಕಾರಿಗಳು ಮಾಡುವಂತೆ ತಿಳಿಸಿದರು.



> ಭೋವಿ ಸಮಾಜಕ್ಕೆ ಟ್ರ್ಯಾಕ್ಟರ್ ಟ್ರೈಲರ್, ಗೂಡ್ಸ್ ವಾಹನ, ಸೆಂಟ್ರಿಂಗ್ ಸಲಕರಣೆಗಳು ಈ ವರ್ಷದಿಂದ ನಿಗಮದಿಂದ ನೀಡಲಾಗುತ್ತಿದೆ. ಹೈನುಗಾರಿಕೆ, ಪಶು ಸಂಗೋಪನೆ, ಕೋಳಿ ಸಾಕಾಣಿಕೆಗೆ ಒತ್ತು ನೀಡಲಾಗುತ್ತಿದೆ. ಭೋವಿ ಸಮಾಜವೂ ಆರ್ಥಿಕವಾಗಿ ಸಬಲರಾಗಲು ಮುಂದೆ ಬರಬೇಕು.
>
> ■ ರಾಮಪ್ಪ ಎಂ., ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಹಾಗೂ ನಿಗಮದ ಎಂಟು ಗ್ಯಾರಂಟಿ ಯೋಜನೆಗಳ ಲಾಭ ಅರ್ಹ ಫಲಾನುಭವಿಗಳಿಗೆ ತಲುಪಿಸಲಾಗುತ್ತಿದೆಯೇ ಎಂಬುದರ ಬಗ್ಗೆ ಪರಿಶೀಲನೆ ನಡೆಸುತ್ತಿರುವುದಾಗಿ ತಿಳಿಸಿದ ಅವರು, ಬಟ್ಟೆ, ಚಪ್ಪಲಿ ಇಲ್ಲದೆ ಕುಲ ಕಸುಬುಗಳ ಮೂಲಕ ಕಷ್ಟದ ಜೀವನ ನಡೆಸುತ್ತಿರುವ ಈ ಸಮಾಜಕ್ಕೆ ಅವರ ಆರ್ಥಿಕ ಸಬಲೀಕರಣಗೊಳಿಸುವ ಯೋಜನೆಗಳ ಲಾಭ ದೊರಕಿಸಲು ಪ್ರಯತ್ನಿಸಬೇಕು ಎಂದರು.

ಕಲ್ಲು ಒಡೆಯುವ, ಮಣ್ಣು ಹೊರುವ ಸಮಾಜ ಇದಾಗಿದೆ. ಕುಲ ಕಸಬು ಮಾಡುವ ಸಂದರ್ಭದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳಿಂದ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಪೊಲೀಸ್ ಇಲಾಖೆಯಿಂದಲೂ ನಿಗಾ ಇಡುವಂತೆ ತಿಳಿಸಿದ ಅವರು ಸಿಬಿಲ್ ಸ್ಕೋರ್ ನೋಡದೆ, ಶುರಿಟಿ ಪಡೆಯದೆ ಸಾಲ ಸೌಲಭ್ಯ ದೊರಕಿಸಬೇಕು. ಲೀಡ್ ಬ್ಯಾಂಕ್ ಅಧಿಕಾರಿಗಳು ಈ ಕುರಿತು ಗಮನ ನೀಡಬೇಕು ಎಂದರು.

ಜನಾಂಗದ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯಗಳು ದೊರೆಯಬೇಕು. ಜಾತಿ ಪ್ರಮಾಣ ಪತ್ರ ದುರುಪಯೋಗಪಡಿಸಿಕೊಂಡು, ಇತರರು ಇದರ ಲಾಭ ಪಡೆಯದಂತೆ ಎಚ್ಚರಿಕೆ ವಹಿಸಬೇಕು. ಸ್ಥಳ ಮಹಜರು, ಅಧಿಕೃತ ದಾಖಲಾತಿ, ಆಧಾರದ ಮೇಲೆ ಜಾತಿ ಪ್ರಮಾಣ ಪತ್ರ ನೀಡಬೇಕು. ಆರ್ಥಿಕವಾಗಿ ಸಬಲರನ್ನಾಗಿಸಲು ಹೆಚ್ಚಿನ ಮಹಿಳಾ ಸಂಘಗಳನ್ನು ರಚಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಭೋವಿ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಬರುವ ಯೋಜನೆಗಳಡಿ ಸೌಲಭ್ಯ ಕಲ್ಪಿಸಲು ಮಧ್ಯವರ್ತಿಗಳ ಹಾವಳಿ ತಪ್ಪಿಸಬೇಕು. ಈ ಕುರಿತು ಸಾಕ್ಷ್ಯಾಧಾರ ಸಮೇತ ದೂರು ನೀಡಿದಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ ಅರ್ಹ ಫಲಾನುಭವಿಗಳಿಗೆ ನೀಡಬಹುದಾದ ಸೌಲಭ್ಯಗಳ ಕುರಿತ ಬಾಕಿ ಇರುವ ಅರ್ಜಿಗಳನ್ನು ಜುಲೈ 30ರೊಳಗೆ ಪರಿಹರಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಡಿಸಿ ರಾಹುಲ ತುಕಾರಾಮ ಪಾಂಡ್ವೆ, ಜಿಪಂ ಸಿಇಒ ಲವೀಶ ಒರಡಿಯಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ, ನಿಗಮದ ಜನರಲ್ ಮ್ಯಾನೇಜರ್ ಶಿವಸ್ವಾಮಿ, ಸಮಾಜದ ಹಿರಿಯ ಮುಖಂಡ ರವಿ ಪೂಜಾರಿ, ರಾಜು ಗುತ್ತೇದಾರ ಇದ್ದರು.

ಎಂಎಸ್‌ಎಂಇ ಕ್ಷೇತ್ರದ ಕೊಡುಗೆ ಅಪಾರ

• **ಬಳ್ಳಾರಿ:** ದೇಶದ ಕೈಗಾರಿಕಾ ಉತ್ಪಾದನೆ, ಉದ್ಯೋಗ ಸೃಷ್ಟಿ ಹಾಗೂ ರಫ್ತು ವಹಿವಾಟಿನಲ್ಲಿ ಎಂಎಸ್‌ಎಂಇ ಕ್ಷೇತ್ರದ ಕೊಡುಗೆ ಮಹತ್ವದ್ದಾಗಿದೆ ಎಂದು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಅವ್ವಾರು ಮಂಜುನಾಥ ಹೇಳಿದರು.

ನಗರದ ಚೇಂಬರ್ ಆಫ್ ಕಾಮರ್ಸ್ ಕಚೇರಿ ಸಭಾಂಗಣದಲ್ಲಿ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯ ಎಂಎಸ್‌ಎಂಇ ಮತ್ತು ಸ್ಟಾರ್ಟ್ ಅಪ್ ಸಮಿತಿ ಹಾಗೂ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಆಶ್ರಯದಲ್ಲಿ ಶನಿವಾರ ನಡೆದ 'ಅಂತಾರಾಷ್ಟ್ರೀಯ ಎಂಎಸ್‌ಎಂಇ' ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ನಿಟ್ಟಿನಲ್ಲಿ ಚಾರ್ಟೆರ್ಡ್ ಅಕೌಂಟೆಂಟ್ಸ್‌ಗಳ ಮಾರ್ಗದರ್ಶನ, ಹಣಕಾಸು ಶಿಸ್ತು ಮತ್ತು ವ್ಯವಹಾರ ನಿರ್ವಹಣಾ ಸಲಹೆಗಳು ಎಂಎಸ್‌ಎಂಇ ಹಾಗೂ ಸ್ಟಾರ್ಟ್ ಅಪ್‌ಗಳ ಬೆಳವಣಿಗೆಗೆ ಪೂರಕವಾಗಿದೆ ಎಂದರು.

ಹಿರಿಯ ಲೆಕ್ಕಪರಿಶೋಧಕ ಸಿರಿಗೇರಿ ಪನ್ನರಾಜ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಸಿ.ಸುರೇಶಬಾಬು, ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಪಿ.ಗಾದೆಪ್ಪ ಮಾತನಾಡಿದರು.

ಸುಧೀರ್ ಚಿತ್ರಗಾರ ಅವರು 'ಸಾವಯವ ಉತ್ಪನ್ನಗಳು ಹಾಗೂ ಉತ್ಪನ್ನಗಳ ರಫ್ತಿಗೆ ಅವಕಾಶಗಳು', ಕೃಷಿ ವಿಜ್ಞಾನಿ ಡಾ.ನವೀನ ಅವರು 'ಸಮರ್ಥ ಸಾವಯವ ಕೃಷಿ' ಡಾ.ಶಿಲ್ಪ ಎಚ್ 'ಸಾವಯವ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ' ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಸಾವಯವ ಕೃಷಿಕ ಎಂ.ಗಾಳೆಪ್ಪ, ವೈ.ಭೂದಿಹಾಳ, ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಡಿ.ಸತೀಶ ಕುಮಾರ, ಎಸ್‌ಬಿಐನ ಮಂಜುನಾಥ ಕುಲಕರ್ಣಿ, ಕೆನರಾ ಬ್ಯಾಂಕ್‌ನ ಅರುಣ ಕುಮಾರ.ಎ.ಜೆ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಹಿರಿಯ ಉಪಾಧ್ಯಕ್ಷ ಎಸ್.ದೊಡ್ಡನಗೌಡ, ಆದಾಯ ತೆರಿಗೆ ಸಮಿತಿ ಚೇರ್ಮನ್ ಸಿಎ ಕೆ.ರಾಜಶೇಖರ ಸೇರಿದಂತೆ ಇತರರಿದ್ದರು.

ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಬಳ್ಳಾರಿ ಶಾಖೆ ಅಧ್ಯಕ್ಷ ಸಿಎ ಪುರುಷೋತ್ತಮ ರೆಡ್ಡಿ ಸ್ವಾಗತಿಸಿದರು. ಕಾರ್ಯದರ್ಶಿ ಸಿಎ ಶರಣ ಪಾಟೀಲ ನಿರೂಪಿಸಿದರು. ಸಿಎ ವಿಶ್ವನಾಥ ಆಚಾರಿ ವಂದಿಸಿದರು.



ಶ್ರದ್ಧಾ ಭಕ್ತಿಯಿಂದ ಮೊಹರಂ ಆಚರಣೆ

• **ಕೊಟ್ಟೂರು:** ಸೌಹಾರ್ದತೆ ಮತ್ತು ಧಾರ್ಮಿಕ ಸಹಿಷ್ಣುತೆಗೆ ಹೆಸರಾಗಿರುವ ಐತಿಹಾಸಿಕ ಕೊಟ್ಟೂರು ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಗಗಳಲ್ಲಿ ಜಗತ್ತಿಗೆ ಶಾಂತಿ, ತ್ಯಾಗದ ಸಂದೇಶ ಸಾರಿದ ಹಜರತ್ ಇಮಾಮ್ ಹುಸೇನ್ ಅವರ ಸ್ಮರಣಾರ್ಥ ಮೊಹರಂ ಹಬ್ಬವನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.



ಜಾತಿ-ಮತ, ಭೇದ-ಭಾವವಿಲ್ಲದೆ ಹಿಂದೂ-ಮುಸ್ಲಿಂ ಬಾಂಧವರು ಒಟ್ಟಾಗಿ ಆಚರಿಸುವ ಈ ಹಬ್ಬವು ಈ ಭಾಗದ ಕೋಮು ಸೌಹಾರ್ದತೆಗೆ ಹಿಡಿದ ಕೈಗನ್ನಡಿಯಾಗಿದೆ.

ಗುದ್ದಲಿ ಪೂಜೆಯಿಂದ ಆರಂಭ: ಹತ್ತು ದಿನಗಳ ಕಾಲ ನಡೆಯುವ ಈ ಆಚರಣೆ ಮೊದಲ ದಿನದಂದು ಸಾಂಪ್ರದಾಯಿಕವಾಗಿ ಗುದ್ದಲಿ ಪೂಜೆ ನೆರವೇರಿಸಿ, ದೇವರನ್ನು ಕೂರಿಸುವ ಮೂಲಕ ಅಧಿಕೃತವಾಗಿ ಚಾಲನೆ ಪಡೆಯುತ್ತದೆ. ಭಕ್ತರು ಕೊಬ್ಬರಿ, ಸಕ್ಕರೆ ನೈವೇದ್ಯ ಅರ್ಪಿಸಿ ಹರಕೆಗಳನ್ನು ತೀರಿದರು.

ಒಂಬತ್ತನೇ ದಿನದ 'ಕತಲ್ ರಾತ್ರಿ'ಯಂದು ಇಡೀ ಪಟ್ಟಣ ಜಾಗರಣೆ ಮಾಡುತ್ತದೆ. ಹತ್ತನೇ ದಿನದ ಮುಂಜಾನೆ ಆಶೂರಖಾನೆಗಳ ಮುಂದೆ ಆಳವಾಗಿ ತೋಡಿರುವ ಕೆಂಡದ ಹೊಂಡದಲ್ಲಿ (ಅಲಾಯಿ ಕುಂಡ) ಭಕ್ತರು ಅಗ್ನಿ ಹಾಯ್ದು ಹರಕೆ ತೀರಿಸುವುದು ರೋಮಾಂಚನಕಾರಿಯಾಗಿರುತ್ತದೆ.

ಇಲ್ಲಿ ಮುಸ್ಲಿಂ ಬಾಂಧವರಷ್ಟೇ ಅಲ್ಲದೆ ಶೇಕಡಾ 80ರಷ್ಟು ಹಿಂದೂಗಳು ಮುಂದೆ ನಿಂತು ಈ ಹಬ್ಬವನ್ನು ಆಚರಿಸುತ್ತಾರೆ. ಇದು ನಮ್ಮ ಹಿರಿಯರಿಂದ ನಡೆದುಕೊಂಡು ಬಂದ ಸಂಪ್ರದಾಯವಾಗಿದ್ದು, ಎಲ್ಲರಲ್ಲೂ ಸಹೋದರತ್ವ ಭಾವನೆ ಗಟ್ಟಿಗೊಳಿಸಿದೆ ಎಂದು ಸ್ಥಳೀಯ ನಿವಾಸಿಗಳು ಹೆಮ್ಮೆಯಿಂದ ಆಶಯ ವ್ಯಕ್ತಪಡಿಸುತ್ತಾರೆ.

ಕೋಮು ಸೌಹಾರ್ದತೆಯ ಪ್ರತೀಕ: ಕೊನೆಯ ದಿನದಂದು ಪೀರ್ಲ ದೇವರನ್ನು ಸಾರ್ವಜನಿಕವಾಗಿ ಭವ್ಯ ಮೆರವಣಿಗೆ ಮೂಲಕ ಕರೆದೊಯ್ದು, ಭಾವಪೂರ್ಣವಾಗಿ ಬೀಳ್ಕೊಡುವ ಮೂಲಕ ಹತ್ತು ದಿನಗಳ ಸೌಹಾರ್ದತೆಯ ಹಬ್ಬಕ್ಕೆ ತೆರೆ ಕಂಡಿತು.

> **ಜಾನಪದ ಕಲೆ ಸೊಗಡು: ಅಲಾಯಿ ಹೆಜ್ಜೆ ಕುಣಿತ**
>
> ಮೊಹರಂ ಹಬ್ಬವು ಕೇವಲ ಧಾರ್ಮಿಕ ಆಚರಣೆಯಷ್ಟೇ ಅಲ್ಲದೆ ಜಾನಪದ ಕಲೆಗಳ ವೈಭವಕ್ಕೂ ಸಾಕ್ಷಿಯಾಗಿದೆ. ಹಲಗೆಯ (ಡೊಳ್ಳು) ತಮಟೆ ನಾದಕ್ಕೆ ತಕ್ಕಂತೆ ಯುವಕರು ಮತ್ತು ಹಿರಿಯರು ಹೆಜ್ಜೆ ಹಾಕುವ 'ಅಲಾಯಿ ಕುಣಿತ', 'ಕರಬಲ ಹೆಜ್ಜೆ ಕುಣಿತ' ಮತ್ತು 'ಮರಗಾಲು ಕುಣಿತಗಳು' ನೋಡುಗರ ಕಣ್ಮನ ಸೆಳೆಯುತ್ತವೆ. ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಶೈಲಿಯ ವಿಶಿಷ್ಟ ಮೊಹರಂ ಪದಗಳು ರಾತ್ರಿಯಿಡೀ ಮೊಳಗಿದವು.

ಸರ್ಕಾರಿ ಪ್ರೌಢ ಶಾಲೆಯ ನೂತನ ಕೊಠಡಿಗಳ ಉದ್ಘಾಟನೆ

• **ಹಗರಿಬೊಮ್ಮನಹಳ್ಳಿ:** ಚಿಲಗೋಡು ಗ್ರಾಮದ ಮುಖ್ಯ ರಸ್ತೆ, ಸಿಸಿ ರಸ್ತೆ ಶೀಘ್ರದಲ್ಲಿ ಭೂಮಿಪೂಜೆ ಮಾಡಲಾಗುವುದು. ಗ್ರಾಮದ ಕರಿಯಮ್ಮ ದೇವಿ ದೇವಸ್ಥಾನದ ಗೋಪುರ ಹಾಗೂ ಕರಿಯಮ್ಮ ದೇವಿ ಪ್ರತಿಷ್ಠಾಪನೆ ಇದೇ ವರ್ಷ ಪೂರ್ಣಗೊಳಿಸಲಾಗುವುದು ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ಭರವಸೆ ನೀಡಿದರು.

ತಾಲೂಕಿನ ಚಿಲಗೋಡು ಗ್ರಾಮದಲ್ಲಿ 2024-25ನೇ ಸಾಲಿನ ಆರ್ ಎಂಎಸ್‌ಎ ಅನುದಾನದ ಅಡಿಯಲ್ಲಿ 1 ಕೋಟಿ 61ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಸರ್ಕಾರಿ ಪ್ರೌಢಶಾಲಾ ನೂತನ ಕಟ್ಟಡಗಳ ಉದ್ಘಾಟನೆ ಹಾಗೂ ಶೀಗನಹಳ್ಳಿ-3 ಗ್ರಾಮದಲ್ಲಿ 2025-26ನೇ ಸಾಲಿನ ಮುಖ್ಯಮಂತ್ರಿ ಮೂಲಸೌಕರ್ಯ ಯೋಜನೆಯ ಸ.ಸು 1 ಕೋಟಿ ವೆಚ್ಚದಲ್ಲಿ ಸಿಸಿ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿ ಭೂಮಿಪೂಜೆಗೆ ಚಾಲನೆ ನೀಡಿ ಮಾತನಾಡಿ, ಮುಂಬರುವ ದಿನಗಳಲ್ಲಿ ಮಹಿಳೆಯರ ಮೀಸಲಾತಿ ಬಿಲ್ ಪಾಸ್ ಆಗುವ ಸಾಧ್ಯತೆ ಇದ್ದು, ಬಿಲ್‌ಪಾಸ್ ಆದರೆ 33,% ರಷ್ಟು ಮೀಸಲಾತಿ ಸಿಗುತ್ತದೆ. ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯ ಸೇರಿದಂತೆ ಇನ್ನಿತರ ಎಲ್ಲ ಕ್ಷೇತ್ರದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಸಿಗಲಿದೆ ಎಂದರು.



ಮುಖ್ಯ ಶಿಕ್ಷಕಿ ಲಲಿತಮ್ಮ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜೆಡಿಎಸ್ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಕೃಷ್ಣಮೂರ್ತಿ ಶೆಟ್ರು ತಾಲೂಕ ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಮುಖಂಡ ಕನ್ನಿಹಳ್ಳಿ ಚಂದ್ರಶೇಖರ್, ಹೋಟೆಲ್ ಸಿದ್ದರಾಜು, ಅಕ್ಷರ ದಾಸೋಹದ ಅಧಿಕಾರಿ ರಾಜಕುಮಾರ್ ನಾಯ್ಕ್, ಲೋಕೋಪಯೋಗಿ ಇಲಾಖೆ ಸತೀಶ ನಾಯ್ಕ್, ಗುತ್ತಿಗೆದಾರ ಉಮಾಪತಿ, ಶಾಸಕರ ಆಪ್ತ ಸಹಾಯಕ ಬ್ಯಾಟಿ ನಾಗರಾಜ, ಎಸ್‌ಡಿಎಂಸಿ ಅಧ್ಯಕ್ಷ ಕರಿಯಪ್ಪ, ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಅಂಕ ಸಮುದ್ರ, ನಾಗರಾಜ ಚಿಲಗೋಡು, ಶೀಗೇನಹಳ್ಳಿ ಗ್ರಾಮಗಳ ಮುಖಂಡರು, ಇಲಾಖೆ ಅಧಿಕಾರಿಗಳು, ಶಿಕ್ಷಕರು, ನಾಗರಿಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಸ್ಮಾರಕಗಳು ಶಿಲ್ಪಕಲೆಯೂ ಹೌದು

• **ವಿಜಯನಗರ:** ಭಾರತೀಯ ಇತಿಹಾಸದ ಆಕರಗಳಲ್ಲಿ ಸ್ಮಾರಕಶಿಲ್ಪಗಳ ಪಾತ್ರವು ಮಹತ್ವದ್ದಾಗಿದೆ. ಸಾವಿರಾರು ಸ್ಮಾರಕ ಶಿಲ್ಪಗಳನ್ನು ತನ್ನ ಮಡಿಲಿನಲ್ಲಿ ಹೊಂದಿ ಅವುಗಳನ್ನು ಪೋಷಿಸಿಕೊಂಡು ಬಂದಿರುವ ಹಾವೇರಿ ಜಿಲ್ಲೆ ಐತಿಹಾಸಿಕವಾಗಿ ಸಂಪದ್ಭರಿತವಾದ ಪ್ರದೇಶವಾಗಿದೆ. ಆದರೆ ನಮ್ಮ ಜನರ ಇತಿಹಾಸ ಪ್ರಜ್ಞೆಯ ಕೊರತೆಯಿಂದ ಅವುಗಳು ಅನಾದಾರಕ್ಕೂ ಒಳಗಾಗಿರುವುದು ಅಷ್ಟೇ ಸತ್ಯವಾಗಿದೆ ಎಂದು ಉಪನ್ಯಾಸಕ ಡಾ.ಮದ್ದಾನಸ್ವಾಮಿ ಯರಬಾಳ ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಿಂದ ಆಯೋಜಿಸಿದ್ದ 'ಹಾವೇರಿ ಜಿಲ್ಲೆಯ ಸ್ಮಾರಕ ಶಿಲ್ಪಗಳ ಮಹತ್ವ ಮತ್ತು ವೈವಿಧ್ಯತೆ' ಎಂಬ ವಿಷಯದ ಕುರಿತು ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಸ್ಮಾರಕ ಶಿಲ್ಪಗಳು ಎಂದರೆ ಯಾವುದೋ ವ್ಯಕ್ತಿ, ಘಟನೆ ಅಥವಾ ತ್ಯಾಗವನ್ನು ನೆನಪಿಸಲು ನಿರ್ಮಿಸಿದ ಶಿಲಾ ರೂಪದ ಸ್ಮರಣಿಕೆಗಳು. ಇವು ಒಂದೇ ರೀತಿಯವಲ್ಲ; ವೀರಗಲ್ಲು, ಮಾಸ್ತಿಗಲ್ಲು, ನಿಷಿಧಿಗಲ್ಲು ಮತ್ತು ಇತರ ಬಲಿದಾನ ಶಿಲ್ಪಗಳಾಗಿ ಕಾಣಸುತ್ತವೆ. ಇವುಗಳ ಮೂಲಕ ಆ ಕಾಲದ ಸಾಮಾಜಿಕ ಮೌಲ್ಯಗಳು, ಧಾರ್ಮಿಕ ಭಾವನೆಗಳು ಮತ್ತು ಸ್ಥಳೀಯ ಪರಂಪರೆ ತಿಳಿಯುತ್ತದೆ ಎಂದರು.



ಪುರಾತತ್ವ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ವಾಸುದೇವ ಬಡಿಗೇರ ಅಧ್ಯಕ್ಷತೆ ವಹಿಸಿ ಮಾತನಾಡಿ, ಸ್ಮಾರಕ ಶಿಲ್ಪಗಳು, ವೀರಗಲ್ಲುಗಳು ಇತಿಹಾಸ ಅಧ್ಯಯನಕ್ಕೆ ಬಹಳ ಉಪಯುಕ್ತ ಆಕರಗಳು. ವೀರಗಲ್ಲುಗಳು ಕರ್ನಾಟಕದ ಸ್ಮಾರಕ ಶಿಲ್ಪ ಪರಂಪರೆಯ ಅತ್ಯಂತ ಗಮನಾರ್ಹ ಭಾಗ. ಯುದ್ಧ, ಪಶುರಕ್ಷಣಾ ಸಂಘರ್ಷ, ಗ್ರಾಮರಕ್ಷಣೆ, ರಾಜನಿಷ್ಠೆ / ಸಾಮಾಜಿಕ ಕರ್ತವ್ಯಗಳ ಸಂದರ್ಭದಲ್ಲಿ ಪ್ರಾಣತ್ಯಾಗ ಮಾಡಿದ ವೀರರನ್ನು ಗೌರವಿಸುವ ಉದ್ದೇಶದಿಂದ ಇವು ಸ್ಥಾಪಿಸಲ್ಪಟ್ಟಿವೆ ಎಂದರು.

ಮಹಿಳಾ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಯರ್ರಿಸ್ವಾಮಿ ಈ., ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಮುಖ್ಯಸ್ಥ ಡಾ.ರಮೇಶ ನಾಯಕ ಉಪಸ್ಥಿತರಿದ್ದರು.

ಛಾತ್ರೋಂ ಕಿ ಗೂಂಜ್ ಅಭಿಯಾನಕ್ಕೆ ಚಾಲನೆ: ಜಾಬಶೆಟ್ಟಿ

• **ಬೀದರ್:** ಪ್ರಶ್ನೆ ಪತ್ರಿಕೆ ಸೋರಿಕೆ, ಪರೀಕ್ಷಾ ವಂಚನೆ, ಪರೀಕ್ಷೆಗಳ ರದ್ದು ಹಾಗೂ ಸಾರ್ವಜನಿಕ ಪರೀಕ್ಷಾ ವ್ಯವಸ್ಥೆಯ ಮೇಲಿನ ವಿಶ್ವಾಸ ಕುಸಿತದ ವಿರುದ್ಧ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ದೇಶಾದ್ಯಂತ ಛಾತ್ರೋಂ ಕಿ ಗೂಂಜ್ (ವಿದ್ಯಾರ್ಥಿಗಳ ಗರ್ಜನೆ) ಅಭಿಯಾನಕ್ಕೆ ಚಾಲನೆ ನೀಡಿದೆ ಎಂದು ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಬಸವರಾಜ ಜಾಬಶೆಟ್ಟಿ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 28 ಪ್ರಮುಖ ನಗರಗಳಲ್ಲಿ 40 ದಿನಗಳ ಕಾಲ ನಡೆಯಲಿರುವ ಈ ಅಭಿಯಾನವು ವಿದ್ಯಾರ್ಥಿಗಳ ಸಮಸ್ಯೆಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಸ್ತಾಪಿಸುವ ಉದ್ದೇಶ ಹೊಂದಿದೆ ಎಂದರು.

ಕಾಂಗ್ರೆಸ್ ಪಕ್ಷದ ಪ್ರಕಾರ, ಕೋಚಿಂಗ್ ಕೇಂದ್ರಗಳು, ಕಾಲೇಜ್ ಕ್ಯಾಂಪಸ್‌ಗಳು, ಹಾಸ್ಟೆಲ್‌ಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಸಾಧಿಸಿ ಅವರ ಧ್ವನಿಯನ್ನು ಸರ್ಕಾರದ ಗಮನಕ್ಕೆ ತರಲಾಗುವುದು. ಪ್ರಾಮಾಣಿಕವಾಗಿ ಓದುವ ಪ್ರತಿಯೊಬ್ಬ ವಿದ್ಯಾರ್ಥಿಗೂ ನ್ಯಾಯಯುತ ಪರೀಕ್ಷೆ ಅವಕಾಶ ಸಿಗಬೇಕು ಎಂಬುದು ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದರು.

ನೀಟ್ ಯುಜಿ-2026 ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಸಿಬಿಐ ತನಿಖೆ ನಡೆಯುತ್ತಿದ್ದು, ಪ್ರಮುಖ ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ. ದೇಶದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳು ನಿರಂತರವಾಗಿ ನಡೆಯುತ್ತಿದ್ದು, ಕಳೆದ ಹಲವು ವರ್ಷಗಳಲ್ಲಿ ಕೋಟ್ಯಂತರ ವಿದ್ಯಾರ್ಥಿಗಳು ಇದರ ಪರಿಣಾಮ ಅನುಭವಿಸಿದ್ದಾರೆ ಎಂದು ತಿಳಿಸಿದರು.



ಅಭಿಯಾನದ ಅಂಗವಾಗಿ ಜೂ.30ರಿಂದ ದೇಶದ 28 ನಗರಗಳಲ್ಲಿ ಕರಪತ್ರ ವಿತರಣೆ, ವಿದ್ಯಾರ್ಥಿ ಸಂಪರ್ಕ ಕಾರ್ಯಕ್ರಮಗಳು ಹಾಗೂ ಬೀದಿ ಸಭೆಗಳು ನಡೆಯಲಿವೆ. ಜುಲೈ ತಿಂಗಳಿಡೀ ಕ್ಯಾಂಪಸ್ ಸಂಪರ್ಕ ಅಭಿಯಾನ ಮತ್ತು ವಿವಿಧ ವಿದ್ಯಾರ್ಥಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಆಗಸ್ಟ್ 1ರಂದು ಜಿಲ್ಲಾಧಿಕಾರಿಗಳ ಕಚೇರಿಗಳ ಮುತ್ತಿಗೆ ಹಾಗೂ ಆಗಸ್ಟ್ 9ರಂದು ದೆಹಲಿಯಲ್ಲಿ ಸಂಸತ್ ಮುತ್ತಿಗೆ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಅಮೃತರಾವ ಚಿಮಕೊಡೆ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಾರ್ಜ್ ಫರ್ನಾಂಡಿಸ್, ಬೀದರ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಪ್ರೊ.ವಿಠ್ಠಲದಾಸ ಪ್ಯಾಗೆ, ಅಬ್ದುಲ್ ಸತ್ತಾರ, ಶಿವನಾಥ ಪಾಟೀಲ್, ಸಚಿನ್ ಮಲ್ಕಾಪುರೆ, ಪಕ್ಷದ ಪ್ರಚಾರ ಸಮಿತಿಯ ಮುಖಂಡರಾದ ಸುನಿಲ ಬಚ್ಚನ್, ಸಂಜು ಡಿ.ಕೆ, ರವಿಂದ್ರ ಇದ್ದರು.

ಸತ್ಸಂಗ ಸಂಜೀವಿನಿ ಕೂಟ ಜೂ.30 ರಿಂದ

• **ಹುಣಸಗಿ:** ತಾಲೂಕಿನ ಬೆನಕನಹಳ್ಳಿ ಗ್ರಾಮದ 'ಮಹಾಬೋಧಾಲಯದ'ಲ್ಲಿ ಪರಮಪೂಜ್ಯ ಶ್ರೀ ವಿದ್ಯಾನಂದ ಶರಣರ 20ನೇ ಪುಣ್ಯಸ್ಮರಣೆ ಅಂಗವಾಗಿ ಜೂ.30 ರಿಂದ ಜುಲೈ 2ರವರೆಗೆ ನಾಲ್ಕು ದಿನಗಳ ಕಾಲ ಸತ್ಸಂಗ ಸಂಜೀವಿನಿ ಕೂಟವನ್ನು ಹಮ್ಮಿಕೊಳ್ಳಲಾಗಿದೆ. ಅಂದು ನಡೆಯಲಿರುವ ಕಾರ್ಯಕ್ರಮದಲ್ಲಿ ಧಾರ್ಮಿಕ ಉಪನ್ಯಾಸಗಳು, ಸತ್ಸಂಗ, ಭಜನೆ ಹಾಗೂ ವಿವಿಧ ಆಧ್ಯಾತ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಜೂ.30ರಂದು ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದ್ದು, ಪ್ರತಿದಿನ ಬೆಳಗ್ಗೆ 9 ಗಂಟೆಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಜು.2ರಂದು ಬೆಳಗ್ಗೆ 9.30ಕ್ಕೆ ಅನುಭವ ಗೋಷ್ಠಿ-5 ಕಾರ್ಯಕ್ರಮ ಏರ್ಪಡಿಸಲಾಗಿದ್ದು, ದೇವಾನಂದ ಶರಣರು ಅಧ್ಯಕ್ಷತೆಯಲ್ಲಿ ಮಹಾನುಭಾವರಾಗಿ ಆಶೀರ್ವಚನ ನೀಡಲಿದ್ದಾರೆ. ಶರಣ ಶಂಕರ ದೇವನೂರು ಹಾಗೂ ಶರಣ ಮಹಾಂತಯ್ಯನವರು ಉಪನ್ಯಾಸ ನೀಡಲಿದ್ದಾರೆ.

ತ್ರಿವಿಧ ದಾಸೋಹ, ಭಜನೆ, ಅನುಭವ ಮಂಟಪ ಹಾಗೂ ಆಧ್ಯಾತ್ಮಿಕ ಚಿಂತನೆಗಳ ವಿನಿಮಯ ನಡೆಯಲಿದ್ದು, ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಆಯೋಜಕರು ಪ್ರಕಟಣೆಗೆ ತಿಳಿಸಿದ್ದಾರೆ.

ಪೋಲಿಯೋ ಮುಕ್ತ ಜಿಲ್ಲೆಗೆ ಸಹಕರಿಸಿ: ಡಾ.ಶಂಕರ

• **ವಿಜಯನಗರ:** ಜೂ.28ರಂದು ನಡೆಯುವ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನದಲ್ಲಿ 0-5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಹಾಕಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಎಲ್.ಆರ್.ಶಂಕರ ನಾಯ್ಕ್ ತಿಳಿಸಿದರು.

ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನದ ಅಂಗವಾಗಿ ಜಿಲ್ಲಾಡಳಿತ, ರೋಟರಿ ಕ್ಲಬ್, ಭಾರತೀಯ ವೈದ್ಯಕೀಯ ಸಂಘದ ಸಹಯೋಗದಲ್ಲಿ ಶನಿವಾರ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

> **ಜಾಗೃತಿ ಜಾಥಾ**
>
> ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ (ಹಳೇ ಆಸ್ಪತ್ರೆ ಆವರಣ) ಆರಂಭವಾಗಿ ನಂತರ ಪುಣ್ಯಮೂರ್ತಿ ಸರ್ಕಲ್, ಬಸ್ ನಿಲ್ದಾಣ, ಪುನೀತ್ ರಾಜಕುಮಾರ ಸರ್ಕಲ್, ಅಂಬೇಡ್ಕರ್ ಸರ್ಕಲ್, ರಾಮಾ ಟಾಕೀಸ್ ಮಾರ್ಗವಾಗಿ ಚಲಿಸಿ ದೊಡ್ಡ ಮಸೀದಿ ಮಾರ್ಗದಿಂದ ಪುನಃ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಮುಕ್ತಾಯಗೊಂಡಿತು. ನರ್ಸಿಂಗ್ ವಿದ್ಯಾರ್ಥಿಗಳು ಲಸಿಕಾ ಅಭಿಯಾನದ ಬಿತ್ತಿಪತ್ರ ಹಿಡಿದು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಘೋಷಣೆ ಕೂಗುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.



> ನೂತನ ತಂತ್ರಜ್ಞಾನ ಪರಿಚಯಿಸಲಾಗಿದ್ದು ಇಲಾಖೆ ವತಿಯಿಂದ ನೀಡಲಾಗಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವುದರ ಮೂಲಕ ಸಾರ್ವಜನಿಕರು ತಮ್ಮ ಹತ್ತಿರದ ಪೋಲಿಯೋ ಲಸಿಕಾ ಕೇಂದ್ರ ಪತ್ತೆ ಹಚ್ಚಬಹುದು. ಇದರಿಂದ ಹತ್ತಿರದ ಪೋಲಿಯೋ ಲಸಿಕಾ ಕೇಂದ್ರಕ್ಕೆ ಭೇಟಿ ನೀಡಿ ಪೋಲಿಯೋ ಲಸಿಕೆ ಹಾಕಿಸಿಕೊಳ್ಳಬಹುದು.
>
> ■ ಡಾ.ಎಲ್.ಆರ್.ಶಂಕರ ನಾಯ್ಕ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ

ಈ ವೇಳೆ ಜಿಲ್ಲಾ ಆರ್‌ಸಿಹೆಚ್. ಅಧಿಕಾರಿ ಡಾ.ಜಂಬಯ್ಯ, ಆರೋಗ್ಯ ನಿರೀಕ್ಷಣಾಧಿಕಾರಿ ಧರ್ಮನಗೌಡ, ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ತಾಲೂಕು ವೈದ್ಯಾಧಿಕಾರಿ ಡಾ.ವಿನೋದ್ ಕುಮಾರ್ ಸೇರಿದಂತೆ ಆರೋಗ್ಯ ಇಲಾಖೆ ಸಿಬ್ಬಂದಿ, ವಿವಿಧ ಕಾಲೇಜ್ ವಿದ್ಯಾರ್ಥಿಗಳು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಇದ್ದರು.